
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 17, 2010 ರೂ. 12/-



ಲಂಕೇಶ್ 75 ವಿಶೇಷಾಂಕ



ಶಿವಮೊಗ್ಗ: ಹೊತ್ತಿ ಉರಿದ ಕೋಮು ದಳ್ಳುರಿ


ಪರಮಕಂಸ ಸೆಕ್ಸಾನಂದ

ಸಾಹಿತ್ಯ ಅಕಾಡೆಮಿ

ಲಂಕೇಶ್ ವಾರ ಪತ್ರಿಕೆ

ಲಂಕೇಶ್-75

ಎಲ್ಲರಿಗೂ ಆದರದ ಸ್ವಾಗತ



ಮಾರ್ಚ್ 6 ಮತ್ತು 7, 2010, ಸೆನೆಟ್ ಹಾಲ್, ಬೆಂಗಳೂರು

ಮಾರ್ಚ್ 6, 2010

ಉದ್ಘಾಟನಾ ಸಮಾರಂಭ
10 ಗಂಟೆಗೆ

ಸ್ವಾಗತ ಭಾಷಣ	: ಎಸ್. ಗುಣಸೇಕರನ್, ಪ್ರಾದೇಶಿಕ ಕಾರ್ಯದರ್ಶಿ, ದಕ್ಷಿಣ ಪ್ರಾದೇಶಿಕ ಕಚೇರಿ, ಸಾಹಿತ್ಯ ಅಕಾಡೆಮಿ
ಪ್ರಾಸ್ತಾವಿಕ ಭಾಷಣ	: ಗೌರಿ ಲಂಕೇಶ್
ಉದ್ಘಾಟನೆ	: ವೈದೇಹಿ
ಅಧ್ಯಕ್ಷತೆ	: ಕಿ.ರಂ. ನಾಗರಾಜ

ಗೋಷ್ಠಿ 1– 12 ಗಂಟೆಗೆ

ಲಂಕೇಶ್ ಮತ್ತು ಕನ್ನಡ ಸಾಹಿತ್ಯ ಪರಂಪರೆ– 1

ಲಂಕೇಶ್ ಮತ್ತು ಕಾವ್ಯ	: ಬಂಜಗೆರೆ ಜಯಪ್ರಕಾಶ
ಲಂಕೇಶ್ ಮತ್ತು ವಿಮರ್ಶೆ	: ರಹಮತ್ ತರೀಕೆರೆ
ಲಂಕೇಶ್ ಮತ್ತು ಸಣ್ಣಕತೆ	: ಎಂ.ಎಸ್. ಆಶಾದೇವಿ
ಅಧ್ಯಕ್ಷತೆ	: ಕೆ. ಮರುಳಸಿದ್ದಪ್ಪ

ಗೋಷ್ಠಿ 2– 2:30 ಗಂಟೆಗೆ

ಲಂಕೇಶ್ ಮತ್ತು ಕನ್ನಡ ಸಾಹಿತ್ಯ ಪರಂಪರೆ– 2

ಲಂಕೇಶ್ ಮತ್ತು ಕಾದಂಬರಿ	: ವಿ.ಎಸ್. ಶ್ರೀಧರ
ಲಂಕೇಶ್ ಮತ್ತು ನಾಟಕ	: ರಘುನಂದನ
ಲಂಕೇಶ್ ಅವರ ಸಾಹಿತ್ಯಕ ಬರಹಗಳು	: ಪಟ್ಟಾಭಿರಾಮ ಸೋಮಯಾಜಿ
ಅಧ್ಯಕ್ಷತೆ	: ಫಕೀರ್ ಮೊಹಮ್ಮದ್ ಕಟ್ಪಾಡಿ

ಗೋಷ್ಠಿ 3– 4:30 ಗಂಟೆಗೆ

ಲಂಕೇಶ್ ಮತ್ತು ನಾನು

ಬಿ. ಚಂದ್ರೇಗೌಡ, ಕೆ. ಅಕ್ಷತಾ, ಸರ್ಜಾ ಶಂಕರ್
ಅಧ್ಯಕ್ಷತೆ: ಕೋಟಿಗಾನಹಳ್ಳಿ ರಾಮಯ್ಯ

ಮಾರ್ಚ್ 7, 2010

ಗೋಷ್ಠಿ 4– 10:00 ಗಂಟೆಗೆ

ಲಂಕೇಶ್ ಬಗ್ಗೆ ಕೆಲವು ಅನಿಸಿಕೆಗಳು

ಎಸ್.ವೈ. ಗುರುಶಾಂತ್
ಸುಬ್ಬು ಹೊಲೆಯಾರ್
ಪಾರ್ವತೀಶ
ಅಧ್ಯಕ್ಷತೆ: ಜಿ. ರಾಜಶೇಖರ

ಗೋಷ್ಠಿ 5– ಮಧ್ಯಾಹ್ನ 12 ಗಂಟೆಗೆ

ಲಂಕೇಶ್ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು

ವಿರೋಧ ಪಕ್ಷವಾಗಿ ಲಂಕೇಶ್	: ದಿನೇಶ್ ಅಮೀನ್‌ಮಟ್ಟು
ಲಂಕೇಶ್ ಅವರ ರಾಜಕೀಯ ಚಿಂತನೆ	: ಕೆ. ಫಣಿರಾಜ್
ದಮನಿತರ ದನಿಯಾಗಿ ಲಂಕೇಶ್	: ಬಿ.ಎಂ. ಬಷೀರ್
ಅಧ್ಯಕ್ಷತೆ	: ಎಚ್.ಎಲ್. ಕೇಶವಮೂರ್ತಿ

ಗೋಷ್ಠಿ 6– 2:30 ಗಂಟೆಗೆ

ಲಂಕೇಶ್ ಮತ್ತು ಸಮಕಾಲೀನ ಸವಾಲುಗಳು

ಪ್ರಸ್ತುತ ರಾಜಕೀಯ	: ಎ.ಕೆ. ಸುಬ್ಬಯ್ಯ
ಪ್ರಸ್ತುತ ಚಳವಳಿಗಳು	: ಡಾ. ವಾಸು
ಕೋಮುವಾದ ಮತ್ತು ಜಾಗತೀಕರಣ	: ಬಿ.ಎಂ. ಪುಟ್ಟಯ್ಯ
ಅಧ್ಯಕ್ಷತೆ	: ಜಿ. ರಾಮಕೃಷ್ಣ

ಸಮಾರೋಪ ಸಮಾರಂಭ– 4:00 ಗಂಟೆಗೆ

ಸಮಾರೋಪ ಭಾಷಣ	: ದೇವನೂರು ಮಹಾದೇವ
ಮುಖ್ಯ ಅತಿಥಿ	: ಎಸ್.ಎಂ. ಬಿರಾದಾರ್
ಅಧ್ಯಕ್ಷತೆ	: ಗೌರಿ ಲಂಕೇಶ್
ವಂದನಾರ್ಪಣೆ	: ಪಾರ್ವತೀಶ

ಕವಿಗೋಷ್ಠಿ

ಮಾರ್ಚ್ 6, 2010,
ಸಂಜೆ 5:30ಕ್ಕೆ

ಕವನಗಳನ್ನು ವಾಚಿಸುವವರು:

ವಿನಯಾ, ಬಾಗೇಶ್ರೀ, ಅಕ್ಷತಾ, ಬಿ. ಶ್ರೀನಿವಾಸ್, ಸುಬ್ಬು ಹೊಲೆಯಾರ್, ಎಸ್. ಮಂಜುನಾಥ್, ರಂಗನಾಥ ಕಂಟನಕುಂಟೆ, ಟಿ.ಎನ್. ಸೀತಾರಾಮ್, ಕಿ.ರಂ. ನಾಗರಾಜ, ವೈದೇಹಿ, ಜ್ಯೋತಿ ಗುರುಪ್ರಸಾದ್, ವೀರಣ್ಣ ಮಡಿವಾಳರ, ಕೈದಾಳ್ ಕೃಷ್ಣಮೂರ್ತಿ, ಆರೀಫ್ ರಾಜಾ, ಕೆ. ಶರೀಫಾ, ಶಿವಸುಂದರ್, ಪೀರ್ ಭಾಷಾ,

ಅಧ್ಯಕ್ಷತೆ : **ಚಂಪಾ**


ಲಂಕೇಶ್-75 ಮತ್ತು ರಜೆಯ ಕನಸು

ಇದೆಂಥದ್ದೋ ಆತಂಕ ನನ್ನನ್ನು ಹಲವಾರು ಗಳಿಂದ ಕಾಡುತ್ತಿದೆ. ಇದೇ ಶನಿವಾರ ಮತ್ತು ಭಾನುವಾರ ನಡೆಯಲಿರುವ 'ಲಂಕೇಶ್ 75' ಕಾರ್ಯಕ್ರಮದ ಬಗ್ಗೆ ಟೆನ್ಸ್ ಆಗಿದ್ದೇನೆಂದರೆ ಹಲವೊಮ್ಮೆ ನಮ್ಮ ಕಾರ್ಯಕ್ರಮಕ್ಕೆ ಜನ ಬಾರದೆ ಸಭಾಂಗಣ ಬಿಕೋ ಗುಟ್ಟುತ್ತಿರುವುದನ್ನು ಕಲ್ಪಿಸಿಕೊಂಡು ಬೆಚ್ಚಿ ಬೀಳುತ್ತೇನೆ. ಹಾಗೆಯೇ ಇನ್ನೊಮ್ಮೆ ಜನಸಾಗರವೇ ಹರಿದುಬಂದು ಅವ್ಯವಸ್ಥೆ ತಾಂಡವವಾಡಿ, ಜನರೆಲ್ಲ ನನ್ನನ್ನು ಬೈಯಲಾರಂಭಿಸಿ ನಾನು ಎಲ್ಲರಿಂದ ತಲೆ ತಪ್ಪಿಸಿಕೊಂಡು ಓಡಿಹೋದಂತೆ ಭ್ರಮಿಸಿ ಸಣ್ಣಗೆ ನಡಗುತ್ತೇನೆ.

ನಿಜ ಹೇಳಬೇಕೆಂದರೆ ಸೆನೆಟ್ ಹಾಲ್‌ಗಿಂತ ಇಷ್ಟು ದೊಡ್ಡ ಕಾರ್ಯಕ್ರಮಕ್ಕೆ ರವೀಂದ್ರ ಕಲಾಕ್ಷೇತ್ರವೇ ಸೂಕ್ತವಾಗಿತ್ತು. ಆದರೆ ನಮ್ಮ ನಿಮ್ಮ ಈ ಕಾರ್ಯಕ್ರಮದ ದಿನಗಳಂದೇ ಅಲ್ಲಿ ಯಾವುದೋ ಸರ್ಕಾರಿ ಕಾರ್ಯಕ್ರಮ ನಡೆಯಲಿದ್ದು ಕಲಾಕ್ಷೇತ್ರ ನಮಗೆ ಸಿಗಲಿಲ್ಲ. ಟೌನ್‌ಹಾಲ್ ಬುಕ್ ಆಗಿತ್ತು. ಎಡಿಎದಲ್ಲಿ ಪಾರ್ಕಿಂಗ್‌ಗೆ ಜಾಗವಿಲ್ಲ. ಅಂಬೇಡ್ಕರ್ ಭವನ ನಮ್ಮ ಕೈಗೆಟುಕವುದಿಲ್ಲ. ಈ ಎಲ್ಲ ಕಾರಣಗಳಿಂದ ನಮಗೆ ಉಳಿದಿದ್ದು ಸೆನೆಟ್ ಹಾಲ್ ಮಾತ್ರ.

ಇನ್ನೊಂದು ಸಂಗತಿಯ ಬಗ್ಗೆಯೂ ಆತಂಕವಾಗುತ್ತದೆ. ಲಂಕೇಶ್ ಕೂಡ ಇಷ್ಟು ದೊಡ್ಡದ ಅಥವಾ ಎರಡು ದಿನಗಳ ಕಾರ್ಯಕ್ರಮ ಮಾಡಿರಲಿಲ್ಲ. ಆದರೆ ನಾವು ಮಾಡಲು ಹೊರಟಿದ್ದೇವೆ. ಹಲವೊಮ್ಮೆ ಇದು ಭಂಡತನದ ಹೆಜ್ಜೆ ಎನಿಸಿದ್ದುಂಟು. ಆದರೆ ಪ್ರಸ್ತುತ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂದರ್ಭ ಹೇಗಿದೆ ಎಂದರೆ ಹೇಗಾದರೂ ಇಂತಹ ಒಂದು ಕಾರ್ಯಕ್ರಮ ನಡೆಯಬೇಕೆಂದು, ಎಲ್ಲರೂ ಜೊತೆಗೂಡಿ ಚರ್ಚಿಸಬೇಕೆಂದು ಬಲವಾಗಿ ಅನ್ನಿಸಿದೆ. ನಮ್ಮ ಕಾರ್ಯಕ್ರಮಕ್ಕೆ ಬರುತ್ತಿರುವ ಪಟ್ಟಿಯ ನೋಡಿದರೆ ನಾನು ನಿಜವಾಗಲೂ ತಲೆ ಮರೆಸಿಕೊಂಡು ಓಡಿಹೋಗುವ ಸಂದರ್ಭ ಎದುರಾಗಬಹುದು ಎನಿಸುತ್ತಿದೆ.

ಹಾಗೆಯೇ ಲಂಕೇಶ್ ಚಿತ್ರ ಪ್ರಶಸ್ತಿ ವಿಜೇತ ಅತನು ಘೋಷ್ ಅವರ ಸಿನಿಮಾ 'ಅಂಗ್‌ಶುಮಾನೆರ್ ಚೊಬಿ' ನೋಡಲು ಅದೆಷ್ಟು ಜನ ಉತ್ಸಾಹ ತೋರಿದ್ದಾರೆಂದರೆ ನಿನ್ನೆ ರಾತ್ರಿ ನನಗೆ ಫೋನ್ ಮಾಡಿದ ಬೇಬಿ "ಹೋಗಲಿ, ಸಿನಿಮಾ ಪ್ರದರ್ಶನಕ್ಕಾದರೂ ಜ್ಞಾನಜ್ಯೋತಿ ಸಭಾಂಗಣವನ್ನು ಪಡೆಯಬಹುದಾ? ತುಂಬಾ ಜನ ಬರುತ್ತಾರೆ ಅನ್ನಿಸುತ್ತೆ" ಅಂದಳು. "ಖಂಡಿತವಾಗಿಯೂ ಜ್ಞಾನ ಜ್ಯೋತಿಯನ್ನು ಕೇಳಬಹುದು. ಆದರೆ ಅದರ ಬಾಡಿಗೆ ಕೇವಲ 75,000 ರೂಪಾಯಿ. ಅಷ್ಟು ಕೊಡುತ್ತೀಯಾ?" ಅಂದೆ. "ಅಯ್ಯೋ ಬೇಡಪ್ಪ, ಎಷ್ಟು ಜನಕ್ಕೆ ಸಾಧ್ಯವಾಗುತ್ತೋ ಅಷ್ಟು ಜನ ನೋಡಲಿ" ಎಂದು ಸುಮ್ಮನಾದಳು.



ನಿಮಗೆಲ್ಲ ಗೊತ್ತಿರುವಂತೆ ಈ ಕಾರ್ಯಕ್ರಮದಲ್ಲಿ ಹಲವಾರು ಹೊಸ ಮತ್ತು ಇತ್ತೀಚೆಗೆ ಮುದ್ರಣಗೊಂಡಿರದಿದ್ದ ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ನೆರವಾದ ಅಜ್ಜಂಪುರ ವೆಂಕಟೇಶ್, ಶ್ವೇತ, ರಫೀಕ್ ಕಿರುಗುಂದ, ನೂರ್ ಅಹಮದ್, ಡಾ. ಎಂ.ಬಿ. ರಾಮಮೂರ್ತಿ, ನಾಗೇಶ್, ಗೌರಿ, ಮಲ್ಲಿಗೆ, ಸುಮಾ ಅವರಲ್ಲದೆ ಹಗಲುರಾತ್ರಿ ಶ್ರಮಿಸಿದ ನಮ್ಮ ತಂಡದ ಹುಡುಗರಾದ ಸತೀಶ್, ಅರುಣ್, ಕಿಶೋರ್, ಕುಮಾರ್ ಬುರಡಿಕಟ್ಟಿ, ಪ್ರಸಾದ್, ರಾಜು ಮತ್ತು ಪಾರ್ವತೀಶ್‌ಗೆ ಧನ್ಯವಾದಗಳನ್ನು ಹೇಳುವುದು ನನ್ನ ಕರ್ತವ್ಯವಾಗಿದೆ.

ಹಾಗೆಯೇ 'ಲಂಕೇಶ್ 75' ಕಾರ್ಯಕ್ರಮಕ್ಕೆ ವಿವಿಧ ರೀತಿಯಲ್ಲಿ ನೆರವು ನೀಡಿರುವ ಮಿತ್ರರಾದ ಗುರುಮೂರ್ತಿ, ಹರಿಪ್ರಸಾದ್, ಅಜ್ಜಂಪುರ ವೆಂಕಟೇಶ್, ಫಿರೋಜ್, ಕೃಷ್ಣಪ್ರಸಾದ್, ದೀಪಕ್ ತಿಮ್ಮಯ್ಯ, ಶಿವಮೊಗ್ಗದ ಶ್ರೀಕಾಂತ್, ರವಿಕುಮಾರ್, ಹೊಸ್ಮನೆ ಮೂರ್ತಿ ಮತ್ತು ಬಾಲು ಅವರಿಗೂ ನಮ್ಮ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಕಳೆದ ಮೂರು ತಿಂಗಳುಗಳಿಂದ ನಾವೆಲ್ಲ ಎಷ್ಟು ಕಷ್ಟಪಟ್ಟು ಕೆಲಸ ಮಾಡಿದ್ದೇವೆಂದರೆ ಎಲ್ಲರಿಗೂ ತುರ್ತಾಗಿ ಒಂದೆರಡು ದಿನಗಳ ರಜೆ ಆದರೂ ಬೇಕಿದೆ.

ಈ ಸಂಚಿಕೆಯನ್ನು ಮುದ್ರಣಕ್ಕೆ ಕಳುಹಿಸಿದ ಮರುದಿನವೇ ನಮ್ಮ ಟೆಕ್ನಿಕಲ್ ತಂಡ ನಾಲ್ಕು ದಿನಗಳ ರಜೆ ಮೇಲೆ ಕೇರಳಕ್ಕೆ ಹೋಗುತ್ತಿದೆ. ಇತರರೂ ಒಂದೆರಡು ದಿನ ಆಫೀಸ್ ಕಡೆ ತಲೆ ಹಾಕಿ ನಿದ್ರಿಸುವುದಿಲ್ಲ ಎಂದು ಶಪಥಗೈದಿದ್ದಾರೆ.

ನಾನೂ ಕೂಡ ಎಲ್ಲಿಗಾದರೂ ರಜೆ ಮೇಲೆ ಹೋಗಬಹುದೇ ಎಂದು ಕನಸ್ಸು ಕಾಣಲಾರಂಭಿಸಿದ್ದೆ.... ಆದರೆ ಈಗತಾನೇ ನಮ್ಮ ಟಾಸ್ಕ್‌ಮಾಸ್ಟರ್ ರಾಜು ನನ್ನ ಮುಂದೆ ಅಪ್ಪನ ಆತ್ಮಕಥನ 'ಹುಳಿಮಾವಿನ ಮರ', ಟಿ. ಪ್ರಸನ್ನನ ಗೃಹಸ್ಥಾಶ್ರಮ' ನಾಟಕ ಮತ್ತು ನಾನು ಅನುವಾದಿಸಿರುವ 'ದರವೇಶಿಕತೆ'ಗಳ ಪುಟಗಳನ್ನು ನನ್ನ ಮುಂದೆ ಇಟ್ಟು "ಇವನ್ನೆಲ್ಲ ಆದಷ್ಟು ಬೇಗ ಪ್ರೂಫ್ ನೋಡಿ ಕೊಡಿ ಮೇಡಂ. ಇವುಗಳ ಪ್ರತಿಗಳು ಮುಗಿದಿವೆ" ಎಂದರು.....



ಕಂಡಹಾಗೆ

■ ಗೌರಿ ಲಂಕೇಶ್

ಆದ್ದರಿಂದ ಯಾವುದೋ ಒಂದು ಕಾಡು, ಅದರಲ್ಲಿ ಹರಿಯುತ್ತಿರುವ ನದಿ, ಮೇಲೆ ಹರಡಿರುವ ನೀಲಿ ಆಕಾಶ, ದೂರದಲ್ಲಿರುವ ಬೆಟ್ಟ, ಸುತ್ತಲು ಇರುವ ನಿಶ್ಯಬ್ದ... ಇಂತಹ ಒಂದು ಚಿತ್ರವನ್ನು ಕಣ್ಣುಮುಚ್ಚಿ ಕಲ್ಪಿಸಿಕೊಂಡು ಒಂದೆರಡು ತಾಸು 'ರಜೆ' ತೆಗೆದುಕೊಳ್ಳುವುದು ಬಿಟ್ಟು ಬೇರೆ ಆಯ್ಕೆಯೇ ನನಗಿಲ್ಲ!

ಆದರೂ ಪರವಾಗಿಲ್ಲ, ಮಾರ್ಚ್ 6 ಮತ್ತು 7 ರಂದು ನಿಮ್ಮನ್ನೆಲ್ಲ ಭೇಟಿ ಆಗುತ್ತೇನಲ್ಲ, ನಿಮ್ಮೊಂದಿಗೆ ಕಳೆಯುವ ಆ ಎರಡು ದಿನಗಳೇ ನನಗೆ ಸಂತೋಷ ನೀಡುವ ರಜೆ! ಬನ್ನಿ, ನನಗೆ ರಜೆ ಕೊಡಿ!!

ಪ್ರೀತಿಯಿಂದ,

ಗೌರಿ ಲಂಕೇಶ್

ಎಸ್ಪಿ ಮುರುಗನ್‌ನ ಇಬ್ಬಗೆಯ ನೀತಿ

ಶಿವಮೊಗ್ಗ ಗಲಭೆಯನ್ನು ಹತ್ತಿರದಿಂದ ನೋಡಿದರೆ ಅದು ಕೇವಲ ಮುಸ್ಲಿಮರೋ ಅಥವ ಕೇವಲ ಹಿಂದೂ ಕೋಮುವಾದಿಗಳೋ ನಡೆಸಿರುವ ... ಮಾತ್ರ ಆಗಿಲ್ಲದಿರುವುದು ಮೇಲ್ನೋಟಕ್ಕೇ ... ಉತ್ತದೆ. ತಸ್ಲೀಮಾ ನಸ್ರೀನ್ ಮೂರು ವರ್ಷಗಳ ... ದೆ ಬರೆದಿದ್ದ ಲೇಖನವನ್ನು ಅನುವಾದ ಮಾಡು ... ತಿರುಚಿ ಪ್ರವಾದಿ ಮಹಮ್ಮದ್ ಅವರು ... ಹೇಳನಕಾರಿಯಾಗಿ ಚಿತ್ರಿತಗೊಳ್ಳುವಂತೆ ಮಾಡಿ ... ಕ ಪ್ರಭ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಮುಸ್ಲಿಮರನ್ನು ... ಸಿದ್ದು ನಿಜ. ಅಂತೆಯೇ ಅವರೇ ಮೊದಲು ... ಗಿಳಿದು ಹಿಂಸಾಚಾರ ನಡೆಸಿದ್ದೂ ಅಷ್ಟೇ ನಿಜ. ... ರೆ ಎರಡು ದಿನಗಳ ಕಾಲ ... ಮೊಗ್ಗ ಹೊತ್ತಿ ಉರಿಯುವಂತೆ ... ಡಿದ್ದು ಕೇವಲ ಮುಸ್ಲಿಮರು ... ತ್ರವಲ್ಲ. ಗಲಭೆ ... ಆರಂಭಗೊಂಡ ಕೆಲವೇ ... ಗಳಲ್ಲಿ ಭಜರಂಗದಳ ... ತರ ಹಿಂದೂತ್ವ ಮತಾಂಧರೂ ... ಸ್ಲಿಮರ ಮನೆಮನೆಗೆ ನುಗ್ಗಿ ... ದಾಳಿ ಮಾಡಿದ್ದಾರೆ, ... ಸ್ಲಿಮರ ಅಂಗಡಿ ... ಗಟ್ಟುಗಳಿಗೆ ಬೆಂಕಿಹಚ್ಚಿದ್ದಾರೆ. ... ಕಂಡಲ್ಲಿ ಮುಸ್ಲಿಮರನ್ನು ದನಕ್ಕೆ ... ಯುವಂತೆ ಬಡಿದಿದ್ದಾರೆ. ಹೀಗೆ ಮುಸ್ಲಿಮರು ... ಆರಂಭಿಸಿದ ಹಿಂಸಾಚಾರಕ್ಕಿಂತ ದುಪ್ಪಟ್ಟು ... ಹಿಂಸಾಚಾರವನ್ನು ಹಿಂದೂತ್ವ ಮತಾಂಧರೇ ... ಮಾಡಿದ್ದಾರೆ.

... ಜಿಲ್ಲೆಯ ಪೊಲೀಸ್ ಪಡೆಯ ನೇತೃತ್ವ ... ವಹಿಸಿಕೊಂಡಿರುವ ಎಸ್ಪಿ ಮುರುಗನ್ ಯಾವ ... ದಾಕ್ಷಿಣ್ಯಕ್ಕೂ ಒಳಗಾಗದೇ, ಮುಸ್ಲಿಮರಿರಲಿ, ... ಹಿಂದೂಗಳಿರಲಿ, ಹಿಂಸಾಚಾರದಲ್ಲಿ ತೊಡಗಿದ್ದ ... ನಾದ ಅಪರಾಧಿಗಳನ್ನು ಬಂಧಿಸಿ ಸೂಕ್ತ ... ಣಗಳನ್ನು ಹಾಕಿ ಜೈಲಿಗಟ್ಟಬೇಕಿತ್ತು. ಆದರೆ ... ಸರ್ಕಾರವೇ ಅಧಿಕಾರದಲ್ಲಿರುವಾಗ ಗಲಭೆ ... ದ ಹಿಂದೂತ್ವ ಕೋಮುವಾದಿಗಳನ್ನು ಮುಟ್ಟುವ ... ಆಪಗಿಲ್ಲಿಂದ ಬರುತ್ತೆ, ನಿರೀಕ್ಷೆಯಂತೆ ಹೆಚ್ಚಿನ ... ಯಲ್ಲಿ ಮುಸ್ಲಿಮರನ್ನೇ ಬಂಧಿಸಿ ಜೈಲಿಗಟ್ಟಿ ... ಮೆರೆದಿದ್ದಾರೆ.


... ವೈಎಸ್‌ಪಿ ಶೇಖರಪ್ಪ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಒಟ್ಟು ಹತ್ತು ಸಾವಿರ ಜನರು ಗಲಭೆಯಲ್ಲಿ ತೊಡಗಿದ್ದರೆಂದು ಎಫ್‌ಐಆರ್ ತಯಾರು ಮಾಡಲಾಗಿದೆ. ಅದರಲ್ಲಿ ಮೊದಲನೇ ಸ್ಥಾನ ದಲ್ಲಿರುವ ಆರೋಪಿ ಎಂದರೆ ಪೊಲೀಸರ ಗುಂಡೇಟಿಗೆ ಬಲಿಯಾದ ಸಾದಿಕ್. ಉಳಿದಂತೆ ಮುಸ್ಲಿಮರ ಕಾಲೋನಿಗಳಿಗೆ, ಮೊಹಲ್ಲಾಗಳಿಗೆ ನುಗ್ಗಿ ಸಿಕ್ಕಸಿಕ್ಕವರನ್ನೆಲ್ಲಾ ಎತ್ತಿಕೊಂಡು ಬಂದು ಅವರನ್ನೆಲ್ಲಾ ಗಲಭೆ ನಡೆಸಿದವರ ಲಿಸ್ಟಿಗೆ ಸೇರಿಸಿ ಜೈಲಿಗಟ್ಟಲಾಗುತ್ತಿದೆ. ಟೀಪೂ ನಗರ ವೊಂದರಿಂದಲೇ ಕನಿಷ್ಠ ಐನೂರು ಮುಸ್ಲಿಮರನ್ನು ಬಂಧಿಸಲಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಬಂದಾಗ ಕನಿಷ್ಠ ಒಂದೂವರೆ ಸಾವಿರ ಮುಸ್ಲಿಮರನ್ನು ಬಂಧಿಸಿ ಅವರ ಮೇಲೆ ಐಪಿಸಿ ಸೆಕ್ಷನ್ 307 (ಕೊಲೆಯತ್ನ) ಒಳಗೊಂಡಂತೆ ಇನ್ನಿತರ ಸೆಕ್ಷನ್‌ಗಳನ್ನು ಹಾಕಿ ಬಳ್ಳಾರಿ, ಗುಲ್ಬರ್ಗಾ, ಮೈಸೂರು ಜೈಲುಗಳಿಗೆ ಕಳಿಸಲಾಗುತ್ತಿದೆ. ಅಂದರೆ, ಗಲಭೆಯಲ್ಲಿ ಪಾಲ್ಗೊಂಡಿದ್ದರೆಂದು ಪೊಲೀಸರು ಹೇಳುವ ಈ ಹತ್ತು ಸಾವಿರ ಜನರಲ್ಲಿ ಎಲ್ಲರೂ ಮುಸ್ಲಿಮರೇ ಎಂದು ಎಸ್ಪಿ ಮುರುಗನ್ ತೀರ್ಮಾನಿಸಿದಂತಿದೆ. ಇದರರ್ಥ ಇಷ್ಟೇ. ಶಿವಮೊಗ್ಗೆಯಲ್ಲಿರುವ ಯಾವುದೇ ಮುಸ್ಲಿಂ ಗಲಭೆಯ ಆರೋಪಿ ಎಂದಾಗಬಹುದು.



ಕೇವಲ ಮುಸ್ಲಿಮರನ್ನು ಮಾತ್ರ ಬಂಧಿಸಿದರೆ ಜನ ಉಗಿಯುತ್ತಾರೆಂಬ ಅರಿವೂ ಮುರುಗನ್‌ಗೆ ಇದ್ದಿದ್ದರಿಂದ ಕಾಟಾಚಾರಕ್ಕೆ, ನಾಮಕಾವಾಸ್ತೆಗೆ ಹತ್ತಿಪ್ಪತ್ತು ಹಿಂದೂ ಯುವಕರನ್ನು ಬಂಧಿಸಿದ್ದಾರೆ. ಆದರೆ, ಪೊಲೀಸರ ಸಂಪೂರ್ಣ ಗಮನವಿರುವುದು ಮುಸ್ಲಿಮರನ್ನು ಬಂಧಿಸುವ ಕಡೆಗೆಯೇ. ಆದಕ್ಕೆ ಯಡ್ಡಿ ಮತ್ತು ಈಶ್ವರಪ್ಪನ ಕುಮ್ಮಕ್ಕೂ ಇಲ್ಲದಿಲ್ಲ. ಅಸಲಿಗೆ ಪೊಲೀಸರ ಈ ತಾರತಮ್ಯಯುತ ವರ್ತನೆ ಭವಿಷ್ಯದ ಕೋಮುಗಲಭೆಗೆ ಪ್ರಚೋದನೆಯಾಗುತ್ತದಷ್ಟೆ. ಹಿಂದೂ ಮತಾಂಧರಿಗೆ ತಮ್ಮದೇ ಸರ್ಕಾರವಿರುವುದರಿಂದ ತಾವೆಷ್ಟೇ ಹಿಂಸಾಚಾರ ಮಾಡಿದರೂ ನಮ್ಮನ್ನೇನೂ ಮಾಡುವುದಿಲ್ಲ ಎಂಬ ಪ್ರೋತ್ಸಾಹ ಸಿಕ್ಕರೆ, ಅದೇ ವಿಚಾರ ಸರ್ಕಾರದ ಬಗ್ಗೆ, ಪೊಲೀಸರ ಬಗ್ಗೆ ಹಾಗೂ ಹಿಂದೂತ್ವ ಮತಾಂಧರ ಬಗ್ಗೆ ಮುಸ್ಲಿಮರಲ್ಲಿ ಇನ್ನಷ್ಟು ದ್ವೇಷ ಹುಟ್ಟುವುದಕ್ಕೆ ಕಾರಣವಾಗುತ್ತದೆ. ಇಷ್ಟು ಸಾಕಲ್ಲವೇ ಚಿಕ್ಕದೊಂದು ಕಿಡಿ ಮತ್ತೊಮ್ಮೆ ಕೋಮು ಗಲಭೆಯಾಗಿ ಭುಗಿಲೇಳುವುದಕ್ಕೆ?

ಕಲಾವಿದ ಹಾದಿಮನಿ ಮತ್ತು ನೀಲು

ಲಂಕೇಶರ 'ನೀಲು ಕಾವ್ಯ'ಗಳೂ, ಕಲಾವಿದ ಹಾದಿಮನಿ ಅವರ ರೇಖಾ ಚಿತ್ರಗಳೂ ಅವಳಿಜವಳಿಗಳಿದ್ದಂತೆ. ಆದ್ದರಿಂದಲೇ ಈ ಬಾರಿ ಬಿಡುಗಡೆಗೊಳ್ಳುತ್ತಿರುವ 'ನೀಲು ಕಾವ್ಯ'ಗಳ ಮೂರನೇ ಮತ್ತು ಕೊನೆಯ ಸಂಗ್ರಹಕ್ಕೆ ಹಾದಿಮನಿಯವರೇ ರೇಖಾ ಚಿತ್ರಗಳನ್ನು ಬಿಡಿಸಿದರೆ ಚಂದ ಎಂದು ನಿರ್ಧರಿಸಿದೆ. ಆದರೆ ಹಾದಿಮನಿ ಎಷ್ಟು ಪ್ರತಿಭಾವಂತರೋ ಅಷ್ಟೇ ಅಶಿಸ್ತಿನ ಮನುಷ್ಯ ಕೂಡ. ಜೊತೆಗೆ ಅವರೀಗ ನೆಲೆಸಿರುವುದು ಕೇರಳದ ಕೊಚಿನ್‌ನಲ್ಲಿ ಕೆಲಸ ಮಾಡುತ್ತಿರುವುದು ಮಲೆಯಾಳ ಮನೋರಮಾ ಸಂಸ್ಥೆಯಲ್ಲಿ. ಇಂತಹ ಪರಿಸ್ಥಿತಿಯಲ್ಲಿ ಅವರಿಂದ ರೇಖಾಚಿತ್ರಗಳನ್ನು ಬರೆಸುವುದು ಹೇಗೆ, ಪುಸ್ತಕವನ್ನು 'ಲಂಕೇಶ್ 75' ಕಾರ್ಯಕ್ರಮದ ಹೊತ್ತಿಗೆ ಸಿದ್ಧಪಡಿಸುವುದು ಹೇಗೆ ಎಂಬ ಸಮಸ್ಯೆ ತಲೆದೋರಿತು.



ಆದರೂ ಒಂದು ಪ್ರಯತ್ನ ಮಾಡೋಣ ಎಂದು ಕಂಪೋಸ್ ಆಗಿದ್ದ ನೀಲು ಕಾವ್ಯಗಳ ಪ್ರತಿಯೊಂದನ್ನು ಹಾದಿಮನಿಗೆ ಪೋಸ್ಟ್ ಮಾಡಿದೆ. ನೀಲು ಕಾವ್ಯವೆಂದರೆ ಚಕಿತಗೊಳ್ಳುವ, ಪುಲಕಗೊಳ್ಳುವ ಹಾದಿಮನಿ "ರೇಖಾ ಚಿತ್ರಗಳನ್ನು ಡಿಸೆಂಬರ್ ಒಳಗೆ ಕಳುಹಿಸುತ್ತೇನೆ. ನೀವು ಏನೂ ಚಿಂತೆ ಮಾಡಬೇಡಿ" ಅಂದರು. ಡಿಸೆಂಬರ್ ಬಂದು ಹೋಯಿತು. "ಮಾರ್ಚ್ 8 ಕ್ಕೆ ಪುಸ್ತಕ ರೆಡಿ ಆಗಬೇಕಲ್ಲವಾ ಮೇಡಂ? ಜನವರಿ ಅಂತ್ಯದೊಳಗೆ ಕಳುಹಿಸುತ್ತೇನೆ, ಡೋಂಟ್‌ವರಿ" ಎಂದು ಮತ್ತೆ ದೂರದಿಂದಲೇ ಭರವಸೆ ನೀಡಿದರು ಹಾದಿಮನಿ. ಜನವರಿ ಕೂಡ ಬಂದು ಹೋಯಿತು. ಒಂದೇ ಒಂದು ರೇಖಾಚಿತ್ರವೂ ಬಂದಿರಲಿಲ್ಲ. ಅಷ್ಟೇ ಅಲ್ಲ, ಹಾದಿಮನಿ ಫೋನಿಗೆ ಸಿಗುವುದೂ ಅಪರೂಪವಾಗುತ್ತಿತ್ತು.

ನನ್ನ ಆತಂಕ ಹೆಚ್ಚಾಗುತ್ತಾ ಹೋದರೂ ಹಾದಿಮನಿ ಮಾತ್ರ ಕೂಲ್ ಆಗಿಯೇ ಇದ್ದರು. "ಡ್ರಾಯಿಂಗ್‌ಗಳನ್ನು ಮಾಡ್ತಾ ಇದ್ದೇನೆ. ಆದಷ್ಟು ಬೇಗ ಕಳುಹಿಸುತ್ತೇನೆ. ಈ ಬಾರಿ ರೇಖಾಚಿತ್ರಗಳು ತುಂಬಾ ಚೆನ್ನಾಗಿ ಬಂದಿವೆ" ಎಂದು ಹೇಳುತ್ತಲೇ ಫೆಬ್ರವರಿಯ ಮೊದಲ ಮೂರು ವಾರಗಳನ್ನು ದೂಡಿದರು.



ಒಂದೆಡೆ 'ಲಂಕೇಶ್ 75' ಎಂಬ ಎರಡು ದಿನದ ಬೃಹತ್ ಕಾರ್ಯಕ್ರಮ, ಇನ್ನೊಂದೆಡೆ ಬರೋಬ್ಬರಿ ಹನ್ನೆರಡು ಪುಸ್ತಕಗಳ ಸಿದ್ಧತೆ.... ನನ್ನ ಬಿಪಿ ಕೂಡ ಏರುತ್ತಾ ತಲೆ ಸುತ್ತುವಿಕೆ ಶುರುವಾಯಿತು. ಹಾದಿಮನಿ ಮಾತ್ರ ಆಕಸ್ಮಿಕವಾಗಿ ಫೋನಿಗೆ ಸಿಕ್ಕಾಗಲೆಲ್ಲ "ಚಿಂತೆ ಮಾಡಬೇಡಿ ಮೇಡಂ" ಎಂದೇ ಮತ್ತೆಮತ್ತೆ ಹೇಳುತ್ತಿದ್ದರು.

ಹಾದಿಮನಿಯನ್ನು ನಂಬಿ ಕೂತರೆ 'ನೀಲು ಕಾವ್ಯ' ಪ್ರಕಟಗೊಳ್ಳುವುದೇ ಇಲ್ಲ ಎಂಬ ಸ್ಥಿತಿಗೆ ನಾನು ಬಂದು ಕೈಚೆಲ್ಲಿ ಕೂತೆ. ಆದರೆ ಮಾರ್ಚ್ 1ನೇ ತಾರೀಖು ಹಾದಿಮನಿಯವರಿಂದ ಒಂದು ಕೊರಿಯರ್ ಬಂತು. ಕವರ್ ಅನ್ನು ತೆಗೆದು ನೋಡಿದರೆ ಒಂದಕ್ಕಿಂತ ಇನ್ನೊಂದು ಅದ್ಭುತವಾಗಿದ್ದ 75 ರೇಖಾ ಚಿತ್ರಗಳನ್ನು ಅವರು ಕಳುಹಿಸಿದ್ದರು. ಅವುಗಳನ್ನು ನೋಡಿ ಎಲ್ಲರಿಗೂ ತುಂಬಾ ಸಂತೋಷವಾಯಿತು. ಅಂದೇ ಪತ್ರಿಕೆಯ ಹತ್ತು ವರ್ಷಗಳ ಫೈಲುಗಳನ್ನು ತಡಕಾಡಿ ಆ ರೇಖಾಚಿತ್ರಗಳಿಗೆ ಅಪ್ಪನ ಹಸ್ತಾಕ್ಷರದಲ್ಲಿದ್ದ ನೀಲು ಕಾವ್ಯಗಳನ್ನು ನಾನೇ ಸ್ಕ್ಯಾನ್ ಮಾಡಿದೆ. ಮಾರನೆ ದಿನ ಬೆಳಗ್ಗೆಯಿಂದ ಮಧ್ಯರಾತ್ರಿಯವರೆಗೆ ಕೂತ ನಮ್ಮ ಅರುಣ್‌ಕುಮಾರ್ ಪುಟ ವಿನ್ಯಾಸವನ್ನೂ ಮುಗಿಸಿದ. ಅಷ್ಟರೊಳಗೆ ಮುಖಪುಟವನ್ನೂ ಸಿದ್ಧಗೊಳಿಸಿದ ಹಾದಿಮನಿ ಅದನ್ನು ಈಮೇಲ್ ಮಾಡಿದರು.

ಹಾದಿಮನಿ ಅವರ ರೇಖಾಚಿತ್ರ ಮತ್ತು ಮುಖಪುಟ ಎಷ್ಟು ಚೆನ್ನಾಗಿವೆ ಅಂದರೆ 'ನೀಲು ಕಾವ್ಯ'ಗಳ ಮೂರನೆ ಸಂಗ್ರಹ ಅದ್ಭುತವಾಗಿ ಮೂಡಿ ಬಂದಿದೆ. ಈ ರೇಖಾ ಚಿತ್ರಗಳಿಗಾಗಿ ನಮ್ಮ ಸಂಸ್ಥೆಯಿಂದ ಹೆಚ್ಚು ಹಣ ಖರ್ಚಾಗಿದ್ದರೂ ಒಂದು ಸುಂದರ ಕಾವ್ಯಗಳ, ಚಿತ್ರಗಳ ಪುಸ್ತಕ ನೀಡುವ ಆನಂದದ ಮುಂದೆ ಅದು ಗೌಣ, ಅಲ್ಲವೆ?

● ಗೌರಿ ಲಂಕೇಶ್

ಸಗಣಿ ಸ್ವಾಮಿಯ 'ಶಿವರಾತ್ರಿ ಫಲ್ಹಾರ' ಪುರಾಣಂ!!



ಶುದ್ಧ ಕೊಳಚೆ ಕ್ಷೇತ್ರ ಗೋಕರ್ಣದ ಸುಪ್ರಸಿದ್ಧ ಶ್ರೀ ಮಹಾಬಲೇಶ್ವರ ಟ್ರೇಡರ್ಸ್‌ನ ಪ್ರೊಪ್ರೈಟರ್ ಶ್ರೀ ಶ್ರೀ ಶ್ರೀ ರಾಘವೇಶ್ವರ ಸ್ವಾಮೀಜಿಗೆ ಹಣ-ಹೆಣ್ಣುಗಳೇ ದೇವರು-ಧರ್ಮ! "ಧರ್ಮೋ ರಕ್ಷತಿ ಧರ್ಮ:" ಎಂಬುದೇ ಈ ಕಾವಿಧಾರಿಯ ಬಿಸಿನೆಸ್‌ನ ಮೂಲ ಮಂತ್ರ!! ಸಕಲ-ಜಾತಿ ಜನಾಂಗದ ಸಾರ್ವಜನಿಕ ಶ್ರದ್ಧಾ-ಭಕ್ತಿ ಕೇಂದ್ರವಾಗಿದ್ದ ಗೋಕರ್ಣ ದೇವಾಲಯವನ್ನು ಈ ಧನದಾಹಿ ಸನ್ಯಾಸಿ ಯಾವಾಗ ಲಕ್ಷಾಂತರ ಪೊಲೀಸರು- ಗೂಂಡಾಗಳನ್ನಿಟ್ಟುಕೊಂಡು ಹಸ್ತಾಂತರಿಸಿಕೊಂಡನೋ, ಆ ಗಳಿಗೆಯಿಂದಲೇ ಅದೊಂದು ಬಾರಾ ಭಾನಗಡಿ-ದೋ ನಂಬರ್ ದಂಧೆಗಳ ಅಡ್ಡೆಯಂತಾಗಿ ಹೋಯ್ತು!

ಗೋಕರ್ಣದ ಅಭಿವೃದ್ಧಿ ಮಾಡುತ್ತೇನೆ, ದೇವಾಲಯವನ್ನು ಧಾರ್ಮಿಕ ಆಕರ್ಷಣೆಯ ಕೇಂದ್ರ ಮಾಡುತ್ತೇನೆಂದೆಲ್ಲ ಬೋಂಗು ಬಿಡುತ್ತ ರಾಘವೇಶ ಗೋಕರ್ಣಕ್ಕೆ ವಕ್ಕರಿಸಿದ್ದ. ಆದರೆ ಈ ಒಂದೂವರೆ ವರ್ಷದಲ್ಲಿ ಸದ್ರಿ ಸೋಗಲಾಡಿ ಸ್ವಾಮಿ ಆತ್ಮಲಿಂಗ ಬಂಡವಾಳ ಮಾಡಿಕೊಂಡು ಹೇಗ್ಹೇಗೆ ಲೂಟಿ ಮಾಡಬಹುದೆಂದು ಸ್ಕೆಚ್ ಹಾಕಿಕೊಂಡು ಕಾರ್ಯಾಚರಣೆ ಮಾಡಿದನೇ ಹೊರತು ಗಟಾರದಂಥ ಗೋಕರ್ಣ ಗ್ರಾಮೋದ್ಧಾರದ ಗೊಡವೆಗೆ ಹೋಗಿಲ್ಲ, ಆದರೆ ಈ ಶ್ರೀಮಂತ ದೇಗುಲವನ್ನು ಹಾಡುಹಗಲೇ ಕೊಳ್ಳೆ ಹೊಡೆದು ಸ್ವತಃಜೇಣೋದ್ಧಾರ ಸಕತ್ತಾಗೇ ಸಾಧಿಸುತ್ತಿದ್ದಾನೆ.

ದೇವಾಲಯದ ಚರ-ಸ್ಥಿರ ಆಸ್ತಿ ಒಂದೊಂದಾಗಿ ರಾಘವೇಶನ ಪ್ರೈವೇಟ್ ಮಠದ ಹೆಸರಿಗೆ ಖಾತೆ-ಕಬ್ಜ ಆಗುತ್ತಿದೆ. ವಿಪರ್ಯಾಸ ನೋಡಿ; ದೇವಾಲಯದ ಪಾರುಪತ್ಯ ರಾಘವೇಶನ ಬ್ರಾಹ್ಮಣ ಬಳಗ ವಶಪಡಿಸಿಕೊಂಡಿದ್ದರೂ ಸಿಎಂ ಯಡ್ಡಿ ಮಾತ್ರ ಈ ದೇವಾಲಯ ಸಾರ್ವಜನಿಕ ಸ್ವರೂಪದ್ದೆಂದು ಸುಳ್ಳು ಬೊಗಳುತ್ತಿದ್ದಾರೆ. ಇತ್ತ ಸಾಕ್ಷಾತ್ ಸಿಎಂ ಸಾಹೇಬರೇ ಬೆನ್ನಿಗಿರುವ ಅಹಂಕಾರದಿಂದ ದೇವಾಲಯದ ದೈತ್ಯ ಹುಂಡಿಗಳನ್ನು ಸ್ವಾಮಿ ನುಂಗಿ ನೀರು ಕುಡಿಯುತ್ತಿದ್ದಾನೆ. ಯಾರಾದರೂ ಲೆಕ್ಕ ಕೇಳಿದರೆ "ನೀನ್ಯಾರು ಅದನ್ನು ಕೇಳೋದಕ್ಕೆ" ಎಂಬ ರೆಡಿಮೇಡ್ ಉದ್ಧಟ ಉತ್ತರ ಬರುತ್ತಿದೆ.

ಧನ-ದವಸ-ಕನಕ ಸಿಗುತ್ತವೆಂದರೆ ರಾಘವೇಶ ಕಾವಿ ಸುತ್ತಿಕೊಂಡೇ ಶುದ್ಧ ಲೇವಾದೇವಿ ರಸಿಕನಾಗಿ ಬಿಡಬಲ್ಲ! ಯತಿ ಧರ್ಮಕ್ಕೆ ಯಾವುದು ನಿಷಿದ್ಧವೋ ಆ ಮೋಹದಲ್ಲೇ ಈ ಸನ್ಯಾಸಿ ಬಿದ್ದು ಒದ್ದಾಡುತ್ತಿದ್ದಾನೆ. ಅಖಂಡ ಬ್ರಹ್ಮಚಾರಿ ಆಂಜನೇಯನ ದೇಗುಲ ಕಾರ್ಯಕ್ರಮಕ್ಕೆ ಬಾಲಿವುಡ್ ಬಿಚ್ಚಮ್ಮ ಮಲ್ಲಿಕಾ ಶರಾವತ್ ಕರೆಸಿ ಆಕೆಯ ಪಕ್ಕ ಕುಳಿತು ಫಕೀರನಂತೆ ಪಕಪಕನೆ ರಾಘವೇಶ ನಕ್ಕಿದ್ದು ಆತನ ಅಸಲೀ ವೇಷ ಅನಾವರಣ ಮಾಡಿಬಿಟ್ಟದೆ! ಈ ಸರ್ವಸಂಗ ಪರಿತ್ಯಾಗಿಯ ಬರೋಬ್ಬರಿ ಒಂದು ಕೋಟಿ ರೂಪಾಯಿ ವಿಮಾ ಪಾಲಿಸಿ ಮಾಡಿದ ಏಜೆಂಟ್ ಚೆಂದದ ಆಂಟಿ; ಆ ಪಾಲಸಿಗೆ ನಾಮಿನಿ ಹದಿಹರೆಯದ ಹುಡುಗಿ!! ಈ ಸಾಧು ಇಂಟರ್‌ನೆಟ್‌ನಲ್ಲಿ ಸುಂದರಿಯೊಬ್ಬಳ ಜತೆ ಚಾಟಿಂಗ್ ಮಾಡೋದು ಎಲ್ಲರಿಗೆ ಗೊತ್ತಿರುವ ರಹಸ್ಯ. ರಾಘವೇಶನ "ಧರ್ಮೋತ್ಥಾನ" ಕಾರ್ಯಕ್ರಮಗಳ ವೀಡಿಯೋ ಕ್ಲಿಪಿಂಗ್, ಫೋಟೋಗಳ ನೋಡಿದರೆ ಸಾಕು, ಲಲನೆಯರ ಜತೆ ಶ್ರೀಗಳು ಲಲ್ಲೆಗರೆಯುವುದು ಕಾಣಿಸುತ್ತದೆ.

ಗೋಕರ್ಣ ದೇವಾಲಯದಲ್ಲಿ ಊಟವಿಲ್ಲವೆಂದು ಗೋಯಂಕಾಗಳ ಖಜಾನೆ ಮೇಲೆ ಕಣ್ಣು ಹಾಕಿದ್ದ ರಾಘವೇಶ ಮೊನ್ನೆ ಶಿವರಾತ್ರಿ ವೇಳೆ ನೈಸ್ ಖೇಣಿಯನ್ನು ಗೋಕರ್ಣಕ್ಕೆ ಕರೆಸಿ ಕರಾಮತ್ತು ಮಾಡಿದ್ದಾನೆ. ಕಟೌಟ್‌ಗಳಲ್ಲಿ ಸ್ವಾಮಿ-ಖೇಣಿ ರಾರಾಜಿಸಿದ್ದು ಗೋಕರ್ಣ ದೇವಾಲಯವನ್ನು ರಾಘವೇಶ ವ್ಯಾಪಾರೀಕರಣ ಗೊಳಿಸಿರುವುದಕ್ಕೆ ಸಂಕೇತದಂತಿದೆ! ಮಹಾಬಲೇಶ್ವರ ದೇಗುಲದಲ್ಲಿ "ಮಹಾ ಸಂಕಲ್ಪ" ಎಂಬ ದಗಲುಬಾಜಿ ಕಾರ್ಯಕ್ರಮ ನಡೆಸಿದ ಈ ಹೈಗರ ಮಠಾಧಿಪತಿ ಪರಿವಾರ ಸೇವಾ ಕಾಣಿಕೆ ಒಂದಕ್ಕೆ ನೂರು ಪಟ್ಟು ಏರಿಸಿ ಭಕ್ತರ ಮುಂಡಾ ಮೋಚುತ್ತಿದೆ; ಕಂಡ-ಕಂಡಲ್ಲಿ ಕಾಣಿಕೆ ಡಬ್ಬಿಗಳನ್ನಿಟ್ಟು ಭಾವನಾತ್ಮಕ ಸುಲಿಗೆ ಮಾಡುತ್ತಿದೆ. ದೇವಾಲಯದಲ್ಲಿ ನೇತು ಹಾಕಿರುವ ಕೋಟಿಗಟ್ಟಲೆಯ ಸೇವಾ ವಿವರದ ಬೋರ್ಡು ರಾಘವೇಶನ ವ್ಯವಸ್ಥಿತ ಬೋಳಿಸುವಿಕೆ ಸಾಬೀತುಪಡಿಸುತ್ತಿದೆ.

ವರ್ಷಕ್ಕೊಮ್ಮೆ ಬರುವ "ಶಿವರಾತ್ರಿ" ರಾಘವೇಶ್ವರ ಸ್ವಾಮಿ ಸಂತತಿ ಪಾಲಿಗೆ "ಸುಗ್ಗಿ"ಯಂತೆ! ಗೋಕರ್ಣಕ್ಕೆ ಹರಿದುಬರುವ ಭಕ್ತ ಸಾಗರ ...ವ ಸಕಲ ಟ್ರಿಕ್ಕುಗಳೂ ಸ್ವಾಮಿ ಗ್ಯಾಂಗಿನಿಂದ ಆ ವೇಳೆ ಪ್ರಯೋಗಿಸಲ್ಪಡುತ್ತದೆ. ...ೋಕರ್ಣ ದೇವಾಲಯ ಕಬಳಿಸಿದ ಮೇಲೆ ರಾಘವೇಶ್ವರ ಅಂಡ್ ಕಂಪನಿಗೆ ಎರಡು ಶಿವರಾತ್ರಿಗಳು ಸಿಕ್ಕಿವೆ. ಎರಡೂ ವರ್ಷ ಕೋಟಿ-ಕೋಟಿ ರಾಮಚಂದ್ರಾಪುರ ಮಠಾರ್ಪಣವಾಗಿದೆ! ಮೊದಲ ವರ್ಷ ಶಿವರಾತ್ರಿಯನ್ನು ಮೈಸೂರಿನ ದಸರೆಯಂತೆ ಒಂಭತ್ತು ದಿನ ವಿಜೃಂಭಣೆಯಿಂದ ನಡೆಸುವ ಘೋಷಣೆ ಸ್ವಾಮಿ ಮಾಡಿದ್ದ. ನವರಾತ್ರಿ ಜೋಳಿಗೆ ತುಂಬುವ ಕರಾಳ ಹಿಕಮತ್ತು ಅದಗಿತ್ತೇ ವಿನಃ ಯಾವ ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ ಧ್ಯೇಯೋದ್ದೇಶವಿರಲಿಲ್ಲ ಬಿಡಿ!

ಕಳೆದ ವರ್ಷದ ಶಿವರಾತ್ರಿಗೆ ಮೊದಲೇ ರಾಘವೇಶ್ವರ ಸ್ವಾಮಿ ಪಟಾಲಂ ಗೋಕರ್ಣ ಮಹಾಬಲೇಶ್ವರ ಹೆಸರಲ್ಲಿ ವಸೂಲಿ ಆರಂಭಿಸಿತ್ತು! ಜಗಕ್ಕೊಬ್ಬನೇ ಶಿವನೆಂದು ಸಾರುತ್ತ ಮೂರ್‍ನಾಲ್ಕು ಜಿಲ್ಲೆಯಲ್ಲಿ ರಾಮಚಂದ್ರಾಪುರ ಮಠದ "ಶಿವರಥ" ಅರ್ಥಾತ್ ದೊಡ್ಡ ಲಾರಿ ಸಂಚರಿಸಿ ಜನರಿಂದ ದವಸ-ಧಾನ್ಯ ಸಂಗ್ರಹಿಸಿತ್ತು, ಈ ರಥದ ಹಿಂದೆ ಹಲವು ವಾಹನಗಳು ಹೊರಟಿದ್ದವು. ಲಾರಿ-ಲಾರಿ ತುಂಬ ತಂದು ಹಾಕಿದ ದವಸ-ಧಾನ್ಯಗಳು ನಾಲ್ಕೈದು ವರ್ಷದ ಶಿವರಾತ್ರಿ ಉತ್ಸವಕ್ಕೆ ಸಾಕಾಗುವಷ್ಟಿತ್ತು, ಆದರೆ ಇದರ ಪಕ್ಕಾ ಲೆಕ್ಕ ಮಾತ್ರ ಸಿಗಲೇ ಇಲ್ಲ ಯಾರಿಗೂ!

ಎಡವಟ್ಟು ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಕಳೆದ ಶಿವರಾತ್ರಿ ಹೊತ್ತಲ್ಲಿ ದೇವಾಲಯಗಳಿಗೆ ಲಕ್ಷಾಂತರ ಲೀಟರ್ ಗಂಗಾಜಲ ಕಳಿಸಿದ್ದು ನಿಮಗೆ ನೆನಪಿರಬಹುದು. ಈ ಚಿಡ್ಡಿ ಸರ್ಕಾರದ ಕಾರ್ಯಕ್ರಮದಂತೆ ಗೋಕರ್ಣಕ್ಕೂ ಸುಮಾರು ಎಂಟು ಲಕ್ಷ ಲೀಟರ್‌ನಷ್ಟು ಗಂಗಾಜಲ ಬಂದಿತ್ತು ಇದನ್ನು ೧೦೦ ರೂ.ಗೆ ಒಂದು ಪುಟ್ಟ ಗಿರಡಿಯಂತೆ ರಾಘವೇಶ್ವರ ಬಳಗ ಮಾರಿತ್ತು, ಈ ನೀರನ್ನು ಶಿವಲಿಂಗಕ್ಕೆ ಭಕ್ತರೇ ಅಭಿಷೇಕ ಮಾಡುವ "ಸೌಭಾಗ್ಯ" ರಾಘವೇಶ್ವರ ಬಳಗ ಕಲ್ಪಿಸಿತ್ತು, ಪುಣ್ಯಾಪೇಕ್ಷರ ಪಾಪಿಗಳು ಮುಗಿಬಿದ್ದರು. "ಗಂಗಾಜಲ" ಖಾಲಿಯಾಯ್ತು, ಆಗ ಗೋಕರ್ಣ ಬಳಿಯ ಅಶೋಕೆ ಮತ್ತು ಶಿರಸಿಯ ಅಂಬಾಗಿರಿ ಬಾವಿಗಳಿಂದ ಟ್ಯಾಂಕರ್‌ನಲ್ಲಿ ನೀರು ತಂದು "ಗಂಗಾಜಲ"ವೆಂದು ರಾಘವೇಶ್ವರನ ದೋಖಾ ಗ್ಯಾಂಗು ಹಂಚಿ ಹಣ ಮಾಡಿತು. ಅನಾಯಾಸವಾಗಿ ಬಂದು ಬಿದ್ದ ಹಣ ಕಮ್ಮಿಯೆಂದರೂ ನಲ್ವತ್ತರಿಂದ ಐವತ್ತು ಲಕ್ಷ ರೂಪಾಯಿಗಳು! ಇದು ಶಿವರಾತ್ರಿ ಮಹಿಮೆ!



ಶಿವರಾತ್ರಿ ಉತ್ಸವವೆಂದರೆ ಗೋಕರ್ಣದಲ್ಲಿ ಜಾತ್ರೆಯ ಸಡಗರ. ಈ ಜಾತ್ರೆಯಲ್ಲಿ ರಾಮಚಂದ್ರಾಪುರ ಮಠದವರು ಗೋಕರ್ಣ ಬೀಚ್‌ನಲ್ಲಿ ಸ್ಟಾಲ್‌ಗಳನ್ನು ಹಾಕಿದ್ದರು. ಸ್ಟಾಲ್ ಜಾಗಗಳನ್ನು ಹರಾಜೂ ಹಾಕಿದರು. ಇದರಲ್ಲಿ ಸಿಕ್ಕ ಹಣ ಲಕ್ಷ-ಲಕ್ಷ. ಒಟ್ಟು ಒಂಭತ್ತು ದಿನದ ಶಿವರಾತ್ರಿ ಉತ್ಸವದಲ್ಲಿ ಕೋಟಿಗಳ ಲೆಕ್ಕದಲ್ಲೇ ಕಾಸು ರಾಘವೇಶ್ವರ ಸ್ವಾಮಿ ಕಂಪನಿ ಕೂಡಿಸಿತ್ತು, ಆದರೂ ಭಾರೀ-ಭಯಂಕರ ಹಾನಿ ಎಂದು ದೇವಾಲಯದ ಪಾರುಪತ್ಯಗಾರರು ಬಾಯ್ಬಾಯಿ ಬಡಿದುಕೊಂಡರು! ಜಾತ್ರೆಯ ಆದಾಯ ಬರೀ 75,000 ಅಷ್ಟೇ ಎಂದು ಕೃಷ್ಣನ ಲೆಕ್ಕ ತೋರಿಸಿತು.

ಅಷ್ಟೇ ಅಲ್ಲ, ಸ್ಥಳೀಯ ಆಡಳಿತ ಗ್ರಾಮ ಪಂಚಾಯ್ತಿಗೂ ಮೋಸ ಮಾಡಿತು. 2 ಲಕ್ಷ ಜಾತ್ರೆ ತರ ತುಂಬುವುದಾಗಿ ಪರವಾನಗಿ ಪಡೆದಿದ್ದ ರಾಘವೇಶ್ವರ ಸ್ವಾಮಿ ಬರೀ 50 ಸಾವಿರ ಕಟ್ಟಿ ಕೈ ಮೇಲೆತ್ತಿ ಬಿಟ್ಟ. ಇಂಥ ವಂಚನೆ ಢೋಂಗಿ ಸ್ವಾಮಿ ಮಾತ್ರ ಮಾಡಬಲ್ಲ ಎಂದು ಗೋಕರ್ಣದ ಜನ ಮಾತಾಡಿಕೊಳ್ಳುತ್ತಿದ್ದಾರೆ. ಒಂದು ಲಕ್ಷ ಕೊಟ್ಟರೆ ಸ್ವಾಮಿ ಸಂಗಡವೇ ಕುಳಿತು ಆತ್ಮಲಿಂಗಕ್ಕೆ ಪೂಜೆ ಸಲ್ಲಿಸುವ "ವಿಶೇಷ ಪುಣ್ಯ"ದ ಯೋಜನೆ ಕಳೆದ ಬಾರಿ ದೇಗುಲದ ಆಡಳಿತಗಾರರು ಜಾರಿಗೆ ತಂದಿದ್ದರು. ಈ ಸ್ಕೀಮೊಂದರಲ್ಲೇ ಬರೋಬ್ಬರಿ 11 ಲಕ್ಷ ದೇವಾಲಯದ ದೊರೆಗಳಿಗೆ ಸಂದಿದೆ. ಆದರೂ ಲಾಸ್.....! ಲಾಸ್.....!! ಇದು ರಾಘವೇಶನ ಬಿಸಿನೆಸ್ ಪಾಲಿಸಿ!

ಕಾಡಿ-ಬೇಡಿ-ಬೋಳಿಸಿದ ಹಣದಿಂದ ಶಿವರಾತ್ರಿ ಉತ್ಸವ ನಡೆಸುವ ದುರ್ಗತಿ ಗೋಕರ್ಣ ಮಹಾಬಲೇಶ್ವರನಿಗೆ ಬಂದಿದ್ದು ರಾಮಚಂದ್ರಾಪುರ ಮಠಾಧೀಶ ರಾಘವೇಶ್ವರ ಭಾರತೀಯ ಕಾಲ ಕೀರ್ದಿಯಲ್ಲಿ ಮಾತ್ರ! ಕಳೆದ ಬಾರಿಯ ಶಿವರಾತ್ರಿ ನ ಭೂತೋ ನ ಭವಿಷ್ಯತಿ ಎಂದು ಸ್ವಾಮಿ ಉದ್ಘೋಷಿಸಿದ್ದನು. ಆದರೆ ನಿಜಕ್ಕೂ ಈ ಬಾರಿಯ ಗೋಕರ್ಣ ಉತ್ಸವ "ಅಭೂತಪೂರ್ವ"! ಏಕೆಂದರೆ ಜನರ ತಿರಸ್ಕಾರ ಈ ಬಾರಿ ದೊಡ್ಡ ಮಟ್ಟದಲ್ಲಿತ್ತು, ರಾಘವೇಶ್ವರ ಬಳಗದ ಅಕ್ರಮ-ಅನೈತಿಕ ಸುಲಿಗೆ-ಕೊಳಕುತನಕ್ಕೆ ಕೆರಳಿದ ಜನ ಗೋಕರ್ಣದತ್ತ ತಲೆ ಹಾಕಲಿಲ್ಲ, ಭಕ್ತಾದಿಗಳ ಸಂಖ್ಯೆ ಈ ಬಾರಿ ಗಣನೀಯ ಪ್ರಮಾಣದಲ್ಲಿ ಕುಸಿದಿತ್ತು, ಕಳೆದ ಬಾರಿ ಕನಿಷ್ಠ 10 ಸಾವಿರ ಮಂದಿ ಸರದಿ ಸಾಲಿನಲ್ಲಿ ನಿಂತು ಕೊನೆಗೂ ಶಿವಪೂಜೆ ಮಾಡಲಾಗದೆ ಹತಾಶೆಯಿಂದ ಮರಳಿದ್ದರು. ಶಿವಸೇವೆಯ ದರ ಬಡವರ ಕೈಗೆಟುಕದಷ್ಟು ದುಬಾರಿಯಾಗಿದ್ದೇ ಇದಕ್ಕೆ ಕಾರಣ! ಚಾರಿತ್ರ್ಯ ಸರಿಯಿಲ್ಲದವರು ದೇವಾಲಯದ ಆಯಕಟ್ಟಿನ ಜಾಗದಲ್ಲಿ ಠಳಾಯಿಸಿದ್ದು ಜನರ ಜಿಗುಪ್ಸೆ-ತಾತ್ಸಾರಕ್ಕೆ ಮತ್ತೆ ಒಂದು ಕಾರಣ!!


ಗೋಕರ್ಣ ದೇವಾಲಯ ರಾಮಚಂದ್ರಾಪುರ ಮಠದ ಪುಂಡರ ಪಾಲಾಗುವ ಮೊದಲು ಸರಳ-ಸುಲಭವಾಗಿ ಪೂಜೆ ಸಲ್ಲಿಸುತ್ತಿದ್ದ ಶಿವಭಕ್ತರು ಕಳೆದ ವರ್ಷದಿಂದ ಆತ್ಮಲಿಂಗ ದರ್ಶನಕ್ಕೆ ಒದ್ದಾಡುವಂತಾಗಿದೆ. ಸಿಕ್ಕಾಪಟ್ಟೆ ದರ್ಶನ ಶುಲ್ಕ ತೆರಬೇಕಾಗಿದೆ. ಮೊದಲಾದರೆ ವೈದಿಕರು ಐವತ್ತೋ-ನೂರೋ ಕೊಟ್ಟರೆ ವಿಶೇಷ ಪೂಜೆಗೆ ಅವಕಾಶ ಕೊಡುತ್ತಿದ್ದರು. ಆದರೆ ರಾಘವೇಶ್ವರನ ಶಿಷ್ಯಕೋಟಿ ಭಕ್ತರ ಸುಲಿವ ಕಾಯಕ ಶುರುಮಾಡಿದೆ. ಈ ಬಾರಿಯಂತೂ 'ಶಿವರಾತ್ರಿ ವಿಶೇಷ ಪಾಸ್' ನೆಪದಲ್ಲಿ ದರೋಡೆ ನಡೆಯಿತು. 500 ರೂ.ಗೆ ಇಬ್ಬರಿಗೆ, 1000 ರೂ.ಗೆ ನಾಲ್ವರಿಗೆ ಶೀಘ್ರ ದರ್ಶನಕ್ಕೆ ಅವಕಾಶ ಕೊಡುವ ಪಾಸ್ ತಯಾರಿಸಲಾಗಿತ್ತು, ಇಲ್ಲದಿದ್ದರೆ ಕ್ಯೂನಲ್ಲಿ ನಿಂತು ಚಡಪಡಿಸುವ ಶಿಕ್ಷೆ. ಸ್ವಾಮೀಜಿಗೆ ಹತ್ತಿರದವರು ಟಿಕೆಟ್ ಕೊಡದೆ ಬರೀ ಹಣ ಪಡೆದು ದೇಗುಲದ ಒಳಗೆ ಭಕ್ತರ ಬಿಟ್ಟು ಕಾಸು ಕಮಾಯಿಸಿದ್ದೂ ಇದೆ. ಸೇವಾ ಕಾಣಿಕೆ ರೇಟು ರೂ. 500-5000 ರ ತನಕವಿತ್ತು, ಒಟ್ಟನಲ್ಲಿ ಸುಲಿಗೆಯೋ ಸುಲಿಗೆ!

ರಾಘವೇಶ್ವರ ಸ್ವಾಮಿ ಯತಿ ಧರ್ಮ, ಈ ನೆಲದ ಕಾನೂನು-ಕಟ್ಟಲೆ-ನೈತಿಕತೆಯನ್ನೆಲ್ಲ ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ದುಡ್ಡು ಮಾಡುತ್ತಿರುವುದಕ್ಕೆ ಶಿವರಾತ್ರಿ ಕರ್ಮಕಾಂಡ ಸಣ್ಣ ಸ್ಯಾಂಪಲ್ ಅಷ್ಟೇ. ನ್ಯಾಯಾಲಯದಲ್ಲಿ ಸ್ವಾಮಿ ಗ್ಯಾಂಗಿಗೆ ಕಪಾಳ ಮೋಕ್ಷವಾಗುತ್ತಿದೆ. ಸ್ಥಳೀಯ ಜನ ರಾಘವೇಶನ ಒಡ್ಡೋಲಗದ ರೌಡಿಗಳ ಪುಂಡಾಟಕ್ಕೆ ರೋಸತ್ತು ತಿರುಗಿಬಿದ್ದಿದ್ದಾರೆ. ಮೊನ್ನೆ-ಮೊನ್ನೆ ನಡೆದ "ಕದಿರು ಹಬ್ಬ"ದ ಸಂದರ್ಭದಲ್ಲಿ ಸ್ಥಳೀಯ ಶೂದ್ರರ ಧಾರ್ಮಿಕ-ಪಾರಂಪರಿಕ ನಂಬಿಕೆ-ರಿವಾಜಿಗೆ ಫಾಸಿ ಮಾಡಿದ ರಾಘವೇಶ್ವರನ ರಗಳೆ ಜನರನ್ನು ಕೆರಳಿಸಿತ್ತು, ಗ್ರಾಮೀಣ ಸೊಗಡಿನ ಶಬ್ದಗಳಿಂದ ಜನ ಈತನಿಗೆ ಮಂಗಳಾರತಿ ಎತ್ತಿದ್ದರು.

ಜನರ ಪ್ರತಿರೋಧ-ನ್ಯಾಯಾಲಯಗಳ ಆದೇಶ-ತೀರ್ಪುಗಳಿಂದ ರಾಘವೇಶ್ವರ ಕಂಗಾಲಾಗಿರುವುದು ಖರೆ. ಆದರೆ ಇದ್ಯಾವುದಕ್ಕೂ ಆತ ಕೇರ್ ಮಾಡದೆ ದುಡ್ಡು ಮಾಡುವ-ಆಸ್ತಿ ಸಂಗ್ರಹಿಸುವ ಟಾರ್ಗೆಟ್ ತಲುಪುವ ತರಾತುರಿಯಲ್ಲಿದ್ದಾನೆ. ಗುರಿ ಸೇರಿದ ತಕ್ಷಣ ಈ ಸ್ವಾಮಿಪೀಠ ತ್ಯಾಗ ಮಾಡಿ ಸಂಸಾರಿ ಆಗುವುದು ಗ್ಯಾರಂಟಿ ಎಂಬ ಚರ್ಚೆ ಈಗ ಹವ್ಯಕರ ಕೇರಿಗಳಲ್ಲಿ ನಿತ್ಯ ನಡೆಯುತ್ತಿದೆ. ರಾಘವೇಶನೂ ತನ್ನ ಆಪ್ತರಲ್ಲಿ "ಹನ್ನೆರಡು ವರ್ಷದ ಸನ್ಯಾಸ ಹೇಗೂ ಕಳೆದಿದೆ.... ಪೀಠ ಬಿಟ್ಟೋಗ್ತೇನೆ...." ಎಂದು ಹೇಳಿದ್ದಾನೆ.

ಆ ಸುದಿನ ಎಂದು ಬಂದೀತು? ಹಾಗಂತ ಕೇಳುತ್ತಿದ್ದಾರೆ ಗೋಕರ್ಣ ಮಹಾಬಲೇಶ್ವರ ಭಕ್ತಾದಿಗಳು!

● ನಹುಶ



ಏನಿದು ಕೋಟಿ ರುದ್ರ?

ಇದೊಂದು ಅಡ್ಡ ದಾರಿಯಲ್ಲಿ ದುಡ್ಡು ಮಾಡುವ ಧಾರ್ಮಿಕ ದಂಧೆ. ಲೋಕ ಕಲ್ಯಾಣಕ್ಕಾಗಿ ಗೋಕರ್ಣ ದೇವಾಲಯದಲ್ಲಿ ಒಂದಿಡೀ ವರ್ಷ ಒಂದು ಕೋಟಿ ರುದ್ರ ಆವರ್ತನ (ಶಿವಜಪ) ೮೩೭ ವೈದಿಕರಿಂದ ಮಾಡಿಸುವುದಾಗಿ ರಾಘವೇಶ್ವರ ಸ್ವಾಮಿ ಘೋಷಿಸಿದ್ದಾನೆ. ದೇಶ-ರಾಜ್ಯದ ದೊಡ್ಡ-ದೊಡ್ಡ ಕೈಗಾರಿಕೋದ್ಯಮಿಗಳು, ನಟರು, ಮೈನ್ಸ್ ಉದ್ಯಮಿಗಳು, ರಾಜಕಾರಣಿಗಳ ಕಳ್ಳ ಖಜಾನೆ ಗುರಿಯಾಗಿಟ್ಟುಕೊಂಡು ಸ್ಕೆಚ್ ಹಾಕಿರುವ ಈ ಧಾರ್ಮಿಕ ಸುಲಿಗೆಗೆ ರಾಘವೇಶ "ಕೋಟಿ ರುದ್ರ" ಎಂದು ನಾಮಕರಣ ಮಾಡಿದ್ದಾನೆ. ಹಾಗೇ ದುಡ್ಡು ಕೇಳಿದರೆ ಬ್ಲ್ಯಾಕ್‌ಮೇಲ್ ಆಗುತ್ತದೆ ಅಲ್ಲವೇ? ದೇವರ ಹೆಸರಲ್ಲಿ, ಲೋಕೋದ್ಧಾರದ ನೆಪದಲ್ಲಿ ಕಾಸು ಕೇಳಿದರೆ ಸುಲಭದಲ್ಲಿ ಸಿಗುತ್ತದೆ ತಾನೆ?

ಧರ್ಮಶಾಸ್ತ್ರ-ವೇದಗಳಲ್ಲಿ ಅತಿರುದ್ರ-ಮಹಾರುದ್ರ ಉಲ್ಲೇಖವಿದೆ. ಹಾಗಂತ ಕೋಟಿ ರುದ್ರವೆಂಬುದಿಲ್ಲ, ಈ ಧರ್ಮಬಾಹಿರ ಅನುಷ್ಠಾ ರಾಘವೇಶನ ಸೃಷ್ಟಿ. ಇದರಿಂದ ಅನಾಹುತ ಆಗಲಿದೆಯೆಂದು ಗೋಕರ್ಣದ ವೈದಿಕರು ಬೊಬ್ಬೆ ಹೊಡೆಯುತ್ತಿದ್ದಾರೆ. ಧರ್ಮ-ಕರ್ಮ ಏನೇ ಇದ್ದು ಹಾಳಾಗಿಹೋಗಲಿ. ದುಡ್ಡು ಮಾಡುವ ಮಸಲತ್ತಂತೂ ನಿಜ. ಒಂದು ನೂರು ಕೋಟಿ ಕೂಡಿಸುವ ಪ್ಲಾನ್ ಇದು. ಒಂದು ರುದ್ರಕ್ಕೆ ನೂರು ರೂಪಾಯಿನಂತೆ ಕೊಡಿಸಿದರೂ ಸಾಕು ಕೋಟಿ-ಕೋಟಿ ಆಗುತ್ತದೆ. ಅಂದಹಾಗೆ ರುದ್ರದ ರೇಟು ರೂ. 100-50 ಲಕ್ಷದ ತನಕವಿದೆ. ಅವರ ಭಾವ-ಭಕ್ತಿ-ಧನ ಶಕ್ತಿಗೆ ತಕ್ಕಂತೆ ಸುಲಿಗೆ ರುದ್ರದ ಹೆಸರಲ್ಲಿ ನಡೆದಿದೆ.

ಕೊನೆಯಲ್ಲಿ ಒಂದು ಜೋಕು. ಆರಂಭದಲ್ಲಿ ಈ ಕೋಟಿ ರುದ್ರ ಆವರ್ತನಕ್ಕೆ ನೂರಾರು ವೈದಿಕರು ಕುಳಿತಿದ್ದರು. ನಿವೃತ್ತ ಶಿಕ್ಷಕರು, ಬಡ ಬ್ರಾಹ್ಮಣರಿವರೆಲ್ಲ.ಇವರಿಗೆ ರಾಘವೇಶನ ಬಳಗ ಪೇಮೆಂಟು ಕೊಡದೆ ಸತಾಯಿಸಿತು. ವೈದಿಕರು ಓಡಿಹೋದರು. ಈಗ ದೇಗುಲದಲ್ಲಿ ಕೋಟಿ ರುದ್ರಕ್ಕೆ 15-20 ವಿಪ್ರರಷ್ಟೇ ಕುಂತಿದ್ದಾರೆ. 837 ವೈದಿಕರಿರಬೇಕಾದಲ್ಲಿ 20 ಮಂದಿ!! ಬೋಗಸ್ ಕೋಟಿ ರುದ್ರ ರಾಘವೇಶನ ಕಳ್ಳ ಬೊಕ್ಕಸ ತುಂಬುತ್ತಿದೆಯಷ್ಟೇ! ರಾಘವೇಶ್ವರನ ದಗಾ-ದಗಲುಬಾಜಿಗೆ ಮಹಿಮೆಗೆ ಎಣೆಯುಂಟೇ?


...ಕಿ ನಂದಿಸಲು ಪ್ರಯತ್ನ...

ಶಿವಮೊಗ್ಗ ಹೊತ್ತಿ ಉರಿದ ಕೋಮು ದಳ್ಳುರಿ

ಶಿವಮೊಗ್ಗದಲ್ಲಿ ಆರಂಭವಾದ ಗಲಭೆಯನ್ನು ನಿಯಂತ್ರಿಸುವಲ್ಲಿ, ಮತಾಂಧರ ಬೆಂಕಿ ಹಚ್ಚುವ ಕೆಲಸಗಳನ್ನು ಚಿವುಟಿಹಾಕುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವ ರಕ್ಷಣಾಧಿಕಾರಿ ಮುರುಗನ್ ಅತ್ಯಂತ ಪಕ್ಷಪಾತಿತನದಿಂದ ನಡೆದುಕೊಂಡಿದ್ದಾರೆ. ಗಲಭೆ ಆರಂಭವಾಗುವ ಮುನ್ನ ಕಿಡಿಗೇಡಿಗಳನ್ನು ನಿಯಂತ್ರಿಸಲು ಯಾವ ಮುನ್ನೆಚ್ಚರಿಕೆಯನ್ನೂ ತೆಗೆದುಕೊಳ್ಳದಿದ್ದುದು ಒಂದು ತಪ್ಪಾದರೆ, ಸಂಜೆ ಹೊತ್ತಿಗೆ ಭಜರಂಗದಳದವರು ನಡೆಸಿದ ಹಿಂಸಾಚಾರವನ್ನು ನಿಯಂತ್ರಿಸಲೂ ಏನನ್ನೂ ಮಾಡದೆ ಮತ್ತೊಂದು ತಪ್ಪು ಮಾಡಿದರು.

...ದಮೊಗ್ಗ ಮತ್ತೊಮ್ಮೆ ಪ್ರಕ್ಷುಬ್ಧವಾಗಿದೆ. ಎಲ್ಲೆಲ್ಲೂ ...ಆತಂಕ ಮಡುಗಟ್ಟಿದೆ. ಹಿಂದೆಂದೂ ಇಲ್ಲದ ... ಈ ಸಲ ಶಿವಮೊಗ್ಗದಲ್ಲಿ ಕೋಮು ದ್ವೇಷದ ...ಧಗಧಗಿಸಿದೆ. ಶಿವಮೊಗ್ಗೆಯಲ್ಲಿ ಕೋಮು ...ಳಿಗೆ ಒಂದು ಇತಿಹಾಸವೇ ಇದೆ. ಆದರೆ ಮೊನ್ನೆ ...ಘಟನೆಗಳು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಿಸುವ ...ಗಳೂ ಕಾಣಿಸುತ್ತಿವೆ.

...ಅಂದು ನಡೆದ ಘಟನೆಗಳು

...ಟ್‌ಲುಕ್' ಎಂಬ ಆಂಗ್ಲ ಪತ್ರಿಕೆಯ 2007ರ ... 22ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಲೆಟ್ ...ಂಕ್ ಅಬೌಟ್ ಬುರ್ಖಾ' ಎಂಬ ಲೇಖನವನ್ನು ... ಎಂಬ 'ಅನಾಮಿಕ/ಕೆ' ಅನುವಾದಿಸಿ, ಅದಕ್ಕೆ ...ವ್ಯಂಗ್ಯ ಮತ್ತು ಅಸಹನೆಯನ್ನು ಬೆರೆಸಿ, ಸಾಧ್ಯವಾದ ...ಲ್ಲೆಲ್ಲ ತಿರುಚಿ ಕನ್ನಡಪ್ರಭಕ್ಕೆ ಕಳುಹಿಸಿದ್ದನು/ಳು. ಆ ...ವನ್ನು ಕನ್ನಡಪ್ರಭ ತನ್ನ ಫೆ. 28ರ 'ಸಾಪ್ತಾಹಿಕ ...ಲ್ಲಿ ಪ್ರಕಟಿಸಿತು. ಇದರ ಕುರಿತು ಭಾನುವಾರ ... ಕೆಲ ಮುಸ್ಲಿಮರು ಸಭೆಗಳನ್ನು ನಡೆಸಿದ್ದರು. ... ಲೇಖನವನ್ನು ಓದಿದವರು ಬಹಳ ಕಡಿಮೆ. ...ಅದರ ಬಗ್ಗೆ ಗಾಳಿ ಸುದ್ದಿಗಳು ನಗರದಲ್ಲಿ ...ಗನೇ ಹರಡಿಕೊಂಡವು. ಸೋಮವಾರ ಹನ್ನೊಂದು ...ಂದಲೇ ವೀರಭದ್ರೇಶ್ವರ ಟಾಕೀಸಿನ ಎದುರಿಗೆ ...ವಕ್ಫ್ ಕಚೇರಿಯ ಬಳಿ ಸಾಕಷ್ಟು ಸಂಖ್ಯೆಯಲ್ಲಿ ...ಮಾಯಿಸತೊಡಗಿದರು. ಸ್ವಲ್ಪ ಹೊತ್ತಿಗೆ ಅಲ್ಲಿಂದ ...ಾರಿಯವರ ಕಚೇರಿಯತ್ತ ಮೆರವಣಿಗೆ ಹೊರಟಿತು. ...ಷ್ಟರಲ್ಲಿ ಕೆಲವು ಮುಸ್ಲಿಂ ಮುಖಂಡರು ಒಂದಷ್ಟು ...ಲೋಚನೆಯಿಂದ ಯೋಚಿಸುವ ಬದಲು ನಗರದ ...ಡೆಗಳಿಗೆ ಲಾರಿಗಳನ್ನು ಕಳುಹಿಸಿ "ನಮ್ಮ ಪ್ರವಾದಿ ...ದರ ಬಗ್ಗೆ ಪತ್ರಿಕೆಯಲ್ಲಿ ಕೀಳಾಗಿ ಬರೆದಿದ್ದಾರೆ, ...ಎಂದು ಪ್ರಚೋದಿಸಿ ಲಾರಿ ಹತ್ತಿಸಿಕೊಂಡು ...ದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ ...ರನ್ನು ನಿಯಂತ್ರಿಸಲು ಆ ಮುಖಂಡರಿಗಾಗಲೀ, ಧರ್ಮಗುರುಗಳಿಗಾಗಲೀ ಸಾಧ್ಯವಾಗಿಲ್ಲ. ...ದು ಪ್ರತಿಭಟನೆ ನಡೆಯುವ ಸುಳಿವನ್ನು ...ರು ಮೊದಲೇ ಗ್ರಹಿಸದಿದ್ದರೂ ಯಾವುದೇ ...ದ್ಧತೆಯನ್ನು ಮಾಡಿಕೊಂಡಿಲ್ಲ.

...ದಿನ ರಾತ್ರಿಯಿಂದಲೂ ಹಲವಾರು ಗಾಳಿ ...ಗೆ ಕಿವಿಗೊಟ್ಟಿದ್ದ ಕಿಡಿಗೇಡಿಗಳು ಈ ಸಂದರ್ಭದ ...ಪಡೆದು ಬಾಲ್‌ರಾಜ್ ಅರಸ್ ರಸ್ತೆ, ಬಿ.ಹೆಚ್ ... ಹಲವು ಕಟ್ಟಡಗಳಿಗೆ ಕಲ್ಲು ಹೊಡೆಯುವ, ...ನಾಲ್ಕಾರು ಬೈಕುಗಳಿಗೆ ಬೆಂಕಿ ಹಚ್ಚುವ ಕೃತ್ಯಗಳನ್ನು ...ು. ಇದೇ ಹೊತ್ತಿಗೆ ಎ.ಎ. ಸರ್ಕಲ್ ...್ಯಂಕೊಂದರ ಮಹಡಿ ಮೇಲಿನಿಂದ ...ಕಲ್ಲೊಂದು ಮಾಂಸ ವ್ಯಾಪಾರ ...ದ ರುಖಿಬ ಎಂಬುವನ ತಲೆಗೆ ...ು ಅವನು ಆಸ್ಪತ್ರೆ ಸೇರಿದ್ದಾನೆ. ...ರ ಮೇಲೂ ಕಿಡಿಗೇಡಿಗಳು ಕಲ್ಲು ...ರೆ. ತರಕಾರಿ ಮಾರುಕಟ್ಟೆಯಲ್ಲಿ ...ಮಾರುವ ಮಹಿಳೆಯರ ಮೇಲೂ ...ಾಂಧರು ಹಲ್ಲೆ ನಡೆಸಿದ್ದಾರೆ. ಒಬ್ಬ ... ಹಲ್ಲೆ ಮಾಡುತ್ತಿದ್ದವರ ಕಾಲು ...ು ಬಿಡದೇ ಆಕೆಯನ್ನು ಕೋಲಿನಿಂದ ...ದ್ದಾರೆ. ಇದನ್ನು ತಡೆಯಲು ಹೋದ ಸುವರ್ಣ ...ರಾಜೇಶ್ ಕಾಮತ್ ಮೇಲೂ ಹಲ್ಲೆ ಮಾಡಿದ್ದಾರೆ. ...ಛಾಯಾಗ್ರಾಹಕ ನಿಂಗನಗೌಡರಿಗೆ ಒಂದು ಕಲ್ಲು ... ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ. ಅಲ್ಲೇ ...ಜರಂಗದಳದ ಕಟೌಟನ್ನು ಹರಿದು ಹಾಕಿದ್ದಾರೆ. ... ಕಿಡಿಗೇಡಿಗಳು ಮಚ್ಚು ಲಾಂಗು ಹಿಡಿದು ...ರೆ. ಹೀಗೆ ಪರಿಸ್ಥಿತಿ ಕೈಮೀರುತ್ತಿದ್ದಂತೆ ಸಾಕಷ್ಟು ...ಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ತರಿಸಿಕೊಳ್ಳುವ ಅಲ್ಲಿದ್ದ ಪೊಲೀಸರೇ ಗೋಲಿಬಾರ್ ನಡೆಸಿ ಸಾದಿಕ್ ಎಂಬ ಯುವಕ ಸಾವು ಕಂಡಿದ್ದಾನೆ. ಈತ ಟಿಪ್ಪುನಗರದಲ್ಲಿ ಕೂಲಿ ಮಾಡುತ್ತಿದ್ದ ಯುವಕ. ಇದೇ ಸಂದರ್ಭದಲ್ಲಿಯೇ ಒಂದು ಗುಂಪು "ಪ್ರತಾಪ್ ಸಿಂಹನ ಪೇಪರ್ ಆಫೀಸ್ ಎಲ್ಲಿ?" ಎಂದು ಕೇಳಿಕೊಂಡು ಹೋಗಿ ವಿಜಯ ಕರ್ನಾಟಕ ಪತ್ರಿಕಾ ಕಚೇರಿಗೆ ಹೋಗಿ ಕಲ್ಲು ಹೊಡೆದು ದಾಂಧಲೆ ನಡೆಸಿದೆ.


ಮತ್ತೊಂದು ವ್ಯವಸ್ಥಿತ ಪ್ರತಿಕ್ರಿಯೆ

ಇಷ್ಟೆಲ್ಲಾ ನಡೆಯುವ ಹೊತ್ತಿಗೆ ಇನ್ನೊಂದು ಕಡೆಯೂ ಗಾಳಿಸುದ್ದಿಗಳು ತೀವ್ರವಾಗಿ ಹರಡಲು ಶುರು ಮಾಡಿವೆ. ಹೆಣ್ಣುಮಕ್ಕಳ ಮೇಲಿನ ಹಲ್ಲೆ ಮಾಧ್ಯಮದಲ್ಲಿ ಪ್ರಸಾರವಾಗುತ್ತಲೂ ಸವಾರ್ ಲೈನ್ ರಸ್ತೆಯ ಹುಡುಗರು ಬೀದಿಗಿಳಿದಿದ್ದಾರೆ. ಇಂತಹ ಒಂದು ಅವಕಾಶಕ್ಕಾಗಿಯೇ ಹೊಂಚುಹಾಕಿದ್ದ ಸಂಘ ಪರಿವಾರ ಇವರ ಕೈಗಳಿಗೆ ಹೊರಗಡೆಯಿಂದ ತರಿಸಿದ ತಲವಾರುಗಳನ್ನು ನೀಡಿ ಪ್ರಚೋದಿಸಿ ಬೀದಿಗೆ ಬಿಟ್ಟಿದೆ. ಗೋಲೀಬಾರ್ ಆದಕೂಡಲೇ ಮುಸ್ಲಿಮ್ ಹುಡುಗರು ಚದುರಿಹೋಗಿದ್ದಾರೆ. ಆನಂತರ ಶುರುವಾದದ್ದು ಸಂಘ ಪರಿವಾರ ಪ್ರೇರಿತ ಹುಡುಗರ ಹಾಗೂ ಪೊಲೀಸರ ಜಂಟಿ ಲೂಟಿ. ಗಾಂಧಿಬಜಾರ್ ಮೇಲ್ಭಾಗದ ಹಣ್ಣಿನ ಅಂಗಡಿಗಳಿಗೆ ದಾಳಿ ಮಾಡಿ ಅಲ್ಲಿದ್ದ ಅಂಗಡಿಗಳನ್ನೆಲ್ಲಾ ಸುಟ್ಟು ಹಾಕುವ, ಬಟ್ಟೆ ಅಂಗಡಿಗಳನ್ನು ಲೂಟಿ ಮಾಡುವ ಕೆಲಸ ಆರಂಭವಾಗಿದೆ. ಈ ಎಲ್ಲಾ ಲೂಟಿಗಳು ನಡೆಯುತ್ತಿದ್ದಾಗ ಪೊಲೀಸರು ಬಹುತೇಕ ಮೌನಸಮ್ಮತಿ ನೀಡಿದ್ದಾರೆ. ಗಾರ್ಡನ್ ಏರಿಯಾ ಹಾಗೂ ಸವಾರ್ ಲೈನ್ ರಸ್ತೆಗಳಲ್ಲಿ ಮುಸ್ಲಿಮರ ಅಂಗಡಿಗಳನ್ನು ಹುಡುಕಿ ಹುಡುಕಿ ಬೆಂಕಿ ಹಚ್ಚಲಾಗಿದೆ.

ಭಜರಂಗದಳದ ಕಾರ್ಯಕರ್ತರು ಕೆ.ಆರ್.ಪುರಂ, ಸವಳಂಗ ರಸ್ತೆ ಸಹ್ಯಾದ್ರಿ ಕಾಲೇಜಿನ ಎದುರು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಮುಸ್ಲಿಮರ ಮೇಲೆ ಹಲ್ಲೆ ಮಾಡಿದ್ದಾರೆ. ವಿದ್ಯಾನಗರದಲ್ಲಿ ವಾಸವಾಗಿದ್ದ ಲತೀಫ್ ಎಂಬ ಯುವಕನನ್ನು ಇರಿದು ಕೊಲ್ಲಲಾಗಿದೆ. ವಿದ್ಯಾನಗರದಲ್ಲಿ ಐದು ಮಂದಿ ಭಜರಂಗದಳದ ಕಾರ್ಯಕರ್ತರು ಅಲ್ಲಿದ್ದ ಹುಡುಗರನ್ನೆಲ್ಲಾ ಸೇರಿಸಿ "ನಮ್ಮ ಹೆಣ್ಣು ಮಕ್ಕಳಿಗೆ ಹೊಡೆದಿದ್ದಾರೆ, ಪ್ರತೀಕಾರಕ್ಕೆ ಬನ್ನಿ" ಎಂದು ಸುಮಾರು ಮುನ್ನೂರು ಹುಡುಗರನ್ನು ಕರೆದುಕೊಂಡು ಹೋಗಿ ಎಂ.ಆರ್.ಎಸ್ ವೃತ್ತದ ಬಳಿ ಹೋಗಿದ್ದಾರೆ. ಅಲ್ಲಿ ಬರುತ್ತಿದ್ದ ಎಲ್ಲಾ ವಾಹನಗಳನ್ನು ತಡೆದು ಅವು ಮುಸ್ಲಿಮರದೆಂದು ತಿಳಿದು ಬಂದರೆ ಅದರಲ್ಲಿದ್ದವರನ್ನು ಹೊರಗೆಳೆದು ಅದಕ್ಕೆ ಬೆಂಕಿ ಹಚ್ಚಿದ್ದಾರೆ. ವಾಹನಗಳಲ್ಲಿದ್ದ ಮುಸ್ಲಿಮರಿಗೆ ಬಡಿಗೆಗಳಿಂದ ಬಡಿದಿದ್ದಾರೆ. ಬೈಕ್‌ನಲ್ಲಿ ಬಂದ ಹಿಂದೂ ಮುಸ್ಲಿಂ ಗೆಳೆಯರನ್ನು ಕೆಳಗಿಳಿಸಿ ಆ ಹಿಂದೂ ಹುಡುಗನಿಗೆ "ನಾಚಿಕೆ ಆಗಲ್ವಾ? ಇವನ ಜೊತೆ ಹೋಗ್ತಿದೀಯಲ್ಲ, ನೀನೂ ಒಬ್ಬ ಹಿಂದೂನಾ?" ಎಂದು ಅವನಿಗೂ ತೀವ್ರವಾಗಿ ಥಳಿಸಿದ್ದಾರೆ. ನಂತರ ಆ ಮುಸ್ಲಿಂ ಹುಡುಗನಿಗೂ ಬಡಿದಿದ್ದಾರೆ. ಹೀಗೆ ಈ ಒಂದೇ ಸ್ಥಳದಲ್ಲಿ ಐದು ಬೈಕು, ಒಂದು ಸ್ಯಾಂಟ್ರೋ ಕಾರು, ಎರಡು ಮಾರುತಿ 800 ವ್ಯಾನು, ಒಂದು ಆಟೋ, ಲಾರಿಗಳು ಬೆಂಕಿಗೆ ಆಹುತಿಯಾದವು. ಸ್ಥಳದಲ್ಲಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಪೇದೆ ಇಬ್ಬರೂ ಬೆಂಕಿ ಹಚ್ಚುತ್ತಿದ್ದವರ ಹೆಗಲಮೇಲೆ ಕೈಹಾಕಿಕೊಂಡು ಮಾತಾಡುವಷ್ಟು ಸೌಜನ್ಯ ಪ್ರದರ್ಶಿಸಿದ್ದಾರೆ. ಒಂದಷ್ಟು ಜನರು ಬೈಪಾಸ್ ರಸ್ತೆಯಲ್ಲಿರುವ ಕೆ.ಎಸ್ ಈಶ್ವರಪ್ಪಗೆ ಸೇರಿದ ನಂದಿನಿ ಶಾಲೆಯ ಹಿಂದುಗಡೆಯಿರುವ ಐದು ಮುಸ್ಲಿಮರ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಒಂದು ಗುಂಪು ಅಲ್ಲೇ ಹತ್ತಿರದ ನಂದಿನಿ ಲೇಔಟ್‌ನಲ್ಲಿರುವ ಕೆ.ಇ.ಬಿ. ಇಂಜಿನಿಯರ್ ಇಬ್ರಾಹಿಂ ಶರೀಫರ ಮನೆಗೆ ನುಗ್ಗಿದ್ದಾರೆ. ಶರೀಫರ ಇಬ್ಬರು ಹೆಣ್ಣುಮಕ್ಕಳು ಹಿಂದುಗಡೆ ಬಾಗಿಲಿನಿಂದ ತಪ್ಪಿಸಿಕೊಂಡರಾದರೂ ಶರೀಫರು ಆ ಗುಂಪಿನ ದಾಳಿಗೆ ಸಿಕ್ಕಿಬಿದ್ದಿದ್ದರೆ. ಶರೀಫರ ತಲೆಗೆ ಹೊಡೆದು ಅವರ ಕಾಲನ್ನು ಮುರಿದಿದ್ದಾರೆ ಹಿಂದೂ ಹುಡುಗರು. ತೀವ್ರವಾಗಿ ಗಾಯಗೊಂಡಿರುವ ಶರೀಫರು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ದಾಂದಲೆಯಲ್ಲಿ ಶರೀಫರ ಮನೆ ಸಂಪೂರ್ಣವಾಗಿ ಲೂಟಿಯಾಗಿದ್ದು ಸುಮಾರು ಎರಡು ಲಕ್ಷ ರೂ. ಮತ್ತು ಚಿನ್ನಾಭರಣಗಳು ಹಾಗೂ ಇನ್ನಿತರ ಬೆಲೆಬಾಳುವ ವಸ್ತುಗಳನ್ನು ದೋಚಿಕೊಂಡು ಹೋಗಿದೆ ಹಿಂದೂ ಹುಡುಗರ ಗುಂಪು.


ಮುರುಗೇಶ್


ದೊಂಬಿಯದ್ದ ಸಂದರ್ಭ...




ಕನ್ನಡಪ್ರಭ ಆಫೀಸ್...

ಗಾಂಧಿಬಜಾರಿನಲ್ಲಿದ್ದ ಮುಸ್ಲಿಮರಿಗೆ ಸೇರಿದ್ದ ಎರಡು ದೊಡ್ಡ ಬಳೆ ಅಂಗಡಿಗಳಿಗೆ ಬೆಂಕಿ ಹಾಕಲಾಗಿದೆ. ಗೋಪಿ ವೃತ್ತದಲ್ಲಿದ್ದ ಎರಡು ಬೃಹತ್ ಮಳಿಗೆಗಳು ದ್ವೇಷದ ಅಗ್ನಿಗೆ ಆಹುತಿಯಾಗಿವೆ. ಎಂಜಿ ಪ್ಯಾಲೇಸ್ ಪಕ್ಕದ ಜನತಾ ಬಜಾರ್ ಬೆಂಕಿಗೀಡಾಗಿದೆ. ಇಲ್ಲೂ ಪೊಲೀಸರೂ ಉಪಸ್ಥಿತರಿದ್ದರೂ ಇದೆಲ್ಲ ಅನಾಹುತ ಅವರ ಕಣ್ಣೆದುರೇ ನಡೆದಿದೆ. ಬೈಪಾಸ್ ರಸ್ತೆಯಲ್ಲಿ ಪರಸ್ಪರ ಕೋಮಿನವರ ದಾಳಿಗಳಲ್ಲಿ ಎರಡು ಮಂದಿರಗಳೂ, ಒಂದು ಮಸೀದಿಯೂ ದಾಳಿಗೀಡಾಗಿವೆ. ನಗರವಿಡೀ ಬೆಂಕಿಯ ಕೆನ್ನಾಲಗೆಯಲ್ಲಿ ಸಿಲುಕಿಕೊಂಡಂತೆ ಗೋಚರಿಸುತ್ತಿತ್ತು.

ಸಂಜೆಯಾಗುತ್ತಿದ್ದಂತೆ ಇಡೀ ಶಿವಮೊಗ್ಗದ ತುಂಬಾ ಗಾಳಿಸುದ್ದಿಗಳು ಹಾರಾಡಿದವು. ಜನರ ಮನಸ್ಸಿನಲ್ಲಿ ಇನ್ನಿಲ್ಲದ ಆತಂಕ ಭಯ. ಈ ಯಾವುದರ ಪರಿವೆಯಿಲ್ಲದೆ ಪರ ಊರುಗಳಿಂದ ಬಸ್‌ಗಳಲ್ಲಿ ಬಂದಿಳಿದ ಜನರ ಪರದಾಟವಂತೂ ಹೇಳತೀರದು. ಇವಿಷ್ಟೂ ಸೋಮವಾರದ ಘಟನೆಗಳು. ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಲು ಕರ್ಫ್ಯೂ ವಿಧಿಸಿದರು. ಪರಿಣಾಮವಾಗಿ ಮಂಗಳವಾರ ಪರಿಸ್ಥಿತಿ ಒಂದಷ್ಟು ತಹಬಂದಿಗೆ ಬಂದಿತ್ತಾದರೂ ಅಂದೂ ಸಹ ರಾತ್ರಿಯ ಹೊತ್ತಿಗೆ ಮತಾಂಧರು ಸಹ್ಯಾದ್ರಿ ಕಾಲೇಜಿನ ಪಕ್ಕದ ದರ್ಗಾದ ಹಿಂದಿರುವ ಐದಾರು ಬಡಮುಸ್ಲಿಮರ ಮನೆಗಳಿಗೆ ಬೆಂಕಿ ಹಚ್ಚಿದರು. ಆ ಮನೆಗಳ ಜನರು ರಾತ್ರಿ ಎಲ್ಲಿಗೆ ಹೋಗಲೂ ತೋಚದೆ ಆ ದರ್ಗಾದ ಆವರಣದಲ್ಲಿಯೇ ಆತಂಕದಿಂದ ರಾತ್ರಿ ಕಳೆದರು.

ಮುರುಗನ್ ಬಂಧಿಸಿದ್ದು ಯಾರನ್ನು?


ಶಿವಮೊಗ್ಗದಲ್ಲಿ ಆರಂಭವಾದ ಗಲಭೆಯನ್ನು ನಿಯಂತ್ರಿಸುವಲ್ಲಿ, ಮತಾಂಧರ ಬೆಂಕಿ ಹಚ್ಚುವ ಕೆಲಸಗಳನ್ನು ಚಿವುಟಿಹಾಕುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವ ರಕ್ಷಣಾಧಿಕಾರಿ ಮುರುಗನ್ ಅತ್ಯಂತ ಪಕ್ಷಪಾತಿತನದಿಂದ ನಡೆದುಕೊಂಡಿದ್ದಾರೆ. ಗಲಭೆ ಆರಂಭವಾಗುವ ಮುನ್ನ ಕಿಡಿಗೇಡಿಗಳನ್ನು ನಿಯಂತ್ರಿಸಲು ಯಾವ ಮುನ್ನೆಚ್ಚರಿಕೆಯನ್ನೂ ತೆಗೆದುಕೊಳ್ಳದಿದ್ದುದು ಒಂದು ತಪ್ಪಾದರೆ, ಸಂಜೆ ಹೊತ್ತಿಗೆ ಭಜರಂಗದಳದವರು ನಡೆಸಿದ ಹಿಂಸಾಚಾರವನ್ನು ನಿಯಂತ್ರಿಸಲೂ ಏನನ್ನೂ ಮಾಡದೆ ಮತ್ತೊಂದು ತಪ್ಪು ಮಾಡಿದರು. ಈ ಕೋಮು ಹಿಂಸಾಚಾರ ಆರಂಭಿಸಿದವರನ್ನು, ನಂತರದಲ್ಲಿ ಅದನ್ನು ಹೆಚ್ಚಿಸಿದವರನ್ನು ಬಂಧಿಸಿ, ತನಿಖೆ ನಡೆಸಿ ಜೈಲಿಗೆ ತಳ್ಳುವ ಕೆಲಸ ಮುರುಗನ್‌ರಿಂದ ಆಗಬೇಕಿತ್ತು. ಶಿವಮೊಗ್ಗದ ಜನರು ನಿರೀಕ್ಷಿಸಿದ್ದೂ ಅದನ್ನೇ. ಆದರೆ ಮಂಗಳವಾರ ಟಿಪ್ಪೂನಗರ, ಆರ್.ಎಂ.ಎಲ್ ನಗರ, ಟ್ಯಾಂಕ್ ಮೊಹಲ್ಲಾ ಮುಂತಾದ ಮುಸ್ಲಿಂ ಬಾಹುಳ್ಯವಿರುವ ಕಡೆಗಳಿಗೆ ವ್ಯಾನುಗಳಲ್ಲಿ ಹೋದ ಪೊಲೀಸರು ಮನೆಮನೆಗಳಿಗೆ ನುಗ್ಗಿ ಹರೆಯದ ಹುಡುಗರನ್ನು ಎಳೆದುಕೊಂಡು ಬಂಧಿಸಿದ್ದಾರೆ. ಹಲವರನ್ನು ಥಳಿಸಿದ್ದಾರೆ. ಅವರಲ್ಲಿ ಅನೇಕರು ಯಾವ ಗಲಾಟೆಯಲ್ಲೂ ಪಾಲ್ಗೊಳ್ಳದ ಅಮಾಯಕರು.

ಎಷ್ಟೋ ಕಡೆ ಬೆಂಕಿ ಹಚ್ಚಿದ ಭಜರಂಗಿಗಳಲ್ಲಿ ಒಬ್ಬರನ್ನಾದರೂ ಬಂಧಿಸಿಲ್ಲದಿರುವುದು ಮುರುಗನ್‌ರ ಕಾರ್ಯದಕ್ಷತೆಗೆ ಸಾಕ್ಷಿ. ಹಲವು ಕಡೆಗಳಲ್ಲಿ ಪೊಲೀಸರ ಎದುರೇ ಹಿಂದೂ ಹುಡುಗರು ಬೆಂಕಿ ಹಚ್ಚಿದ್ದರೂ ಸಹ ಮುರುಗನ್ ಬಂಧಿಸಿರುವ ತೊಂಬತ್ತು ಜನ ಮುಸ್ಲಿಮ್ ಹುಡುಗರೇ ಆಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಎಂದಿನಂತೆ ತನ್ನ ಹರಕುಬಾಯಿಯಲ್ಲಿ ಹೇಳಿಕೆ ನೀಡಿ ಮುಸ್ಲಿಮರನ್ನು ಹೊರಗಿನಿಂದ ಕರೆಸಲಾಗಿದೆ ಎಂದೂ, ಇದರಲ್ಲಿ ಹೊರದೇಶದವರ ಕೈವಾಡವಿದೆಯೆಂದೂ ಹೇಳಿದ್ದಾನೆ. ಹಾಗೆ ನೋಡಿದರೆ ಮುಖ್ಯಮಂತ್ರಿ ಯಡ್ಡಿಯೇ ಸ್ವಲ್ಪ ಸಂಯಮದಿಂದ ವರ್ತಿಸಿದ್ದಾರೆ ಎನ್ನಬಹುದು.

ಇದೇ ಗುರುವಾರ ಶಿವಮೊಗ್ಗೆಯಲ್ಲಿ ಭಜರಂಗದಳ ಬೈಕ್‌ರ್‍ಯಾಲಿ ಹಮ್ಮಿಕೊಂಡಿದೆ. ಈಗ ಶಿವಮೊಗ್ಗದಲ್ಲಿ ಹತ್ತಿರುವ ಬೆಂಕಿಗೆ ಮತ್ತಷ್ಟು ತುಪ್ಪ ಸುರಿಯುವ ಕೆಲಸವನ್ನು ಮಾರ್ಚ್ 7 ರಂದು ಜರುಗಲಿರುವ ಭಜರಂಗದಳದ ಸಮಾಜೋತ್ಸವದಲ್ಲಿ ಪ್ರವೀಣ್ ತೊಗಾಡಿಯಾ ಮಾಡಲಿದ್ದಾನೆ. ಇನ್ನೊಂದೆಡೆ ಯಾವುದೇ ಸರಿಯಾದ ನಾಯಕತ್ವವಿಲ್ಲದ ಮುಸ್ಲಿಂ ಹುಡುಗರು ಪೊಲೀಸರ ವರ್ತನೆಗೆ ಆಕ್ರೋಶಗೊಂಡಿದ್ದಾರೆ. ತಕ್ಷಣದಲ್ಲಿ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಮತ್ತಷ್ಟು ದ್ವೇಷಕ್ಕೆ ಕಾರಣವಾಗಲಿರುವ ಈ ಸಮಾಜೋತ್ಸವದ ಮೇಲೆ ನಿಷೇಧ ಹೇರಿದರೆ ಒಳಿತಾಗಬಹುದು. ಇಲ್ಲವಾದಲ್ಲಿ ಶಿವಮೊಗ್ಗದ ಜನತೆ ಸದ್ಯ ನೆಮ್ಮದಿ ಕಾಣುವ ಸಾಧ್ಯತೆ ಕಡಿಮೆ.

● ವರದಿಗಾರ

ಪರಮಕಂಸ ಸೆಕ್ಸಾನಂದ




ಸಾಕ್ಷಾತ್ ಶಿವಪರಮಾತ್ಮನ ಅವತಾರ ರೂಪಿಗೆ ತಾನು ಖಾವಿ ತೊಟ್ಟು ಥರ್ಡ್‌ರೇಟ್ ನಟಿಯೊಬ್ಬಳ ಜೊತೆ ಚಕ್ಕಂದವಾಡುತ್ತಿರುವುದನ್ನು ಮೂರನೇ ಕಣ್ಣೊಂದು ವೀಡಿಯೋಗ್ರಹಣ ಮಾಡಿಕೊಳ್ಳುತ್ತಿದೆ ಎಂಬುದು ಗೊತ್ತಾಗಲೇ ಇಲ್ಲ!

ಕಲಿಯುಗ ದೈವವಂತೆ. ಕೇವಲ ಸ್ಪರ್ಶ ಮಾತ್ರದಿಂದಲೇ ಕುಷ್ಠರೋಗ ನಿವಾರಿಸುತ್ತಾನಂತೆ. ತಲೆ ಮೇಲೆ ಕೈಯಿಟ್ಟು ಆಶೀರ್ವದಿಸಿದ ಮಾತ್ರಕ್ಕೇ ಯಾರೋ ಬಂಜೆಗೆ ಮಕ್ಕಳಾಯಿತಂತೆ. ತನ್ನ ಮೂರನೇ ಕಣ್ಣಿನಿಂದ ಭೂತ ಭವಿಷ್ಯತ್ ವರ್ತಮಾನಗಳನ್ನೆಲ್ಲ ಗ್ರಹಿಸುತ್ತಾನಂತೆ. ಇಂಥಾ ದೈವ ಮಾನವನಿಗೆ ತನ್ನ ಕಾಮವನ್ನು ಗೆಲ್ಲುವುದು ಹಾಳಾಗಲಿ ತಾನು ನಟಿಯೊಬ್ಬಳ ಜೊತೆ ನಡೆಸಿದ ಕಾಮಕೇಳಿಯನ್ನು ಸನ್ ಟಿವಿಯವರು ಸದ್ದಿಲ್ಲದೇ ಚಿತ್ರೀಕರಿಸಿಕೊಳ್ಳುತ್ತಿದ್ದಾರೆಂದೂ, ಅದು ಕೆಲವೇ ಗಂಟೆಗಳಲ್ಲಿ ಪ್ರಸಾರಗೊಂಡು ತನ್ನ ಇಡೀ ಸಾಮ್ರಾಜ್ಯವೇ ಮುಳುಗಲಿದೆಯೆಂದೂ, ರೊಚ್ಚಿಗೆದ್ದ ಜನ ತನ್ನ ಆಶ್ರಮಗಳನ್ನೆಲ್ಲ ಚಿಂದಿಯೆಬ್ಬಿಸಲಿದ್ದಾರೆಂದೂ ಮೊದಲೇ ಗೊತ್ತಾಗಬೇಕಿತ್ತಲ್ಲವೆ?

ದೈವತ್ವದ ಮಾತಿರಲಿ ನಿತ್ಯಾನಂದನಲ್ಲಿ ಮನುಷ್ಯತ್ವದ ಲವಲೇಶವೂ ಇರಲಿಲ್ಲ, ಬಿಡದಿಯ ಧ್ಯಾನಪೀಠವೆಂಬ ರೆಸಾರ್ಟ್ ಶೈಲಿಯ ಮಠದ ಅಧಿಪತಿ ಪರಮಹಂಸ ನಿತ್ಯಾನಂದನ ಐಲಾಟಗಳ ವಿರುದ್ಧ ಪತ್ರಿಕೆ ಸುವಿಸ್ತಾರ ವರದಿಯೊಂದನ್ನು ಪ್ರಕಟಿಸಿದ್ದರ ಬೆನ್ನಲ್ಲೇ ಆತನ ಅಸಲೀ ಮುಖ ಸನ್ ಟೀವಿಯಲ್ಲಿ ಬಯಲಾಗಿತ್ತು. ಖಾವಿಧಾರಿಯಾಗಿ ತನ್ನ ಆಶ್ರಮದ ಪಲ್ಲಂಗದ ಮೇಲೆ ಅರೆಬೆತ್ತಲಾಗಿ ತಮಿಳು ಚಿತ್ರನಟಿ ರಂಜಿತಾಳನ್ನು ರಮಿಸುತ್ತಿದ್ದ ನಿತ್ಯಾನಂದನಿಗೆ ಆಕೆ ವಯಾಗ್ರಾ ಮಾತ್ರೆ ತಿನ್ನಿಸಿದ್ದು, ಪಕ್ಕದಲ್ಲೇ ಕಂಗೊಳಿಸುತ್ತಿದ್ದ ವಿಸ್ಕಿ ಬಾಟಲುಗಳು, ಕುಡಿದು ಚಿತ್ತಾಗಿ ಮತ್ತೊಬ್ಬ ಹೆಂಗಸನ್ನು ಮೇಲೆಳೆದುಕೊಂಡು ನಿತ್ಯಾನಂದ ಲಗಾಟಿ ಹಾಕಿದ್ದು, ಆಕೆಯ ನಂತರ ಮತ್ತೆ ನಟಿ ರಂಜಿತಾಳನ್ನು ಮೇಲೆಳೆದುಕೊಂಡಿದ್ದು; ಹೀಗೆ ಒಂದರ ಮೇಲೊಂದು ಅಸಹ್ಯದ ದೃಶ್ಯಾವಳಿಗಳನ್ನು ಸನ್ ಟೀವಿಯಷ್ಟೇ ಅಲ್ಲ, ಕನ್ನಡದ ಟೀವಿ ಚಾನಲ್ಲುಗಳೂ ದಿನಗಟ್ಟಲೇ ಬಿತ್ತರಿಸಲಾರಂಭಿಸಿದ್ದವು.

ಪ್ರೇಮಾನಂದನ ಪ್ರತಿರೂಪ

ಜನ ನಿತ್ಯಾನಂದ ಫೋಟೋ ಕಿತ್ತು ಕಾಲಲ್ಲಿ ಹೊಸಕುತ್ತಿದ್ದರು. ಆತನ ಆಶ್ರಮಕ್ಕೆ ನುಗ್ಗಿದ್ದೇ ಸಿಕ್ಕಸಿಕ್ಕದ್ದನ್ನೆಲ್ಲ ಚಿಂದಿಗೈದರು. ಮೈಸೂರು-ಬೆಂಗಳೂರು ರಸ್ತೆಯುದ್ದಕ್ಕೂ



ಹಾಕಿದ್ದ ಆತನ ಫ್ಲೆಕ್ಸ್‌ಗಳನ್ನು ಕಿತ್ತು ಬೆಂಕಿಯಿಟ್ಟರು. ಸಿಕ್ಕಸಿಕ್ಕ ಆತನ ಫೋಟೋಗಳಿಗೆಲ್ಲ ಚಪ್ಪಲಿ ಹಾರ ಹಾಕುತ್ತಿದ್ದರು. ಮೈಸೂರಿನ ಆತನ ಅಡ್ಡೆಗೂ ಜನ ಲಗ್ಗೆಯಿಟ್ಟಿದ್ದರು. ಅತ್ತ ತಮಿಳುನಾಡಿನ ತಿರುವಣ್ಣಾಮಲೈ, ಕನ್ಯಾಕುಮಾರಿ, ಕಡಲೂರು, ಸಿರ್‌ಕಲ್ಲೈ, ಸಟ್ಟನಂತಪುರಂ, ಕೊಯಮತ್ತೂರು ಮತ್ತು ಪಾಂಡಿಚೇರಿಯ ಆಶ್ರಮಗಳಿಗೂ ಜನ ನುಗ್ಗಿ ಆಕ್ರೋಶ ವ್ಯಕ್ತಪಡಿಸಿದ್ದರು.

ಹಿಂದೆ ತಮಿಳುನಾಡಿನಲ್ಲಿ ಇದೇ ರೀತಿ ಮಧುರೈನ ಪ್ರೇಮಾನಂದನೆಂಬ ನಕಲಿ ಸ್ವಾಮಿಯೊಬ್ಬನ ಸೆಕ್ಸ್ ಹಗರಣವನ್ನು ಪತ್ರಿಕೆಗಳು ಬಯಲಿಗೆಳೆದಿದ್ದವು. ಆಶ್ರಮಕ್ಕೆ ಬರುತ್ತಿದ್ದ ಮುಗ್ಧ ಹೆಂಗಸರನ್ನು ತನ್ನ ಕಾಮಪಿಪಾಸೆಗೆ ಬಲಿಕೊಡುತ್ತಿದ್ದ ಪ್ರೇಮಾನಂದ ತಾನೇ ಬಳಸಿಕೊಂಡಿದ್ದ ಭಕ್ತೆಯೊಬ್ಬಳನ್ನು ಕೊಂದು ತನ್ನ ಆಶ್ರಮದಲ್ಲೇ ಹೂತು ಹಾಕಿದ್ದ. ಆ ಕೊಲೆ ಕೇಸೂ ಸೇರಿದಂತೆ ಇನ್ನೂ ಅನೇಕ ಭಕ್ತೆಯರನ್ನು ಅತ್ಯಾಚಾರಗೈದ ಕೇಸಲ್ಲಿ ಜೈಲು ಸೇರಿದ ಪ್ರೇಮಾನಂದ ಇವತ್ತಿಗೂ ಕಂಬಿ ಎಣಿಸುತ್ತಿದ್ದಾನೆ.

ಆ ಪ್ರೇಮಾನಂದನ ವಿಕೃತಿ, ಲಂಪಟತನಗಳ ಉತ್ತರಾಧಿಕಾರಿಯಂತಿದ್ದವನು ಬಿಡದಿಯ ಪರಮಹಂಸ ನಿತ್ಯಾನಂದ. ಹಿಂದೊಮ್ಮೆ ವರನಟ ರಾಜ್ ಅಪಹರಣವಾಗಿದ್ದಾಗ ತಮಿಳು ಉಗ್ರಗಾಮಿ ಸಂಘಟನೆಗಳಾದ TNLA ಮತ್ತು TNRT ಸಂಘಟನೆಗಳಿಗೂ ರಾಜ್ ಅಪಹರಣಕ್ಕೂ ಮತ್ತು ಬಿಡದಿಯ ತಮಿಳುಸ್ವಾಮಿ ನಿತ್ಯಾನಂದನಿಗೂ ಇರುವ ನಿಗೂಢ ನಂಟನ್ನು ಪತ್ರಿಕೆ ಬಯಲಿಗೆಳೆದಿತ್ತು. ಮುಂದೆ ವೀರಪ್ಪನ್ ಮಾಜಿ ಮಂತ್ರಿ ನಾಗಪ್ಪನವರನ್ನು ಹೊತ್ತೊಯ್ದು ಕೊಂದಾಗಲೂ ವೀರಪ್ಪನ್ ಸರ್ಕಾರಕ್ಕೆ ಕಳಿಸಿದ್ದ ತನ್ನ ಬೇಡಿಕೆಗಳ ಕ್ಯಾಸೆಟ್ಟು ಇದೇ ಬಿಡದಿಯ ನಿತ್ಯಾನಂದನ ಆಶ್ರಮದ ಪಕ್ಕದ ಅಂಚೆಪೆಟ್ಟಿಗೆಯಿಂದಲೇ ರವಾನೆಯಾಗಿತ್ತು. ಎಲ್‌ಟಿಟಿಇ ಬೆಂಬಲಿತ ತಮಿಳು ಉಗ್ರರಿಗೂ ನಿತ್ಯಾನಂದನಿಗೂ ಇದ್ದ ಸಂಬಂಧ ಹೀಗೆ ಕಾಲಾನುಕಾಲಕ್ಕೆ ಒಂದಲ್ಲ ಒಂದು ರೂಪದಲ್ಲಿ ಬಯಲಾಗುತ್ತಲೇ ಇತ್ತು.

ಎಲ್‌ಟಿಟಿಇ ಲಿಂಕ್?

ಮೂಲತಃ ತಮಿಳುನಾಡಿನ ತಿರುವಣ್ಣಾಮಲೈನವನಾದ ನಿತ್ಯಾನಂದನ ಹುಟ್ಟು ಹೆಸರು ರಾಜಶೇಖರನ್. ಹುಟ್ಟಿದ್ದು 1978 ರಲ್ಲಾದರೂ ತಾನು 1990 ರಿಂದ 1993 ರ ಮಧ್ಯೆ ಗುಡಿಯಾಟ್ಟಂ ರಾಜಗೋಪಾಲ ಪಾಲಿಟೆಕ್ನಿಕ್‌ನಲ್ಲಿ ಮೆಕಾನಿಕಲ್ ಇಂಜಿನಿಯರ್ ಡಿಪ್ಲೋಮಾ ಮುಗಿಸಿಕೊಂಡೆ ಎಂದು ರೈಲು ಬಿಡುತ್ತಿದ್ದ. ಅಂದರೆ ತನ್ನ 13 ನೇ ವಯಸ್ಸಿಗೇ ಪ್ರೇಮಾನಂದ ಮೆಕಾನಿಕಲ್ ಡಿಪ್ಲೋಮಾ ಮುಗಿಸಿದ್ದನಂತೆ!

ಯಾರಾದರೂ ನಂಬಲು ಸಾಧ್ಯವಾ? ಡಿಪ್ಲೋಮಾ ಮುಗಿಸಿದ ಮರುಗಳಿಗೆಯಲ್ಲೇ ನಿತ್ಯಾನಂದನಿಗೆ ಜ್ಞಾನೋದಯವಾಯ್ತಂತೆ. ಆನಂತರ ಮಧ್ಯಪ್ರದೇಶದ ಯಾರೋ ಮಹಾವತಾರಿ ಬಾಬಾ ಎಂಬಾತನಿಂದ ದೀಕ್ಷೆ ಪಡೆದು ಸನ್ಯಾಸಿಯಾದನಂತೆ. ಇದು ನಿತ್ಯಾನಂದ ತನ್ನ ಬಗ್ಗೆ ತೇಲಿಬಿಟ್ಟ ಪುರಾಣಗಾಥೆ. ಶುರುವಿನಲ್ಲಿ ಕನ್ಯಾಕುಮಾರಿಯಲ್ಲಿ ಆಶ್ರಮ ಆರಂಭಿಸಿದ ನಿತ್ಯಾನಂದನ ಮೇಲೆ ಕೇಂದ್ರ ಬೇಹುಗಾರಿಕೆ ಸಂಸ್ಥೆ 'ರಾ' ಕಣ್ಣುಬಿದ್ದದ್ದು 1995 ರಲ್ಲಿ. ಎಲ್‌ಟಿಟಿಇಯ ಕೆಲ ಉಗ್ರರ ಪಾಲಿಗೆ ನಿತ್ಯಾನಂದನ ಕನ್ಯಾಕುಮಾರಿ ಆಶ್ರಮವೇ ಹುತ್ತದಂತಿತ್ತು. ಇನ್ನೆಲ್ಲಿ ತನ್ನ ಬಣ್ಣ ಬಯಲಾಗುತ್ತೋ ಎಂದು ಪಾಂಡಿಚೇರಿ, ಕೊಯಮತ್ತೂರು, ತಿರುವಣ್ಣಾಮಲೈ, ಸಟ್ಟನಂತಪುರಂಗಳಲ್ಲೂ ಆಶ್ರಮದ ಶಾಖೆ ತೆರೆದ ನಿತ್ಯಾನಂದನ ಗುರಿಯಿದ್ದದ್ದು ಬೆಂಗಳೂರಿನ ಮೇಲೆ.

2003 ರ ಹೊತ್ತಿಗೆ ಬೆಂಗಳೂರಿಗೆ ಕಾಲಿಟ್ಟ ನಿತ್ಯಾನಂದ ಆರಂಭದಲ್ಲಿ ತನ್ನ ಪ್ಲಾಟು ಬಿಟ್ಟುಕೊಟ್ಟು ಬಿಡದಿಯಲ್ಲಿದ್ದ ನಾಲ್ಕೆಕರೆ ಜಮೀನನ್ನು ಆಶ್ರಮಕ್ಕೆಂದು ಬಳಸಲು ನೆರವಾದ ನಾಗರಾಜ ಶೆಟ್ಟಿಯನ್ನು ಇನ್ನಿಲ್ಲದಂತೆ ವಂಚಿಸಿದ್ದ. ನಾಗರಾಜ ಶೆಟ್ಟರ ತೋಟದ ಪಕ್ಕದಲ್ಲೇ ಸ್ವಾತಂತ್ರ್ಯ ಹೋರಾಟಗಾರ ಸಜ್ಜನ್‌ರಾವ್ ಮಗ ಪ್ರತಾಪ್‌ಗೆ ಸೇರಿದ್ದ 18 ಎಕರೆಯ ತೋಟವನ್ನೂ ಖರೀದಿಸಿ ಅದಕ್ಕೆ ಧ್ಯಾನಪೀಠವೆಂಬ ಹೆಸರಿಟ್ಟ. ನೋಡುನೋಡುತ್ತಿದ್ದಂತೆಯೇ ಬಿಡದಿಯ ಧ್ಯಾನಪೀಠ 30 ಎಕರೆಗೆ ವಿಸ್ತರಿಸಿತು. ವಿಶಾಲ ಪ್ರಾರ್ಥನಾ ಮಂದಿರ, ಥರೇವಾರಿ ದೇವಸ್ಥಾನಗಳು, ಯೋಗಕೇಂದ್ರ, ಐಷಾರಾಮಿ ಬಂಗಲೆ, ಹೈಟೆಕ್ ಬೆಡ್‌ರೂಂ ಎಲ್ಲವೂ ಒಂದರಮೇಲೊಂದಾಗಿ ಎದ್ದು ನಿಂತವು.

ತಮಿಳು ಕುಬೇರರ ರೊಕ್ಕ

ಹಕೀಕತ್ತೇನೆಂದರೆ ನಿತ್ಯಾನಂದನ ಬಿಡದಿಯ



ಆಶ್ರಮಕ್ಕೆಂದು ಹರಿದುಬಂದ ಸರಿಸುಮಾರು ಹದಿನೈದು ಕೋಟಿಗಳಷ್ಟು ದುಡ್ಡು ಬೆಂಗಳೂರಿನ ಎಲ್‌ಟಿಟಿಇ ಬೆಂಬಲಿತ ತಮಿಳು ಉದ್ಯಮಿಗಳ ಮೂಲಕವೇ ರವಾನೆಯಾಗಿತ್ತು. ನಿತ್ಯಾನಂದನ ಬೆನ್ನಿಗೆ ನಿಂತು ಇಡೀ ಆಶ್ರಮದ ಉಸ್ತುವಾರಿ ಹೊತ್ತಿದ್ದು ಬೆಂಗಳೂರಿನ ನಟೋರಿಯಸ್ ಎಲ್‌ಟಿಟಿಇ ಪೋಷಕ ಮತ್ತು ರಾಜ್ ಅಪಹರಣದ ಸೂತ್ರಧಾರ ಷಣ್ಮುಗ ಸುಂದರಂ!

▶▶

ಪರೋಡಿಯ ಮುಂದೆ ತಾರಾ ತಿಗಡಿ!

ನೋಡಿ; ಎಂಥಾ ಯಡವಟ್ಟಾಗಿ ಹೋಯ್ತು!

ಆ ಸ್ವಾಮಿಯನ್ನು ನಾನೂ ನಂಬಿದ್ದೆ. ಏನೋ ಶಕ್ತಿಯಿದೆ ಅಂತ ನಂಬಿಕೊಂಡು ಒಂದೆರಡು ಬಾರಿ ಆತನ ಆಶ್ರಮಕ್ಕೂ ಹೋಗಿದ್ದೆ. ಆತ ಇಂಥವನು ಅಂತ ಗೊತ್ತೇ ಇರಲಿಲ್ಲ. ನಮ್ಮಂಥ ಮೂರ್ಖರಿಂದಾಗಿಯೇ ಇಂಥವರು ಬೇಳೆ ಬೇಯಿಸಿಕೊಳ್ಳುತ್ತಾರೆ. ಈಗ ನನ್ನ ಯಜಮಾನರೇನಾದ್ರೂ ಇದನ್ನ ನೋಡಿದ್ರೆ ನನ್ನ ಬಗ್ಗೆ ಏನು ತಿಳ್ಕೊಳ್ಳಲ್ಲ. ನೀವೇ ಹೇಳಿ!



ಇದು ಟಿವಿ ಸಂದರ್ಶನದಲ್ಲಿ ನಟಿ ತಾರಾ ಹೇಳಿದ ಮಾತು. ನಿತ್ಯಾನಂದನ ಬಿಡದಿ ಆಶ್ರಮಕ್ಕೆ ಹೋಗಿದ್ದು ತನ್ನ ಮೂರ್ಖತನ ಎಂದು ಈಗ ಗೊತ್ತಾಯ್ತಾ? ಸಿನಿಮಾ ಲೋಕದಲ್ಲಿ ಎಂತೆಂಥಾ ಪ್ರಚಂಡರನ್ನು ತಾರಾ ನೋಡಿಲ್ಲ? ಮೇಲ್ನೋಟಕ್ಕೆ ಪಕ್ಕಾ ಪರೋಡಿಯಂತೆ ಕಾಣುವ ನಿತ್ಯಾನಂದನ ಅಡ್ಡೆಗೆ ಕಾಲಿಡುವಂತಹ ಯಾವ ದಾರಿದ್ರ್ಯ ತಾರಾಗಿತ್ತು?

ಎಂತೆಂಥವರನ್ನೋ ಮರಳು ಮಾಡಿದ ನಿತ್ಯಾನಂದನಿಗೆ ತಾರಾ ಯಾವ ಲೆಕ್ಕ?

ತಮಿಳು ನಟಿ ರಂಜಿತಾ ಯಾರು?



ಸನ್ ಟೀವಿ ಬಿತ್ತರಿಸಿದ ಕಾಮಕೇಳಿಯಲ್ಲಿ ನಿತ್ಯಾನಂದನಿಗೆ ವಯಾಗ್ರಾ ತಿನ್ನಿಸಿ ಚಕ್ಕಂದಕ್ಕಿಳಿದಾಕೆ ತಮಿಳು ನಟಿ ರಂಜಿತಾ. ಈ ಹಿಂದೆ ರಾಗಸುಧಾ ಎಂಬ ಹೆಸರಲ್ಲಿ ಚಾಲ್ತಿಯಲ್ಲಿದ್ದ ರಂಜಿತಾ ತಮಿಳಿನ ಹೆಸರಾಂತ ನಟಿಯೇನಲ್ಲ, ಸಣ್ಣಪುಟ್ಟ ವ್ಯಾಂಪ್ ಶೈಲಿಯ ಪಾತ್ರಗಳಲ್ಲೋ, ಐಟಂ ಸಾಂಗ್‌ಗಳಲ್ಲಿ ನರ್ತಕಿಯಾಗೋ, ಅಪರೂಪಕ್ಕೊಮ್ಮೆ ಥರ್ಡ್‌ಗ್ರೇಡ್ ತಮಿಳು ಸಿನಿಮಾಗಳಲ್ಲಿ ಕಂಡುಬರುತ್ತಿದ್ದ ರಂಜಿತಾಳಂಥ ನತದೃಷ್ಟೆಯರಿಗೆ ಮೈಕಾಯಕವಲ್ಲದೆ ಹೊಟ್ಟೆಪಾಡಿಗೆ ಬೇರೆ ದಾರಿಯೆಲ್ಲಿದೆ?

ಹಿಂದೆ ಯಾವುದೋ ಥ್ರಿಲ್ಲರ್ ಮಂಜು ಕ್ಯಾಟಗರಿಯ ಕನ್ನಡ ಚಿತ್ರವೊಂದರಲ್ಲಿ ಈಕೆ ವೇಶ್ಯೆಯ ಪಾತ್ರ ಮಾಡಿದ್ದಳಂತೆ. ವರ್ಷಕ್ಕೆ ಒಂದೋ ಎರಡೋ ತಮಿಳು ಚಿತ್ರ ಸಿಕ್ಕರೂ ಕಣ್ಣಿಗೊತ್ತಿಕೊಂಡು ನಟಿಸುವ ರಂಜಿತಾ ಥರದ ಹೆಂಗಸರಿಗೆ ನಟಿಯೆಂಬ ಹಣೆಪಟ್ಟಿಯಷ್ಟೇ ಸಾಕು. ನಟಿಯೆಂಬ ಸೋಗಿನಲ್ಲಿ ಮೈಕಸುಬು ಸಲೀಸು, ಗಿರಾಕಿಗಳೂ ಸಿಗುತ್ತಾರೆ.

ಹೀಗೆ ಗಿರಾಕಿಯಾಗಿ ರಂಜಿತಾಳ ಪಾಲಿಗೆ ಬಂದವನೇ ನಿತ್ಯಾನಂದ. ತಮಿಳುನಾಡಿನ ತಿರುವಣ್ಣಾಮಲೈ ಅಡ್ಡೆಗೆ ಬಂದಾಗಲೆಲ್ಲ ನಿತ್ಯಾನಂದ ರಂಜಿತಾಳನ್ನು ಕರೆಸಿಕೊಳ್ಳುತ್ತಿದ್ದ.

ಬೆಂಗಳೂರಿನ ಬಿಡದಿ ಆಶ್ರಮಕ್ಕೂ ಆಗಾಗ್ಗೆ ರಂಜಿತಾ ಬರುತ್ತಿದ್ದಳು. ತನ್ನ ಜೊತೆ ಬೇರೆಬೇರೆ ಹೆಂಗಸರನ್ನು ಕರೆತಂದು ನಿತ್ಯಾನಂದನಿಗೆ ಪರಿಚಯಿಸುತ್ತಿದ್ದಳು.

ಒಂದು ಮೂಲದ ಪ್ರಕಾರ ಇಲ್ಲಿಗೆ ತಿಂಗಳ ಹಿಂದೆಯೇ ರಂಜಿತಾ-ನಿತ್ಯಾನಂದರ ಲೀಲಾ ವಿನೋದದ ದೃಶ್ಯಾವಳಿಯನ್ನು ತಿರುವಣ್ಣಾಮಲೈ ಆಶ್ರಮದಿಂದ ಹೊರದಬ್ಬಲ್ಪಟ್ಟಿದ್ದ ಕೆಲಸಗಾರನೊಬ್ಬ ಚಿತ್ರೀಕರಿಸಿದ್ದ. ಟೀವಿಯಲ್ಲಿ ಬಿತ್ತರಿಸಿದ್ದಕ್ಕಿಂತ ಇನ್ನೂ ಅಸಹ್ಯದ ದೃಶ್ಯಾವಳಿಗಳನ್ನು ವೀಡಿಯೋ ಸೆರೆಹಿಡಿದಿತ್ತಾದರೂ ಸನ್ ಟೀವಿಯವರು ಅದನ್ನು ಸೆನ್ಸಾರ್ ಮಾಡಿ ಬಿತ್ತರಿಸಿದ್ದಾರೆ.

ರಂಜಿತಾ ಜೊತೆ ದೃಶ್ಯಾವಳಿಯಲ್ಲಿರುವ ಮತ್ತೊಬ್ಬ ಹೆಂಗಸು ಕೂಡ ಸಿನಿಮಾ ಸಹನಟಿಯೇ. ಆಕೆ ರಂಜಿತಾಳ ಗೆಳತಿ ಜಯಾ ಅಂತ. ಒಂದೇ ವೇಳೆಯಲ್ಲಿ ವಯಾಗ್ರಾ ತಿಂದು ಇಬ್ಬಿಬ್ಬರು ಹೆಂಗಸರೊಂದಿಗೆ ರತಿವಿಲಾಸ ನಡೆಸುವ ನಿತ್ಯಾನಂದನ ಅಸಹ್ಯಕ್ಕೆ ಯಾರು ತಾನೇ ಸಾಟಿ? ಕನಿಷ್ಠ ಖಾವಿಯನ್ನು ಕಳಚಿಟ್ಟಾದರೂ ಹೊಲಸು ತಿನ್ನಬಹುದಿತ್ತಲ್ಲ? ಕಾಮಾತುರನಿಗೆ ಯಾವ ಭಯ ಯಾವ ಲಜ್ಜೆ?

ಆ ಹೊತ್ತಿಗೆ ಲಾರಿ ಮಾಲೀಕರ ಸಂಘದ ಅಧ್ಯಕ್ಷನಾಗಿದ್ದ ...ಮುಗ ಸುಂದರಂ ಮಾತ್ರವಲ್ಲದೇ ಎಲ್‌ಟಿಟಿಇಯ ...ತ್ತೊಬ್ಬ ಸಮರ್ಥಕ ಮಾಜಿ ಕೌನ್ಸಿಲರ್ ಹ್ಯಾರಿ, ...ಮುಂಡೇಶ್ವರಿ ಸ್ಟುಡಿಯೋ ಧಣಿ ಕುಪ್ಪಸ್ವಾಮಿ ನಾಯ್ಡು, ...ಂಧಿನಗರದ ಸಿನಿಮಾ ಫೈನಾನ್ಸಿಯರ್ ಭಕ್ತವತ್ಸಲಂ, ...ಸ್ಪ್ ಕ್ಲಬ್‌ನ ಭೂಕಂಟಕ ಅರುಣಾಚಲಂ, ಕೋರಮಂಗಲದ ...ಂಡ್ ಡೀಲರ್ ಪ್ರಕಾಶ್, ರಾಜಾಜಿನಗರದ ಸೆಂಟ್ ...ನ್ಸ್ ಕಾನ್ವೆಂಟ್ ಧಣಿ ಮತ್ತು ಡಿಎಂಕೆಯ ಫೈನಾನ್ಸಿಯರ್ ...ಲಕೃಷ್ಣ ಎಂ.ವಿ. ಜಯರಾಮನ್ ಇಂಜಿನಿಯರಿಂಗ್ ...ಲೇಜು ಸಮೂಹದ ಜಯರಾಮನ್ ಮಗ ಮೋಹನ್; ...ತ್ಯಾದಿ ಬೆಂಗಳೂರಿನ ಎಲ್‌ಟಿಟಿಇ ಪೋಷಕ ...ಮಂತರೆಲ್ಲರೂ ನಿತ್ಯಾನಂದನ ಮಠರೂಪಿ ರೆಸಾರ್ಟಿಗೆ ...ಡ್ಡು ಸುರಿದಿದ್ದರು.

ಜಾತಿಯ ಬಲವಿಲ್ಲ, ಕರ್ನಾಟಕದವನಲ್ಲ, ಹುಟ್ಟು ...ೀಟ್ಯಾಧಿಪತಿಯೂ ಎಂದರೆ ಅದೂ ಅಲ್ಲ. ಕೆಲವೇ ...ರ್ಷಗಳ ಹಿಂದೆ ಒಪ್ಪತ್ತು ಗಂಜಿಗೂ ಗತಿಯಿಲ್ಲದ ...ತ್ಯಾನಂದನಿಗೆ ರಾತ್ರೋರಾತ್ರಿ ಕೋಟಿಗಟ್ಟಲೇ ಹಣ ಹರಿದು ...ಬರುತ್ತದೆಯೆಂದರೆ ಅದು ಎಲ್‌ಟಿಟಿಇಯ ನಿಧಿಯಲ್ಲದೇ ...ತ್ತೇನು?

ರಾಜ್ಯ ಪೊಲೀಸ್ ಇಂಟಲಿಜೆನ್ಸ್‌ಗೂ ನಿತ್ಯಾನಂದನ ...ಲ್‌ಟಿಟಿಇ ಲಿಂಕ್ ಬಗ್ಗೆ ಸಾಕಷ್ಟು ಮಾಹಿತಿಯಿತ್ತು. ...ನರೆ ನಿತ್ಯಾನಂದ ಖಾವಿ ತೊಟ್ಟು ಹಿಂದೂ ...ರ್ಣೋದ್ಧಾರಕನ ಪೋಜು ಕೊಡುತ್ತಿದ್ದ. ತನ್ನ ಆಶ್ರಮಕ್ಕೆ ...ಹಂತಕ ನರೇಂದ್ರ ಮೋದಿಯನ್ನು ಕರೆಸಿದ. ಮಾಜಿ ...ಷ್ಟ್ರಪತಿ ಅಬ್ದುಲ್‌ಕಲಾಂ, ಹಾಲಿ ವಿದೇಶಾಂಗ ಮಂತ್ರಿ ...ಸ್.ಎಂ.ಕೃಷ್ಣ, ಮುಖ್ಯಮಂತ್ರಿ ಯಡ್ಡಿ, ಮಂತ್ರಿ ಕಟ್ಟಾ ...ಮುಖ್ಯ ಇತ್ಯಾದಿ ಪ್ರಭಾವಿ ರಾಜಕಾರಣಿಗಳನ್ನೆಲ್ಲ ಕರೆದು ...ನ್ಮಾನಿಸುತ್ತಿದ್ದ.

ಆಸ್ತಿಯ ಸುತ್ತ ವಿಕೃತಿ

...ಯಾವತ್ತು ಶ್ರೀಲಂಕಾದಲ್ಲಿ ಎಲ್‌ಟಿಟಿಇ ನೆಲಕಚ್ಚಿತೋ ...ತ್ಯಾನಂದನ ದುರಾಶೆಯೂ ಭುಗಿಲೆದ್ದಿತು. ಹೇಗೂ ...ಭಾಕರನ್ ಬದುಕಿಲ್ಲ. ತನ್ನ ಮತ್ತು ಎಲ್‌ಟಿಟಿಇ ಸಂಬಂಧ ...ತ್ತಿದ್ದ ಬಹುತೇಕ ಎಲ್‌ಟಿಟಿಇ ನಾಯಕರನ್ನು ಶ್ರೀಲಂಕಾ ...ನೆ ಮುಗಿಸಿ ಹಾಕಿದೆ. ಹಣದ ಲೆಕ್ಕ ಕೇಳುವುದಕ್ಕೂ ...ಲ್‌ಟಿಟಿಇಯ ಯಾರೊಬ್ಬ ದಿಕ್ಕಿಲ್ಲದ ಮೇಲೆ ಧ್ಯಾನಪೀಠದ ...ಮ್ಮೊ ಸ್ವತ್ತೆಲ್ಲ ತನ್ನ ಪಾಲಾದಂತೆಯೇ ಎಂದು ಶೋಕಿ ...ಮದುವೆಚ್ಚದಲ್ಲಿ ಮುಳುಗಿಬಿಟ್ಟ.

...ಮೊದಲೇ ಹುಟ್ಟಾ ಸ್ತ್ರೀಲೋಲ. ಬಿಡದಿ ಆಶ್ರಮ ...ಶುರುವಾದಾಗಿನಿಂದಲೇ ಧ್ಯಾನ ನೃತ್ಯ ಆನಂದೋತ್ಸವದ ...ಸದಲ್ಲಿ ಕಂಡಕಂಡ ವೈಯಾರಿಯರನ್ನು ಕಲೆಹಾಕಿ ...ರೊಂದಿಗೆ ಅಸಹ್ಯವಾಗಿ ಡ್ಯಾನ್ಸ್ ಮಾಡುತ್ತಿದ್ದ. ಬೆದೆಗೆ ...ದ ಗೂಳಿಯಂತೆ ಹಲ್ಲು ಕಿರಿದು ಪೋಜು ...ಡುವುದು, ತನ್ನ ಅಂಗಸೌಷ್ಠವ ಕಂಗೊಳಿಸುವಂತೆ ...ೀಮೈಯಲ್ಲಿ ಧ್ಯಾನ ಮಾಡುವುದು, ನೆರೆದ ಭಕ್ತರ ...ುರೇ ಹೆಂಗಸರನ್ನು ಅಪ್ಪಿಕೊಂಡು ಮುದ್ದಾಡುವುದು, ... ಅಂತಃಪುರದ ತುಂಬ ಲಲನಾಮಣಿಯರನ್ನೇ ...ುಬಿಸಿಕೊಂಡಿದ್ದು ಉಪನ್ಯಾಸಕ್ಕೆ ಕುಂತನೆಂದರೆ ಮಾತು ...ತಿಗೂ ಸೆಕ್ಸ್ ಸಂಬಂಧಿ ವಿಷಯಗಳನ್ನೇ ತೇಲಿಬಿಡುವುದು ...ತ್ಯಾನಂದನ ವಿಕೃತ ಚೇಷ್ಟೆಗಳಾಗಿದ್ದವು.

...ಮೇಲ್ನೋಟಕ್ಕಷ್ಟೇ ನಿತ್ಯಾನಂದ ಸನ್ಯಾಸಿ. ಆಂತರ್ಯದಲ್ಲಿ ...ಹೆಣ್ಣುಬಾಕ. ತೀರ ಅಸಹ್ಯವೆನ್ನಿಸುವಷ್ಟು ಮಹಿಳಾ ...ಯರೊಂದಿಗಿನ ಆತನ ಸಲುಗೆ. ಹೊತ್ತಲ್ಲದ ಹೊತ್ತಲ್ಲೂ ...ನ ಅಂತಃಪುರದಲ್ಲಿ ಮೇಳೈಸುತ್ತಿದ್ದ ಲಲನೆಯರ ಹಿಂಡನ್ನು ... ಯಾರಿಗಾದರೂ ಆತನ ವಿಕಾರ ಸಾಮ್ರಾಜ್ಯದ ...ನೆ ಹತ್ತುತ್ತಿತ್ತು. ಯಾವತ್ತು ಎಲ್‌ಟಿಟಿಇಗೆ ನಿತ್ಯಾನಂದ ...ಗಿಬಿದ್ದನೋ ತಮಿಳು ಉಗ್ರರ ಕಣ್ಣು ಕೆಂಪಾಗಿದೆ. ...ಮದಲ್ಲೇ ಠಿಕಾಣಿ ಹೂಡಿದ ಕೆಲ ಎಲ್‌ಟಿಟಿಇ ...ಲಿಗರು ನಿತ್ಯಾನಂದನ ಬೆಡ್‌ರೂಮಿನಲ್ಲೇ ಕ್ಯಾಮರಾ ... ಮಾಡಿದ್ದಾರೆ. ಮಾಮೂಲಿನಂತೆ ಮೈಮರೆತು ...ಕೇಳಿಗಿಳಿದ ನಿತ್ಯಾನಂದ ಅಂತಿಮವಾಗಿ ಮಾರ್ಚ್ ...ದು ಸನ್‌ಟಿವಿಯಲ್ಲಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ.

ಹಳ್ಳಕ್ಕೆ ಬಿದ್ದ

...ಸದ್ಯ ತಮಿಳು ಟ್ಯಾಬ್ಲಾಯ್ಡ್‌ಗಳೇ ಹೇಳುವಂತೆ ನಿತ್ಯಾನಂದ ...ಕೇಳಿಯನ್ನು ಬಯಲಿಗೆಳೆದದ್ದು ಸನ್‌ಟಿವಿಯಾದರೂ ...ರ ಹಿಂದಿರುವುದು ಎಲ್‌ಟಿಟಿಇ ಬೆಂಬಲಿತ ಶಕ್ತಿಗಳೇ. ...ಳು ಉಗ್ರರ ಆಸ್ತಿಯನ್ನು ನುಂಗಿ ನೀರು ಕುಡಿಯಲು ...ಗಿ ಅಂತಿಮವಾಗಿ ತನ್ನ ಬುಡಕ್ಕೆ ಬೆಂಕಿಯಿಟ್ಟುಕೊಂಡ ...ನಂದ ಕನಿಷ್ಠ ಈ ಕಾರಣಕ್ಕಾದರೂ ಬೆತ್ತಲಾದನಲ್ಲ! ...ಖಾವಿಧಾರಿ ತೋಳವೊಂದು ಹಳ್ಳಕ್ಕೆ ಬಿದ್ದಾಗಿದೆ. ...ಷ್ಟೇ ಕಲ್ಲು ಎಸೆದರೂ ಕಳೆಕೊಳ್ಳಲು ಅದು ನಿತ್ಯಾನಂದನ ...ರುಲ್ಲವಲ್ಲ, ಇಷ್ಟೆಲ್ಲಾ ಆಸ್ತಿ ನಿತ್ಯಾನಂದನಿಗೆ ಬಂದಿದ್ದೆಲ್ಲಿಂದ ... ಬಗ್ಗೆ ತನಿಖೆಯಾದರಷ್ಟೇ ಎಲ್‌ಟಿಟಿಇ ಮತ್ತು ... ಸ್ವಾಮಿಯ ಮರ್ಮ ಬಯಲಾಗುತ್ತದೆ. ತನಿಖೆ ...ಸುವ ಆಸಕ್ತಿ ಯಡ್ಡಿ ಸರ್ಕಾರಕ್ಕಿದೆಯೇ?

● ರಾ.ಸೋಮನಾಥ್

ದೆಹಲಿ ಸ್ವಾಮಿಯ ಕಾಮಾಟದ ಕತೆ

ತಮ್ಮ ಮನೆ, ಕುಟುಂಬಗಳಿಂದ ದೂರವಿದ್ದು ಒಂಟೊಂಟಿಯಾಗಿ ನಗರದಲ್ಲಿ ಉಳಿದುಕೊಂಡಿದ್ದ ಹುಡುಗಿಯರನ್ನು ಪತ್ತೆ ಹಚ್ಚಿ ದಿಢೀರನೇ ದುಡ್ಡು ಮಾಡುವ ಆಸೆ ತೋರಿಸಿ ಅವರನ್ನು ಮೈಮಾರುವ ದಂಧೆಗೆ ಇಳಿಸತೊಡಗಿದ. ಇಂಥ ಹುಡುಗಿಯರನ್ನು ಬುಟ್ಟಿಗೆ ಕೆಡವಿಕೊಳ್ಳಲು ಈತ ಇಂಟರ್‌ನೆಟ್‌ಅನ್ನೂ ವ್ಯಾಪಕವಾಗಿ ಬಳಸುತ್ತಿದ್ದ. ಈತನ ವೇಶ್ಯಾವಾಟಿಕೆ ಜಾಲದಲ್ಲಿ ಕೇವಲ ಭಾರತೀಯ ಹುಡುಗಿಯರು ಮಾತ್ರ ಅಲ್ಲ, ಖಜಕಿಸ್ತಾನ್, ಉಕ್ರೇನ್, ಜಾರ್ಜಿಯ, ಉಜ್ಬೇಕಿಸ್ತಾನ್, ಅಜರ್‌ಬೈಜಾನ್, ಚೆಚನ್ಯಾ ಮುಂತಾದ ವಿದೇಶಿ ಹುಡುಗಿಯರೂ ಇದ್ದಾರೆ. ಕೆಲವೇ ವರ್ಷಗಳಲ್ಲಿ ಈ ಕಾವಿಧಾರಿ ಸ್ವಾಮಿ ಅದ್ಯಾವ ಮಟ್ಟದ ಸೆಕ್ಸ್ ರಾಕೆಟ್ ಜಾಲವನ್ನು ಕಟ್ಟಿದ ಎಂದರೆ ಪ್ರತಿ ದಿನ ಕನಿಷ್ಠ 200 ಹುಡುಗಿಯರನ್ನು ಈತ ವಿವಿಧ ಪಂಚತಾರಾ ಹೋಟೆಲ್‌ಗಳಿಗೆ ಸಪ್ಲೈ ಮಾಡುತ್ತಿದ್ದ!




ಇತ್ತ ಬೆಂಗಳೂರು ಬಳಿಯ ಬಿಡದಿ ಆಶ್ರಮದಲ್ಲಿ ಕಪಟ ನಿತ್ಯಾನಂದ ಸ್ವಾಮಿ ನಡೆಸಿದ ಕಾಮಕೇಳಿಯ ದೃಶ್ಯಾವಳಿಗಳು ಟೀವಿ ಪರದೆಗಳಲ್ಲಿ ಮೂಡುತ್ತಿದ್ದಂತೆಯೇ ಸ್ವಾಮಿ ತಲೆಮರೆಸಿಕೊಂಡು ಭೂಗತನಾಗಿದ್ದಾನೆ. ಆ ಮೂಲಕ ಭಕ್ತರಿಂದ ಧರ್ಮದೇಟು ತಿಂದು ರಕ್ತಕಾರಿ ಸಾಯುವುದರಿಂದ ಹೇಗೋ ಬಚಾವಾಗಿಬಿಟ್ಟಿದ್ದಾನೆ. ಇದೇ ವೇಳೆಯಲ್ಲಿ ಅತ್ತ ದೇಶದ ರಾಜಧಾನಿ ದೆಹಲಿಯಲ್ಲೂ ಒಬ್ಬ ಕಾವಿಧಾರಿ ಸ್ವಾಮಿ ತಾನು ರಾಸಲೀಲೆ ನಡೆಸಿದ್ದು ಸಾಕಾಗದೇ ಕಾಲೇಜು ಹುಡುಗಿಯರನ್ನು, ವಿವಿಧ ವಿಮಾನಯಾನ ಕಂಪೆನಿಗಳಲ್ಲಿ ಗಗನಸಖಿಯರಾಗಿ ಕೆಲಸ ಮಾಡುತ್ತಿದ್ದ ಸುಂದರ ಯುವತಿಯರನ್ನು ಬೇರೆಯವರಿಗೂ ಸಪ್ಲೈ ಮಾಡಿ ಈಗ ಪೊಲೀಸರ ಅತಿಥಿಯಾಗಿ ಲಾಕಪ್ಪನಲ್ಲಿ ಕಂಬಿ ಎಣಿಸುತ್ತಿದ್ದಾನೆ.

ಆತನ ಹೆಸರು ಶಿವಮೂರ್ತಿ ದ್ವಿವೇದಿ. ಈಗವನಿಗೆ 39 ವರ್ಷ. ಇಪ್ಪತ್ತೆರಡು ವರ್ಷಗಳ ಹಿಂದೆ ತಿಂಗಳಿಗೆ ಎರಡು ಸಾವಿರ ರೂಪಾಯಿ ಸಂಬಳಕ್ಕಾಗಿ ದೆಹಲಿಯ ನೆಹರೂ ಪ್ಲೇಸ್ ಏರಿಯಾದಲ್ಲಿ ಅದ್ಯಾವುದೋ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದವನು. ಅದೇನು ಹುಚ್ಚು ಹಿಡಿತೋ ಏನೋ ಗೊತ್ತಿಲ್ಲ, ಬಹಳ ಬೇಗ ಶ್ರೀಮಂತನಾಗುವ ಗೀಳು ಹಚ್ಚಿಕೊಂಡು ಹತ್ತು ಹಲವು ಕಳ್ಳದಾರಿಗಳನ್ನು ಹುಡುಕಲಾರಂಭಿಸಿದ. 1990ರ ಹೊತ್ತಿಗೆ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಗುಡ್‌ಬೈ ಹೇಳಿ ದೆಹಲಿಯಲ್ಲೇ ಒಂದು ಮಸಾಜ್ ಪಾರ್ಲರ್‌ಗೆ ಸೇರಿಕೊಂಡು ಗಿರಾಕಿಗಳ ಮೈ ತಿಕ್ಕಲಾರಂಭಿಸಿದ. ಇಲ್ಲಿ ಮೂರು ಸಾವಿರ ಸಂಬಳ ಹಾಗೂ ಪ್ರತೀ ಮಸಾಜ್‌ಗೆ ಇಪ್ಪತ್ತು ರೂಪಾಯಿ ಟಿಪ್ ಪಡೆಯುತ್ತಿದ್ದನಾದರೂ ಬಹುಬೇಗ ಶ್ರೀಮಂತನಾಗಬೇಕೆಂಬ ಹುಚ್ಚಾಗಲೀ, ಅದಕ್ಕಾಗಿ ಕಳ್ಳಕಿಂಡಿಗಳನ್ನು ತಡಕಾಡುವ ಗೀಳಾಗಲೀ ಹೋಗಿರಲಿಲ್ಲ. ಇವನ ಅದೃಷ್ಟವೋ ಏನೋ ದುರಾದೃಷ್ಟವೋ ಗೊತ್ತಿಲ್ಲ. ಈತ ಕೆಲಸ ಮಾಡುತ್ತಿದ್ದ ಮಸಾಜ್ ಪಾರ್ಲರ್ ಹೆಸರಿಗೆ ಮಾತ್ರ ಮಸಾಜ್ ಪಾರ್ಲರ್ ಆಗಿತ್ತೇ ಹೊರತು ಒಳಗೊಳಗೆ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಹುಡುಗಿಯರನ್ನು ಸಪ್ಲೈ ಮಾಡುತ್ತಾ ವೇಶ್ಯಾವಾಟಿಕೆ ಜಾಲದ ಕೇಂದ್ರ ಬಿಂದುವಾಗಿತ್ತು. ಮೊದಲೇ ರಾತ್ರೋರಾತ್ರಿ ಶ್ರೀಮಂತನಾಗುವ ಹುಚ್ಚು ಹತ್ತಿಸಿಕೊಂಡಿದ್ದ, ಅದಕ್ಕಾಗಿ ಎಂಥ ಹೀನಕೃತ್ಯಕ್ಕೂ ಇಳಿಯುವುದಕ್ಕೆ ತಯಾರಾಗಿದ್ದ ದ್ವಿವೇದಿ ಸ್ವಲ್ಪ ದಿನಗಳಲ್ಲೇ ಈ ವೇಶ್ಯಾವಾಟಿಕೆ ಜಾಲದ ಸಂಪರ್ಕಕ್ಕೆ ಬಂದ. ಒಂದಿಷ್ಟು ದಿನ ಅಲ್ಲಿ ಕೆಲಸ ಮಾಡಿ ಸೆಕ್ಸ್ ಟ್ರೇಡ್‌ನ ಆಳ-ವಿಸ್ತಾರಗಳನ್ನು ಅರಿತುಕೊಂಡು, ಇಡೀ ಬ್ಯುಸಿನೆಸ್ ಹೇಗೆ ನಡೆಸಬೇಕೆಂಬ ತಂತ್ರಗಳನ್ನೆಲ್ಲಾ ಅರೆದು ಕುಡಿದು ಸ್ವತಂತ್ರವಾಗಿ ಸೆಕ್ಸ್ ರಾಕೆಟ್ ನಡೆಸುವಷ್ಟು ಪಳಗಿದ. ಆಮೇಲೆ ಆ ಮಸಾಜ್ ಪಾರ್ಲರ್‌ಅನ್ನು ಬಿಟ್ಟು ತಾನೇ ಸ್ವಂತವಾಗಿ ಬೇರೊಂದು ಮಸಾಜ್ ಪಾರ್ಲರ್ ತೆರೆದು ಮೊದಲೇ ಇದ್ದ ಸಂಪರ್ಕಗಳನ್ನೆಲ್ಲಾ ಬಳಸಿಕೊಂಡು ಸೆಕ್ಸ್ ಟ್ರೇಡ್ ಶುರುಮಾಡಿದ. ಹೀಗೆ ಕೇವಲ ಎರಡು ಸಾವಿರ ರೂಪಾಯಿ ಸಂಬಳಕ್ಕೆ ದುಡಿಯುತ್ತಿದ್ದ ದ್ವಿವೇದಿ ಸೆಕ್ಸ್ ರಾಕೆಟ್ ಪ್ರಾರಂಭಿಸಿದ ಕೆಲವೇ ವರ್ಷಗಳಲ್ಲಿ ಲಕ್ಷಾಧಿಪತಿಯಾಗಿ ಹೊರಹೊಮ್ಮಿದ. ಕೊನೆಗೂ ದಿಢೀರ್ ಶ್ರೀಮಂತನಾಗಬೇಕೆಂಬ ಆತನ ಬಹುದಿನದ ಕನಸನ್ನು ಹೀಗೆ ಅಡ್ಡದಾರಿ ಹಿಡಿದು ಸಾಧಿಸಿದ್ದ.

ಒಂದು ಸಾರಿ ಅಡ್ಡದಾರಿಯಿಂದ ದುಡ್ಡು ಮಾಡುವ ರುಚಿ ಹತ್ತಿತೆಂದರೆ ಅಷ್ಟು ಸುಲಭವಾಗಿ ಅದರಿಂದ ಹೊರಬರಲು ಸಾಧ್ಯವಿಲ್ಲ ಎಂಬುದಕ್ಕೆ ಈ ದ್ವಿವೇದಿಯೇ ಸಾಕ್ಷಿ. ಈತ ಮಸಾಜ್ ಪಾರ್ಲರ್ ಹೆಸರಿನಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಹುಡುಗಿಯರನ್ನು ಸರಬರಾಜು ಮಾಡುವ ದಂಧೆ ನಡೆಸುತ್ತಿದ್ದು ಪೊಲೀಸರಿಗೂ ಗೊತ್ತಿತ್ತು. ಆದರೆ ಅವರ ಕೈಗಳನ್ನು ಬೆಚ್ಚಗೆ ಮಾಡಿ ಬಾಯ್ಮುಚ್ಚುವ ಕಲೆಯನ್ನೂ ದ್ವಿವೇದಿ ಕರಗತ ಮಾಡಿಕೊಂಡಿದ್ದರಿಂದ ಪೊಲೀಸರ ಬೆಂಗಾವಲಿನಲ್ಲೇ ದಂಧೆ ಮುನ್ನಡೆಯುತ್ತಿತ್ತು. 1997ರಲ್ಲಿ ಪೊಲೀಸರಿಗೂ-ದ್ವಿವೇದಿಗೂ ಕಮೀಷನ್ ಹಂಚಿಕೊಳ್ಳುವ ವಿಚಾರದಲ್ಲಿ ಜಗಳ ಶುರುವಾಗಿ ಕೊನೆಗೆ ಪೊಲೀಸರು ಈತನನ್ನು ಬಂಧಿಸಿ ಕೇಸು ಜಡಿದರು.

ಸೆಕ್ಸ್ ದಂಧೆಯಲ್ಲಿ ಅಗಾಧ ದುಡ್ಡಿರುವುದನ್ನು ನೋಡಿದ್ದ ಆತ ಯಾವುದೇ ಕಾರಣಕ್ಕೂ ಅದನ್ನು ಕೈಬಿಡುವುದಕ್ಕೆ ಸಿದ್ಧನಿರಲಿಲ್ಲ. ಹಾಗಾಗಿ ಈ ಹಳೆಯ ದಂಧೆಯನ್ನೇ ಹೊಸ ಅವತಾರದಲ್ಲಿ ಪ್ರಾರಂಭಿಸುವುದಕ್ಕೆ ತೀರ್ಮಾನಿಸಿದ್ದ. ಆಗ ಆತನ ತಲೆಗೆ ಹೊಳೆದದ್ದು ಸ್ವಾಮಿಯಾಗಿ ಅವತಾರವೆತ್ತಿ ಸೆಕ್ಸ್ ರಾಕೆಟ್ ಮುಂದುವರೆಸುವುದು! ಕೂಡಲೇ ತನ್ನ ಮೂಲ ಹೆಸರನ್ನು ಬದಲಾಯಿಸಿ "ಸಂತ ಸ್ವಾಮಿ ಭೀಮಾನಂದಜಿ ಮಹಾರಾಜ್ ಚಿತ್ರಕೂಟ್ ವಾಲೆ" ಅಂತ ಒಂದು ಕಿಲೋ ಮೀಟರ್ ಉದ್ದದ ಹೆಸರಿಟ್ಟುಕೊಂಡ. ಜೀನ್ಸ್ ಪ್ಯಾಂಟು, ಟೀ ಶರ್ಟ್‌ಗಳನ್ನು ಕಿತ್ತೆಸೆದು ಕಾವಿ ಬಟ್ಟೆ ಹಾಕಿಕೊಂಡ. ತಲೆ ಕೂದಲನ್ನು, ಗಡ್ಡವನ್ನು ಮುಖಮೂತಿ ಕಾಣದಂತೆ ಉದ್ದುದ್ದವಾಗಿ ಬಿಟ್ಟುಕೊಂಡ. ಆಗಲೇ ಸೆಕ್ಸ್ ದಂಧೆಯಲ್ಲೇ ಗಳಿಸಿದ್ದ ಭಾರಿ ದುಡ್ಡನ್ನು ಖರ್ಚು ಮಾಡಿ ಒಂದು ಆಶ್ರಮ ಅಂತ ಕಟ್ಟಿಕೊಂಡ. ತಾನು ಶಿರಡಿ ಸಾಯಿಬಾಬನ ಆಧುನಿಕ ಅವತಾರ ಎಂದು ಹೇಳಿಕೊಂಡು ಪ್ರತಿದಿನ ಧ್ಯಾನ, ಹೋಮ, ಹವನ ಇತ್ಯಾದಿ ಗಿಮಿಕ್‌ಗಳನ್ನು ಶುರುವಿಟ್ಟುಕೊಂಡ. ಈತನ ಪೂರ್ವಾಪರ ಗೊತ್ತಿರದ ಬಹುತೇಕ ಜನರು ನಿಜಕ್ಕೂ ಈತ ಮಹಾನ್ ಸ್ವಾಮಿಯೇ ಎಂದುಕೊಂಡು ಆಶ್ರಮಕ್ಕೆ ಹೋಗಿಬರಲಾರಂಭಿಸಿದರು. ಆಶ್ರಮದ ಅಭಿವೃದ್ಧಿಗೆಂದು ಅವರೆಲ್ಲಾ ಬಹಳಷ್ಟು ದುಡ್ಡು ಕೊಟ್ಟರು. ಅದನ್ನೆಲ್ಲಾ ಬಳಸಿಕೊಂಡ ಈತ 2000ದಲ್ಲಿ ದೆಹಲಿಯಲ್ಲಿ ಒಂದಿಷ್ಟು ಜಾಗ ಕೊಂಡುಕೊಂಡ. 2002ರ ಹೊತ್ತಿಗೆ ಈತನಿಗೆ ಸುಮಾರು ಒಂದು ಲಕ್ಷದಷ್ಟು ಅನುಯಾಯಿಗಳನ್ನು ಸಂಪಾದಿಸಿದ್ದ ಎಂದರೆ ಜನರನ್ನು ಮರುಳು ಮಾಡುವುದಕ್ಕೆ ಈತ ಅದೆಷ್ಟು ಗಿಮಿಕ್ ಮಾಡಿರಬೇಡ, ಏನೆಲ್ಲಾ ತಂತ್ರಕುತಂತ್ರಗಳನ್ನು ನಡೆಸಿರಬೇಡ? ಈ ಭಕ್ತ ಜನಸಾಗರದಿಂದ ಹರಿದು ಬರುತ್ತಿದ್ದ ದುಡ್ಡನ್ನೆಲ್ಲಾ ಸಂಗ್ರಹಿಸಿ 2002ರಲ್ಲಿ ಮತ್ತೆ ಭೂಮಿ ಖರೀದಿಸಿದ. ದೊಡ್ಡದೊಂದು ಸೈಟು ಕೊಂಡುಕೊಂಡು ಅದರಲ್ಲಿ ಹದಿನಾಲ್ಕು ರೂಮುಗಳಿರುವ ಮೂರು ಅಂತಸ್ತಿನ ಬಿಲ್ಡಿಂಗ್, ಒಂದು ದೇವಸ್ಥಾನ ಕಟ್ಟಿದ. ಇಡೀ ಬಿಲ್ಡಿಂಗ್ ಮತ್ತು ದೇವಸ್ಥಾನಕ್ಕೆ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಅದನ್ನು ಈತನೇ ತನ್ನ ರೂಮಿನಿಂದ ಕಂಟ್ರೋಲ್ ಮಾಡುತ್ತಿದ್ದ. ತನ್ನ ಅಸಲೀ ದಂಧೆ ಜನಕ್ಕೆ ಗೊತ್ತಾಗಿ ಅಟಕಾಯಿಸಿಕೊಂಡರೆ ಕಷ್ಟ ಎಂದು ಮುಂಜಾಗ್ರತಾ ಕ್ರಮವಾಗಿ ದೇವಸ್ಥಾನದ ಒಳಗಡೆಯೇ ಒಂದು ಸುರಂಗಮಾರ್ಗವನ್ನೂ ನಿರ್ಮಿಸಿಕೊಂಡಿದ್ದ ಎಂದರೆ ಎಷ್ಟೊಂದು ವ್ಯವಸ್ಥಿತವಾಗಿ ದಂಧೆಯನ್ನು ಪ್ಲಾನ್ ಮಾಡಿದ್ದಿರಬೇಕು? ಇಷ್ಟೇ ಅಲ್ಲದೇ ದಕ್ಷಿಣ ದೆಹಲಿಯ ಹಲವಾರು ಕಡೆ ಫ್ಲಾಟ್‌ಗಳನ್ನು ಖರೀದಿಸಿಟ್ಟುಕೊಂಡಿದ್ದ. ಹೀಗೆ, ಒಂದು ಸೆಕ್ಸ್ ರಾಕೆಟ್ ನಡೆಸುವುದಕ್ಕೆ ಏನೆಲ್ಲಾ ಬೇಕೋ ಅದನ್ನೆಲ್ಲಾ ರೆಡಿ ಮಾಡಿಕೊಂಡು, ಶಿರಡಿ ಸಾಯಿಬಾಬಾನ ಅವತಾರ ಎಂಬ ತನ್ನ ಇಮೇಜಿನ ಕೆಳಗೆ ಅಂತಿಮವಾಗಿ ಹುಡುಗಿಯರನ್ನು ಸಪ್ಲೈ ಮಾಡುವ ಕೆಲಸಕ್ಕೆ ಕೈಯಿಟ್ಟ.





ಬೇರೆ ಬೇರೆ ದೇಶಗಳಿಂದ ದೆಹಲಿಗೆ ಬಂದು ಪಂಚತಾರಾ ಹೋಟೆಲ್‌ಗಳಲ್ಲಿ ಉಳಿಯುತ್ತಿದ್ದ ದೊಡ್ಡ ದೊಡ್ಡ ರಾಜಕಾರಣಿಗಳಿಗೆ, ಬ್ಯುಸಿನೆಸ್‌ಮನ್‌ಗಳಿಗೆ, ಶ್ರೀಮಂತರಿಗೆ, ಪ್ರವಾಸಿಗರಿಗೆ ಕಾಲೇಜು ಹುಡುಗಿಯರನ್ನು, ವಿವಿಧ ವಿಮಾನಯಾನ ಕಂಪೆನಿಗಳಲ್ಲಿ ಕಾರ್ಯ ನಿರ್ವಹಿಸಿದ ಗಗನಸಖಿಯರನ್ನು ಸಪ್ಲೈ ಮಾಡಲಾರಂಭಿಸಿದ. ಇನ್ನೊಂದೆಡೆ ದಕ್ಷಿಣ ದೆಹಲಿಯಲ್ಲಿದ್ದ ಅವನ ಫ್ಲಾಟ್‌ಗಳಿಗೇ ಗಿರಾಕಿಗಳನ್ನು ಕರೆಸಿ ಅವುಗಳನ್ನೆಲ್ಲಾ ವೇಶ್ಯಾವಾಟಿಕೆಯ ಅಡ್ಡೆಗಳನ್ನಾಗಿ ಪರಿವರ್ತಿಸಿದ್ದ. ತಮ್ಮ ಮನೆ, ಕುಟುಂಬಗಳಿಂದ ದೂರವಿದ್ದು ಒಂಟೊಂಟಿಯಾಗಿ ನಗರದಲ್ಲಿ ಉಳಿದುಕೊಂಡಿದ್ದ ಹುಡುಗಿಯರನ್ನು ಪತ್ತೆ ಹಚ್ಚಿ ದಿಢೀರನೇ ದುಡ್ಡು ಮಾಡುವ ಆಸೆ ತೋರಿಸಿ ಅವರನ್ನು ಮೈಮಾರುವ ದಂಧೆಗೆ ಇಳಿಸತೊಡಗಿದ. ಇಂಥ ಹುಡುಗಿಯರನ್ನು ಬುಟ್ಟಿಗೆ ಕೆಡವಿಕೊಳ್ಳಲು ಈತ ಇಂಟರ್‌ನೆಟ್‌ಅನ್ನೂ ವ್ಯಾಪಕವಾಗಿ ಬಳಸುತ್ತಿದ್ದ. ಈತನ ವೇಶ್ಯಾವಾಟಿಕೆ ಜಾಲದಲ್ಲಿ ಕೇವಲ ಭಾರತೀಯ ಹುಡುಗಿಯರು ಮಾತ್ರ ಅಲ್ಲ, ಖಜಕಿಸ್ತಾನ್, ಉಕ್ರೇನ್, ಜಾರ್ಜಿಯ, ಉಜ್ಬೇಕಿಸ್ತಾನ್, ಅಜರ್‌ಬೈಜಾನ್, ಚೆಚನ್ಯಾ ಮುಂತಾದ ವಿದೇಶಿ ಹುಡುಗಿಯರೂ ಇದ್ದಾರೆ. ಕೆಲವೇ ವರ್ಷಗಳಲ್ಲಿ ಈತ ಅದ್ಯಾವ ಮಟ್ಟದ ಸೆಕ್ಸ್ ರಾಕೆಟ್ ದಂಧೆಯ ಜಾಲವನ್ನು ಕಟ್ಟಿದ ಎಂದರೆ ಪ್ರತಿ ದಿನ ಕನಿಷ್ಠ 200 ಹುಡುಗಿಯರನ್ನು ಈತ ವಿವಿಧ ಪಂಚತಾರಾ ಹೋಟೆಲ್‌ಗಳಿಗೆ ಸಪ್ಲೈ ಮಾಡು ತ್ತಿದ್ದ ಎಂದು ಆತನನ್ನು ಬಂಧಿಸಿ ವಿಚಾರಣೆ ನಡೆಸುತ್ತಿರುವ ಪೊಲೀಸರು ಹೇಳುತ್ತಾರೆ! ಕೇವಲ ದೆಹಲಿಯ ಸಿ.ಆರ್. ಪಾರ್ಕ್, ಆರ್.ಕೆ.ಪುರಂ, ಭಿಕಾಜಿ ಕಾಮಾ ಪ್ಲೇಸ್ (ಮೊಹ್ಮದ್‌ಪೂರ್), ಸಫ್ದರ್‌ಗಂಜ್, ಜವಾಹರ್ ಪಾರ್ಕ್ ಮುಂತಾದ ಏರಿಯಾಗಳಲ್ಲಿ ಮಾತ್ರವಲ್ಲದೇ ಈತ ಉತ್ತರಪ್ರದೇಶದ ವಿವಿಧ ಭಾಗಗಳಲ್ಲೂ ತನ್ನ ಜಾಲವನ್ನು ವಿಸ್ತರಿಸಿದ್ದನೆಂಬುದು, ಇವನ ಜೊತೆ ಆಡಳಿತಾರೂಢ ಬಿಎಸ್‌ಪಿ ನಾಯಕರೂ ಕೈಜೋಡಿಸಿರುವುದು ಇತ್ತೀಚಿನ ವಿಚಾರಣೆಯಿಂದ ಹೊರಬೀಳುತ್ತಿದೆ. ಈತ ಹಲವು ವರ್ಷಗಳ ಕಾಲ ನಿರಂತರವಾಗಿ ಈ ದಂಧೆಯಲ್ಲಿ ನಿರತನಾಗಿದ್ದರೂ ಯಾರಿಗೂ ಅನುಮಾನ ಬಾರದಂತೆ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದ.

ಕೊನೆಗೆ ದೆಹಲಿ ಪೊಲೀಸರು ಅದ್ಹೇಗೆ ವಾಸನೆ ಹಿಡಿದರೋ ಗೊತ್ತಿಲ್ಲ, ಆತನನ್ನು ಎತ್ತಾಕಿಕೊಂಡು ಹೋಗಿ ಲಾಕಪ್ಪಿನಲ್ಲಿ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ. ಪೊಲೀಸರ ಪ್ರಕಾರ ಈ ಹೊತ್ತು ಶಿವಮೂರ್ತಿ ದ್ವಿವೇದಿ ಅಲಿಯಾಸ್ ಸಂತ ಸ್ವಾಮಿ ಭೀಮಾನಂದಜಿ ಮಹಾರಾಜ್ ಚಿತ್ರಕೂಟ್ ವಾಲೆ ಏನಿಲ್ಲವೆಂದರೂ ನೂರಾರು ಕೋಟಿಗೆ ತೂಗುತ್ತಾನೆ! ಚಿತ್ರಕೂಟ್‌ನಲ್ಲೇ ಆತನಿಗೆ ಇಪ್ಪತ್ತು ಎಕರೆ ಜಮೀನಿದ್ದು ಅದರಲ್ಲೀಗ ಒಂದು ಬೃಹತ್ ಆಸ್ಪತ್ರೆ ಮತ್ತು ಮಂದಿರವನ್ನು ಕಟ್ಟುತ್ತಿದ್ದ. ಅಸಲಿಗೆ ಅದನ್ನೂ ವೇಶ್ಯಾವಾಟಿಕೆಯ ಜಾಲದ ವಿಸ್ತರಣೆಯ ಭಾಗವಾಗಿಯೇ ಕಟ್ಟುತ್ತಿದ್ದ ಅಂತ ಕಾಣುತ್ತೆ. ಆದರೆ ಅದು ಕೈಗೂಡುವಷ್ಟರಲ್ಲಿ ಪೊಲೀಸರ ಅತಿಥಿಯಾಗಿ ಕಂಬಿ ಎಣಿಸುತ್ತಿದ್ದಾನೆ.

ಇಂಥ ಒಬ್ಬ ಕಾವಿ ಧಾರಿ ಯಾರಿಗೂ ಅನುಮಾನ ಬಾರದಂತೆ ಇಷ್ಟು ವರ್ಷಗಳಿಂದ ಸೆಕ್ಸ್ ರಾಕೆಟ್ ನಡೆಸು' ಎಂಬುದು, ತನ್ನ ಶಿರಡಿ ಸಾಯಿಬಾಬನ ಅವತಾರದ ದಂಧೆ ನಡೆಸುತ್ತಲೇ ಒಂದು ಲಕ್ಷಕ್ಕೂ ... ಅನುಯಾಯಿಗಳನ್ನು ಹೊಂದಿದ್ದ ಎಂಬುದು ನಿಜ ... ಆಶ್ಚರ್ಯದ ವಿಚಾರವೇ.

ಸಲ್ಮಾನ್ ರಶ್ದಿಯನ್ನು ಬಿಟ್ಟರೆ ಇತ್ತೀಚಿನ ದಿನಗಳ ಅತ್ಯಂತ ವಿವಾದಾಸ್ಪದ ಲೇಖಕಿ ತಸ್ಲೀಮಾ ನಸ್ರೀನ್. ಮುಸ್ಲಿಮ್ ಮಹಿಳೆಯರ ಮೇಲೆ ಹೇರಲಾಗಿರುವ ಪರ್ದಾ ಪದ್ಧತಿಯ ಬಗ್ಗೆ 2007ರಲ್ಲಿ ಆಕೆ ಬರೆದ ಬರಹವೊಂದರ ಅತ್ಯಂತ ಬೇಜವಾಬ್ದಾರಿ ಅನುವಾದವನ್ನು ಅಷ್ಟೇ ಕುಚೇಷ್ಟೆಯಿಂದ ಕನ್ನಡಪ್ರಭ ತನ್ನ ಸಾಪ್ತಾಹಿಕದಲ್ಲಿ ಪ್ರಕಟಿಸಿದ್ದರಿಂದ ಇಡೀ ಕರ್ನಾಟಕ ಹೊತ್ತಿ ಉರಿದಿದೆ. ಈಗ ಆ ಬೆಂಕಿ ಮೇಲ್ನೋಟಕ್ಕೆ ನಿಧಾನವಾಗಿ ಆರುತ್ತಾ ಬಂದಿದ್ದರೂ ಒಳಗೆ ಸಮಾಜವನ್ನೇ ಭಸ್ಮ ಮಾಡಬಲ್ಲ ಕೆಂಡವನ್ನು ಹಾಗೆಯೇ ಉಳಿಸಿಕೊಂಡಿದೆ.

ಧರೆ ಹೊತ್ತಿ ಉರಿದ ಮೇಲೆ ಈಗ ಎಂದಿನಂತೆ "ಹಿಂಸಾಚಾರವನ್ನು ಖಂಡಿಸುತ್ತೇವೆ" ಎಂಬ ಹೇಳಿಕೆಗಳನ್ನು ನೀಡಲಾಗುತ್ತಿದೆ. ಅಲ್ಲದೇ ನಿರೀಕ್ಷೆಯಂತೆ ಇದು ಮುಸ್ಲಿಮರ ಬಗ್ಗೆ ಸಮಾಜದಲ್ಲಿ ಇರುವ ನಕಾರಾತ್ಮಕ ಅಭಿಪ್ರಾಯ ಮತ್ತು ಪೂರ್ವಾಗ್ರಹಗಳನ್ನು ಹೆಚ್ಚಿಸಿದೆ. ಮಾಧ್ಯಮಗಳು, ಬಿಜೆಪಿ ಪ್ರಭುತ್ವ ಮತ್ತು ಸಂಘಪರಿವಾರ ಈ ಅಭಿಪ್ರಾಯ ಗಟ್ಟಿಗೊಳ್ಳಲು ಏನು ಬೇಕೋ ಅದೆಲ್ಲವನ್ನೂ ಮಾಡುತ್ತಿದ್ದರೆ ಮುಸ್ಲಿಂ ಸಮುದಾಯದ ಬೇಜವಾಬ್ದಾರಿ ಮತ್ತು ಅವಕಾಶವಾದಿ ನಾಯಕತ್ವ ಅದಕ್ಕೆ ಬೇಕಾದ ಸಾಮಗ್ರಿಯನ್ನು ಒದಗಿಸಿಕೊಡುತ್ತಿದೆ. ಆದರೆ ಇಂಥಾ ಅರ್ಥಸತ್ತ ಹೇಳಿಕೆಗಳನ್ನು ಗಲಭೆ ಮಾಡಿದವರು ಮತ್ತು ಸಂತ್ರಸ್ತರು ಇಬ್ಬರೂ ಕೊಡಬಹುದಾದ ಸಂದರ್ಭವನ್ನು ಶಿವಮೊಗ್ಗದ ಗಲಭೆಗಳು ಸೃಷ್ಟಿಸಿದೆ. ಇದಕ್ಕೆ

ತಸ್ಲೀಮಾ ನಸ್ರೀನ್ ಲೇಖನ: ವಿಮರ್ಶೆಗಳು ಅವಹೇಳನವಾಗಿ ಕೇಳುವ ಸಂದರ್ಭದ ಕುರಿತು...

ಮುಖ್ಯ ಕಾರಣ ಪ್ರಾರಂಭದಲ್ಲಿ ಗಲಭೆಗೆ ಕಾರಣರಾದವರು ಕೋಪೋದ್ರಿಕ್ತ ಮತ್ತು ಅರಾಜಕ ಮುಸ್ಲಿಂ ಯುವಕ ಸಮುದಾಯವೇ ಆಗಿರುವುದು. ಆದರೆ ಈ "ಹಿಂಸಾಚಾರ" ಅಂದರೆ ಏನು ಎಂದು ಸರಿಯಾಗಿ ಅರ್ಥೈಸಬೇಕು. ಏಕೆಂದರೆ ಈವರೆಗೆ ಮಾಧ್ಯಮಗಳು ಮುಸ್ಲಿಮ್ ಗುಂಪು ಮಾಡಿದ ದೊಂಬಿಯನ್ನು ಮಾತ್ರ ಹಿಂಸಾಚಾರ ಬಣ್ಣಿಸುತ್ತಿದೆಯೇ ಹೊರತು ಸಂಜೆಯ ನಂತರ ಸಂಘಪರಿವಾರ ವಾಹನಗಳಿಗೆ ಹಚ್ಚಿದ ಬೆಂಕಿಯನ್ನು, ಪೊಲೀಸರ ಜೊತೆ ಸೇರಿ ಮಾಡಿದ ಲೂಟಿಯನ್ನು, ಪೊಲೀಸ್ ಗೋಲಿಬಾರನ್ನು, ಚೂರಿ ಇರಿತಗಳನ್ನು ಮತ್ತು ಮಾರನೇ ದಿನದಿಂದ ಕರ್ಫ್ಯೂ ಹೆಸರಲ್ಲಿ ಶಿವಮೊಗ್ಗದಲ್ಲಿ ಮುಸ್ಲಿಮರ ವಿರುದ್ಧ ನಡೆಯುತ್ತಿರುವ ಪೊಲೀಸ್ ಕಿರುಕುಳವನ್ನು "ಹಿಂಸಾಚಾರ" ಎಂದು ಕರೆಯುವುದೇ ಇಲ್ಲ. ಮಾಮೂಲಿಯಾಗಿ ಈ ದೇಶದಲ್ಲಿ ಅಲ್ಪಸಂಖ್ಯಾತರನ್ನು ಸದೆಬಡಿಯುವ "ಹಿಂಸಾಚಾರ"ಗಳೆಲ್ಲಾ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ತೆಗೆದುಕೊಳ್ಳುವ ಕ್ರಮಗಳಾಗಿ ಬಿಡುತ್ತವೆ.



ಆದರೆ ಅಷ್ಟೇ ಮುಖ್ಯವಾದ ಪ್ರಶ್ನೆ ಏನೆಂದರೆ ಹಿಂಸಾಚಾರಗಳನ್ನು ಹುಟ್ಟುಹಾಕುವ ಸಂದರ್ಭಗಳು ಎಂಥವು ಎಂಬುದು. ಈ ಸಂದರ್ಭವನ್ನು ನಿಯಂತ್ರಿಸುವ ಸೂತ್ರಧಾರಿಗಳ್ಯಾರು? ಈ ಸೂತ್ರಗಳ ನಿರ್ದೇಶನಕ್ಕೆ ತಕ್ಕಂತೆ ತಮಗೆ ಗೊತ್ತಿಲ್ಲದಂತೆ ತಾಳಹಾಕಿಬಿಡುವ ಪಾತ್ರಧಾರಿಗಳಾವುವು? ಇವನ್ನು ಅರ್ಥಮಾಡಿಕೊಳ್ಳದಿದ್ದರೆ "ಆಟ್ಟದಿಂದ ಬಿದ್ದವರನ್ನೇ ದಡಿ ತೆಗೆದುಕೊಂಡು ಬಡಿದರು" ಎಂಬಂತಾಗುತ್ತದೆ. ಈಗ ಶಿವಮೊಗ್ಗದಲ್ಲಿ ಆಗಿರುವುದಾದರೂ ಇಷ್ಟೇ! ಸರ್ಕಾರ ಮತ್ತು ಮಾಧ್ಯಮಗಳು ಮತ್ತು ಸಂಘಟನೆಗಳು ಸಹ ಮೇಲ್ನೋಟಕ್ಕೆ ಕಾಣುವ ಪಾತ್ರಧಾರಿಗಳನ್ನು ಖಂಡಿಸಿ ಕೈತೊಳೆದುಕೊಳ್ಳುತ್ತಿವೆಯೇ ವಿನಃ ಇದಕ್ಕೆ ಕಾರಣವಾದ ಸಂದರ್ಭದ ವಿಶ್ಲೇಷಣೆಗೆ ಹೋಗುತ್ತಿಲ್ಲ. (ಇತ್ತೀಚೆಗೆ ಪ್ರಜಾವಾಣಿಯಲ್ಲಿ ಇದರ ಬಗ್ಗೆ ಬರೆಯಲಾದ ಸಂಪಾದಕೀಯವೊಂದನ್ನು ಹೊರತುಪಡಿಸಿ!)

ತಸ್ಲೀಮಾಳ ಲೇಖನದೊಳಗೆ ಏನಿತ್ತು ಏನಿಲ್ಲ ಎನ್ನುವುದಕ್ಕಿಂತ ಈ ಸಂದರ್ಭ ತಸ್ಲೀಮಾಳ ಲೇಖನದಲ್ಲಿ ಯಾವ ಅರ್ಥವನ್ನು ಹೊರಡಿಸಿತು ಎಂಬುದೇ ಅತಿಮುಖ್ಯವಾದ ವಿಷಯವಾಗಿದೆ. ಹೀಗಾಗಿಯೇ ತಸ್ಲೀಮಾ ಎಂಬ ಲೇಖಕಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಕೋನದಿಂದ ಇಡೀ ಪ್ರಕರಣವನ್ನು ವಿಶ್ಲೇಷಿಸಿ ಮುಸ್ಲಿಂ ಜನಾಂಗದ ಪ್ರತಿಕ್ರಿಯೆಯನ್ನು ಖಂಡಿಸಿ, ಕೈತೊಳೆದುಕೊಳ್ಳುವುದು ಪ್ರಗತಿಪರರಿಗೆ ಸುಲಭವಾದ ಕೆಲಸವೇ. "ದಿ ಹಿಂದೂ"ದಂಥ ಪ್ರಗತಿಪರ ಪತ್ರಿಕೆಯೂ ಸಹ ಮುಸ್ಲಿಂ ಜನಾಂಗದ ವಿವೇಚನಾರಹಿತ ಪ್ರತಿಕ್ರಿಯೆಯನ್ನು ಖಂಡಿಸುವುದಕ್ಕೆ ಮಾತ್ರ ತನ್ನ ವಿಶ್ಲೇಷಣೆಯನ್ನು ಸೀಮಿತಗೊಳಿಸಿ ಲೇಖಕಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಭಾರತ ಪ್ರಭುತ್ವ ರಕ್ಷಿಸಬೇಕಿದ್ದು ಆದ್ಯ ಕರ್ತವ್ಯವೆಂದು ಹೇಳಿದೆ. ಇದರಲ್ಲಿ ಮುಸ್ಲಿಮ್ ಸಮುದಾಯ ಮತ್ತು ನಾಯಕತ್ವ ಅರ್ಥಮಾಡಿಕೊಳ್ಳಲೇಬೇಕಾದ ಅಂಶವಿದೆ. ಒಂದು ಸಮುದಾಯ ಮತ್ತದರ ನಾಯಕತ್ವ ಅದರ ಧಾರ್ಮಿಕ ನಂಬಿಕೆಗಳ ಬಗ್ಗೆ ಆಚಾರವಿಚಾರಗಳ ಬಗ್ಗೆ ಬರುವ ವಿಮರ್ಶೆಗೆ ಮುಕ್ತವಾಗಿದ್ದರೆ ಮಾತ್ರ ಅದು ಜೀವಪರವಾಗುತ್ತದೆ. ಇನ್ನೂ ಹೆಚ್ಚು "ಮಾನವೀಯ"ಗೊಳ್ಳುತ್ತದೆ. ಹಾಗೆ ನೋಡಿದರೆ ಬ್ರಾಹ್ಮಣ ಧರ್ಮ ಮೂಲಭೂತ ಅಸಮಾನತೆ ಇತ್ಯಾದಿಗಳನ್ನು ಬೋಧಿಸಿದ್ದರೆ ಇಸ್ಲಾಮ್ ಮತ್ತು ಕ್ರಿಶ್ಚಿಯಾನಿಟಿ ಮೂಲಭೂತವಾಗಿ ಮನುಷ್ಯ ಪ್ರೀತಿಯನ್ನು ಆಧರಿಸಿ ಹುಟ್ಟಿಕೊಂಡವು. ಆದರೆ ಕ್ರಮೇಣ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮಗಳ ಧಾರ್ಮಿಕ ನಾಯಕತ್ವ ಅತ್ಯಂತ ಆಸ್ತಿಕ ಕಾರಣಗಳಿಗಾಗಿ ಅದರಲ್ಲಿನ ಜೀವಪ್ರೀತಿಯನ್ನು ಕೊಂದು ಕಾಲಕಾಲಕ್ಕೆ ತಮ್ಮ ವರ್ಗದ ಹಿತಾಸಕ್ತಿಗೆ ಬೇಕಾದಂತೆ ಧರ್ಮದ ಮರುವ್ಯಾಖ್ಯಾನ ಮಾಡಿಕೊಳ್ಳುತ್ತಾ ಬಂದಿತು. ಹೀಗಾಗಿಯೇ ಜೀವಪ್ರೀತಿಯ ಮತ್ತು ಅಮೂರ್ತ ಅಸಮಾನತೆಯ ಆಶಯದೊಂದಿಗೆ ಹುಟ್ಟಿದ ಇಸ್ಲಾಮ್ ಅನುಯಾಯಿಗಳಲ್ಲೂ ಅಪಾರ ಅಸಮಾನತೆ ಇದೆ. ಬಡ್ಡಿ ವ್ಯಾಪಾರದ ವಿರೋಧ, ಜಕಾತ್ ಎಂಬ ದಾನಪ್ರೇರಣೆಯಂತಹ ಅಂಶಗಳು ಉಳಿದುಕೊಂಡಿದ್ದರೂ ಮುಸ್ಲಿಮರ ನಡುವೆಯೂ ಹಿಂದೂ ಧರ್ಮೀಯರ ನಡುವೆ ಇರುವ ಬಡವ-ಶ್ರೀಮಂತ, ಕೆಳಜಾತಿ-ಮೇಲ್ಜಾತಿ, ಹೆಣ್ಣು-ಗಂಡು ಎಂಬ ತಾರತಮ್ಯಗಳು ತಾಂಡವವಾಡುತ್ತಿವೆ. ಬುರ್ಖಾ ಪದ್ಧತಿ ಆ ನಿಟ್ಟಿನಲ್ಲಿ ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸಲು ಮುಸ್ಲಿಮ್ ಗಂಡಸರು ಬಳಸುತ್ತಿರುವ ಆಯುಧ ಎನ್ನುವುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಮುಸ್ಲಿಂ ನಾಯಕತ್ವ ಮತ್ತು ಸಮುದಾಯ ತನ್ನ ನಂಬಿಕೆಗಳ ಬಗ್ಗೆ ನಡೆಯುವ ವಿಮರ್ಶೆ ಮತ್ತು ಅವಹೇಳನದ ನಡುವೆ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವಷ್ಟು ಪ್ರಬುದ್ಧತೆಯನ್ನೂ ತೋರಬೇಕು.

ಆದರೆ ಹಿಂದೂತ್ವ ಶಕ್ತಿಗಳು ವಿಜೃಂಭಿಸುತ್ತಿರುವ ಈ ಹೊತ್ತಿನಲ್ಲಿ ಮುಸ್ಲಿಮರನ್ನು ದಮನ ಮಾಡಬೇಕೆಂಬ ಉದ್ದೇಶದಿಂದ ಮಾಡುವ ಅವಹೇಳನಗಳೆಲ್ಲಕ್ಕೂ ವಿಮರ್ಶೆಯ ಮುಖವಾಡವೇ ಇರುತ್ತದೆ ಎಂಬುದೂ ಕಟುವಾಸ್ತವ. ಉದಾಹರಣೆಗೆ ಎಸ್.ಎಲ್ ಭೈರಪ್ಪನವರ "ಆವರಣ" ಕಾದಂಬರಿ ಮುಸ್ಲಿಂ ಸಮುದಾಯಗಳಲ್ಲಿನ ಕಟ್ಟರ್ ಪಂಥೀಯತೆಯ ಬಗ್ಗೆ ಮಾಡುವ ವಿಮರ್ಶೆಯಲ್ಲಿ ಕಾಲುಭಾಗವನ್ನು ಹಿಂದೂ ಸಮುದಾಯದಲ್ಲಿರುವ ಮೂಢನಂಬಿಕೆ, ಕಟ್ಟುಪಾಡುಗಳ ಬಗ್ಗೆ ಮಾಡುವುದಿಲ್ಲ. ಮುಸ್ಲಿಂ ಧಾರ್ಮಿಕ ನಂಬಿಕೆಯಲ್ಲಿನ ಅತಾರ್ಕಿಕತೆಯನ್ನು ಬಯಲುಗೊಳಿಸಲು ಆಧುನಿಕ ವಿಜ್ಞಾನದ ಮೊರೆಹೋಗುವ ಎಸ್ಸೆಲ್ ಭೈರಪ್ಪ ಹಿಂದೂ ಧಾರ್ಮಿಕ ಕಂದಾಚಾರವನ್ನು ಮಾತ್ರ ಶ್ರದ್ಧೆಯ ವಿಷಯವೆಂದು ವೈಜ್ಞಾನಿಕ ವಿಶ್ಲೇಷಣೆಯ ಹೊರಗೇ ಉಳಿಸುತ್ತಾರೆ ಮತ್ತು ಈ ವಿಮರ್ಶೆಗಳೆಲ್ಲವೂ ಮುಸ್ಲಿಮರು ಕ್ರೂರ, ಅನಾಗರಿಕ, ದಾಳಿಕೋರರು ಎಂದು ಅವಹೇಳನ ಮಾಡಲೆಂದೇ ಮಾಡಲಾಗಿದೆಯೇ ಹೊರತು ವಿಮರ್ಶೆಗಲ್ಲ.



ತಸ್ಲೀಮಾ ನಸ್ರೀನ್

ಇದು ಕೇವಲ ಅಪವಾದವಲ್ಲ. ಹಿಂದೂತ್ವವಾದಿ ಫ್ಯಾಸಿಸ್ಟ್ ಶಕ್ತಿಗಳು ದೇಶದೆಲ್ಲೆಡೆ ಮುಸ್ಲಿಮರ ಧಾರ್ಮಿಕ ನಂಬಿಕೆಯನ್ನು ಅವಹೇಳನ ಮಾಡಲು ಮತ್ತು ತುಚ್ಛೀಕರಿಸಲು ನಾಗರಿಕ ಸಮಾಜದಲ್ಲಿ ಅವರ ಬಗ್ಗೆ ಪೂರ್ವಗ್ರಹಗಳನ್ನು ಸೃಷ್ಟಿಸಲು ಮುಸ್ಲಿಮ್ ಸಮುದಾಯದ ಕಂದಾಚಾರಗಳ ಬಗ್ಗೆ ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡುತ್ತಾರೆ. ಅದಕ್ಕಾಗಿಯೇ ತಮ್ಮ ಧರ್ಮದ ಕಂದಾಚಾರಗಳನ್ನು ಪ್ರತಿಭಟಿಸುವವರ ಮೇಲೆ ಎಗರಿಬೀಳುವ, ಕೊಲ್ಲುವ ಈ ಹಿಂದೂತ್ವವಾದಿಗಳೇ ಸಲ್ಮಾನ್ ರಶ್ದಿ ಪೈಗಂಬರ್ ಅನ್ನು ವಿಮರ್ಶಿಸಿದ ಎನ್ನುವ ಕಾರಣಕ್ಕೆ ಆತನ ಬೆಂಬಲಕ್ಕೆ ನಿಲ್ಲುತ್ತಾರೆ. ತಸ್ಲೀಮಾ ನಸ್ರೀನ್ ತನ್ನ ಕಾದಂಬರಿಯಲ್ಲಿ ಖುರಾನ್ ಮತ್ತು ಮುಸ್ಲಿಂ ಸಮಾಜದ ಕಂದಾಚಾರಗಳನ್ನು ಖಂಡತುಂಡವಾಗಿ ಖಂಡಿಸುತ್ತಾಳೆ ಎಂಬ ಕಾರಣಕ್ಕೆ ಆಕೆಗೆ ಭಾರತದಲ್ಲಿ ವಾಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಶಿಫಾರಸ್ಸು ಮಾಡಿದ್ದರು. ಆದರೆ ಆಕೆ ಹಿಂದೂ ಧರ್ಮದ ಕಂದಾಚಾರವನ್ನು ವಿಮರ್ಶಿಸುವ ದೀಪಾ ಮೆಹ್ತಾರ "ವಾಟರ್" ಚಿತ್ರಕ್ಕೆ ಬೆಂಬಲ ನೀಡಿದೊಡನೆ ಆಕೆ ಭಾರತ ಬಿಟ್ಟುಹೋಗಬೇಕೆಂದು ಬೀದಿಬೀದಿಗಳಲ್ಲಿ ಪ್ರತಿಭಟನೆ ಪ್ರಾರಂಭಿಸಿದ್ದರು.

ಹೀಗೆ ಮುಸ್ಲಿಂ ಸಮುದಾಯದ ಮೇಲಿನ ವಿಮರ್ಶೆಗಳನ್ನು ಆ ಸಮುದಾಯದ ಅವಹೇಳನೆಯ ಮತ್ತು ತುಚ್ಛೀಕರಣದ ಕೇಸರಿ ಅಜೆಂಡಾಗಳಿಗಾಗಿಯೇ ಬಳಕೆ ಮಾಡುತ್ತಿರುವ ಸಂದರ್ಭವಿದು. ಶಿವಮೊಗ್ಗೆಯಲ್ಲೂ ಕರ್ನಾಟಕದಲ್ಲೂ ಇರುವುದು ಇದೇ ರೀತಿಯ ಸಂದರ್ಭ. ಶಿವಮೊಗ್ಗ ಮತ್ತು ಕರಾವಳಿ ಸಂಘಪರಿವಾರದ ದ್ವೇಷ ರಾಜಕಾರಣದ ಪ್ರಮುಖ ಕ್ಷೇತ್ರಗಳು. ಮುಸ್ಲಿಮರನ್ನು ಹೀಯಾಳಿಸುವ ಯಾವ ಸ್ಥಳೀಯ ಅಥವಾ ರಾಜ್ಯಮಟ್ಟದ ಸಂದರ್ಭವನ್ನೂ ಅವರು ಕೈಜಾರಲು ಬಿಟ್ಟವರಲ್ಲ ಅಲ್ಲದೆ ಇದೇ ಮಾರ್ಚ್ 8ಕ್ಕೆ ಶಿವಮೊಗ್ಗದಲ್ಲಿ ಭಜರಂಗದಳದ ರಜತಮಹೋತ್ಸವ ನಡೆಯಲಿದೆ. ಈ ಸಂದರ್ಭವನ್ನು ಬಳಸಿಕೊಂಡು ಹಿಂದೂತ್ವವಾದಿಗಳು ನಡೆಸುತ್ತಿರುವ ಅಬ್ಬರ ಮುಸ್ಲಿಮರಲ್ಲಿ ತೀವ್ರವಾದ ಆತಂಕ ಮೂಡಿಸಿದೆ. ಈ ಸಂದರ್ಭದಲ್ಲಿ ಪ್ರವಾದಿ ಪೈಗಂಬರ್ ಅವರನ್ನು ಅವಹೇಳನ ಮಾಡುವ ಲೇಖನ ಪ್ರಕಟವಾಗಿದೆ ಯೆಂಬ ಸುದ್ದಿ ಸಹಜವಾಗಿಯೇ ವಿವೇಚನಾ ರಹಿತ ಪ್ರತಿಕ್ರಿಯೆಗಳಿಗೆ ಕಾರಣವಾಯಿತು.



ಅದಕ್ಕೆ ಪೂರಕ ಪ್ರಚೋದನೆ ನೀಡಿ ಸಮುದಾಯವನ್ನು ತಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುವ ಮುಸ್ಲಿಂ ರಾಜಕಾರಣಿಗಳು ಮತ್ತು ಧಾರ್ಮಿಕ ನಾಯಕತ್ವದ ಪಾತ್ರವೂ ಇದರಲ್ಲಿದೆ. ಆದರೆ ಸಮುದಾಯ ಹೊರಗಿನಿಂದ ಶೋಷಣೆ ಮತ್ತು ದಮನಕ್ಕೊಳಗಾದಾಗ ಒಳಗಿನ ಶೋಷಕರು ಸಹಜವಾಗಿಯೇ



ಕಾಣಬರುವುದಿಲ್ಲ. ಹೀಗಾಗಿ ಆ ಸಮುದಾಯದ ಸಾಮಾನ್ಯರು ಹೊರಗಿನ ಶತ್ರುಗಳಿಂದ ಪ್ರತ್ಯಕ್ಷವಾಗಿಯೂ, ಒಳಗಿನ ಶತ್ರುಗಳಿಂದ ಪರೋಕ್ಷವಾಗಿಯೂ ಎರಡೆರಡು ಶೋಷಣೆಗೊಳಗಾಗುತ್ತಾರೆ. ಹಿಂದೂತ್ವವಾದಿ ರಾಜಕಾರಣ ಮುಸ್ಲಿಂ ಸಮುದಾಯದೊಳಗಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾನ್ಯತೆಯನ್ನು ತಂದುಕೊಟ್ಟು ಅವು ತಮ್ಮೊಳಗೇ ಸಂಕುಚಿತವಾಗುವಂತೆ ಮಾಡುತ್ತದೆ. ಹೀಗಾಗಿ ತಸ್ಲೀಮಾರ ಲೇಖನದಂಥ ಪ್ರಕರಣಗಳು ಹಿಂದೂತ್ವವಾದಿ ರಾಜಕಾರಣಕ್ಕೂ, ಮುಸ್ಲಿಂ ಧಾರ್ಮಿಕ ಮೂಲಭೂತವಾದಿ ರಾಜಕಾರಣಕ್ಕೂ ಏಕಕಾಲದಲ್ಲಿ ಹೊಸಜೀವ ತುಂಬಿಕೊಡುತ್ತದೆ.

ಹೀಗೆ ಒಬ್ಬ ಲೇಖಕಳ ಉದ್ದೇಶ ವಿಮರ್ಶೆಯೇ ಆಗಿದ್ದರೂ ಸಮುದಾಯ ಇರುವ ಸಂದರ್ಭ ಅದಕ್ಕೆ ಬೇರೆಯೇ ಅರ್ಥಕೊಡುತ್ತದೆ. ಹೀಗಾಗಿಯೇ ವಿಮರ್ಶೆಯ ಮಾತುಗಳು ಮುಸ್ಲಿಂ ಸಮುದಾಯಕ್ಕೆ ಅವಹೇಳನೆಯ ದೂಷಣೆಯಾಗಿ ಕೇಳಿಬಂದರೆ ಅದಕ್ಕೆ ವಿಮರ್ಶೆ ಮಾಡಿದವರೂ ಕಾರಣರಲ್ಲ, ಮುಸ್ಲಿಂ ಸಮುದಾಯವೂ ಕಾರಣರಲ್ಲ. ಅದಕ್ಕೆ ಹಿಂದೂತ್ವವಾದಿ ಫ್ಯಾಸಿಸ್ಟರು ಸೃಷ್ಟಿಸಿರುವ ಸಂದರ್ಭವೇ ಕಾರಣ. ಆದ್ದರಿಂದಲೇ ಮುಸ್ಲಿಂ ಸಮುದಾಯದೊಳಗಿನ ಸಾಹಿತಿ ಮತ್ತು ಬುದ್ಧಿಜೀವಿಗಳಿಗೆ ಇದು ಇನ್ನೂ ಹೆಚ್ಚಿನ ಜವಾಬ್ದಾರಿಯ ಹೊರೆಯನ್ನು ಹೊರಿಸುತ್ತದೆ. ಇದು ಈ ಪ್ರಕರಣ ಹುಟ್ಟುಹಾಕುವ ಮತ್ತೊಂದು ದ್ವಂದ್ವಕ್ಕೆ ನಮ್ಮನ್ನು ಎಳೆದೊಯ್ಯುತ್ತದೆ. ಅದು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ. ಅದು ನಮ್ಮ ಮೂಲಭೂತ ಹಕ್ಕು ಇತ್ಯಾದಿ. ಅವೆಲ್ಲವೂ ಸರಿಯೇ. ಸಮುದಾಯದ ನಂಬಿಕೆಯ ಹೆಸರಲ್ಲಿ ಅದರ ಬಗೆಗಿನ ವಿಮರ್ಶೆಯನ್ನು ಹತ್ತಿಕ್ಕುವ ಪಟ್ಟಭದ್ರ ರಾಜಕಾರಣ ಮುಸ್ಲಿಂ ನಾಯಕರಲ್ಲಿ ಬಲವಾಗಿಯೇ ಬೇರುಬಿಟ್ಟಿದೆ. ಮುಸ್ಲಿಮ್ ಧಾರ್ಮಿಕ ಮತ್ತು ರಾಜಕೀಯ ನಾಯಕರು ತಸ್ಲೀಮಾ ಕೇಳುವ ಪ್ರಶ್ನೆಯನ್ನು ಸಮುದಾಯ ಕೇಳಬಾರದೆಂಬುದನ್ನೇ ಬಯಸುತ್ತಾರೆ. ಆದ್ದರಿಂದಲೇ ಪರ್ದಾ ಬಗ್ಗೆ ಆಕೆ ಎತ್ತಿದ ಪ್ರಶ್ನೆಗಿಂತ ಪ್ರವಾದಿಯ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಆಡಲಾಗಿದೆ ಎಂಬ ವಿಷಯವನ್ನು ಭಾವನಾತ್ಮಕಗೊಳಿಸಿ ಪ್ರಶ್ನೆ ಕೇಳಿದವರನ್ನೇ ಹತ್ತಿಕ್ಕುವ ರಾಜಕಾರಣ ಮಾಡುತ್ತಾರೆ. ಇದು ಕೂಡಾ ಮುಸ್ಲಿಮ್ ಲೇಖಕ-ಲೇಖಕಿಯರು ಎದುರಿಸುತ್ತಿರುವ ದೊಡ್ಡ ಸವಾಲು. ಸಮುದಾಯದಿಂದ ದೂರವಾಗದೆ ಹತ್ತಿರದಲ್ಲಿದ್ದುಕೊಂಡೇ ಅವರ ಹಿತದೃಷ್ಟಿಯಿಂದ ಈ ಪ್ರಶ್ನೆಗಳನ್ನು ಎತ್ತುತ್ತಾ ಇಡೀ ಸಮುದಾಯವನ್ನು ಪ್ರಗತಿಪರ ಹಾದಿಯಲ್ಲಿ ಮುನ್ನಡೆಸುವ ಸಾಮಾಜಿಕ, ಧಾರ್ಮಿಕ, ರಾಜಕೀಯ ನಾಯಕತ್ವ ವಿಕಸನಗೊಳ್ಳದೆ ಈ ಸಂದರ್ಭ ಬದಲಾಗುವುದಿಲ್ಲ. ಅಂಥ ವಾತಾವರಣವಿದ್ದಾಗ ಮಾತ್ರ ಸಮುದಾಯ ಒಳಗಿನ ಮತ್ತು ಹೊರಗಿನ ಎಲ್ಲಾ ಶತ್ರುಗಳನ್ನು ಎದುರಿಸಲು ಸಶಕ್ತವಾಗುತ್ತದೆ. ಆಗ ಮಾತ್ರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅದರ ಸಂಪೂರ್ಣತೆಯಲ್ಲಿ ಪ್ರಯೋಗಿಸಲು ಬೇಕಾದ ವಾತಾವರಣ ಸಿಗುತ್ತದೆ. ಹೀಗಾಗಿ ಸಂಕೀರ್ಣ ಸವಾಲಿನ ಸಂದರ್ಭವನ್ನು ಕೇವಲ ಸರಳ ಅಭಿವ್ಯಕ್ತಿ ಸ್ವಾತಂತ್ರ್ಯದ ನೆಲೆಯಿಂದ ಮಾತ್ರ ವಿಶ್ಲೇಷಿಸಲು ಸಾಧ್ಯವಿಲ್ಲ.


ಪರ್ದಾ ಪದ್ಧತಿಯ ಕುರಿತಾದ ಧಾರ್ಮಿಕ ನೆಲೆಯ ವಿಮರ್ಶೆಗಳು ಈ ಸಂದರ್ಭದಲ್ಲೇ ನಡೆಯಬೇಕಿದೆ. ಹಾಗೆಂದು ಮುಸ್ಲಿಂ ಸಮುದಾಯ ನಿಂತನೀರಾಗಿ ಉಳಿದಿದೆ ಎಂತಲೂ ಅಲ್ಲ. ಈ ಪದ್ಧತಿ ವಿರುದ್ಧ ಬೇರೆ ಸಂದರ್ಭಗಳಲ್ಲಿ ಮುಸ್ಲಿಮ್ ಸಮುದಾಯದ ಮಹಿಳೆಯರೇ ಹಲವಾರು ಕಡೆ ಸಂಘರ್ಷ ನಡೆಸುತ್ತಿದ್ದಾರೆ. ಹಲವಾರು ಆಫ್ರಿಕನ್ ಮತ್ತು ಅರೇಬಿಯನ್ ದೇಶಗಳಲ್ಲಿ ಬುರ್ಖಾ ಭಾರತದಷ್ಟು ವ್ಯಾಪಕವಾಗಿಲ್ಲ ಎಂದರೆ ಆಶ್ಚರ್ಯ ಪಡಬೇಕಿಲ್ಲ. ಭಾರತದಲ್ಲೂ ಮುಸ್ಲಿಂ ಗಂಡಸರ ಪುರುಷಾಧಿಪತ್ಯದ ವಿರುದ್ಧ "ಮಹಿಳೆಯರ ಪರ್ಸನಲ್ ಲಾ ಬೋರ್ಡ್" ರಚಿಸಿಕೊಳ್ಳುವ ಮಟ್ಟಿಗೆ ಮುಸ್ಲಿಂ ಸಮುದಾಯದೊಳಗಿಂದ ಪ್ರತಿಭಟನೆ ಗಟ್ಟಿಗೊಳ್ಳತೊಡಗಿದೆ. ಆದರೆ ಈ ಧ್ವನಿ ಗಟ್ಟಿಗೊಳ್ಳಬೇಕೆಂದರೆ ಸಂಘಪರಿವಾರ ಮುಸ್ಲಿಂ ಸಮುದಾಯದ ಅಸ್ತಿತ್ವದ ಬಗ್ಗೆಯೇ ಸೃಷ್ಟಿಸಿರುವ ಆತಂಕಗಳನ್ನು ಮತ್ತು ಅದಕ್ಕೆ ಧಾರ್ಮಿಕ ಹಿನ್ನೆಲೆಯಿಂದಲೇ ಬರಬಹುದಾದ ಪ್ರತಿಕ್ರಿಯೆಗಳ ಸಂದರ್ಭವನ್ನು ಪ್ರಗತಿಪರ ಶಕ್ತಿಗಳು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅವುಗಳನ್ನು ತಿರಸ್ಕರಿಸದೆ ಅವುಗಳ ಜೊತೆ ಸಂವಾದವಿಟ್ಟುಕೊಂಡು ಅವರು ಸಮುದಾಯದೊಳಗಿನ ಪಟ್ಟಭದ್ರ ರಾಜಕೀಯ ಮತ್ತು ಧಾರ್ಮಿಕ ನಾಯಕತ್ವದ ಕಪಿಮುಷ್ಟಿಯಿಂದಲೂ ಹೊರಬರುವಂತೆ ಮಾಡಬೇಕಿದೆ. ಅದೇ ಸಂದರ್ಭದಲ್ಲಿ ಪ್ರಭುತ್ವ, ಹಿಂದೂತ್ವವಾದಿ ಶಕ್ತಿಗಳ ಪಾತ್ರ ಇವುಗಳನ್ನು ಸೃಷ್ಟಿಸುವ ಸಂದರ್ಭದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಬೇಕಿದೆ. "ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು" ಎನ್ನುವಂಥ ಸರಳೀಕೃತ ಅಭಿವ್ಯಕ್ತಿ ಸ್ವಾತಂತ್ರ್ಯದ ವಕಾಲತ್ತಿನ ಕಂಫರ್ಟ್ ಲೋಕದ ವಿಶ್ಲೇಷಣೆಯ ಮಿತಿಗಳನ್ನೂ ಅರಿತುಕೊಳ್ಳಬೇಕಿದೆ.

● ಶಿವಸುಂದರ್

ಟಾಟಾ ಹೇಳಿದ ಬಿಜೆಪಿ ನಿಷ್ಠರು

ಕಳೆದ ಚುನಾವಣೆಯಲ್ಲಿ ಯಾರೆಲ್ಲ ಜೊತೆಗಿದ್ದು ...ಘುವನ್ನು ಎಮ್ಮೆಲ್ಲೆಯನ್ನಾಗಿ ಗೆಲ್ಲಿಸಿದ್ದರೋ ಅಂಥ ...ಜನ್ನುಗಟ್ಟಲೇ ಪಕ್ಷ ನಿಷ್ಠ ಬಿಜೆಪಿ ನಾಯಕರ್‍ಯಾರೂ ...ನ್ಯ ರಘು ಜೊತೆಗಿಲ್ಲ. ಈ ಪೈಕಿ ಮಲ್ಲೇಶ್‌ಪಾಳ್ಯದ ...ಮಾಂಜಿನಪ್ಪ ಮತ್ತು ವೈ.ಎಂ. ಕೃಷ್ಣಪ್ಪ ಕಾಂಗ್ರೆಸ್ಸಿನಲ್ಲಿದ್ದು ...ರ ಬೆಂಬಲಿಸಿ ಬಿಜೆಪಿಗೆ ಬಂದಿದ್ದರು. ಕೋಡಿಹಳ್ಳಿಯ ...ಜಾರೆಡ್ಡಿ, ಸುದ್ದುಗುಂಟೆಪಾಳ್ಯದ ಕೆಂಪೇಗೌಡ ಮತ್ತು ...ಎಂ. ಪಾಳ್ಯದ ದೇವರಾಜು ಹೇಳಿಕೇಳಿ 1996 ...ದಲೂ ರಘುವನ್ನು ಬೆಂಬಲಿಸಿಕೊಂಡೇ ಬಂದಿದ್ದ ...ಷ್ಠಾವಂತ ಬಿಜೆಪಿ ನಾಯಕರು. ಇಂಥ ದಜನ್ನುಗಟ್ಟಲೇ ...ಜೆಪಿಯ ನಾಯಕರೇ ನಿಂತು ಅವತ್ತು ರಘುವನ್ನು ...ಲ್ಲಿಸಿದ್ದರಲ್ಲ; ಈಗ ಇಂಥವರೆಲ್ಲ ಬಿಜೆಪಿಗೆ ರಾಜೀನಾಮೆ ...ಟ್ಟು ರಘು ಹೆಸರು ಕೇಳಿದರೇನೇ ಕ್ಯಾಕರಿಸಿ ...ಗಿಯುತ್ತಿದ್ದಾರೆ.

ಇಂಥ ಪ್ರತಿಯೊಬ್ಬ ನಾಯಕರನ್ನೂ ಕೌನ್ಸಿಲರ್ ...ಡಿತ್ತೀನಿ ಎಂದು ಆಪಾಟ ನಂಬಿಸಿದ ರಘು ಈಗ ... ಪತ್ನಿ, ತಂಗಿ, ತಮ್ಮನನ್ನೇ ನಿಲ್ಲಿಸಿ ಗೆಲ್ಲಿಸಹೊರಟರೆ ...ಗಿಯುದೇ ಇನ್ನೇನು?



ಸಿ.ವಿ. ರಾಮನ್‌ನಗರ ರಘು ಎಂಬ ನಾಜೂಕಯ್ಯ ಶಾಸಕನ ಫ್ಯಾಮಿಲಿ ಪಾಲಿಟಿಕ್ಸ್

...ಸೆರ್ ಸಿ.ವಿ ರಾಮನ್‌ನಗರದ ಶಾಸಕ ರಘು ಎಂಬ ...ಜೂಕಯ್ಯನ ಫಜೀತಿಗೆ ಬಿಜೆಪಿಯ ಹುಡಿಪುಡಿಗಳೂ, ... ಹಾಕಿ ನಗುವಂತಾಗಿದೆ.

...ಮುಂದೊಮ್ಮೆ ಬೆಂಗಳೂರಿಗೆ ಮೇಯರಾಗಿ ತಂಗಿ ...ನ್ನ ತರಬೇಕಾ ಅಥವಾ ಪತ್ನಿಗೆ ಮೇಯರ್ ಪಟ್ಟ ...ತಂಗಿಯನ್ನು ತವರಿಗಟ್ಟಬೇಕಾ ಎಂಬ ಪೀಕಲಾಟದಲ್ಲೇ ... ಮಾಡುತ್ತಿರುವ ಯಡವಟ್ಟುಗಳು ಒಂದೆರಡಲ್ಲ. ... ಹೇಳಿಕೇಳಿ ಮಂತ್ರಿ ಲಿಂಬಾವಳಿಯ ಭಾಮೈದ.



... ತಂಗಿ ಮಂಜುಳಾ ಲಿಂಬಾವಳಿಗೆ ಧರ್ಮಪತ್ನಿ. ...ರಾಮನ್‌ನಗರ ಕ್ಷೇತ್ರದ ನ್ಯೂ ತಿಪ್ಪಸಂದ್ರ ವಾರ್ಡಿನಿಂದ ...ತಂಗಿಗೆ ಬಿಜೆಪಿ ಟಿಕೆಟ್ ಕೊಟ್ಟು ಕೌನ್ಸಿಲರ್ ...ಸುತ್ತೇನೆಂದೇನಾದರೂ ರಘು ಹೊರಟನೆಂದರೆ ಬೆಂಕಿ ...ಕ್ಕೇ ಬಿದ್ದು ಅನಾಹುತವಾದಂತೆಯೇ ಲೆಕ್ಕ.

...ಬೇಕೆಂದರೆ ತಾನೇ ಬೆಂಗಳೂರಿನ ಮುಂದಿನ ಮೇಯರ್ ...ತ್ತೇನೆಂದು ರಣಚಂಡಿಯಂತೆ ಹಠಕ್ಕೆ ಬಿದ್ದವರು ಸ್ವತಃ ... ಪತ್ನಿ ಪ್ರತಿಮಾ ರಘು!

...ಪತ್ನಿಯನ್ನು ನ್ಯೂ ತಿಪ್ಪಸಂದ್ರ ವಾರ್ಡಿಗೆ ನಿಲ್ಲಿಸ ...ಟರೆ ತಂಗಿಗೆ ಸಿಟ್ಟು. ಭಾವ ಲಿಂಬಾವಳಿಗಾಗಿ ...ಯನ್ನು ರಾಜಕೀಯಕ್ಕೆ ತರುತ್ತೇನೆಂದು ಹೊರಟರೆ ಕೈಹಿಡಿದ ಮಡದಿ ಉರಿದುರಿದು ಸ್ಟ್ಯಾಟೆ ತಿವಿಯುತ್ತಾಳೆ. ಒಂದೆಡೆ ತಂಗಿ ಮತ್ತೊಂದೆಡೆ ಪತ್ನಿಯ ಕಚ್ಚಾಟದ ಮಧ್ಯೆ ಒಡಹುಟ್ಟಿದ ತಮ್ಮನೂ ಕೌನ್ಸಿಲರ್‌ಗಿರಿಯ ತಟ್ಟೆಗೆ ಕೈಯಿಟ್ಟರೆ ಎಮ್ಮೆಲ್ಲೇ ರಘು ಪಾಡು ಏನಾಗಬೇಕು?

ಇದು ಸಿ.ವಿ. ರಾಮನ್‌ನಗರದ ಶಾಸಕ ರಘು ತಾನೇ ಕೈಯಾರೆ ಸೃಷ್ಟಿಸಿಕೊಂಡ ಅನಾಹುತ. ಬೆಂಗಳೂರಿನ ಅಷ್ಟೂ ಮಂದಿ ಬಿಜೆಪಿ ಶಾಸಕರ ಖದರ್ರೇ ಒಂಥರದ್ದಾದರೆ ರಘು ಸಾಹೇಬರ ಸ್ಟೈಲೇ ಬೇರೆ. ಯಾವತ್ತೂ ಬಾಯಿಬಿಟ್ಟು ಏನನ್ನೂ ಮಾತಾಡುವುದಿಲ್ಲ. ಎದುರಿಗೆ ಹೆಣಬಿದ್ದಿದ್ದರೂ ವಿನಾ ಕಾರಣ ನಗುತ್ತಿರುತ್ತಾರೆ. ಬೇರೆಲ್ಲರೂ ಮುಸುಮುಸು ನಗುತ್ತಿದ್ದರೆ ತಾವು ಮಾತ್ರ ಕಾಲಜ್ಞಾನಿಯಂತೆ ನಿರ್ಲಿಪ್ತ ಪೋಜು ಕೊಡುತ್ತಾರೆ. ಕೊಟ್ಟಪೆಟ್ಟು, ಹೊಡೆದ ಗೂಟ ಮತ್ತು ಮಾಡಿದ ಮೋಸ ಗೊತ್ತಾಗುವ ಹೊತ್ತಿಗೆ ಏಟಿಗೆ ಸಿಲುಕಿದ ಆಸಾಮಿ ಹೈರಾಣಾಗಿ ಹೋಗಿರುತ್ತಾನೆ.


ಹೀಗೆ ನರಿಬುದ್ಧಿ ತೋರಿಯೇ ಬಿಜೆಪಿ ಕಾರ್ಯಕರ್ತರನ್ನು ಪುಸಲಾಯಿಸಿ ತಾನು ಶಾಸಕನಾಗಿ ತನ್ನ ಪತ್ನಿಯನ್ನು ಕೌನ್ಸಿಲರ್ ಮಾಡಿದ ರಘು ಅಂತಿಮವಾಗಿ ತನ್ನ ತಂಗಿ ಗಂಡ ಲಿಂಬಾವಳಿಯನ್ನು ಕರೆತಂದು ಪಕ್ಕದ ಮಹದೇವಪುರದಿಂದ ಗೆಲ್ಲಿಸಿ ಮಂತ್ರಿ ಮಾಡುವ ತನಕ ತೃಪ್ತನಾಗಲೇ ಇಲ್ಲ.

ತಾನು ಎಮ್ಮೆಲ್ಲೇ, ಪತ್ನಿ ಕೌನ್ಸಿಲರ್, ತಂಗಿಯ ಗಂಡನಿಗೆ ಮಂತ್ರಿಗಿರಿ, ಈಗ ಉಳಿದೊಬ್ಬ ತಮ್ಮನನ್ನೂ ಕೌನ್ಸಿಲರ್ ಮಾಡಿ ಕೊನೆಗೆ ತಂಗಿಯನ್ನು ಬೆಂಗಳೂರಿನ ಮೇಯರ್‌ಗಿರಿಗೆ ತಂದುಬಿಟ್ಟರೆ ಬಿಜೆಪಿಯೂ ಉದ್ಧಾರ ಓಟು ಕೊಟ್ಟ ಜನಕ್ಕೂ ಋಣಭಾರ ಎಂಬುದು ಸ್ವಾರ್ಥಿ ರಘುವಿನ ಹುನ್ನಾರ.

ಇಂಥ ಲೆಕ್ಕ ಹಾಕಿಯೇ ನ್ಯೂ ತಿಪ್ಪಸಂದ್ರ ವಾರ್ಡನ್ನು ಮಹಿಳಾ ಮೀಸಲಾತಿಗೆ ಬಲಿಕೊಟ್ಟಿದ್ದಾರೆ. ಹಿಂದಾದರೆ ಸಾಮಾನ್ಯ ಮಹಿಳೆ ಕ್ಯಾಟಗರಿಯಾಗಿದ್ದ ಸಿ.ವಿ.ರಾಮನ್‌ನಗರ ವಾರ್ಡಿಗೆ ಗಂಡಸರ್‍ಯಾರೂ ನಿಲ್ಲಲೇಬಾರದೆಂದು ಈಗ ಬಿಸಿಎಂ-ಎ ಕ್ಯಾಟಗರಿ ಹೇರಿದ್ದಾರೆ. ಕೊನೇನ ಅಗ್ರಹಾರವನ್ನು ಉದ್ದೇಶಪೂರ್ವಕವಾಗಿಯೇ ಜನರಲ್ ವಾರ್ಡನ್ನಾಗಿ ಮಾಡಿ ಸರ್ವಜ್ಞ ನಗರ, ಹೊಯ್ಸಳನಗರಗಳನ್ನು ಪರಿಶಿಷ್ಟ ಮಹಿಳಾ ಕ್ಯಾಟಗರಿಗೆ ತಳ್ಳಿದ ರಘು ಹುನ್ನಾರವೇ ಬೇರೆಯಿದೆ. ಹಾಗೇ ಜೀವನಭೀಮಾನಗರ ಮತ್ತು ಬೆನ್ನಿಗಾನಹಳ್ಳಿ ವಾರ್ಡುಗಳನ್ನು ಮತ್ತೆ ಪರಿಶಿಷ್ಟ ಮೀಸಲಾತಿಗೀಡು ಮಾಡಿದ್ದೂ ಇಂಥದ್ದೇ ಕಪಟ ಉದ್ದೇಶದಿಂದ.

1996 ರಲ್ಲಿ ಮೊದಲ ಬಾರಿಗೆ ತಿಪ್ಪಸಂದ್ರದಿಂದ ಗೆದ್ದು ಕೌನ್ಸಿಲರ್ ಆದ ರಘು 2001 ರ ಹೊತ್ತಿಗೆ ಶಾಂತಿನಗರದಿಂದ ಗೆದ್ದು ಎಮ್ಮೆಲ್ಲೆಯಾಗಿದ್ದ. ಗೆಲ್ಲಿಸಿದ್ದು ಬಿಜೆಪಿ ಪಕ್ಷವಾದರೂ ನೂರಾರು ಕಾರ್ಯಕರ್ತರು ಹೊಟ್ಟೆ ಬಟ್ಟೆ ಕಟ್ಟಿ ದುಡಿದಿದ್ದರೂ ತೆರವಾದ ತನ್ನ ಕೌನ್ಸಿಲರ್ ಗಾದಿಗೆ ರಘು ತಂದಿದ್ದು ಪತ್ನಿ ಪ್ರತಿಮಾರನ್ನು. ಫ್ಯಾಮಿಲಿ ವ್ಯಾಮೋಹ ಅಷ್ಟಕ್ಕೇ ತಣಿಯದೇ ಭಾವ ಲಿಂಬಾವಳಿಯನ್ನು ಪಕ್ಕದ ಮಹದೇವಪುರದಿಂದ ಗೆಲ್ಲಿಸಿ ಮಂತ್ರಿ ಮಾಡುವ ತನಕ ರಘು ಸ್ವಾರ್ಥವೇ ಚಲಾವಣೆಯಲ್ಲಿತ್ತು.

ಇಷ್ಟಾದ ಮೇಲೆ ಲಿಂಬಾವಳಿಯ ಪತ್ನಿ ತಂಗಿ ಮಂಜುಳಾ ಬಿಡಬೇಕಲ್ಲ? ಹೇಗೂ ಬೆಂಗಳೂರಿಗೆ ಮುಂದಿನ ಮೇಯರ್ ಪರಿಶಿಷ್ಟ ಮಹಿಳೆಯೇ ಆಗಬೇಕು. ನಿನ್ನ ಹೆಂಡತಿ ಬೇಕಿದ್ದರೆ ಕೌನ್ಸಿಲರ್ ಆಗಿರಲಿ. ಮೇಯರ್‌ಗಿರಿ ನನಗೇ ಬೇಕು ಎಂಬ ಹಠಕ್ಕೆ ಬಿದ್ದಿದ್ದಾಳೆ ತಂಗಿ ಮಂಜುಳಾ. ಗಂಡ ಲಿಂಬಾವಳಿ ಕೂಡ ತನ್ನ ಪತ್ನಿಯೇ ಮುಂದಿನ ಮೇಯರಾಗಬೇಕು ಎಂದು ದಬಾಯಿಸುತ್ತಿದ್ದರೆ ರಘು ಮುಖ ಹರಳೆಣ್ಣೆ ಕಳೆಯಿಂದ ಮಿರಿಮಿರಿ ಮಿಂಚುತ್ತಿದೆ.



ಈ ಜಂಜಾಟದ ಮಧ್ಯೆಯೇ ರಘು ತಮ್ಮ ಪ್ರವೀಣ ತಾನೂ ಕೌನ್ಸಿಲರ್ ಆಗ್ತೀನಿ ಎಂದು ದಿನಬೆಳಗಾದರೆ ರಘು ತಲೆ ತಿನ್ನಲಾರಂಭಿಸಿದ್ದಾನೆ. ಪತ್ನಿ, ತಂಗಿ, ತಮ್ಮ ಇತ್ಯಾದಿ ರಕ್ತಸಂಬಂಧಿಗಳನ್ನೆಲ್ಲ ಒಟ್ಟೊಟ್ಟಿಗೆ ಬಿಜೆಪಿ ಟಿಕೆಟ್‌ನಿಂದ ನಿಲ್ಲಿಸಿ ಗೆಲ್ಲಿಸಿ ಯಾರೇ ಮೇಯರ್ ಆದರೂ ಲಾಭ ತನಗೇ ತಾನೆ?

ಇಂಥ ಲೆಕ್ಕ ಹಾಕಿಯೇ ನ್ಯೂ ತಿಪ್ಪಸಂದ್ರ ವಾರ್ಡನ್ನು ಸಾಮಾನ್ಯ ಮಹಿಳಾ ವಾರ್ಡನ್ನಾಗಿಸಿದ ರಘು ಸರ್ವಜ್ಞ ನಗರ ಮತ್ತು ಹೊಯ್ಸಳ ನಗರವೆಂಬ ಎರಡೂ ವಾರ್ಡು ಗಳನ್ನು ಪರಿಶಿಷ್ಟ ಮಹಿಳಾ ಮೀಸಲಾತಿಗೆ ನೂಕಿದ್ದಾರೆ. ಹಾಗೊಮ್ಮೆ ಪತ್ನಿಯನ್ನು ತಿಪ್ಪಸಂದ್ರಕ್ಕೆ ನಿಲ್ಲಿಸಿದರೆ ಮೇಲ್ಕಂಡ ಎರಡೂ ವಾರ್ಡುಗಳ ಪೈಕಿ ಯಾವುದಾದರೂ ಒಂದಕ್ಕೆ ತಂಗಿಯನ್ನು ನಿಲ್ಲಿಸುವುದು. ಇನ್ನು ತಮ್ಮನನ್ನೂ ಕೌನ್ಸಿಲರ್ ಮಾಡಬೇಕಲ್ಲವೆ? ಅದಕ್ಕೆಂದೇ ಜೀವನಭೀಮಾನಗರವನ್ನು ಪರಿಶಿಷ್ಟ ಪಟ್ಟಿಗೆ ಸೇರಿಸಿದ್ದಾರೆ.

ಒಂದೇ ಮನೆಯಿಂದ ಮೂವರನ್ನೂ ನಿಲ್ಲಿಸಿ ಒಟ್ಟೊಟ್ಟಿಗೆ ಗೆಲ್ಲಿಸಬೇಕೆಂದರೆ ಅದಕ್ಕೆ ಸಿಕ್ಕಾಪಟ್ಟೆ ದುಡ್ಡು ಬೇಕೇಬೇಕು. ಬಿಜೆಪಿಯೇ ಅಧಿಕಾರದಲ್ಲಿದ್ದಾಗ್ಯೂ, ಭಾವನಿಗೆ ಮಂತ್ರಿಗಿರಿಯಿದ್ದೂ, ಸಿಕ್ಕಾಪಟ್ಟೆ ಆಸ್ತಿ ಬಾಡಿಗೆ, ಪೆಟ್ರೋಲ್ ಬಂಕ್, ಟ್ರಾನ್ಸ್‌ಪೋರ್ಟ್ ದಂಧೆ ಎಲ್ಲಾ ಇದ್ದೂ ರಘು ತನ್ನ ಕೊಚ್ಚೆಗೆ ಬಾಯಿ ಹಾಕುವ ಬುದ್ಧಿ ಬಿಟ್ಟಿಲ್ಲ. ತನ್ನ ಮನೆ ಪಕ್ಕದಲ್ಲೇ ಇದ್ದ ಮದರ್ ಮೇರಿ ಶಾಲೆಗೆ ವಕ್ಕರಿಸಿ ಅಲ್ಲಿದ್ದ ನೂರಾರು ಶಾಲಾ ಮಕ್ಕಳನ್ನು ಬೀದಿಪಾಲು ಮಾಡಿದ್ದೇ ಇಡೀ ಶಾಲಾ ನಿವೇಶನವನ್ನೇ ಲಪಟಾಯಿಸಿ ಬಿಟ್ಟರು. ಕಮ್ಮಿಯೆಂದರೂ ಅದು ಐದು ಕೋಟಿಯ ಆಸ್ತಿ. ಅಷ್ಟಕ್ಕೂ ಅದು ಬಿಡಿಎಗೆ ಸೇರಿದ ಸೊತ್ತು. ಅದಕ್ಕೆ ನಕಲಿ ದಾಖಲೆ ಸೃಷ್ಟಿಸಿ ಅಲ್ಲಿದ್ದ ಶಾಲೆಯನ್ನೂ ಎತ್ತಂಗಡಿ ಮಾಡಿ ಅಲ್ಲೊಂದು ಅಪಾರ್ಟ್‌ಮೆಂಟ್ ಕಟ್ಟಿಸಿ ಫ್ಲಾಟುಗಳನ್ನು ಮಾರಿಕೊಂಡಿದ್ದೇ ಎಮ್ಮೆಲ್ಲೇ ರಘು ಸಿ.ವಿ. ರಾಮನ್‌ನಗರಕ್ಕೆ ಮಾಡಿದ ಮಹದುಪಕಾರ!


ಅದನ್ನು ಬಿಟ್ಟರೆ ತಮಗೆ ಓಟು ಕೊಟ್ಟ ಜನಕ್ಕೆ ರಘು ಇನ್ನೂ ಒಂದು ಪುಣ್ಯಕಾರ್ಯವೆಸಗಿದ್ದಾರೆ. ಅದು ಬಾಗಮನೆ ಟೆಕ್‌ಪಾರ್ಕ್ ಖದೀಮರ ಜೊತೆ ಸೇರಿ ಎಂ. ಪಾಳ್ಯದ ಬೈರಸಂದ್ರ ಕೆರೆಯನ್ನು ನುಂಗಿ ಹಾಕಿದ್ದು. ಒಂದಾನೊಂದು ಕಾಲಕ್ಕೆ ಹನ್ನೆರಡು ಎಕರೆಗಳಷ್ಟು ವಿಶಾಲವಾಗಿದ್ದ ಭೈರಸಂದ್ರದ ಕೆರೆಗೆ ನಾಲಿಗೆ ಚಾಚಿದ್ದು ಹಾಲಿ ವಿದೇಶಾಂಗ ಮಂತ್ರಿ ಕೃಷ್ಣರ ಅಳಿಯ ಸಿದ್ಧಾರ್ಥ. ಕೆರೆಗೆ ಹೊಂದಿಕೊಂಡಂತೆ ದೈತ್ಯ ಬಾಗಮನೆ ಟೆಕ್‌ಪಾರ್ಕ್ ತಲೆ ಎತ್ತಿದ್ದು ಇಲ್ಲಿಗೆ ಆರು ವರ್ಷದ ಹಿಂದಾದರೂ ಕೆರೆಯ ಒಂದು ಭಾಗದ ಆರೆಕರೆಯನ್ನು ಆಕ್ರಮಿಸಿಕೊಂಡು ಅದಕ್ಕೊಂದು ಕಾಂಪೌಂಡ್ ಎಬ್ಬಿಸಿದ್ದು ರಘು ಎಮ್ಮೆಲ್ಲೆಯಾದ ನಂತರವೆ.

ಬಾಗಮನೆ ದೈತ್ಯರು ಕಬಳಿಸಿದ ಆರೆಕರೆಯ ಕೆರೆ ಭೂಮಿಯ ಸದ್ಯದ ಮಾರುಕಟ್ಟೆ ರೇಟು ಕಮ್ಮಿಯೆಂದರೂ ಐವತ್ತು ಕೋಟಿ. ಜನ ರಘು ಮನೆಗೇ ಬಂದು ಕೆರೆ ಭೂಮಿ ಉಳಿಸುವಂತೆ ದೂರಿನ ಮೇಲೆ ದೂರು ಕೊಟ್ಟರು. ಪರಿಣಾಮವೇನೆಂದರೆ ಶಾಸಕ ರಘು ಬಾಗಮನೆ ಭೂಕಂಟಕರ ಜೊತೆಗೇ ಊಟಕ್ಕೆ ಕುಂತುಬಿಟ್ಟರು. ಯಾರೆಷ್ಟೇ ದೂರು-ಪ್ರತಿಭಟನೆಗಿಳಿದರೂ ರಘು ಮತ್ತು ಬಾಗಮನೆ ಟೆಕ್‌ಪಾರ್ಕ್ ನೆಂಟಸ್ತಿಕೆ ಮಾತ್ರ ಮುರಿಯಲೇ ಇಲ್ಲ.

ಹೀಗೆ ಬೈರಸಂದ್ರದ ಕೆರೆಗೊಂದು ಗತಿ ಕಾಣಿಸಿದ ಒಂದೇ ಬಾಬತ್ತಿನಿಂದ ರಘು ಜೇಬಿಗಿಳಿಸಿದ್ದು ಹತ್ತು ಕೋಟಿಯಂತೆ. ಯಾರಿಗುಂಟು ಯಾರಿಗಿಲ್ಲ? ಪತ್ನಿಯೋ ತಂಗಿಯೋ ಬೆಂಗಳೂರಿಗೆ ಮೇಯರಾಗಬೇಕೆಂದರೆ ಬೈರಸಂದ್ರದ ಕೆರೆ ಮಾರಿಕೊಳ್ಳಲೂ ಸೈ, ಮದರ್ ಮೇರಿ ಶಾಲೆಯ ಮಕ್ಕಳನ್ನು ಬೀದಿಗೆ ಹಾಕಲಿಕ್ಕೂ ರಘು ಹೇಸುವುದಿಲ್ಲ.

ಎಮ್ಮೆಲ್ಲೆಯೊಬ್ಬ ಇಷ್ಟೊಂದು ನಾಚಿಕೆಗೆಟ್ಟು ಲೂಟಿಗಿಳಿಯುವುದುಂಟಾ?

● ರಾ. ಸೋಮನಾಥ್



...ವಿ ...ಮಯ

ಮನವ ಮಥಿಸಿ
ಬರುವುದು ಕವಿ ಸಮಯ
ಬರೀ ಅಕ್ಷರ ಸಮೂಹವಲ್ಲ

ಒಳಗೇನೋ ಆಗಬೇಕು
ಗಿಡ ಬೆಳೆದು ಚಿಗುರೊಡೆಯುವಂತೆ
ಕಾಡ ತೊರೆ ಜುಳು ಜುಳು ತಿಳಿಯಾಗಿ
ನಿಶ್ಶಬ್ದ ಹರಿವಂತೆ
ಹಾಲು ಹೆಪ್ಪಾಗಿ ಮೊಸರ ಮಂಥಣಿ ಕಡೆದು
ಮಜ್ಜಿಗೆ-ಬೆಣ್ಣೆ-ತುಪ್ಪವಾಗಿ
ಪಂಚೇಂದ್ರಿಯಗಳಲ್ಲಿ ಮಿಡಿವ ಧಮನಿಯಾಗಿ
ಪ್ರೀತಿ ಮಾತಾಗಿ ಮೊಳಗಿ ಬರಬೇಕು

ಮಾತು ಕುಸಿವ ಕಟ್ಟಡದಂತೆ
ಐಹಾರಾಮದ ಉಬ್ಬಸವಾಗದೆ
ಜೀವಕೆ ನೆರಳಾಗುವ ಸೂರಾಗಬೇಕು
ಸುಭದ್ರವಾಗಿರಬೇಕು

ಇಂಥ ಗಟ್ಟಿ ಸೂರಿನಾಸೆ,
ನಂಬಿಕೆಯ ಕಟ್ಟಡ ಕುಸಿದು
ಪ್ರಾಣ ತೆತ್ತ ಜೀವ
ನನ್ನೊಡಲ ಕುದಿಯಾಗಿ
ಜನ್ಮ ತಾಳುತ್ತದೆ,
ಪ್ರಶ್ನಿಸುತ್ತದೆ-
"ಯಾಕೆ ನನ್ನ ಕೊಂದಿರಿ?....
ಹೃದಯವಿರಬೇಕಾದ ಜಾಗದಲ್ಲಿ
ನಿಮ್ಮೆದೆಯೊಳಗೆ ಏನಿದೆ? ಬೇರೇನಿದೆ?
ಕಲ್ಲೇ? ಮಣ್ಣೇ? ಸಿಮೆಂಟೇ? ಅಥವಾ ಕಾಗದದ ನೋಟೇ?"



● ಜ್ಯೋತಿ ಗುರುಪ್ರಸಾದ್




ಹಂಪಿ ವಿವಿ ವಿವಾದ

ಕನ್ನಡ ದ್ರೋಹಿ ಯಡ್ಡಿ-ಚೆಡ್ಡಿ-ರೆಡ್ಡಿಗಳು

ಕಳೆದ ವಾರವೇ ಈ 'ವಿಜಯನಗರ ಪುನಶ್ಚೇತನ ಟ್ರಸ್ಟ್' ಎಂಬ ಅಪ್ಪ-ಅಮ್ಮನಿಲ್ಲದ ಗುಂಪಿನಲ್ಲಿ ಯಾರ್‍ಯಾರಿದ್ದಾರೆಂದೂ, ಅವರ ಅಸಲಿ ಉದ್ದೇಶವೇನೆಂದೂ ವಿವರಿಸಿದ್ದೇವೆ. ಆದರೆ ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ತನ್ನ ವಾರ್ತಾಪತ್ರದಲ್ಲಿ "ವಿಶ್ವವಿದ್ಯಾಲಯದ 80 ಎಕರೆ ಜಮೀನಿನಲ್ಲಿ ದೆಹಲಿಯ ಅಕ್ಷರಧಾಮದ ರೀತಿಯ ದೇವಾಲಯವನ್ನು ಕಟ್ಟುವ" ಉದ್ದೇಶವನ್ನು ವ್ಯಕ್ತಪಡಿಸಿದೆ. ಒಂದು ವಿವಿಯಲ್ಲಿ ದೇವಾಲಯಕ್ಕೆ ಏನು ಕೆಲಸ? ವಿವಿಗೂ, ಪ್ರವಾಸೋದ್ಯಮಕ್ಕೂ ಏನು ಸಂಬಂಧ? ಹಿಂದೂ ಧರ್ಮದ ಬಲಸಂವರ್ಧನೆಗೂ, ಜಾತ್ಯತೀತ ಶಿಕ್ಷಣ ಪದ್ಧತಿಗೂ ಯಾವ ನಂಟು? ವಿವಿಯ ಭೂಮಿಯನ್ನು ಕಬಳಿಸುತ್ತಿರುವ ಈ ಟ್ರಸ್ಟ್‌ನಲ್ಲಿ ಯಾಕೆ ಒಬ್ಬರೇ ಒಬ್ಬರು ಶಿಕ್ಷಣ ತಜ್ಞರಾಗಲಿ, ಇತಿಹಾಸ ತಜ್ಞರಾಗಲಿ ಇಲ್ಲ? ಕೊನೆಯದಾಗಿ ಇತಿಹಾಸದ ವೈಭವಕ್ಕೂ, ಪ್ರಸ್ತುತ ಶೈಕ್ಷಣಿಕ ವಿಚಾರಕ್ಕೂ ಏನು ಸಂಬಂಧ?

ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾನಿಲಯದ 80 ಎಕರೆ ಭೂಮಿಯನ್ನು ಹಿಂದೂತ್ವವಾದಿಗಳ ಗುಂಪೊಂದು ರಚಿಸಿಕೊಂಡಿರುವ ಖಾಸಗಿ ಟ್ರಸ್ಟ್‌ಗೆ ಸರ್ಕಾರ ಕೊಡಲು ಹೊರಟಿರುವುದರ ವಿರುದ್ಧ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗಿದೆ. ಬುದ್ಧಿಜೀವಿಗಳು, ಪ್ರಗತಿಪರ ಹೋರಾಟಗಾರರು, ಅಧ್ಯಾಪಕರು, ವಿದ್ಯಾರ್ಥಿಗಳು, ಎಡಪಂಥೀಯರು ಮಾತ್ರವಲ್ಲದೆ ಸಾಮಾನ್ಯ ಜನ ಕೂಡ ವಿವಿಯ ಆವರಣದಲ್ಲಿ ಚೆಡ್ಡಿಗಳಿಗೇನು ಕೆಲಸ ಎಂದು ಪ್ರಶ್ನಿಸಿ ಸರ್ಕಾರದ ಈ ನಿರ್ಧಾರದ ವಿರುದ್ಧ ಕೆಂಡಕಾರುತ್ತಿದ್ದಾರೆ.

ಆದರೆ ಜಟ್ಟಿ ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ವಾದಿಸಿದಂತೆ ಯಡ್ಡಿಯ ಸೋಗಲಾಡಿ ಸರ್ಕಾರ, ವಿವಿಯ ನಿರ್ಲಜ್ಜ ಕುಲಪತಿ ಮುರಿಗೆಪ್ಪ, ಗಣಿಯ ಧೂಳಿನಿಂದಲೇ ಕೊಬ್ಬಿಹೋಗಿರುವ ರೆಡ್ಡಿ ಗ್ಯಾಂಗ್ ಮತ್ತು ಕೆಲಸಕ್ಕೆ ಬಾರದ ವಿಜಯನಗರ ಪುನಶ್ಚೇತನ ಟ್ರಸ್ಟ್ ಎಂಬ ಖದೀಮರ ಗುಂಪು ಹೇಗಾದರು ಮಾಡಿ ಈ ಭೂಮಿಯನ್ನು ಕಬಳಿಸಲೇಬೇಕೆಂದು ಹೊಂಚುಹಾಕಿ ಕುಂತಿದೆ ಅಷ್ಟೇ ಅಲ್ಲ, ಆ ಮೂಲಕ ತಮ್ಮ ಕೋಮುವಾದಿ ಅಜೆಂಡಾವನ್ನು ವಿಶ್ವವಿದ್ಯಾಲಯದಲ್ಲೂ ಅನುಷ್ಠಾನಕ್ಕೆ ತಂದು ರಾಜ್ಯದ ಇತಿಹಾಸವನ್ನಲ್ಲದೆ ಪ್ರಸ್ತುತ ಕೋಮು ಸೌಹಾರ್ದತೆಯನ್ನೂ ನಾಶಮಾಡಲು ಕುತಂತ್ರ ನಡೆಸಿದ್ದಾರೆ.



ಈ ಕುತಂತ್ರವನ್ನು ಎಷ್ಟು ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿದ್ದಾರೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ.

ಕನ್ನಡ ವಿಶ್ವವಿದ್ಯಾಲಯವು ಒಂದು ಉನ್ನತ ಶಿಕ್ಷಣ ಸಂಸ್ಥೆಯಾಗಿದ್ದು ಹೋದ ವರ್ಷ ಸೆಪ್ಟೆಂಬರ್ 8 ರಂದು ವಿವಿಯಲ್ಲಿ ಕೃಷ್ಣದೇವರಾಯನ ಹೆಸರಿನಲ್ಲಿ ಅಧ್ಯಯನ ಪೀಠವೊಂದನ್ನು ಸ್ಥಾಪಿಸುವಂತೆ ಕೇಳಿಕೊಂಡು ವಿವಿಯು ಪ್ರಸ್ತಾವವೊಂದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿತ್ತು. ಆ ಪ್ರಸ್ತಾವವು ಕೇವಲ ಕೃಷ್ಣದೇವರಾಯನ ಅಧ್ಯಯನ ಪೀಠಕ್ಕೆ ಸಂಬಂಧಿಸಿತ್ತೇ ಹೊರತು ಅದರಲ್ಲಿ ವಿಜಯನಗರದ ಪುನಶ್ಚೇತನದ ಬಗ್ಗೆಯಾಗಲಿ, ಯಾವುದೋ ಖಾಸಗಿ ಟ್ರಸ್ಟ್‌ಗೆ ವಿವಿಯ 80 ಎಕರೆ ಭೂಮಿಯನ್ನು ಕೊಡುವ ಬಗ್ಗೆಯಾಗಲಿ ಯಾವ ಅಂಶವೂ ಇರಲಿಲ್ಲ. ಆದರೆ ಯಡ್ಡಿಯ ಸರ್ಕಾರ ಮತ್ತು ಆತನ ಹಿಂದಿರುವ ಆರೆಸ್ಸೆಸ್‌ನ ಚೆಡ್ಡಿಗಳು ಆ ಪ್ರಸ್ತಾವದ ಪತ್ರವನ್ನೇ ಆಧಾರವಾಗಿಟ್ಟುಕೊಂಡು ಕಳೆದ ಜನವರಿ 22 ರಂದು ಒಂದು ಆದೇಶವನ್ನು ಹೊರಡಿಸಿತು. ಆ ಆದೇಶದಲ್ಲಿ ಕೃಷ್ಣದೇವರಾಯನ ಹೆಸರಲ್ಲಿ ಅಧ್ಯಯನ ಪೀಠದ ಬಗ್ಗೆ ಏನೂ ಇರಲಿಲ್ಲ, ಬದಲಾಗಿ ಕೃಷ್ಣದೇವರಾಯನ ನೆಪದಲ್ಲಿ ಹುಟ್ಟಿಕೊಂಡಿದ್ದ ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ ವಿವಿಯ 80 ಎಕರೆ ಜಮೀನನ್ನು ಹಸ್ತಾಂತರಿಸಲು 'ಅನುಮತಿ' ನೀಡಿತು!


ಈ ಕುತಂತ್ರ ಅಲ್ಲಿಗೇ ನಿಲ್ಲಲಿಲ್ಲ. ವಿವಿಯ ಮನೆಮುರುಕ ಕುಲಪತಿ ಮುರಿಗೆಪ್ಪನನ್ನೂ ತಮ್ಮ ಬುಟ್ಟಿಗೆ ಕೆಡವಿಕೊಂಡ ಚೆಡ್ಡಿ-ಯಡ್ಡಿ-ರೆಡ್ಡಿಗಳು ಆತನಿಂದ ಪತ್ರವೊಂದನ್ನು ಬರೆಸಿಕೊಂಡು ಅದರಲ್ಲಿ ವಿವಿಯ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ನಿರೀಕ್ಷಿಸಿ 80 ಎಕರೆ ಜಮೀನನ್ನು ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ 'ಕೇವಲ ಕಟ್ಟಡ ನಿರ್ಮಾಣ'ದವರೆಗೆ ಹಸ್ತಾಂತರಿಸಬಹುದೆಂದು ದಾಖಲಿಸಿಕೊಂಡಿತು. ಅಷ್ಟೇ ಅಲ್ಲದೆ, ಕಳೆದ ಜನವರಿ 30ರಂದು ವಿವಿಯ ಕಾರ್ಯಕಾರಿ ಸಮಿತಿಯ 119ನೆಯ ಸಭೆಯನ್ನು ನಡೆಸಿ ವಿವಿಯ 80 ಎಕರೆ ಜಮೀನನ್ನು ನೀಡಲು ಅನುಮೋದನೆ ಕೂಡ ಪಡೆಯಿತು.

ಆದರೆ ಈಗ ಎಲ್ಲರಿಗೂ ಗೊತ್ತಿರುವಂತೆ ಆ ಸಭೆಯಲ್ಲಿ ಭಾಷಾ ನಿಕಾಯದ ಮತ್ತು ಸಮಾಜ ವಿಜ್ಞಾನ ನಿಕಾಯದ ಡೀನ್‌ಗಳು ಹಾಜರಿರಲಿಲ್ಲ. ಇವರಿಬ್ಬರ ಗೈರುಹಾಜರಿಯಲ್ಲಿ ವಿವಿಯ ಅಸ್ತಿತ್ವಕ್ಕೆ ಧಕ್ಕೆ ಉಂಟುಮಾಡುವ ಇಂತಹ ಮನೆಮುರುಕ ನಿರ್ಣಯಕ್ಕೆ ಮುರಿಗೆಪ್ಪ ಅಂಗೀಕಾರ ಪಡೆದಿದ್ದಾನೆ. ಈ ಇಬ್ಬರು ಡೀನ್‌ಗಳಿಗೆ ಮುರಿಗೆಪ್ಪನ ದ್ರೋಹದ ಬಗ್ಗೆ ಗೊತ್ತಾಗಿದ್ದೇ ತಡ, ಅವರಿಗೆ ಶಾಕ್ ಆಯಿತು. ಅವರಿಬ್ಬರೂ ವಿವಿಯ 80 ಎಕರೆ ಜಮೀನನ್ನು ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ ಕೊಡುವ ನಿರ್ಣಯದ ವಿರುದ್ಧ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಜೊತೆಗೆ ಆ ಕ್ರಮವನ್ನು ಕೈಬಿಡುವಂತೆ ಒತ್ತಾಯಿಸಿದರು. ಅವರಿಬ್ಬರು ಮಾತ್ರ ತಮ್ಮ ವಿರೋಧವನ್ನು ವ್ಯಕ್ತಪಡಿಸಲಿಲ್ಲ, ಕನ್ನಡ ವಿವಿಯ ಅಧ್ಯಾಪಕರ ಸಂಘ ಮತ್ತು ನೌಕರರ ಸಂಘವೂ ಭೂಮಿ ಪರಭಾರೆಯನ್ನು ವಿರೋಧಿಸಿದವು.

ಯಡ್ಡಿ-ಚೆಡ್ಡಿ-ರೆಡ್ಡಿಗಳ ಇನ್ನೊಂದು ಕುತಂತ್ರವನ್ನು ಗಮನಿಸಬೇಕು. ಭೂಮಿಯ ಪರಭಾರೆಯನ್ನು ಮುರಿಗೆಪ್ಪ ಕಾರ್ಯಕಾರಿ ಸಮಿತಿಯ ಮೂಲಕ ಅನುಮೋದಿಸಿದ್ದು ಜನವರಿ 30 ರಂದು. ಆದರೆ ಅದಕ್ಕೆ ಒಂದು ದಿನ ಮುನ್ನವೇ - ಅಂದರೆ ಜನವರಿ 29 ರಂದು - ರಾಜ್ಯ ಸರ್ಕಾರ ಆ ಜಾಗದಲ್ಲಿ ತಲೆ ಎತ್ತಲಿರುವ ಕೃಷ್ಣದೇವರಾಯನ ಸ್ಮರಣಾರ್ಥ ಥೀಮ್ ಪಾರ್ಕಿನ ಶಿಲಾನ್ಯಾಸವನ್ನು 'ರಾಮ ರಥದ ರಕ್ತ ವೀರ' ಎಲ್.ಕೆ. ಅಡ್ವಾನಿಯಿಂದ ವಿವಿಯ ಆವರಣದಲ್ಲೇ ನೆರವೇರಿಸಿತು. ಅಂದರೆ ವಿವಿಯ ಅನುಮತಿ ಇಲ್ಲದೆ ಇತಂಹ ಲೂಟಿಗೆ, ಅಕ್ರಮಕ್ಕೆ ರಾಜ್ಯ ಸರ್ಕಾರವೇ ಕೈಹಾಕಿತು. ಇದರ ಹಿಂದೆ ಇರುವ ತಿಮಿರು ಎಂತಹದ್ದೆಂದರೆ ಯಾರು ಏನೇ ಹೇಳಲಿ ತನಗೆ ಬೇಕಿದ್ದನ್ನು ತಾನು ಮಾಡುತ್ತೇನೆ ಎಂಬ ಕಿಡಿಗೇಡಿ ಚಿಂತನೆ.

ಕಳೆದ ವಾರವೇ ಈ 'ವಿಜಯನಗರ ಪುನಶ್ಚೇತನ ಟ್ರಸ್ಟ್' ಎಂಬ ಅಪ್ಪ-ಅಮ್ಮನಿಲ್ಲದ ಗುಂಪಿನಲ್ಲಿ ಯಾರ್‍ಯಾರಿದ್ದಾರೆಂದೂ, ಅವರ ಅಸಲಿ ಉದ್ದೇಶವೇನೆಂದೂ ವಿವರಿಸಿದ್ದೇವೆ. ಆದರೆ ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ತನ್ನ ವಾರ್ತಾಪತ್ರದಲ್ಲಿ "ವಿಶ್ವವಿದ್ಯಾಲಯದ 80 ಎಕರೆ ಜಮೀನಿನಲ್ಲಿ ದೆಹಲಿಯ ಅಕ್ಷರಧಾಮದ ರೀತಿಯ ದೇವಾಲಯವನ್ನು ಕಟ್ಟುವ" ಉದ್ದೇಶವನ್ನು ವ್ಯಕ್ತಪಡಿಸಿದೆ. ಒಂದು ವಿವಿಯಲ್ಲಿ ದೇವಾಲಯಕ್ಕೆ ಏನು ಕೆಲಸ?

ಇನ್ನು ಪ್ರವಾಸೋದ್ಯಮ ಸಚಿವ ಜನಾರ್ದನ ರೆಡ್ಡಿಯಂತೂ ವಿವಿಯ ಭೂಮಿಯಲ್ಲಿ ವಿಜಯನಗರ ಪುನಶ್ಚೇತನ ಟ್ರಸ್ಟ್ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವನ್ನು ಅಭಿವೃದ್ಧಿಪಡಿಸುತ್ತದೆಂದೂ, ಶಿಲಾನ್ಯಾಸ ನೆರವೇರಿಸಿದ ಸಭೆಯಲ್ಲಿ ಮುಖ್ಯಮಂತ್ರಿ ಹೇಳಿರುವಂತೆ ಟ್ರಸ್ಟ್‌ನ ಉದ್ದೇಶ ವಿಜಯನಗರ ಸಾಮ್ರಾಜ್ಯದ ವೈಭವದ ಪುನರುತ್ಥಾನ ಎಂದೂ, ಇದೆಲ್ಲದರಿಂದ ಹಿಂದೂ ಧರ್ಮದ ಬಲಸಂವರ್ಧನೆ ಆಗುತ್ತದೆಂದೂ, ಟ್ರಸ್ಟ್‌ಗೆ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಪುನರ್ ನೆನಪಿಸುವ ಹಾಗೂ ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಇತ್ಯಾದಿ ಭಾರತೀಯ ಸಂಸ್ಕೃತಿಯ ವೈವಿಧ್ಯತೆಯನ್ನು ಪ್ರೋತ್ಸಾಹಿಸಿ ಪ್ರೇರಣೆ ನೀಡುವ ಉದ್ದೇಶ ಇದೆಯೆಂದೂ ಹೇಳಿದ್ದಾನೆ. ಆದರೆ ಮೂಲ ಪ್ರಶ್ನೆಗಳೇ ಬೇರೆ ಆಗಿವೆ. ವಿವಿಗೂ, ಪ್ರವಾಸೋದ್ಯಮಕ್ಕೂ ಏನು ಸಂಬಂಧ? ಹಿಂದೂ ಧರ್ಮದ ಬಲಸಂವರ್ಧನೆಗೂ, ಜಾತ್ಯತೀತ ಶಿಕ್ಷಣ ಪದ್ಧತಿಗೂ ಯಾವ ನಂಟು? ವಿವಿಯ ಭೂಮಿಯನ್ನು ಕಬಳಿಸುತ್ತಿರುವ ಈ ಟ್ರಸ್ಟ್‌ನಲ್ಲಿ ಯಾಕೆ ಒಬ್ಬರೇ ಒಬ್ಬರು ಶಿಕ್ಷಣ ತಜ್ಞರಾಗಲಿ, ಐತಿಹಾಸ ತಜ್ಞರಾಗಲಿ ಇಲ್ಲ? ಕೊನೆಯದಾಗಿ ಇತಿಹಾಸದ ವೈಭವಕ್ಕೂ, ಪ್ರಸ್ತುತ ಶೈಕ್ಷಣಿಕ ವಿಚಾರಕ್ಕೂ ಏನು ಸಂಬಂಧ?



ಇಂತಹ ಯಾವ ಪ್ರಶ್ನೆಗೂ ರೆಡ್ಡಿ ಉತ್ತರಿಸಲಾರ. ಆದರೂ ಈತನ ಧಿಮಾಕು ಎಂತಹದ್ದೆಂದರೆ ತುಂಬಾ ಉಡಾಫೆಯಿಂದ ವಿವಿಯ ಅಧ್ಯಾಪಕರಿಗಿಂತ ತನಗೇ ಇತಿಹಾಸದ ಬಗ್ಗೆ ಹೆಚ್ಚು ಜ್ಞಾನವಿದೆ ಎಂದು ಈ ಅಜ್ಞಾನಿ ಘೋಷಿಸಿದ್ದಾನೆ. ಅಷ್ಟು ಸಾಲದೆಂಬಂತೆ "ನಿಮ್ಮದೇನು ತಕರಾರು? ನಾವು ಬೇಕಾದ್ದನ್ನು ಮಾಡಿಕೊಳ್ಳುತ್ತೇವೆ" ಎಂಬಂತೆ ವಿವಿಯ ಸಿಬ್ಬಂದಿಗೇ ಧಮಕಿ ಹಾಕಿದ್ದಾನೆ.

ಇನ್ನು ವಿಜಯನಗರ ಪುನಶ್ಚೇತನ ಟ್ರಸ್ಟ್‌ನ ಬಗ್ಗೆ ಸರ್ಕಾರ ಹೊರಡಿಸಿರುವ ಆದೇಶದಲ್ಲಿ 18 ಸದಸ್ಯರ ಪಟ್ಟಿಯನ್ನು ನೀಡಿದೆ. ಆದರೆ ಅದರಲ್ಲಿ ಟ್ರಸ್ಟ್‌ನ ಅಧ್ಯಕ್ಷ ಯಾರು ಎಂದಾಗಲಿ, ಅದರ ಕಾರ್ಯದರ್ಶಿ ಯಾರು ಎಂದಾಗಲಿ ಸ್ಪಷ್ಟ ಪಡಿಸಿಲ್ಲ. ಜೊತೆಗೆ ಆ ಟ್ರಸ್ಟ್‌ನಲ್ಲಿ ವಿಶ್ವವಿದ್ಯಾಲಯದ ಯಾರಿಗೂ ಪ್ರಾತಿನಿಧ್ಯ ನೀಡಿಲ್ಲ. ಅಂದರೆ ಆ ಟ್ರಸ್ಟ್ ವಿವಿಯ ಆವರಣದಲ್ಲೇ ಇದ್ದರೂ ಅದರ ಮೇಲೆ ವಿವಿಗೆ ಯಾವ ಹಕ್ಕೂ ಇರುವುದಿಲ್ಲ!

ಈಗಾಗಲೇ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ.ಲಕ್ಕಪ್ಪಗೌಡ ಮತ್ತು ಡಾ. ವಿವೇಕ ರೈ ವಿವಿಯ 80 ಎಕರೆ ಜಮೀನನ್ನು ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ ನೀಡುವುದನ್ನು ವಿರೋಧಿಸಿದ್ದಾರೆ. ಹಾಗೆಯೇ ರಾಜ್ಯದ ಮಾಜಿ ಶಾಸಕರ ಸಂಘ ಮತ್ತದರ ಅಧ್ಯಕ್ಷ ಪ್ರಭಾಕರ ರೆಡ್ಡಿ ಮತ್ತು ಡಾ.ಚಂದ್ರಶೇಖರ ಕಂಬಾರ ಅವರ ನೇತೃತ್ವದಲ್ಲಿ ಭೂಮಿಯನ್ನು ಟ್ರಸ್ಟ್‌ಗೆ ನೀಡುವುದನ್ನು ತಡೆಯಬೇಕೆಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯದ ವಿವಿಧ ಕಡೆಗಳಿಂದ ಪ್ರಸಿದ್ಧ ಸಾಹಿತಿಗಳು, ಬರಹಗಾರರು, ಚಿಂತಕರು, ಸಾಮಾಜಿಕ ಕಾರ್ಯಕರ್ತರು, ರಾಜಕಾರಣಿಗಳು ಮತ್ತು ಇತರರು ಇದನ್ನು ವಿರೋಧಿಸಿದ್ದಾರೆ. ಹಾಗೆಯೇ ಇತರರು ರಾಜ್ಯದ ನಾನಾ ಭಾಗಗಳಲ್ಲಿ ಸ್ವಇಚ್ಛೆಯಿಂದ ಸರ್ಕಾರದ ಈ ಕ್ರಮವನ್ನು ವಿರೋಧಿಸಿ ಸಹಿ ಸಂಗ್ರಹ ಮಾಡುತ್ತಿದ್ದಾರೆ, ಮನವಿಗಳನ್ನು ರಾಜ್ಯಪಾಲರಿಗೆ ಸಲ್ಲಿಸುತ್ತಿದ್ದಾರೆ, ಅನೇಕ ಕಡೆಗಳಲ್ಲಿ ಪ್ರತಿಭಟನೆ, ಧರಣಿ, ಮುಷ್ಕರಗಳನ್ನು ಮಾಡಿದ್ದಾರೆ.

ನೂರಾರು ಕನಸುಗಳನ್ನು ಹೊತ್ತು ರೂಪಗೊಂಡ ಕನ್ನಡ ವಿವಿಯು ಅಸ್ತಿತ್ವಕ್ಕೆ ಬಂದದ್ದು 1991ರಲ್ಲಿ. ಅದರ ಮುಂದೆ ಭವಿಷ್ಯದಲ್ಲಿ ಅನೇಕ ಬೃಹತ್ ಯೋಜನೆಗಳಿವೆ. ಬರಲಿರುವ ದಿನಗಳಲ್ಲಿ ಅಲ್ಲಿ ವಿವಿಧ ಅಧ್ಯಯನ ಕಟ್ಟಡಗಳು, ಕಚೇರಿ ಕಟ್ಟಡಗಳು, ಆಟದ ಮೈದಾನಗಳು, ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳು, ವಿವಿಧ ಪೀಠಗಳಿಗೆ ಕಟ್ಟಡಗಳು, ವಸ್ತು ಸಂಗ್ರಹಾಲಯಕ್ಕೆ ಕಟ್ಟಡ, ಪ್ರಸಾರಾಂಗಕ್ಕೊಂದು ಕಟ್ಟಡ ಇಂತಹವೆಲ್ಲ ತಲೆ ಎತ್ತಬೇಕಿದೆ. ಇವುಗಳನ್ನೆಲ್ಲ ಲೆಕ್ಕಕ್ಕೆ ಹಾಕಿಕೊಂಡರೇ ವಿವಿಗೇ ಬರುವ ದಿನಗಳಲ್ಲಿ ಕನಿಷ್ಠವೆಂದರೂ ಹೆಚ್ಚುವರಿಯಾಗಿ ಇನ್ನೂ 500 ಎಕರೆಗಳು ಬೇಕಾಗುತ್ತವೆ. ಪರಿಸ್ಥಿತಿ ಹೀಗಿರುವಾಗ, ವಿವಿಯಿಂದಲೇ 80 ಎಕರೆ ಭೂಮಿಯನ್ನು ಕಸಿಯುವುದು ಸರಿಯೇ?

ಇದಕ್ಕಿಂತಲೂ ಅಪಾಯಕಾರಿ ಸಂಗತಿ ಯಾವುದೆಂದರೆ ಈಗ ಸರ್ಕಾರ 80 ಎಕರೆ ಮೇಲೆ ಕಣ್ಣು ಹಾಕಿದೆ. ಆದರೆ ಬಿಜೆಪಿಯ ವೆಬ್‌ಸೈಟ್ ಪ್ರಕಾರ ಈ ಥೀಮ್ ಪಾರ್ಕ್‌ಗೆ ನಿಜವಾಗಲೂ ಬೇಕಿರುವುದು 220 ಎಕರೆ. ನಾಳೆ ಆ ಭೂಮಿಯೂ ಬೇಕೆಂದು ಸರ್ಕಾರ ಅಥವಾ ಕಳ್ಳರ ಟ್ರಸ್ಟ್ ಒತ್ತಾಯ ಮಾಡುವುದಿಲ್ಲ ಎಂದು ಏನು ಗ್ಯಾರಂಟಿ?


ಮತ್ತೊಂದು ವಿಚಾರ: ಇವತ್ತು ಈ ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ 80 ಎಕರೆ ಭೂಮಿ ಕೊಟ್ಟ ನಂತರ ನಾಳೆ ಬೇರೆ ಇನ್ಯಾವುದೋ ಟ್ರಸ್ಟ್ ಕೂಡ ವಿವಿಯ ಭೂಮಿಯನ್ನು ಕೇಳುವುದಿಲ್ಲವೆಂದು ಏನು ಗ್ಯಾರಂಟಿ? ಆಘಾತಕಾರಿ ವಿಚಾರ ಯಾವುದೆಂದರೆ ಈಗಾಗಲೆ ಅನೇಕ ಟ್ರಸ್ಟ್‌ಗಳು ವಿವಿಯ ಭೂಮಿಯನ್ನು ಬೇಡಿ ಅರ್ಜಿ ಸಲ್ಲಿಸುತ್ತಿವೆ. ಅವುಗಳಿಗೆಲ್ಲ ವಿವಿಯ ಭೂಮಿಯನ್ನು ಕೊಡುತ್ತಾ ಹೋದರೆ ನಾಳೆ ವಿವಿಗೆ ಏನು ಉಳಿದಿರುತ್ತದೆ? ಆದ್ದರಿಂದಲೇ ಭೂಮಿ ಪರಭಾರೆಯನ್ನು ಈಗಲೇ ತಡೆಯಬೇಕಿದೆ.

ಈಗ ಮಾರ್ಚ್ 6 ರಂದು ವಿವಿಯ ವಿಶೇಷ ಕಾರ್ಯಕಾರಿ ಸಭೆ ಸೇರಲಿದೆ. ಅಂದು 80 ಎಕರೆ ಜಮೀನನ್ನು ವಿಜಯನಗರ ಪುನಶ್ಚೇತನ ಟ್ರಸ್ಟ್‌ಗೆ ನೀಡಿರುವ ನಿರ್ಣಯವನ್ನು ಮರುಪರಿಶೀಲಿಸಲಾಗುತ್ತದೆ. ಆದರೆ ವಿವಿಯ ಕಾರ್ಯಕಾರಿ ಸಮಿತಿಯಲ್ಲಿ ಸರ್ಕಾರ ನೇಮಿಸಿರುವ ಎಂಟು ಸದಸ್ಯರಿದ್ದಾರೆ. ಜೊತೆಗೆ ಏಳು ಸರ್ಕಾರದ ಅಧಿಕಾರಿಗಳೂ ಪದನಿಮಿತ್ತ ಸದಸ್ಯರಾಗಿದ್ದಾರೆ. ಇವರಲ್ಲದೆ ವಿವಿಯ ಮೂವರು ಡೀನ್‌ಗಳು ಮತ್ತು ಕುಲಪತಿ ಮುರಿಗೆಪ್ಪ ಇದ್ದಾರೆ. ವಿವಿಯ ರಿಜಿಸ್ಟ್ರಾರ್ ಕೂಡ ಸಮಿತಿಯಲ್ಲಿದ್ದಾರಾದರೂ ಅವರಿಗೆ ಮತ ಚಲಾಯಿಸುವ ಅಧಿಕಾರವಿಲ್ಲ.

ಇಲ್ಲಿಯವರೆಗೂ ಯಾವುದೇ ಕಾರ್ಯಕಾರಿ ಸಭೆಗೆ ಸರ್ಕಾರ ನೇಮಿಸಿರುವ ಸದಸ್ಯರಾಗಲಿ, ಸರ್ಕಾರಿ ಅಧಿಕಾರಿಗಳಾಗಲಿ ಹಾಜರಾಗಿಲ್ಲ. ಆದರೆ ಈಗ ಅಲ್ಲಿನ ಗೆಸ್ಟ್‌ಹೌಸ್‌ಗಳನ್ನು ಸಜ್ಜುಗೊಳಿಸುತ್ತಿರುವ ರೀತಿ ನೋಡಿದರೆ ಅವರೆಲ್ಲ ಪ್ರಥಮಬಾರಿಗೆ ಈ ಸಭೆಗೆ ಹಾಜರಾಗುವ ಸೂಚನೆಗಳನ್ನು ನೀಡುತ್ತಿವೆ. ಹಾಗೊಮ್ಮೆ ಅವರೆಲ್ಲ ಬಂದು ಸರ್ಕಾರದ ಪರ ತಮ್ಮ ಮತ ಚಲಾಯಿಸಿದರೆ ಡೀನ್‌ಗಳು ಸೋತು ವಿವಿಯ ಭೂಮಿ ಸುಲಭವಾಗಿ ವಿಜಯನಗರ ಪುನಶ್ಚೇತನ ಟ್ರಸ್ಟ್‌ನ ಕಳ್ಳರ ಪಾಲಾಗುತ್ತದೆ.

ಒಂದೆಡೆ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಬಾಯಿ ಬಡಿದುಕೊಳ್ಳುತ್ತಿರುವ ಬಿಜೆಪಿ ಸರ್ಕಾರ, ಇನ್ನೊಂದು ಕಡೆ ಕನ್ನಡದ ಉದ್ಧಾರಕ್ಕೆಂದೇ ತಲೆ ಎತ್ತಿದ ವಿವಿಯ ಭೂಮಿಯನ್ನು ಚೆಡ್ಡಿ-ರೆಡ್ಡಿಗಳಿಗೆ ಕೊಡಲು ಹೊರಟಿರುವುದು, ಆ ಮೂಲಕ ವಿವಿಯನ್ನೇ ಅಂಗವಿಕಲವಾಗಿಸಲು ಸಜ್ಜಾಗಿರುವುದು ಕನ್ನಡ ದ್ರೋಹಿ ಕೆಲಸವಲ್ಲದೆ ಇನ್ನೇನು? ಆದ್ದರಿಂದ ಕನ್ನಡವನ್ನು, ಕನ್ನಡ ವಿವಿಯನ್ನು ಯಡ್ಡಿ ಎಂಬ ದುಷ್ಟನಿಂದ, ಚೆಡ್ಡಿಗಳೆಂಬ ಕೋಮುವಾದಿಗಳಿಂದ, ರೆಡ್ಡಿಗಳೆಂಬ ಹುಂಬರಿಂದ ವಿವಿಯ ಕುಲಾಧಿಪತಿಗಳಾಗಿರುವ ರಾಜ್ಯಪಾಲರೇ ರಕ್ಷಿಸಬೇಕಿದೆ. ಅವರು ಈ ನಿಟ್ಟಿನಲ್ಲಿ ಆದಷ್ಟು ಬೇಗ ಆದೇಶವನ್ನು ಹೊರಡಿಸಿ ಇವರೆಲ್ಲರ ಆಟಾಟೋಪಗಳಿಗೆ ಕಡಿವಾಣ ಹಾಕುವಂತಾಗಲಿ. ●

ಒಬ್ಬ ಕಲಾವಿದನನ್ನು ಕಳೆದುಕೊಂಡೆವು!




ದೇಶಬಿಟ್ಟು ಓಡಿಹೋಗುವಂತಹ ಪರಿಸ್ಥಿತಿಯನ್ನು ಎಂ.ಎಫ್.ಹುಸೇನ್‌ಗೆ ಯಾಕೆ ಸೃಷ್ಟಿಸಲಾಯಿತು ಎಂಬುದನ್ನು ಯೋಚನೆ ಮಾಡಿದರೆ ಬಹಳ ಮುಜುಗರ ಉಂಟಾಗುತ್ತದೆ. ಎಂ.ಎಫ್.ಹುಸೇನ್ ಮಾಡಬಾರದ ಅಪರಾಧಗಳನ್ನೇನೂ ಮಾಡಿರಲಿಲ್ಲ. ಅವರು ಹಿಂದೂ ದೇವತೆಗಳನ್ನು ನಗ್ನವಾಗಿ ಚಿತ್ರಿಸುತ್ತಿದ್ದರು ಎಂಬುದೇ ಸಂಘಪರಿವಾರಿಗಳ ಕಣ್ಣು ಕೆಂಪಾಗುವುದಕ್ಕೆ ಕಾರಣ. ಅದರಲ್ಲಿ ಅವಾಸ್ತವಿಕವಾದದ್ದೇನಿದೆ?

...ಇದು ನಮ್ಮ ದೇಶದ ದ್ವಂದ್ವ. ಬೇರೆ ದೇಶದ ...ಕಿಯೊಬ್ಬಳನ್ನು ಆಕೆಯ ದೇಶ ಗಡೀಪಾರು ಮಾಡಿದರೆ ... ಆಕೆಯನ್ನು ಕರೆದು ಆಶ್ರಯ ಕೊಡುತ್ತೇವೆ. ಅದೇ ...ತ್ತನಲ್ಲಿ ನಮ್ಮದೇ ದೇಶದ ಅದ್ಭುತ ಕಲಾವಿದನೊಬ್ಬ ... ಬದುಕಲಾಗದೇ ತನ್ನಿಂದ ತಾನೇ ದೇಶಬಿಟ್ಟು ...ಹೋಗುವ ಪರಿಸ್ಥಿತಿ ಸೃಷ್ಟಿಸುತ್ತೇವೆ.

...ಹೌದು, ಬಾಂಗ್ಲಾ ದೇಶದ ಸುಪ್ರಸಿದ್ಧ ಲೇಖಕಿ ...ಮಾ ನಸ್ರೀನ್ ಮುಸ್ಲಿಂ ಮೂಲಭೂತವಾದವನ್ನು, ...ಸ್ಲಿಂ ಕಟ್ಟರ್‌ಪಂಥೀಯತೆಯನ್ನು, ಕಂದಾಚಾರವನ್ನು ...ಟೀಕಿಸಿ ಬರೆಯುತ್ತಾಳೆಂಬ ...ಕ್ಕೆ ಆ ದೇಶ ಆಕೆಯನ್ನು ...ಪಾರು ಮಾಡಿದಾಗ ನಮ್ಮ ...ಕ ಸರ್ಕಾರ ಆಕೆಗೆ ಆಶ್ರಯ ...ದೆ. ಆಕೆಯ ವೀಸಾ ಅವಧಿ ...ಯುತ್ತಿದ್ದಂತೆಯೇ ಮತ್ತೆ ಅದನ್ನು ...ಸುತ್ತಾ ಆಕೆ ಇಲ್ಲೇ ನೆಲೆಯೂ ...ತೆ ಮಾಡಿದೆ. ಇಲ್ಲೂ ಕೂಡ ...ಸ್ಲಿಂ ಮೂಲಭೂತವಾದಿಗಳು ... ಪ್ರಾಣಕ್ಕೆ ಅಪಾಯ ತಂದೊಡ್ಡ ...ದೆಂಬ ಆತಂಕದಿಂದ ಮುಂಜಾ... ಕ್ರಮವಾಗಿ ಆಕೆಗೆ ಬಿಗಿ ...ಯನ್ನು ಒದಗಿಸಿದೆ. ಜವಾಬ್ದಾರಿ ... ಲೇಖಕಿಯೊಬ್ಬಳು ತನಗನ್ನಿಸಿ ... ಮುಕ್ತವಾಗಿ ಬರೆಯುವುದಕ್ಕೆ ...ಶ ಮಾಡಿಕೊಡುವ ಮೂಲಕ ... ದೇಶವೊಂದು ಆಕೆಯಿಂದ ಕಿತ್ತುಕೊಂಡಿದ್ದ ಅಭಿವ್ಯಕ್ತಿ ...ತ್ರ್ಯವನ್ನು ಮರಳಿ ಕೊಟ್ಟಿದೆ. ನೆರೆಯ ರಾಷ್ಟ್ರದಿಂದ ...ಪಾರಾಗಿ ಪರದೇಶಿ ಜೀವನ ನಡೆಸುತ್ತಿರುವ ...ಕಿಯೊಬ್ಬಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದ ...ರ ಇಷ್ಟೆಲ್ಲಾ ಮಾಡಿದ್ದು ಮೆಚ್ಚಬೇಕಾದ ವಿಚಾರವೇ.

...ಷ್ಟಕ್ಕೇ ಸಂತೃಪ್ತಗೊಂಡು ನಮ್ಮ ಬೆನ್ನನ್ನು ನಾವೇ ...ಳ್ಳುವ ಮೊದಲು ಇದರ ಇನ್ನೊಂದು ಮಗ್ಗುಲನ್ನೂ ... ನಮ್ಮ ಆಧುನಿಕ ಭಾರತ ಕಂಡ ಅತ್ಯದ್ಭುತ ...ದರ ಪೈಕಿ ಒಬ್ಬರಾಗಿರುವ ...ಲ್ ಫಿದಾ ಹುಸೇನ್ (ಎಂ. ...ಹುಸೇನ್) ತನ್ನ ತೊಂಭತ್ತೈದನೇ ...ಯಸ್ಸಿನಲ್ಲಿ ಖತಾರ್ ದೇಶದ ...ವನ್ನು ಪಡೆದುಕೊಂಡಿದ್ದಾರೆ. ...ಮುಂದೆ ಆಧುನಿಕ ವಿಶ್ವದ ...ಾನ್ಯ ಪೇಯಿಂಟರ್‌ಗಳಲ್ಲಿ ...ದ ಎಂ.ಎಫ್.ಹುಸೇನ್ ...ಯ ಎಂದು ನಾವ್ಯಾರೂ ...ಯಿಂದ ಹೇಳಿಕೊಳ್ಳುವ ... ನಮ್ಮ ಭಾರತದ ಸಂವಿಧಾನ ...ರತ್ವಕ್ಕೆ ಅವಕಾಶ ಕೊಡುವು...ದ್ದರಿಂದ ಅವರೀಗ ಕೇವಲ ... ದೇಶದ ಪ್ರಜೆ ಮಾತ್ರ.



...ಮ್ಮದೇ ದೇಶದ ಮಹಾರಾಷ್ಟ್ರದ ...ಪೂರ್‌ನಲ್ಲಿ 1915ರ ಸೆಪ್ಟೆಂಬರ್ 17ರಂದು ... ಎಂ.ಎಫ್.ಹುಸೇನ್‌ಗೀಗ 95ರ ಇಳಿವಯಸ್ಸು. ...ದ್ಭುತ ಪೆಯಿಂಟಿಂಗ್ ಮೂಲಕ ಚಿತ್ರಲೋಕಕ್ಕೆ ...ಭಾಷ್ಯ ಬರೆದ ಅಪ್ರತಿಮ ಕಲಾವಿದ ಅವರು. ... ಚಿರಳಿಣಿಕೆಯಷ್ಟು ಅಮೋಘ ಕಲಾವಿದರಲ್ಲಿ ...ದಲ್ಲಿ ನಿಲ್ಲುವ ಸ್ಪಾನಿಷ್ ಕಲಾವಿದ ಪಾಬ್ಲೋ ... ಅವರಿಗೆ ಹೋಲಿಸುತ್ತಾ ಎಂ.ಎಫ್.ಹುಸೇನ್ ... 'ಭಾರತದ ಪಾಬ್ಲೋ ಪಿಕಾಸ್ಸೋ' ಎಂದು ... ಕರೆಯುವುದುಂಟು. ಅವರ ಕಲಾಪ್ರತಿಭೆಯನ್ನು ...ಯೇ ಭಾರತ ಸರ್ಕಾರ ಅವರಿಗೆ 1955ರಲ್ಲಿ ... ಪ್ರಶಸ್ತಿಯನ್ನೂ ನಂತರ 1973ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. 1986ರಲ್ಲಿ ಅವರನ್ನು ರಾಜ್ಯ ಸಭೆಗೂ ನೇಮಕ ಮಾಡಲಾಗಿತ್ತು. ಎಂ.ಎಫ್.ಹುಸೇನ್ ಕೇವಲ ಒಬ್ಬ ಪೇಯಿಂಟರ್ ಮಾತ್ರ ಅಲ್ಲ, ಅವರೊಬ್ಬ ಅತ್ಯುತ್ತಮ ಫಿಲ್ಮ್ ಮೇಕರ್ ಕೂಡ. 1967ರಲ್ಲಿ ಅವರ ಮಾಡಿದ ಮೊದಲ ಚಿತ್ರ **Through the Eyes of a Painter** ಬರ್ಲಿನ್ ಚಿತ್ರೋತ್ಸವದಲ್ಲಿ ಪ್ರಶಸ್ತಿಯನ್ನೂ ಗೆದ್ದುಕೊಂಡಿತು. ಅಲ್ಲಿಂದಾಚೆಗೆ ಅವರು 'ಗಜಗಾಮಿನಿ', 'ಮೀನಾಕ್ಷಿ'ಗಳನ್ನೂ ಒಳಗೊಂಡಂತೆ ಅನೇಕ ಚಲನಚಿತ್ರಗಳನ್ನು ಕೊಟ್ಟಿದ್ದಾರೆ. ಅವರದ್ದೇ ಆತ್ಮಕತೆ **The Making of the Painter** ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ.

90ರ ದಶಕದಲ್ಲಿ ಅವರು 'ರಾಮಾಯಣ' ಮತ್ತು 'ಮಹಾಭಾರತ'ಗಳ ಮೇಲೆ ಪೇಂಟಿಂಗ್ ಮಾಡುವುದಕ್ಕೆ ಪ್ರಾರಂಭಿಸುವುದರೊಂದಿಗೆ ವಿವಾದದ ಸುಳಿಯಲ್ಲಿ ಸಿಲುಕಿದರು. ಅವರ ಪೇಂಟಿಂಗ್‌ಗಳು ಹಿಂದೂ ದೇವತೆಗಳನ್ನು, ರಾಮಾಯಣ ಮತ್ತು ಮಹಾಭಾರತಗಳ ಪೌರಾಣಿಕ ಪುರುಷರನ್ನು ಅವಹೇಳನ ಮಾಡುವ ರೀತಿಯಲ್ಲಿ ಇವೆ ಎಂದು ಸಂಘಪರಿವಾರಿಗಳು ಹುಯಿಲೆಬ್ಬಿಸಿದರು. ಅವರ ಚಿತ್ರ ಪ್ರದರ್ಶನಗಳ ಮೇಲೆ ನಿರಂತರವಾಗಿ ದಾಳಿ ಮಾಡಿದರು. ಅವರ ಮನೆಯೂ ಸಂಘಪರಿವಾರದ ಗೂಂಡಾಗಳ ದಾಳಿಗೆ ತುತ್ತಾಯಿತು. ಇಡೀ ದೇಶದಾದ್ಯಂತ ಕಂಡಕಂಡಲ್ಲಿ ಅವರ ಮೇಲೆ ಕೇಸುಗಳನ್ನು ಜಡಿದರು. ನಿಮಗೆ ಆಶ್ಚರ್ಯವಾಗಬಹುದು, ಎಂ.ಎಫ್.ಹುಸೇನ್ ಮೇಲೆ ಇಲ್ಲಿಯತನಕ ಒಂದಲ್ಲ, ಎರಡಲ್ಲ ಬರೊಬ್ಬರಿ 1250ಕ್ಕೂ ಹೆಚ್ಚು ಕೇಸುಗಳನ್ನು ಹಾಕಲಾಗಿದೆ! ಕೊನೆಗೆ ಪರಿಸ್ಥಿತಿ ಎಲ್ಲಿಗೆ ಹೋಯಿತೆಂದರೆ ಎಂ.ಎಫ್.ಹುಸೇನ್ ಅವರು ಈ ಕೇಸುಗಳಿಗಾಗಿ ದೇಶದ ಮೂಲೆಮೂಲೆಯನ್ನು ಸುತ್ತುವುದಿರಲಿ, ಅವರಿಗೆ ತಮ್ಮ ಜೀವವನ್ನೇ ಉಳಿಸಿಕೊಳ್ಳುವುದೂ ಕಷ್ಟವಾಗತೊಡಗಿತು.



ಅಗ್ರಶ್ರೇಣಿಯ ಕಲಾವಿದನೊಬ್ಬ ತನ್ನ ಸ್ವಂತ ತಾಯ್ನಾಡಿನಲ್ಲಿ ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಈ ರೀತಿ ಚಿತ್ರವಿಚಿತ್ರ ಹಿಂಸೆ ಅನುಭವಿಸುತ್ತಿರುವಾಗ 'ವಿಶ್ವದ ಅತಿದೊಡ್ಡ ಪ್ರಜಾತಂತ್ರ ದೇಶ' ನಿಜಕ್ಕೂ ಪ್ರಜಾತಂತ್ರ ದೇಶವಾಗಿದ್ದಿದ್ದರೆ ಅವರ ರಕ್ಷಣೆಗೆ ನಿಲ್ಲಬೇಕಿತ್ತು; ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ನಮ್ಮ ಎಲ್ಲಾ ಕಲಾವಿದರು, ಬುದ್ಧಿಜೀವಿಗಳು, ರಾಜಕಾರಣಿಗಳು, ವಿದ್ಯಾರ್ಥಿಗಳು - ಹೀಗೆ ಇಡೀ ನಾಗರಿಕ ಸಮಾಜ ಅವರ ಬೆನ್ನಿಗೆ ನಿಲ್ಲಬೇಕಿತ್ತು. ಒಬ್ಬ ಮಹಾನ್ ಕಲಾವಿದ ಅನ್ನುವ ಕಾರಣಕ್ಕಾಗಿಯಲ್ಲದಿದ್ದರೂ ಆತ ಓರ್ವ ಸಾಮಾನ್ಯ ನಾಗರಿಕ ಅನ್ನುವ ಕಾರಣಕ್ಕಾದರೂ ಸರ್ಕಾರ ಅವರಿಗೆ ರಕ್ಷಣೆ ಒದಗಿಸಬೇಕಿತ್ತು, ಆದರೆ ಆಗಿದ್ದೇನು? ಸರ್ಕಾರ ತನ್ನ ನಾಗರಿಕನನ್ನು ರಕ್ಷಿಸುವ ಜವಾಬ್ದಾರಿಯಿಂದ ಜಾರಿಕೊಂಡಿತು. ನಾಗರಿಕ ಸಮಾಜ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿತು. ಅಂತಿಮವಾಗಿ ಹುಸೇನ್ ಪರವಾಗಿ ಕಲಾವಿದ ಕೃಷ್ಣ ಖನ್ನಾ, ಚಿತ್ರ ನಿರ್ದೇಶಕ ಸಯೀದ್ ಮಿರ್ಜಾ, ಸಾಮಾಜಿಕ ಕಾರ್ಯಕರ್ತೆ ನಫೀಸಾ ಅಲಿ, ರಂಗಭೂಮಿ ಕಲಾವಿದ ಎಂ.ಕೆ.ರೈನಾರಂಥ ಕೆಲವೊಂದಿಷ್ಟು ಜನರ ಚದುರಿದ ದನಿಗಳನ್ನು ಬಿಟ್ಟರೆ ಹುಸೇನ್ ನಿಜಕ್ಕೂ ಅಕ್ಷರಶಃ ಒಂಟಿಯಾಗಿದ್ದರು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಹುಸೇನ್ ಎದುರಿಗೆ ಎರಡು ಆಯ್ಕೆಗಳಿದ್ದವು: ಒಂದು, ಸಂಘಪರಿವಾರದ ಆಣತಿಗೆ ಬಗ್ಗಿ, ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚಿವುಟಿ, ಆತ್ಮವಂಚನೆ ಮಾಡಿಕೊಂಡು ಬದುಕಿರುವುದು; ಎರಡು, ತನ್ನನ್ನು ನೀರೆರೆದು ಪೊರೆದ ತಾಯ್ನಾಡನ್ನು ಬಿಟ್ಟು ಪರದೇಶಕ್ಕೆ ಹೋಗಿಯಾದರೂ ಆತ್ಮವಂಚನೆ ಮಾಡಿಕೊಳ್ಳದೇ ತಮ್ಮ ಭಾವನೆಗಳಿಗೆ ಪೇಂಟಿಂಗ್ ಮೂಲಕ ಮೂರ್ತ ರೂಪ ಕೊಡುವುದನ್ನು ಮುಂದುವರೆಸುವುದು. ಎಂ.ಎಫ್.ಹುಸೇನ್ ಎರಡನೇ ಹಾದಿಯನ್ನೇ ಆಯ್ಕೆ ಮಾಡಿಕೊಂಡರು. 1996ರಲ್ಲಿ ದೇಶ ಬಿಟ್ಟುಹೋಗಿ ದುಬೈನಲ್ಲಿ ನೆಲೆಸುವ ಮೂಲಕ ಸ್ವಯಂಗಡೀಪಾರು ಶಿಕ್ಷೆಯನ್ನು ಅನುಭವಿಸಲಾರಂಭಿಸಿದರು. ಅಲ್ಲಿಂದೀಚೆಗೆ ಅವರು ನಾವು ಯಾವ್ಯಾವ ದೇಶಗಳಲ್ಲಿ ಪ್ರಜಾತಂತ್ರವಿಲ್ಲ, ಸ್ವಾತಂತ್ರ್ಯವಿಲ್ಲ ಎಂದು ಬೊಟ್ಟೆಯಿಡುತ್ತೇವೋ ಆ ಎಲ್ಲಾ ದೇಶಗಳನ್ನೂ ಒಳಗೊಂಡಂತೆ ವಿಶ್ವದ ಎಲ್ಲಾ ದೇಶಗಳಲ್ಲೂ ಬಹಳ ಮುಕ್ತವಾಗಿ ಓಡಾಡುತ್ತಿದ್ದಾರೆ, ವಿಶ್ವದ ಅತಿದೊಡ್ಡ ಪ್ರಜಾತಂತ್ರ ದೇಶವಾದ ಭಾರತವನ್ನು ಬಿಟ್ಟು!

ಈಗ ಖತಾರ್ ದೇಶ ಹುಸೇನ್ ಅವರಿಗೆ ಪೌರತ್ವವನ್ನು ನೀಡಿದೆ. ಹುಸೇನ್ ಅದನ್ನು ಬೇರೆ ವಿಧಿಯಿಲ್ಲದೇ ಸ್ವೀಕರಿಸಿದ್ದಾರೆ. ಪೌರತ್ವ ಸ್ವೀಕರಿಸಿದ ಸಂದರ್ಭದಲ್ಲಿ ಅವರು "ನಾನು ನನ್ನ ತಾಯ್ನಾಡಾದ ಭಾರತವನ್ನು ಬಹಳವಾಗಿ ಪ್ರೀತಿಸುತ್ತೇನೆ. ಆದರೆ ತನ್ನ ತಾಯ್ನಾಡು ನನ್ನನ್ನು ತಿರಸ್ಕರಿಸಿತು" ಎಂದು ನೋವಿನಿಂದ ಹೇಳಿದ್ದಾರೆ. ಅವರ ಈ ಮಾತಿನಲ್ಲಿ ಅತಿಶಯೋಕ್ತಿಯೂ ಇಲ್ಲ, ಢೋಂಗಿ ರಾಷ್ಟ್ರಪ್ರೇಮವೂ ಇಲ್ಲ, ಅದೆಲ್ಲಾ ವಾಸ್ತವವೆ. ಹೀಗೆ ಒಬ್ಬ ಅತ್ಯದ್ಭುತ ಕಲಾವಿದನನ್ನು ಕಳೆದುಕೊಂಡ ಮೇಲೆ ಈಗ ಎಲ್ಲರೂ ಪರಿತಪಿಸುತ್ತಿದ್ದಾರೆ. ನಮ್ಮ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಕಾರ್ಯದರ್ಶಿ ಜಿ.ಕೆ.ಪಿಳ್ಳೈ 'ಹುಸೇನ್ ಭಾರತದ ಪ್ರಜೆ. ಅವರು ಯಾವಾಗ ಬೇಕಾದರೂ ಬರಬಹುದು' ಎಂದಿದ್ದರೆ ಕಟ್ಟಾ ಹಿಂದೂತ್ವವಾದಿ ಆರೆಸ್ಸೆಸ್ ಕೂಡ 'ಹುಸೇನ್ ಸ್ವದೇಶಕ್ಕೆ ಮರಳಿದರೆ ತಮ್ಮ ಅಭ್ಯಂತರವಿಲ್ಲ' ಎಂದಿದೆ. ವಾಸ್ತವದಲ್ಲಿ ಅವರನ್ನು ವಾಪಸ್ ಕರೆಯುವ ಮುನ್ನ ಅವರು ದೇಶಬಿಟ್ಟು ಓಡಿಹೋಗುವ ಪರಿಸ್ಥಿತಿ ನಿರ್ಮಾಣ ಮಾಡಿದವರು ಯಾರು ಎಂಬ ಒಂದು ಆತ್ಮವಿಮರ್ಶಾತ್ಮಕ ಪ್ರಶ್ನೆಯನ್ನಾದರೂ ಕೇಳಿಕೊಳ್ಳಬೇಡವೆ? ಇದೇ ಹುಸೇನ್ ಕಳೆದ ನವೆಂಬರ್‌ನಲ್ಲಿ 'ಗೃಹ ಸಚಿವ ಪಿ.ಚಿದಂಬರಂ ಕರೆದರೆ ಖಂಡಿತಾ ಬರುತ್ತೇನೆ' ಎಂದು ಹೇಳಿದಾಗ ಅವರಿಗೆ ರಕ್ಷಣೆ ಕೊಡುವ ಭರವಸೆ ಕೊಟ್ಟು ಕರೆಯಬಹುದಿತ್ತಲ್ಲವೆ? ಈಗ ಎಲ್ಲಾ ಮುಗಿದ ಮೇಲೆ ಅದೇ ಚಿದಂಬರಂ 'ಹುಸೇನ್ ಮರಳಿ ಬಂದರೆ ಅವರಿಗೆ ರಕ್ಷಣೆ ಕೊಡುತ್ತೇವೆ. ಅವರ ಜೀವಕ್ಕೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಪಾಯವಾಗುವುದಕ್ಕೆ ಬಿಡುವುದಿಲ್ಲ' ಎಂದು ರೋಷಾವೇಶದಿಂದ ಮಾತಾಡುತ್ತಿರುವುದರ ಹಿಂದಿನ ಉದ್ದೇಶವಾದರೂ ಏನು? ಪುಂಡಪೋಕರಿಗೆಲ್ಲಾ ಹಿಂಡುಗಟ್ಟಲೇ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸುವ ಕೇಂದ್ರ ಗೃಹ ಇಲಾಖೆಗೆ ಒಬ್ಬ ಕಲಾವಿದನನ್ನು ರಕ್ಷಿಸಿಕೊಳ್ಳುವುದಕ್ಕೆ ಏಕೆ ಆಗಲಿಲ್ಲ ಎಂದು ಚಿದಂಬರಂ ಎಂದಾದರೂ ಆತ್ಮಾವಲೋಕನ ಮಾಡಿಕೊಂಡು ಈ ಮಾತು ಹೇಳುತ್ತಿದ್ದಾರೆಯೆ?

ದೇಶಬಿಟ್ಟು ಓಡಿಹೋಗುವಂತಹ ಪರಿಸ್ಥಿತಿಯನ್ನು ಎಂ.ಎಫ್.ಹುಸೇನ್‌ಗೆ ಯಾಕೆ ಸೃಷ್ಟಿಸಲಾಯಿತು ಎಂಬುದನ್ನು ಯೋಚನೆ ಮಾಡಿದರೆ ಬಹಳ ಮುಜುಗರ ಉಂಟಾಗುತ್ತದೆ. ಎಂ.ಎಫ್.ಹುಸೇನ್ ಮಾಡಬಾರದ ಅಪರಾಧಗಳನ್ನೇನೂ ಮಾಡಿರಲಿಲ್ಲ. ಅವರು ಹಿಂದೂ ದೇವತೆಗಳನ್ನು ನಗ್ನವಾಗಿ ಚಿತ್ರಿಸುತ್ತಿದ್ದರು ಎಂಬುದೇ ಸಂಘಪರಿವಾರಿಗಳ ಕಣ್ಣು ಕೆಂಪಾಗುವುದಕ್ಕೆ ಕಾರಣ. ಅದರಲ್ಲಿ ಅವಾಸ್ತವಿಕವಾದದ್ದೇನಿದೆ? ನಮ್ಮ ಮಹಾಭಾರತ, ರಾಮಾಯಣ, ಪುರಾಣ ಪುಣ್ಯ ಕತೆಗಳನ್ನೆಲ್ಲಾ ನೋಡಿದರೆ ಇಡೀ ಹಿಂದೂ ಪೌರಾಣಿಕ ಸಾಹಿತ್ಯವೇ ಪ್ರೇಮ, ಕಾಮಗಳಿಂದಲೇ ತುಂಬಿತುಳುಕುತ್ತಿದೆ. ಎಲ್ಲಾ ದೇವಾನುದೇವತೆಗಳೂ ಎಷ್ಟೆಲ್ಲಾ ಪ್ರೇಮಾಟಗಳನ್ನು, ಕಾಮಾಟಗಳನ್ನು ಮಾಡುತ್ತಿದ್ದರೆಂದು ಬಗೆಬಗೆಯಲ್ಲಿ ವರ್ಣಿಸಲಾಗಿದೆ. ಎಲ್ಲಾ ಹಿಂದೂ ದೇವರೂ ಎರಡು, ಮೂರು, ನಾಲ್ಕು, ಕೊನೆಗೆ ಹದಿನಾರು ಸಾವಿರ ಹುಡುಗಿಯರೊಂದಿಗೆ ರತಿಕ್ರೀಡೆ ನಡೆಸುತ್ತಿದ್ದುದನ್ನು ಏನೋ ಮಹತ್ಸಾಧನೆ ಎಂಬಂತೆ ಹೆಮ್ಮೆಯಿಂದ ವರ್ಣಿಸುತ್ತವೆ. ಅದನ್ನೇ ಎಂ.ಎಫ್.ಹುಸೇನ್ ತನ್ನ ಕಲಾಕೃತಿಗಳ ಮೂಲಕ ಮೂರ್ತರೂಪ ಕೊಟ್ಟಿದ್ದಾರಷ್ಟೆ. ಹಾಗೆ ನೋಡಿದರೆ ಈ ರೀತಿ ಹಿಂದೂ ದೇವತೆಗಳನ್ನು ನಗ್ನವಾಗಿ ಚಿತ್ರಿಸುವುದು, 'ಅವಹೇಳನ' ಮಾಡುವುದು ಎಂ.ಎಫ್.ಹುಸೇನ್‌ನಿಂದ ಪ್ರಾರಂಭವಾಗಿದ್ದೂ ಇಲ್ಲ, ಅವರಿಂದ ಕೊನೆಗೊಳ್ಳುವುದೂ ಇಲ್ಲ. ಈ ಹಿಂದೆಯೂ ಬೇಕಾದಷ್ಟು ಕಲಾವಿದರು, ಶಿಲ್ಪಿಗಳು ಆ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ. ಮುಂದೆಯೂ ಮಾಡಲಿದ್ದಾರೆ. ನಮ್ಮ ಬೇಲೂರು ಹಳೇಬೀಡಿನ ಶಿಲಾಬಾಲಕಿಯರನ್ನು ನೋಡಿದರೆ ಸಾಕು ಪ್ರಾಯಶಃ ಇದು ಅರ್ಥವಾಗಬಹುದು. ಆದರೆ, ವ್ಯತ್ಯಾಸವೇನೆಂದರೆ ಉಳಿದವರೆಲ್ಲಾ ಹಿಂದೂಗಳು; ಹುಸೇನ್ ಒಬ್ಬ ಮುಸ್ಲಿಂ. ಅಷ್ಟು ಸಾಕಲ್ಲವೆ ಸಂಘಪರಿವಾರಿಗಳಿಗೆ ಬೆಂಕಿ ಹಚ್ಚುವುದಕ್ಕೆ?

ವಿಶ್ವದ ಅತಿದೊಡ್ಡ ಪ್ರಜಾತಂತ್ರದ ದುರಂತ ನೋಡಿ. ನಿರಂತರವಾಗಿ ಅನ್ಯಧರ್ಮೀಯರ ವಿರುದ್ಧ ದ್ವೇಷಾಗ್ನಿಯನ್ನು ಉಗುಳುವ ಪ್ರವೀಣ್ ತೊಗಾಡಿಯಗಳು, ಪ್ರಮೋದ್ ಮುತಾಲಿಕ್‌ಗಳು, ವರುಣ್ ಗಾಂಧಿಗಳು ಇಲ್ಲಿ ಆರಾಮವಾಗಿದ್ದಾರೆ. 2002ರಲ್ಲಿ ಮೂರು ಸಾವಿರ ಅಮಾಯಕ ಮುಸ್ಲಿಮರನ್ನು ಕೊಂದ ನರೇಂದ್ರ ಮೋದಿ ಭಾರತದ ಪ್ರಧಾನಿಯಾಗುವುದಕ್ಕೆ ಸ್ಪರ್ಧೆಯೊಡ್ಡುತ್ತಾನೆ. 1984ರಲ್ಲಿ ದೆಹಲಿಯ ಹಾದಿಬೀದಿಗಳಲ್ಲಿ ಅಮಾಯಕ ಸಿಖ್ಖರನ್ನು ಕೊಚ್ಚಿಕೊಂದ ಜಗದೀಶ್ ಟೈಟ್ಲರ್, ಹೆಚ್.ಕೆ.ಎಲ್ ಭಗತ್, ಸಜ್ಜನ್ ಕುಮಾರ್‌ಗಳೂ ಕೇಂದ್ರದಲ್ಲಿ ಮಂತ್ರಿ ಮಹೋದಯರಾಗಿ ಮೆರೆಯುತ್ತಾರೆ. ಸಾರ್ವಜನಿಕರ ಬೆವರಿನ ಕೋಟಿಕೋಟಿ ಹಣವನ್ನು ನುಂಗಿರುವ ಜನರ, ನಿತ್ಯ ಒಂದಲ್ಲಾ ಒಂದು ಕೊಲೆ, ಸುಲಿಗೆ, ಅತ್ಯಾಚಾರ, ಭ್ರಷ್ಟಾಚಾರಗಳಲ್ಲಿ ತೊಡಗಿರುವ ಜನ - ಎಲ್ಲರಿಗೂ ರಕ್ಷಣೆ ಸಿಗುತ್ತದೆ. ಆದರೆ ಎಂ.ಎಫ್.ಹುಸೇನ್‌ರಂತಹ ಕಲಾವಿದರಿಗೆ ರಕ್ಷಣೆ ಸಿಗುವುದಿಲ್ಲ; ಅವರು ಇಲ್ಲಿ ಬದುಕಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಯನ್ನು ಸೃಷ್ಟಿಸಿ ದೇಶದಿಂದಲೇ ಓಡಿಹೋಗುವಂತೆ ಮಾಡಲಾಗುತ್ತದೆ. ಎಂ.ಎಫ್.ಹುಸೇನ್ ಖತಾರ್ ದೇಶದ ಪೌರತ್ವವನ್ನು ಒಪ್ಪಿಕೊಂಡ ಮರುದಿನವೇ ಸಜ್ಜನ್ ಕುಮಾರ್‌ಗೆ ದೆಹಲಿ ಹೈಕೋರ್ಟಿನ ನ್ಯಾಯಮೂರ್ತಿ ಎ.ಕೆ.ಪಾಠಕ್ ನಿರೀಕ್ಷಣಾ ಜಾಮೀನು ನೀಡಿದರು. ನಮ್ಮ ದೇಶ ಎಂಥವರನ್ನು ರಕ್ಷಿಸುತ್ತದೆ ಹಾಗೂ ಎಂಥವರನ್ನು ಹೊರದಬ್ಬುತ್ತದೆ ಎಂಬುದಕ್ಕೆ ಇದೊಂದು ಕಾಕತಾಳೀಯ ನಿದರ್ಶನವಲ್ಲವೆ?

ಕೊನೆಯದಾಗಿ ಒಂದು ವಿಚಾರ. ಎಂ.ಎಫ್.ಹುಸೇನ್ ಅವರಿಗೆ ಖತಾರ್ ತನ್ನ ಪೌರತ್ವ ಕೊಟ್ಟ ಒಂದು ವಾರದೊಳಗೆ ಅಲ್ಲಿ ಹೊಸದೊಂದು ವಿವಾದ ಎದ್ದಿದೆ. ಈಗ್ಗೇ ಏಳು ವರ್ಷಗಳ ಹಿಂದೆ ಹುಸೇನ್ ಅವರು ನಗ್ನ ಅರಬ್ ಶೇಕ್ ಚಿತ್ರವನ್ನು ಬಿಡಿಸಿದ್ದರು. ಆಗ ಅದರ ಬಗ್ಗೆ ಅಷ್ಟಾಗಿ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಈಗ ಖತಾರ್ ದೇಶ ಪೌರತ್ವ ಕೊಟ್ಟ ತಕ್ಷಣವೇ ಅಲ್ಲೂ ಕೆಲವೊಂದಿಷ್ಟು ಜನ "ನಗ್ನ ಅರಬ್ ಶೇಕ್ ಚಿತ್ರಬಿಡಿಸಿದವನಿಗೆ ಅರಬ್ ದೇಶವೊಂದು ಪೌರತ್ವ ಕೊಡುವುದು ಎಷ್ಟರಮಟ್ಟಿಗೆ ಸರಿ" ಎಂದು ಹುಯಿಲೆಬ್ಬಿಸಿದ್ದಾರೆ. ಈ ವಿವಾದವನ್ನು ಖತಾರ್ ನಾಗರಿಕರು ಹೇಗೆ ನೋಡುತ್ತಾರೆ, ಅಲ್ಲಿನ ಸರ್ಕಾರ ಅದನ್ನು ಹೇಗೆ ನಿಭಾಯಿಸುತ್ತದೆ ಎಂಬೆಲ್ಲಾ ವಿಚಾರಗಳ ಮೇಲೆ ಹುಸೇನ್ ಅವರ ಭವಿಷ್ಯ ಹಾಗೂ ಖತಾರ್‌ನ ಅಸಲೀ ಸ್ವಭಾವ ಹೊರಜಗತ್ತಿಗೆ ಕಾಣಲಿವೆ. ●

ಕ್ಷಾಮ

ಮಧ್ಯರಾತ್ರಿ ತನ್ನ ಮಗಳ ಕೈಹಿಡಿದು ಗಫೂರ್ ಹೊರಟ. ಅವನಿಗೆ ತನ್ನವರು ಎಂಬ ಯಾರೂ ಆ ಹಳ್ಳಿಯಲ್ಲಿ ಇರಲಿಲ್ಲ. ಯಾರಿಗೂ ಆತ ಏನನ್ನೂ ಹೇಳುವ ಅಗತ್ಯವಿರಲಿಲ್ಲ. ಅಂಗಳವನ್ನು ದಾಟಿ ಈಚಲಮರ ಇದ್ದಲ್ಲಿಗೆ ಬಂದಾಗ ಆತ ಇದ್ದಕ್ಕಿದ್ದಂತೆ ನಿಂತು ಜೋರಾಗಿ ಅಳಲಾರಂಭಿಸಿದ. "ಅಲ್ಲಾಹೂ" ಎಂದು ಉದ್ಗಾರವೆತ್ತಿ ನಕ್ಷತ್ರಗಳು ತುಂಬಿದ್ದ ಆಕಾಶದತ್ತ ಮುಖ ಮಾಡಿದ. "ನನಗೆ ಎಷ್ಟು ಬೇಕಾದರೂ ಶಿಕ್ಷೆ ನೀಡು. ಮಹೇಶ ಬಾಯಾರಿಕೆಯಿಂದ ಸತ್ತ. ಅವನು ಮೇಯಲೆಂದು ಒಂದಿಷ್ಟು ಜಾಗವನ್ನು ಯಾರೂ ಅವನಿಗೆ ಬಿಡಲಿಲ್ಲ. ಜಮೀನ್ದಾರ ಮಾಡಿದ ಪಾಪಕ್ಕೆ ಅವನನ್ನೆಂದೂ ಕ್ಷಮಿಸಬೇಡ. ನೀನು ಕೊಟ್ಟ ಹುಲ್ಲು ಮತ್ತು ನೀರನ್ನೂ ಕೊಡದಿದ್ದ ಪಾಪಿ ಆತ."

ಆ ಹಳ್ಳಿಯ ಹೆಸರು ಕಾಶೀಪುರ. ಅದೊಂದು ಚಿಕ್ಕ ಹಳ್ಳಿ ಆಗಿದ್ದರಿಂದ ಅದರ ಜಮೀನ್ದಾರ ಕೂಡ ಅಷ್ಟೇ ಚಿಕ್ಕ ಭೂಮಾಲೀಕನಾಗಿದ್ದ. ಆದರೂ ಆತನ ವಿರುದ್ಧ ಚಕಾರವೆತ್ತುವ ಧೈರ್ಯ ಅಲ್ಲಿನ ಗೇಣಿದಾರರಿಗೆ ಇರಲಿಲ್ಲ, ಯಾಕೆಂದರೆ ಆತ ಅತ್ಯಂತ ಕ್ರೂರಿ ಆಗಿದ್ದ.

ಅವತ್ತು ಜಮೀನ್ದಾರನ ಕಿರಿಯ ಪುತ್ರನ ಹುಟ್ಟುಹಬ್ಬ. ಅಷ್ಟೊತ್ತಿಗಾಗಲೇ ಮಧ್ಯಾಹ್ನವಾಗಿತ್ತು. ಜಮೀನ್ದಾರನ ಮನೆಯಲ್ಲಿ ಪೂಜೆ ಕಾರ್ಯಗಳನ್ನೆಲ್ಲ ಮುಗಿಸಿದ ಪೂಜಾರಿ ತರ್ಕರತ್ನ ತನ್ನ ಮನೆಗೆ ಹಿಂದಿರುಗುತ್ತಿದ್ದ. ಮೇ ತಿಂಗಳ ಕೊನೆ ದಿನಗಳಾಗಿದ್ದರೂ ಆಕಾಶದಲ್ಲಿ ಒಂದು ಪುಟ್ಟ ಮೋಡವೂ ಕಾಣಸಿಗುತ್ತಿರಲಿಲ್ಲ. ಮಳೆ ಇಲ್ಲದೆ ಗಗನಮಂಡಲ ಬೆಂಕಿಯನ್ನೇ ಉಗುಳುತ್ತಿತ್ತು.

ಹೊಲದ ಅಂಚಿನಲ್ಲಿ ರಸ್ತೆಯ ಪಕ್ಕದಲ್ಲಿ ನೇಕಾರ ಗಫೂರನ ಮನೆ ಇತ್ತು. ಆ ಮನೆಯ ಸುತ್ತಲಿದ್ದ ಮಣ್ಣಿನ ಗೋಡೆ ಕುಸಿದು ಬಿದ್ದಿದ್ದರಿಂದ ಮನೆಯ ಅಂಗಳ ಸಾರ್ವಜನಿಕ ರಸ್ತೆಯೊಂದಿಗೆ ಹೊಂದಿಕೊಂಡಿತ್ತು. ಅಷ್ಟೇ ಅಲ್ಲ, ಮನೆಯಲ್ಲಿದ್ದ ಜನರ ಖಾಸಗಿ ಬದುಕು ರಸ್ತೆಯಲ್ಲಿ ಹಾದುಹೋಗುವವರ ಮರ್ಜಿಗೆ ತೆರೆದುಕೊಂಡಿತ್ತು.

"ಏ! ಗಫೂರ್! ಯಾರಾದರೂ ಇದ್ದೀರಾ?" ಎಂದು ರಸ್ತೆಬದಿಯಲ್ಲಿದ್ದ ಮರದ ನೆರಳಿನಲ್ಲಿ ನಿಂತ ತರ್ಕರತ್ನ ಕೂಗಿದ.

"ನಿಮಗೇನು ಬೇಕು? ಅಪ್ಪನಿಗೆ ಮೈ ಹುಷಾರಿಲ್ಲ" ಎಂದು ಗಫೂರನ ಹತ್ತು ವರ್ಷ ವಯಸ್ಸಿನ ಮಗಳು ಬಾಗಿಲಿಗೆ ಬಂದು ಉತ್ತರಿಸಿದಳು.

"ಜ್ವರ! ಆ ನೀಚನನ್ನು ಕರೆ!"

ಆತನ ಗದ್ದಲವು ಜ್ವರದಿಂದ ನರಳುತ್ತಿದ್ದ ಗಫೂರ್ ಹೊರಬರುವಂತೆ ಮಾಡಿತು. ಕುಸಿದು ಬಿದ್ದಿದ್ದ ಮನೆಯ ಸುತ್ತಲಿನ ಗೋಡೆಗೆ ಅಂಟಿಕೊಂಡಿದ್ದ ಹಳೇ ಜಾಲಿ ಮರಕ್ಕೆ ಒಂದು ಎತ್ತನ್ನು ಕಟ್ಟಿ ಹಾಕಲಾಗಿತ್ತು.

"ನಾನು ಇಲ್ಲಿ ನೋಡುತ್ತಿರುವುದು ಏನನ್ನು? ಇದು ಹಿಂದೂಗಳ ಹಳ್ಳಿ ಎಂಬುದು, ಜಮೀನ್ದಾರ ಕೂಡ ಬ್ರಾಹ್ಮಣ ಎಂಬುದು ನಿನಗೆ ಗೊತ್ತಿಲ್ಲವೆ?" ಎಂದ ತರ್ಕರತ್ನ ವರಾತ ತೆಗೆದ. ಕೋಪ ಮತ್ತು ಸೆಖೆ ಆತನ ಮುಖ ಕೆಂಪೇರುವಂತೆ ಮಾಡಿದ್ದವು. ಆತನ ಮಾತು ಒರಟಾಗಿದ್ದು, ಆಕ್ರೋಶಭರಿತವಾಗಿದ್ದು ಅಚ್ಚರಿಯ ಸಂಗತಿಗಳಾಗಿರಲಿಲ್ಲ. ಆದರೆ ಆತನ ಮಾತಿನ ಅರ್ಥ ಗೊತ್ತಾಗದೆ ಗಫೂರ್ ಮೌನವಾಗಿ ಅವನತ್ತ ದಿಟ್ಟಿಸಿದ.

"ಇದಕ್ಕೆ ಏನಂತೀಯಾ? ಬೆಳಗ್ಗೆ ನಾನು ಇತ್ತ ಹೋಗುವಾಗಲೂ ಈ ಎತ್ತನ್ನು ಇಲ್ಲೇ ಕಟ್ಟಲಾಗಿತ್ತು. ಈಗಲೂ ಇಲ್ಲೇ ಕಟ್ಟಲಾಗಿದೆ. ಆಕಸ್ಮಾತ್ ಈ ಎತ್ತು ಸತ್ತುಹೋದರೆ ನಿನ್ನ ಯಜಮಾನ ನಿನ್ನನ್ನು ಜೀವಂತ ಸಿಗಿಯುತ್ತಾರೆ. ಅವರು ಸಾಮಾನ್ಯ ಬ್ರಾಹ್ಮಣರಲ್ಲ!" ಎಂದ ತರ್ಕರತ್ನ.

"ನಾನೇನು ಮಾಡಲಿ ಅಯ್ಯ? ನಾನು ಅಸಹಾಯಕ. ಕಳೆದ ಕೆಲವು ದಿನಗಳಿಂದ ನನಗೆ ವಿಪರೀತ ಜ್ವರ. ಎತ್ತನ್ನು ಹೊರಗೆ ಕರೆದುಕೊಂಡು ಹೋಗಿ ಮೇಯಿಸದಷ್ಟೂ ಅನಾರೋಗ್ಯ ನನಗೆ."

"ಅದರ ಪಾಡಿಗೆ ಮೇಯೋದಕ್ಕೆ ಅದನ್ನ ಬಿಡಕ್ಕಾಗಲ್ವೇನು?"

"ಎಲ್ಲಿ ಮೇಯಲು ಬಿಡಲಿ ಅಯ್ಯ? ಜನ ತಮ್ಮ ಭತ್ತವನ್ನು ಇನ್ನೂ ಕಣದಲ್ಲೇ ಬಿಟ್ಟಿದ್ದಾರೆ. ಹುಲ್ಲನ್ನೂ ಬೇರೆ ಮಾಡಿಲ್ಲ. ಎಲ್ಲೂ ಒಂದು ಕಡ್ಡಿ ಹಸಿಹುಲ್ಲೂ ಸಿಗದಂತೆ ಬೇಸಿಗೆಯಲ್ಲಿ ಸುಟ್ಟು ಹೋಗಿದೆ. ಎತ್ತನ್ನು ಮೇಯಲು ಬಿಟ್ಟರೆ ಅದು ಬೇರೆಯವರ ಹೊಲಕ್ಕೆ ನುಗ್ಗಿ ಹುಲ್ಲು ಭತ್ತವನ್ನು ತಿನ್ನುತ್ತೆ ಅಷ್ಟೆ."

ಇದನ್ನು ಕೇಳಿ ಸ್ವಲ್ಪ ಮೆದುವಾದ ತರ್ಕರತ್ನ "ಹೋಗಲಿ, ನೆರಳಿನಲ್ಲಾದರೂ ಅದನ್ನು ಕಟ್ಟಿ ಮೇಯಲು ಒಂದಿಷ್ಟು ಹುಲ್ಲನ್ನಾದರೂ ಹಾಕು. ನಿನ್ನ ಮಗಳಿನ್ನೂ ಅನ್ನ ಬೇಯಿಸಿಲ್ಲವೆ. ಎತ್ತಿಗೆ ಗಂಜಿಯನ್ನಾದರೂ ಕೊಡು. ಅದನ್ನಾದರೂ ಕುಡಿಯಲಿ" ಅಂದ.

ಗಫೂರ್ ಉತ್ತರಿಸದೆ ತರ್ಕರತ್ನನತ್ತ ಅಸಹಾಯಕತೆಯಿಂದ ನೋಡಿದ. ಅವನ ಆಳದಿಂದ ನಿಟ್ಟುಸಿರೊಂದು ಹೊಮ್ಮಿತು.

"ಓ, ಅಷ್ಟೂ ಇಲ್ಲವೆ? ನಿನ್ನ ಪಾಲಿಗೆ ಬಂದ ಹುಲ್ಲು ಏನಾಯ್ತು? ನಿನ್ನ ಹೊಟ್ಟೆ ಭರಿಸಲಿಕ್ಕೆ ಅದನ್ನೂ ನೀನು ಮಾರಿಕೊಂಡಿರಬೇಕು. ಎತ್ತಿಗೆ ಅಂತ ಒಂದಿಷ್ಟು ಹುಲ್ಲನ್ನೂ ಉಳಿಸಿಕೊಂಡಿಲ್ಲ, ಎಂತಹ ನಿರ್ದಯಿ ನೀನು!"

ಈ ಕಠೋರ ಆರೋಪವನ್ನು ಕೇಳಿ ಗಫೂರನ ಮಾತು ಉಡುಗಿತು. ಕೆಲಕ್ಷಣ ಸುಧಾರಿಸಿಕೊಂಡ ನಂತರ ಆತ ನಿಧಾನ
ಹೇಳಲಾರಂಭಿಸಿದ. "ಈ ವರ್ಷ ನನ್ನ ಪಾಲಿನ ಹುಲ್ಲು ಬರಬೇಕಿತ್ತು, ಆದ
ಹೋದ ವರ್ಷದ ಗೇಣಿ ಲೆಕ್ಕದಲ್ಲಿ ಯಜಮಾನರೇ ಅದನ್ನು ಇಟ್ಟುಕೊಂಡರು
'ಅಯ್ಯ, ನೀವೇ ನನ್ನ ಧಣಿ ಮತ್ತು ಮಾಲೀಕ. ನಿಮ್ಮ ಭೂಮಿ ಬಿ
ನಾವೆಲ್ಲಿಗೆ ಹೋಗಬೇಕು?' ಎಂದು ಅವರ ಕಾಲಿಗೆ ಬಿದ್ದು ಬೇಡಿಕೊಂ
'ಒಂದಿಷ್ಟಾದರೂ ಹುಲ್ಲು ಕೊಡಿ. ನಾನು ಮತ್ತು ನನ್ನ ಮಗಳು ವಾಸಿಸು
ಗುಡಿಸಲು ಮೇಲೆ ಒಂದಿಷ್ಟೂ ಹುಲ್ಲಿಲ್ಲ. ನಾವಾದರೂ ತಾಳೆ ಗರಿಗಳನ
ಹಾಕಿಕೊಂಡು ಈ ವರ್ಷದ ಮಳೆಗಾಲವನ್ನು ದೂಡುತ್ತೇವೆ. ಆದರೆ ಆಹಾರವಿಲ್ಲ
ನಮ್ಮ ಮಹೇಶ ಹೇಗಿರಲು ಸಾಧ್ಯ' ಎಂದು ಅಂಗಲಾಚಿದೆ."

"ಓಹೋ! ಎತ್ತನ್ನು ಕಂಡರೆ ನಿನಗೆಷ್ಟು ಪ್ರೀತಿ! ಅದಕ್ಕೆ ಮಹೇಶ ಅಂ
ಹೆಸರು ಬೇರೆ ಇಟ್ಟಿದ್ದೀಯ! ಇದೊಳ್ಳೆ ಜೋಕ್ ಕಣಯ್ಯ!"

ಆದರೆ ಆತನ ವ್ಯಂಗ್ಯ ಗಫೂರನಿಗೆ ಅರ್ಥವಾಗಲೇ ಇಲ್ಲ. "ಮಾಲೀಕರು
ನನ್ನ ಮೇಲೆ ಒಂದಿಷ್ಟೂ ಕರುಣೆ ತೋರಲಿಲ್ಲ" ಎಂದು ತನ್ನ ಮಾತ
ಮುಂದುವರಿಸಿದ ಗಫೂರ್ "ನಮಗೂ ಎರಡು ತಿಂಗಳಿಗೆ ಆಗುವಷ್ಟು ಭ
ಕೊಟ್ಟರಷ್ಟೇ. ನನ್ನ ಪಾಲಿನ ಹುಲ್ಲನ್ನೂ ಅವರೇ ಇಟ್ಟುಕೊಂಡರು. ಮಹೇಶನಿ
ಒಂದು ಹುಲ್ಲು ಕಡ್ಡಿಯೂ ಸಿಗಲಿಲ್ಲ."

ಇದನ್ನು ಕೇಳಿ ಒಂದಿಷ್ಟೂ ಕರಗದ ತರ್ಕರತ್ನ "ನೀನು ಅವರಿಂದ ಸಾ
ಪಡೆದಿದ್ದೆಯಲ್ಲಾ? ಅದನ್ನು ತೀರಿಸೋರ್ಯಾರು? ಜಮೀನ್ದಾರರು ನಿನಗೆ ಬಿಟ್ಟಿ
ಊಟ ಹಾಕಿ ಸಾಕಬೇಕೇನು?" ಎಂದ.

"ಆದರೆ ಯಾವುದರಲ್ಲಿ ಸಾಲ ತೀರಿಸಲಿ? ನಾನು ಉತ್ತುವುದೇ ನಾಲ
ಗುಂಟೆ ಭೂಮಿಯನ್ನು, ಕಳೆದ ಎರಡು ವರ್ಷ ಕ್ಷಾಮ ಇದ್ದಿದ್ದರಿಂದ ಹೊಲದಲ್ಲಿ
ಭತ್ತ ಒಣಗಿಹೋಯಿತು. ನನಗೆ ಮತ್ತು ನನ್ನ ಮಗಳಿಗೆ ತಿನ್ನುವುದಕ್ಕೆ ಏನ
ಇಲ್ಲ. ಈ ಗುಡಿಸಲನ್ನು ನೋಡಿ! ಮಳೆ ಬಂದಾಗ ನಾವಿಬ್ಬರೂ ಒಂದ
ಮೂಲೆಯಲ್ಲಿ ಮುದುರಿಕೊಂಡಿರುತ್ತೇವೆ. ಕಾಲುಗಳನ್ನು ಚಾಚಲೂ ಆಗುವುದಿಲ್ಲ
ಮಹೇಶನನ್ನು ನೋಡಿ. ಅವನ ಮೂಳೆಗಳನ್ನು ಎಣಿಸಬಹುದು. ಅವನಿ
ಒಂದೆರಡು ದಿನಕ್ಕೆ ಸಾಕಾಗುವಷ್ಟು ಹುಲ್ಲನ್ನಾದರೂ ನನಗೆ ಕೊಡಿ" ಎಂದ
ಬೇಡುತ್ತಾ ಆ ಬ್ರಾಹ್ಮಣನ ಕಾಲಿಗೆ ಬಿದ್ದ ಗಫೂರ್.

"ಇಲ್ಲ ಇಲ್ಲ, ದೂರ ಸರಿ! ನಾನು ಮನೆಗೆ ಹೋಗ್ತೇನೆ. ಈಗಾಗಲ
ತಡವಾಗಿದೆ" ಎಂದು ನಕ್ಕ ತರ್ಕರತ್ನ. ಅದೇ ಹೊತ್ತಿಗೆ ಎತ್ತು ತರ್ಕರತ್ನನ
ಸರಿದಿದ್ದರಿಂದ ಭಯಗೊಂಡ ಆತ "ಅಯ್ಯೋ ದೇವರೆ! ನನ್ನನ್ನ ಹಾಯೋದ
ಬರ್ತಿದೆ. ನನ್ನನ್ನು ಗುಮ್ಮುತ್ತೇನು?" ಎಂದು ಕೋಪದಿಂದ ಅರಚುತ್ತಾ ದೂ
ಸರಿದ.

ತಡವರಿಸುತ್ತಾ ಎದ್ದು ನಿಂತ ಗಫೂರ್ "ಅವನಿ
ತಿನ್ನುವುದಕ್ಕೆ ಒಂದು ಹಿಡಿ ಬೇಕು" ಎಂದ ತರ್ಕರತ್ನ
ಕೈಯಲ್ಲಿದ್ದ ಅನ್ನ ಮತ್ತು ಹಣ್ಣುಗಳ ಗಂಟನ್ನು ತೋರುತ

"ತಿನ್ನೋದಕ್ಕೆ ಬೇಕೇನು? ಹೌದೌದು! ಮಾಲೀಕನ
ಮೃಗ. ತಿನ್ನೋದಕ್ಕೆ ಹುಲ್ಲಿಲ್ಲದಿದ್ದರೂ ಅನ್ನ ಮತ್ತು ಹ
ಬೇಕು! ಇದನ್ನು ಕರೆದುಕೊಂಡು ಬೇರೆ ಎಲ್ಲಾದರೂ ಕಟ
ಎಂಥ ಕೊಂಬುಗಳು... ಸದ್ಯದಲ್ಲೇ ಯಾರ ಮೇಲಾದರೂ
ಹಾಯ್ದು ಅವರನ್ನು ಕೊಂದರೆ ಅಚ್ಚರಿ ಇಲ್ಲ" ಎಂ
ಗೊಣಗುತ್ತಾ ಆತ ಅಲ್ಲಿಂದ ಹೊರಟ.

ಮಹೇಶನನ್ನು ಗಫೂರ್ ಮೌನವಾ
ನೋಡುತ್ತಾ ನಿಂತ. ಅದರ ಕಂದುಬಣ್ಣ
ಕಣ್ಣುಗಳು ನೋವು ಮತ್ತು ಹಸಿವಿನಿ
ತುಂಬಿದ್ದವು. "ಒಂದು ಹಿಡಿಯಷ್ಟ
ಕೊಡಲಿಲ್ಲ" ಎಂದು ಗೊಣಗಿದ ಗಫೂ
ಮಹೇಶನ ಕತ್ತು ಮತ್ತು ಬೆನ್ನನ್ನು ಸವರಿ
"ನೀನು ನನ್ನ ಮಗ ಮಹೇಶ. ಎಂ
ವರ್ಷ ನಮಗಾಗಿ ದುಡಿದಿರುವ ನಿ
ಈಗ ವಯಸ್ಸಾಗಿದೆ. ನಿನಗೆ ತಿನ್ನ
ಬೇಕಿರುವಷ್ಟನ್ನೂ ಕೊಡಲು ನನ್ನಿ
ಆಗುತ್ತಿಲ್ಲ. ಆದರೂ ನಿನ್ನ ಬಗ್ಗೆ ನ
ತುಂಬಾ ಪ್ರೀತಿ ಇದೆ ಅನ್ನೋದು ನಿ
ಗೊತ್ತಲ್ಲಾ?" ಎಂದು ಆ ಎತ್ತಿಗೆ ಮೆ
ದನಿಯಲ್ಲಿ ಹೇಳಿದ.

ಮಹೇಶ ತನ್ನ ಕತ್ತನ್ನು ಚ
ಸಂತಸದಿಂದ ತನ್ನ ಕಣ್ಣುಗಳನ್ನು ಮುಚ

"ಹೇಳು" ಎಂದು ಮುಂದುವರಿ
ಗಫೂರ್ "ಈ ದರಿದ್ರ ವರ್ಷದಲ್ಲಿ ನ
ನಿನ್ನನ್ನು ಹೇಗೆ ಜೀವಂತ ಇಟ್ಟುಕೊಳ್ಳ
ನಿನ್ನನ್ನು ಕಟ್ಟದೆ ಹಾಗೆ ಬಿಟ್ಟರೆ ನಿ
ಬೇರೆಯವರ ಹೊಲಗಳಿಗೆ ನುಗ್ಗಿ ಅ
ಭತ್ತ ಮತ್ತು ಬಾಳೆ ಗಿಡಗಳನ್ನು ತಿನ್ನ
ನಿನಗೆ ನಾನೇನು ಮಾಡಲಿ?
ದೇಹದಲ್ಲಿ ಒಂದಿಷ್ಟೂ ಶಕ್ತಿ ಉಳಿ
ನೀನು ಯಾರಿಗೂ ಬೇಡ. ಅವ
ಹೇಳ್ತಾರೆ ನಿನ್ನನ್ನ ಕಸಾಯಿಖಾನೆ

ಆ ಯೋಚನೆ ಬರುತ್ತಿದ್ದಂತೆ ಗಫೂ
ಕಣ್ಣುಗಳು ತುಂಬಿಕೊಂಡವು. ಕಣ್ಣೀ
ಕೈಯಿಂದ ಒರೆಸಿಕೊಳ್ಳುತ್ತಾ ಅತ್ತಿತ್ತ ನೋ
ಗಫೂರ್ ಗುಡಿಸಿಲಿನ ಹಿಂಬದಿಯಿಂದ ಆ
ಕಪ್ಪುಗಟ್ಟುತ್ತಿದ್ದ ಒಂದಿಷ್ಟು ಹುಲ್ಲನ್ನು ತಂದು "ಕ
ಇದನ್ನು ಬೇಗನೆ ತಿನ್ನು, ಇಲ್ಲಾ ಅಂದ್ರೆ...." ಎಂದೆನ
ಅದನ್ನು ಮಹೇಶನ ಮುಂದಿಟ್ಟ.

"ಅಪ್ಪಾ...."



...ಏನಮ್ಮಾ?"

...ಬಾ, ಊಟ ಮಾಡು" ಎಂದ ಗಫೂರನ ಮಗಳು ...ಬಳಿ ಬಂದು ನಿಂತಳು.

...ಮತ್ತೆ ಮಹೇಶನಿಗೆ ಗುಡಿಸಲು ಮೇಲಿಂದ ಹುಲ್ಲು ...ಕೊಟ್ಟೆಯಾ?" ಎಂದಳು.

...ಇಲ್ಲ, ಹಳೇ ಹುಲ್ಲು, ಆಗಲೇ ಕೊಳೀತಾ ಇತ್ತು' ಎಂದು ಗಫೂರ್ ಸುಳ್ಳು ಹೇಳಲು ಯತ್ನಿಸಿದ.

...ನೀನು ಅದನ್ನ ಕಿತ್ತದ್ದು ನನಗೆ ಕೇಳಿಸಿತು ಅಪ್ಪಾ"

...ಇಲ್ಲಾ ಮರಿ, ಹಂಗಲ್ಲಾ..."

...ಅಪ್ಪ ನಿನಗೆ ಗೊತ್ತು, ಹುಲ್ಲು ಕಿತ್ತರೆ ಇರೋ ಗೋಡೆನೂ ...ಬೀಳುತ್ತೆ....."

...ಗಫೂರ್ ಸುಮ್ಮನಿದ್ದ. ಈ ಗುಡಿಸಲನ್ನು ಬಿಟ್ಟರೆ ಅವನಲ್ಲಿ ...ಬೇರೇನೂ ಇರಲಿಲ್ಲ. ತಾನು ಹುಷಾರಾಗಿಲ್ಲದಿದ್ದರೆ ಈ ...ಸಲು ಇನ್ನೊಂದು ಮಳೆಗಾಲವನ್ನು ತಡೆಯುವುದಿಲ್ಲ ...ಎಂದೂ ಆತನಿಗೆ ಚೆನ್ನಾಗಿ ಗೊತ್ತಿತ್ತು. ಆದರೂ ಅದರಿಂದ ...ಪ್ರಯೋಜನ ಅಂದುಕೊಂಡ.

...ಕೈ ತೊಳೆದುಕೊಂಡು ಬಾ, ಊಟ ಬಡಿಸಿದ್ದೇನೆ" ...ದು ಆ ಪುಟ್ಟ ಹುಡುಗಿ.

...ಹೋಗಲಿ ಗಂಜಿನಾದರೂ ಕೊಡು, ಮಹೇಶನಿಗೆ ..."

...ಗಂಜಿ ಉಳಿದಿಲ್ಲಪ್ಪ, ಅದೆಲ್ಲ ಮಡಕೆಯಲ್ಲೇ ಬತ್ತಿ ...ಹೋಗಿದೆ."

...ದಾಗಿ ಒಂದು ವಾರ ಕಳೆದಿರಬೇಕು. ಜ್ವರ ಮತ್ತು ...ದಿಂದ ಗಫೂರ್ ತನ್ನ ಮನೆಯ ಅಂಗಳದಲ್ಲಿ ಕೂತಿದ್ದ. ...ನ್ನ ದಿನದಿಂದ ಮಹೇಶ ಮನೆಗೆ ಹಿಂದಿರುಗಿರಲಿಲ್ಲ, ...ಆತ ಸಂಪೂರ್ಣವಾಗಿ ಅಸಹಾಯಕನಾಗಿದ್ದ. ...ಯಿಂದಲೇ ಅಮೀನಾ ಆ ಎತ್ತಿಗಾಗಿ ಎಲ್ಲೆಡೆ ...ಹುಡುಕಾಡಿದ್ದಳು. ಆಕೆ ಸಂಜೆ ಮನೆಗೆ ಹಿಂದಿರುಗಿದಾಗ ...ರ್ಯನ ಕಿರಣ ಉದ್ದನೆ ನೆರಳುಗಳನ್ನು ಮೂಡಿಸುತ್ತಿತ್ತು. ...ಗೊತ್ತಾ ಅಪ್ಪ? ಮಹೇಶನನ್ನು ಮಾನಿಕ್ ಘೋಷ್ ...ಪೊಲೀಸ್ ಠಾಣೆಗೆ ಕಳುಹಿಸಿದ್ದಾರಂತೆ" ಎಂದಳು.

...ಛೆ! ಹಾಗೆ ಮಾಡಿರಲ್ಲ!"

...ನಿಜ ಅಪ್ಪ, ಅವರ ಮನೆ ಕೆಲಸದವನು 'ನಿಮ್ಮ ...ಗಿ ದರಿಯಾಪುರದಲ್ಲಿ ಹುಡುಕಲು ನಿಮ್ಮ ಅಪ್ಪನಿಗೆ ...' ಅಂದ."

...ಮಹೇಶ ಏನು ಮಾಡಿದನಂತೆ?"

...ಅವರ ತೋಟಕ್ಕೆ ನುಗ್ಗಿದನಂತೆ."

...ಗಫೂರ್ ಏನನ್ನೂ ಹೇಳದೆ ಸುಮ್ಮನಿದ್ದ.

...ಇನ್ನು ಮೂರು ದಿನ ಆದ ಮೇಲೆ ಪೊಲೀಸರು ...ನ್ನು ಕಸಾಯಿಖಾನೆಗೆ ಮಾರುತ್ತಾರಂತೆ."

...ಮಾರಲಿ ಬಿಡು."

...ಕಸಾಯಿಖಾನೆ' ಅಂದರೇನು ಎಂಬುದು ಅಮೀನಾಳಿಗೆ ...ರಲಿಲ್ಲ. ಆದರೆ ಮಹೇಶನಿಗೆ ಸಂಬಂಧಿಸಿದಂತೆ ಆದರ ...ತ ಬಂದಾಗಲೆಲ್ಲ ತನ್ನ ಅಪ್ಪ ದುಗುಡಗೊಳ್ಳುವುದನ್ನು ...ಸಿದ್ದಳು. ಆದರೆ ಇವತ್ತು ಮಾತ್ರ ಒಂದು ಮಾತನ್ನೂ ...ದೆ ಹೊರಗೆ ಹೋಗಿದ್ದ.

...ರಾತ್ರಿಯ ಕತ್ತಲಿನಲ್ಲಿ ಗಫೂರ್ ಗುಟ್ಟಾಗಿ ಬನ್ನಿಯ ...ಅಂಗಡಿಗೆ ಬಂದು ಆತನ ಮುಂದೆ ಒಂದು ...ಯ ತಟ್ಟೆ ಇಟ್ಟು "ದಯಮಾಡಿ ನನಗೆ ಒಂದು ...ಯಿ ಸಾಲ ನೀಡಿ" ಎಂದು ಕೇಳಿದ. ಬನ್ನಿಗೆ ಆ ...ತಟ್ಟೆ ಚೆನ್ನಾಗಿ ಗೊತ್ತಿತ್ತು, ಕಳೆದ ಎರಡು ವರ್ಷಗಳಲ್ಲಿ ...ಮೇಲೆಯೇ ಕನಿಷ್ಠ ಐದು ಬಾರಿ ಸಾಲ ಕೊಟ್ಟಿದ್ದ. ...ದ ಈ ಬಾರಿಯೂ ಆತ ಚಕಾರ ಎತ್ತಲಿಲ್ಲ.

...ಾರನೆ ದಿನ ಬೆಳಗ್ಗೆ ಮಹೇಶ ತನ್ನ ಎಂದಿನ ಜಾಗದಲ್ಲಿ ..., ಆತನನ್ನು ವಯಸ್ಸಾದ ಮುಸಲ್ಮಾನನೊಬ್ಬ ತೀಕ್ಷ್ಣವಾಗಿ ...ಸುತ್ತಿದ್ದ. ಹತ್ತಿರದಲ್ಲೇ ಗಫೂರ್ ಮುದುಡಿಕೊಂಡು ...ಮೇಲೆ ಕೂತಿದ್ದ. ಪರೀಕ್ಷೆ ಮುಗಿಸಿದ ಮುದಿಯ ...ವೆಲ್ಲಿನ ತುದಿಯಲ್ಲಿ ಕಟ್ಟಿಟ್ಟಿದ್ದ ಹತ್ತು ರೂಪಾಯಿ ...ಒಂದನ್ನು ಹೊರತೆಗೆದು, ಅದನ್ನು ಮತ್ತೆ ಮತ್ತೆ ...ಸವರಿ "ತಗೋ. ನಾನೇನು ಚೌಕಾಶಿ ಮಾಡಲ್ಲ ...ಬಾಬ್ತು ಕೊಡುತ್ತಿದ್ದೇನೆ" ಅಂದ.

...ಗಫೂರ್ ಕೈಚಾಚಿ ಆ ಹಣವನ್ನು ಪಡೆದನಾದರೂ ...ವಾಗಿದ್ದ. ಮುದಿಯನೊಂದಿಗೆ ಬಂದಿದ್ದ ಇಬ್ಬರು ...ರು ಮಹೇಶನ ಕುತ್ತಿಗೆಗೆ ಕಟ್ಟಿದ್ದ ಹಗ್ಗವನ್ನು ಹಿಡಿದಾಗ ...ಥಟ್ಟನೆ ಎದ್ದು ನಿಂತು "ಮುಟ್ಟಬೇಡಿ, ನಾನು ...ನೆ, ಆ ಹಗ್ಗವನ್ನು ಮುಟ್ಟಬೇಡಿ, ಜೋಕೆ" ಎಂದು ...ವಾಗಿ ಕೂಗಿದ.

...ವರೆಲ್ಲರಿಗೂ ಆಚ್ಚರಿಯಾಯಿತು. "ಯಾಕೆ?" ಎಂದು ...ದು ಕೇಳಿದ.

...ಸಾಧ್ಯವೇ ಇಲ್ಲ, ಅವನು ನನ್ನ ವಸ್ತು, ಅವನನ್ನು ...ಮಾರಲ್ಲ, ಅವನು ನನಗೆ ಬೇಕಾದವನು" ಎಂದು ...ತ್ತಾ ತನ್ನ ಕೈಯಲ್ಲಿದ್ದ ನೋಟನ್ನು ಗಫೂರ್ ಎಸೆದ.

...ದರೆ ನಿನ್ನೆ ಮುಂಗಡ ಹಣವನ್ನೂ ತಗೊಂಡಿದ್ದೆ" ...ಆ ಮೂವರೂ ಒಕ್ಕೊರಲಿನಿಂದ ಕೇಳಿದರು.

...ಅದನ್ನೂ ವಾಪಸ್ಸು ತಗೊಳ್ಳಿ" ಎಂದು ಗಫೂರ್ ...ರೂಪಾಯಿಗಳನ್ನು ಎಸೆದ.

...ಕಷ್ಟಪಡುವವರನ್ನು ಬೇಡಿ ಗಂಜಿ ಪಡೆದ ಗಫೂರ್ ...ಮಹೇಶನಿಗೆ ಕುಡಿಸಿದ. ಆತನ ತಲೆ ಮತ್ತು ಕೊಂಬುಗಳನ್ನು ನೇವರಿಸುತ್ತಾ ಮುದ್ದಾಡಿದ.

ಜೂನ್ ತಿಂಗಳು ಬಂತು. ಭಾರತದ ಬೇಸಿಗೆ ಕಾಲವನ್ನು ಬಲ್ಲವರಿಗೆ ಆಕಾಶ ಎಷ್ಟು ಭೀಕರವಾಗಿಯೂ, ಸೆಖೆ ಎಷ್ಟು ನಿರ್ದಾಕ್ಷಿಣ್ಯವಾಗಿಯೂ ಇರುತ್ತದೆಂದು ಗೊತ್ತಿರುತ್ತದೆ. ಯಾವ ದಿಕ್ಕಿನಿಂದಲೂ ದಯೆ ಎಂಬುದು ಕಂಡುಬರುವುದಿಲ್ಲ. ಇವತ್ತಾದರೂ ಆಕಾಶ ಬದಲಾಗಬಹುದು, ಆವಿಯನ್ನು ಹೊತ್ತ ಮೆದುವಾದ ಮೋಡಗಳು ಮೂಡಬಹುದು ಎಂದೂ ಯೋಚಿಸಲಾಗದಂತಹ ದಿನಗಳವು. ಧಗಧಗಿಸುವ ಇಡೀ ಆಕಾಶವೇ ನಿರಂತರವಾಗಿ, ಭೂಮಿ ಇರುವವರೆಗೂ ಉರಿಯುತ್ತಲೇ ಇರುತ್ತದೆ ಎಂದೆನಿಸುವ ಕಾಲವದು. ಗಫೂರ್ ಮಧ್ಯಾಹ್ನ ಮನೆಗೆ ಹಿಂದಿರುಗಿದ. ದಿನಗೂಲಿಯಾಗಿ ಕೆಲಸ ಮಾಡಿ ಅವನಿಗೆ ಅಭ್ಯಾಸವಿರಲಿಲ್ಲ, ನಾಲ್ಕೈದು ದಿನಗಳ ಹಿಂದೆಯಷ್ಟೇ ಜ್ವರ ಬಿಟ್ಟಿದ್ದರಿಂದ ಆತ ಇನ್ನೂ ನಿಶಕ್ತನಾಗಿದ್ದ.

ಅವನು ಎಲ್ಲೆಲ್ಲೂ ಕೆಲಸ ಹುಡುಕಿದರೂ ಸಿಕ್ಕಿರಲಿಲ್ಲ. ಹಸಿವು, ಬಾಯಾರಿಕೆ, ದಣಿವು ಆತನನ್ನು ಮುತ್ತಿದ್ದವು. "ಅಡುಗೆ ಆಗಿದೆಯಾ ಅಮೀನಾ ಮರಿ?" ಎಂದು ಅಂಗಳದಿಂದಲೇ ಕೇಳಿದ.

ಮನೆ ಬಾಗಿಲಿಗೆ ಬಂದು ನಿಂತ ಅವನ ಮಗಳು ಯಾವ ಉತ್ತರವನ್ನೂ ನೀಡದೆ ಸುಮ್ಮನಿದ್ದಳು.

"ಯಾಕೆ ಸುಮ್ಮನಿದ್ದೀಯಾ? ಆಗಿದೆಯೋ ಇಲ್ವೋ?"

"ಮನೆಯಲ್ಲಿ ಅಕ್ಕಿ ಇಲ್ಲ ಅಪ್ಪ"

"ಅಕ್ಕಿ ಇಲ್ಲವಾ? ಬೆಳಗ್ಗೇನೆ ಯಾಕೆ ಹೇಳಲಿಲ್ಲ?"

"ಯಾಕೆ? ನಿನ್ನೆ ರಾತ್ರಿನೇ ಹೇಳಿದೆನಲ್ಲಾ?"

"ರಾತ್ರಿನೇ ಹೇಳಿದೆನಲ್ಲಾ" ಎಂದು ಆಕೆಯನ್ನು ಅನುಸರಿಸುವ ರೀತಿಯಲ್ಲಿ ಹೇಳಿದ ಗಫೂರ್ "ನೀನು ರಾತ್ರಿ ಹೇಳಿದ್ದು ನನಗೆ ಹೇಗೆ ನೆನಪಿರಬೇಕು?" ಎಂದ. ಆತನ ದನಿಯೇ ಆತನಲ್ಲಿ ಕೋಪ ಉಕ್ಕೇರಿ ಬರುವಂತೆ ಮಾಡಿತು. "ಹೌದು, ಅಕ್ಕಿ ಇಲ್ಲ" ಎಂದು ಆತ ಘರ್ಜಿಸಿದಾಗ ಅವನ ಮುಖ ವಿರೂಪಗೊಂಡಿತು. "ನಿನ್ನ ಅಪ್ಪ ಊಟ ಮಾಡದಿದ್ದರೆ ನಿನಗೇನಾಗಬೇಕು ಹೇಳು? ಆದರೆ ನಿನಗೆ ಮಾತ್ರ ಮೂರು ಹೊತ್ತೂ ಊಟ ಬೇಕು! ಇನ್ನು ಮುಂದೆ ನಾನು ಹೊರಗೆ ಹೋದಾಗ ಅಕ್ಕಿಯನ್ನು ಕೂಡಿಟ್ಟು ಹೋಗ್ತೇನೆ. ಹೋಗಲಿ ಕುಡಿಯೋದಕ್ಕೆ ನೀರನ್ನಾದರೂ ಕೊಡು, ಬಾಯಾರಿಕೆ ಆಗ್ತಿದೆ.... ಏನು ಕುಡಿಯೋ ನೀರೂ ಇಲ್ಲವೇನು?"

ಅಮೀನಾ ತಲೆ ಬಾಗಿಸಿ ನಿಂತಿದ್ದಳು. ಮನೆಯಲ್ಲಿ ಒಂದು ಹನಿ ನೀರೂ ಇಲ್ಲವೆಂದು ಅರಿತ ಗಫೂರ್ ತನ್ನ

ಕತೆ

ಮೂಲ: ಶರತ್‌ಚಂದ್ರ ಚಟರ್ಜಿ

ಗೌರಿ ಲಂಕೇಶ್

ಎಲ್ಲ ಆತ್ಮಸಂಯಮವನ್ನೂ ಕಳೆದುಕೊಂಡ. ಮಗಳತ್ತ ಧಾವಿಸಿ ಅವಳ ಕೆನ್ನೆಗೆ ಬಾರಿಸಿದ. "ದರಿದ್ರ ಹುಡುಗಿ! ದಿನ ಪೂರ್ತಿ ಏನು ಮಾಡುತ್ತಿದ್ದೆ? ಎಷ್ಟೋ ಜನ ಸಾಯ್ತಾರೆ-ನೀನು ಯಾಕೆ ಸಾಯಲ್ಲ?"

ಹುಡುಗಿ ಒಂದು ಮಾತನ್ನೂ ಆಡಲಿಲ್ಲ. ಖಾಲಿ ಬಿಂದಿಗೆಯನ್ನು ಹೊತ್ತು, ಕಣ್ಣೀರನ್ನು ಒರೆಸಿಕೊಳ್ಳುತ್ತಾ ಮಟಮಟ ಮಧ್ಯಾಹ್ನವೇ ಹೊರಟಳು.

ಆಕೆ ಹೋದನಂತರ ದುಃಖ ಅವನನ್ನು ಆವರಿಸಿತು. ತಾಯಿ ಇಲ್ಲದ ಆ ಹುಡುಗಿಯನ್ನು ಎಷ್ಟು ಜತನದಿಂದ ಬೆಳೆಸಿದ್ದ ಎಂಬುದು ಅವನೊಬ್ಬನಿಗೇ ಗೊತ್ತಿತ್ತು. ತನ್ನ ಪ್ರೀತಿಯ, ವಿಧೇಯತೆಯ, ಹೆಚ್ಚು ಮಾತನಾಡದ ತನ್ನ ಮಗಳ ತಪ್ಪು ಇದರಲ್ಲಿ ಇಲ್ಲವೆಂದೂ ಅವನಿಗೆ ಗೊತ್ತಿತ್ತು. ಅವರಿಬ್ಬರು ಎಂದೂ ಒಂದು ಹೊತ್ತೂ ಹೊಟ್ಟೆ ತುಂಬ ಉಂಡವರಲ್ಲ, ಇನ್ನು ಮೂರು ಹೊತ್ತು ಊಟ ಮಾಡುವ ಮಾತೆಲ್ಲಿಂದ ಬಂತು? ಮನೆಯಲ್ಲಿ ನೀರಿಲ್ಲದ್ದಕ್ಕೆ ಕಾರಣವೂ ಆತನಿಗೆ ಗೊತ್ತಿಲ್ಲದ್ದೇನಲ್ಲ. ಹಳ್ಳಿಯಲ್ಲಿದ್ದ ಮೂರು ಬಾವಿಗಳೂ ಬತ್ತಿದ್ದವು. ಜಮೀನ್ದಾರ ಶಿಬು ಬಾಬುವಿನ ಖಾಸಗಿ ಬಾವಿಯಲ್ಲಿ ಒಂದಿಷ್ಟು ನೀರಿತ್ತಾದರೂ ಅದು ಎಲ್ಲರಿಗೂ ಲಭ್ಯವಿರಲಿಲ್ಲ. ಇದ್ದ ಒಂದೆರಡು ಬಾವಿಗಳ ಆಳದಲ್ಲಿ ಗುಂಡಿಗಳನ್ನು ಕೊರೆಯಲಾಗಿತ್ತಾದರೂ ಅಲ್ಲಿನ ನೀರಿಗೆ ಎಂತಹ ನೂಕುನುಗ್ಗಲಿತ್ತೆಂದರೆ ಈ ಪುಟ್ಟ ಹುಡುಗಿಗೆ ಬಾವಿಯ ಹತ್ತಿರ ಹೋಗುವುದಕ್ಕೂ ಸಾಧ್ಯವಿರಲಿಲ್ಲ. ಗಂಟೆಗಟ್ಟಲೆ ಕಾದು, ಅಲ್ಲಿದ್ದವರನ್ನು ಕಾಡಿಬೇಡಿದ ನಂತರವೇ ಇವಳ ಮೇಲೆ ಯಾರಾದರೂ ಕರುಣೆ ತೋರಿದರೆ ಒಂದಿಷ್ಟು ನೀರು ಕೊಡುತ್ತಿದ್ದರು. ಇದೆಲ್ಲವೂ ಅವನಿಗೆ ಗೊತ್ತಿತ್ತು. ಪ್ರಾಯಶಃ ಇವತ್ತು ನೀರಿರಲಿಲ್ಲವೋ, ಅಥವಾ ಯಾರೂ ಈಕೆಯ ಮೇಲೆ ಕರುಣೆ ತೋರಲಿಲ್ಲವೋ ಎಂದು ಯೋಚಿಸಿದ ಆತನ ಕಂಗಳು ತುಂಬಿದವು.

"ಗಫೂರ್! ಮನೆಯಲ್ಲಿದ್ದೀಯಾ?" ಎಂದು ಯಾರೋ ಹೊರಗಿನಿಂದ ಕೂಗಿದರು. ಜಮೀನ್ದಾರ ತನ್ನ ದೂತನನ್ನು ಕಳುಹಿಸಿದ್ದ.

"ಹೌದು, ಇದ್ದೇನೆ. ಏನು?" ಎಂದು ಗಫೂರ್ ಕಟುವಾಗಿಯೇ ಕೇಳಿದ.

"ಧಣಿಗಳು ನಿನಗೆ ಬರಹೇಳಿದ್ದಾರೆ, ಬಾ."

"ನಾನಿನ್ನೂ ಊಟ ಮಾಡಿಲ್ಲ, ಆಮೇಲೆ ಬರುತ್ತೇನೆ."

ಇಂತಹ ಉದ್ಧಟತನವನ್ನು ಸಹಿಸಲಾಗಲಿಲ್ಲ ದೂತನಿಗೆ. "ನಿನ್ನನ್ನು ಎಳೆದುಕೊಂಡು ಬಂದು ಸರಿಯಾಗಿ ಬಾರಿಸಿರಿ ಎಂದಿದ್ದಾರೆ ಮಾಲೀಕರು" ಎಂದು ಗುಡುಗಿದ ಆತ ಕೆಟ್ಟ ಪದಗಳನ್ನು ಉಪಯೋಗಿಸಿದ.

ಎರಡನೆ ಬಾರಿ ಗಫೂರ್ ತನ್ನ ಆತ್ಮಸಂಯಮವನ್ನು ಕಳೆದುಕೊಂಡ. "ನಾವು ಯಾರ ಗುಲಾಮರೂ ಅಲ್ಲ" ಎಂದು ಉತ್ತರಿಸಿದ ಗಫೂರ್ ಕೂಡ ಕೆಟ್ಟ ಪದಗಳನ್ನು ಉಪಯೋಗಿಸಿದ. ಜೊತೆಗೆ "ನಾವು ಇಲ್ಲಿರೋದಕ್ಕೆ ಬಾಡಿಗೆ ಕೊಡುತ್ತೇವೆ, ನಾನು ಬರಲ್ಲ, ಹೋಗು" ಎಂದ.

ಈ ಜಗತ್ತಿನಲ್ಲಿ ಅಧಿಕಾರಸ್ಥರ ಮುಂದೆ ಸಣ್ಣವರು ಬೇಡಿಕೊಳ್ಳುವುದು ನಿಷ್ಪ್ರಯೋಜಕ ಮಾತ್ರವಲ್ಲ, ಹಲವೊಮ್ಮೆ ಅಪಾಯಕಾರಿ ಕೂಡ. ಅದೃಷ್ಟವಶಾತ್ ಹಲವೊಮ್ಮೆ ಸಣ್ಣವರ ಮಾತು ದೊಡ್ಡವರ ಕಿವಿಗಳಿಗೆ ಬೀಳುವುದಿಲ್ಲ; ಬಿದ್ದರೆ ಅವರಿಗೆ ಇನ್ನೆಂತಹ ಗತಿ ಕಾದಿರುತ್ತದೊ? ಜಮೀನ್ದಾರನ ಮನೆಯಿಂದ ಹಿಂದಿರುಗಿ ನೆಲದ ಮೇಲೆ ಚಾಚಿಕೊಂಡ ಗಫೂರನ ಮುಖ ಮತ್ತು ಕಣ್ಣುಗಳು ಬಾತುಕೊಂಡಿದ್ದವು. ಅವನ ಈ ವೇದನೆಗೆ ಮುಖ್ಯ ಕಾರಣ ಮಹೇಶ. ಬೆಳಗ್ಗೆ ಗಫೂರ್ ಮನೆಯಿಂದ ಹೊರಟ ನಂತರ ತನ್ನನ್ನು ಕಟ್ಟಿ ಹಾಕಿದ್ದ ಹಗ್ಗವನ್ನು ಹರಿದು ಓಡಿಹೋಗಿದ್ದ ಮಹೇಶ ಜಮೀನ್ದಾರನ ಭೂಮಿಗೆ ನುಗ್ಗಿ ಅಲ್ಲಿನ ಹೂವುಗಳನ್ನು ಮತ್ತು ಬಿಸಿಲಿನಲ್ಲಿ ಒಣಗಿಹಾಕಿದ್ದ ಜೋಳವನ್ನೆಲ್ಲ ತಿಂದಿದ್ದ. ಅವನನ್ನು ಹಿಡಿಯಲು ಯತ್ನಿಸಿದಾಗ ಜಮೀನ್ದಾರನ ಚಿಕ್ಕ ಮಗಳಿಗೆ ಗಾಯ ಮಾಡಿ ತಪ್ಪಿಸಿಕೊಂಡಿದ್ದ. ಮಹೇಶ್ ಹೀಗೆ ಮಾಡಿದ್ದು ಇದೇ ಪ್ರಥಮ ಬಾರಿ ಅಲ್ಲ. ಆದರೆ ಗಫೂರ್ ಬಡವನಾಗಿದ್ದರಿಂದ ಅವನನ್ನು ಕ್ಷಮಿಸಲಾಗುತ್ತಿತ್ತು. ಈ ಬಾರಿಯೂ ಹಿಂದಿನಂತೆ ಗಫೂರ್ ತೆಪ್ಪಗೆ ಬಂದು ಜಮೀನ್ದಾರನ ಕ್ಷಮೆ ಕೇಳಿದ್ದರೆ ಎಲ್ಲವೂ ಸರಿ ಇರುತ್ತಿತ್ತು. ಆದರೆ ತಾನು ಬಾಡಿಗೆ ಕೊಡುವುದಾಗಿಯೂ, ತಾನು ಗುಲಾಮನಲ್ಲ ಎಂದೂ ಅಬ್ಬರಿಸಿದ್ದ. ಸಹಜವಾಗಿಯೇ ಜಮೀನ್ದಾರ ಶಿಬು ಬಾಬುಗೆ ಇದನ್ನು ಸಹಿಸಲಾಗಲಿಲ್ಲ. ಗಫೂರ್ ಯಾವ ಪ್ರತಿಭಟನೆಯೂ ಇಲ್ಲದೆ ಹೊಡೆತಗಳನ್ನು ತಿಂದಿದ್ದ. ಮನೆಯಲ್ಲೂ ಮರುಮಾತಿಲ್ಲದೆ ಒಂದು ಮೂಲೆಯಲ್ಲಿ ಸುಮ್ಮನೆ ಮಲಗಿದ್ದ. ಹಸಿವು ಮತ್ತು ಬಾಯಾರಿಕೆಯನ್ನು ಮರೆತಿದ್ದ ಆತನ ಹೃದಯ ಮಾತ್ರ ಹೊರಗಿನ ಸೂರ್ಯನಂತೆ ಒಳಗೊಳಗೆ ಸುಡುತ್ತಿತ್ತು. ತಾನು ಎಷ್ಟು ಹೊತ್ತು ಹಾಗೆ ಮಲಗಿದ್ದೆ ಎಂಬುದೂ ಆತನಿಗೆ ಗೊತ್ತಿರಲಿಲ್ಲ.

ಉತ್ಸಾಹಶೂನ್ಯನಾಗಿ ಬಿದ್ದಿದ್ದ ಆತ ಎಚ್ಚರಗೊಂಡಿದ್ದು ಹುಡುಗಿ ಚೀರಿಕೊಂಡಾಗ. ಆತ ನೋಡುತ್ತಾನೆ, ಆಕೆ ನೆಲದ ಮೇಲೆ ಬಿದ್ದಿದ್ದಾಳೆ. ಆಕೆ ತಂದಿದ್ದ ಬಿಂದಿಗೆ ನೆಲಕ್ಕುರುಳಿ ಅದರಿಂದ ಹರಿಯುತ್ತಿರುವ ನೀರನ್ನು ಮಹೇಶ ಕುಡಿಯುತ್ತಿದ್ದಾನೆ. ಗಫೂರ್‌ಗೆ ಹುಚ್ಚು ಹಿಡಿದಂತಾಯಿತು. ಮರುಕ್ಷಣವೇ ಹತ್ತಿರದಲ್ಲಿದ್ದ ನೇಗಿಲು ದಂಡನ್ನು ಎರಡೂ ಕೈಗಳಲ್ಲಿ ಎತ್ತಿ ಮಹೇಶನ ತಲೆಯ ಮೇಲೆ ಜೋರಾಗಿ



ಬಾರಿಸಿದ. ಮಹೇಶ ಒಮ್ಮೆ ಮಾತ್ರ ತನ್ನ ತಲೆಯನ್ನು ಎತ್ತಲು ಪ್ರಯತ್ನಿಸಿದ. ಆದರೆ ಹಸಿವಿನಿಂದ ನಿಶ್ಶಕ್ತವಾಗಿದ್ದ ಆತನ ಬಡಕಲು ದೇಹ ನೆಲಕ್ಕುರುಳಿತು. ಆತನ ಕಿವಿಗಳಿಂದ ಹಲ ರಕ್ತದ ಹನಿಗಳು ನೆಲದ ಮೇಲೆ ತೊಟ್ಟಿಕ್ಕಿದವು. ಒಂದೆರಡು ಬಾರಿ ಆತನ ಇಡೀ ದೇಹ ನಡುಗಿತು. ಆನಂತರ ನಾಲ್ಕು ಕಾಲುಗಳನ್ನು ಚಾಚಿಕೊಂಡ ಮಹೇಶ ಸತ್ತು ಬಿದ್ದ. "ನೀನು ಏನು ಮಾಡಿದೆ ಅಪ್ಪಾ? ನಮ್ಮ ಮಹೇಶ ಸತ್ತು ಹೋದ", ಎಂದು ಅಮೀನಾ ಅಳಲಾರಂಭಿಸಿದಳು.

ಗಫೂರ್ ಅಲುಗಾಡಲೂ ಇಲ್ಲ, ಅವಳಿಗೆ ಉತ್ತರವನ್ನೂ ಕೊಡಲಿಲ್ಲ. ಆತ ಸುಮ್ಮನೆ ಕೂತು ಜೀವ ಕಳೆದುಕೊಂಡಿದ್ದ ಆ ಕಂದುಬಣ್ಣದ ಕಣ್ಣುಗಳನ್ನೇ ದಿಟ್ಟಿಸುತ್ತಿದ್ದ.

ಇದಾಗಿ ಎರಡು ಗಂಟೆಗಳೂ ಉರುಳಿರಲಿಲ್ಲ, ಊರಿನ ಹೊರಗೆ ವಾಸಿಸುತ್ತಿದ್ದ ಚಮ್ಮಾರರು ಬಂದು ಮಹೇಶನನ್ನು ಬಿದಿರಿನ ಕಂಬಗಳಿಗೆ ಕಟ್ಟಿಕೊಂಡು ಹೊರಟುಹೋದರು. ಅವರ ಕೈಗಳಲ್ಲಿದ್ದ ಹರಿತ ಚಾಕುಗಳನ್ನು ನೋಡಿ ಕಂಪಿಸಿದ ಗಫೂರ್ ತನ್ನ ಕಣ್ಣುಗಳನ್ನು ಮುಚ್ಚಿಕೊಂಡ.

ತರ್ಕರತ್ನನಿಗೆ ಜಮೀನ್ದಾರ ಹೇಳಿ ಕಳುಹಿಸಿದ್ದಾನೆಂದೂ, ಪೂಜ್ಯ ಗೋವನ್ನು ಹತ್ಯೆ ಮಾಡಿದ್ದಕ್ಕೆ ಗಫೂರನಿಗೆ ಎಂತಹ ಶಿಕ್ಷೆ ನೀಡಬೇಕೆಂಬುದರ ಬಗ್ಗೆ ತರ್ಕರತ್ನನ ಸಲಹೆಗಳನ್ನು ಜಮೀನ್ದಾರ ಕೋರಿದ್ದಾನೆಂದೂ ಅಕ್ಕಪಕ್ಕದವರು ಗಫೂರನಿಗೆ ತಿಳಿಸಿದರು.

ಇದ್ಯಾವುದಕ್ಕೂ ಪ್ರತಿಕ್ರಿಯಿಸದ ಗಫೂರ್ ತನ್ನ ಮಂಡಿಯ ಮೇಲೆ ಗಲ್ಲಗಳನ್ನಿಟ್ಟು ಕೂತಿದ್ದ.

ಮಧ್ಯರಾತ್ರಿ ನಿದ್ರಿಸುತ್ತಿದ್ದ ತನ್ನ ಮಗಳನ್ನು ಎಬ್ಬಿಸಿದ ಗಫೂರ್ "ಅಮೀನಾ ಮರಿ, ಬಾ, ಹೊರಡೋಣ" ಎಂದ.

ತನ್ನ ಕಣ್ಣುಗಳನ್ನುಜ್ಜುತ್ತಾ ಎದ್ದ ಅಮೀನಾ "ಎಲ್ಲಿಗೆ ಅಪ್ಪಾ?" ಎಂದಳು.

"ನಗರದಲ್ಲಿರುವ ಸೆಣಬಿನ ಮಿಲ್‌ನಲ್ಲಿ ಕೆಲಸ ಮಾಡಲು" ಎಂದ ಅಪ್ಪ.

ಆತನನ್ನು ಆ ಹುಡುಗಿ ಆಚ್ಚರಿಯಿಂದ ನೋಡಿದಳು. ತನ್ನ ಎಲ್ಲ ಕಷ್ಟಕಾರ್ಪಣ್ಯಗಳ ನಡುವೆಯೂ ನಗರಕ್ಕೆ ಹೋಗಲು ನಿರಾಕರಿಸಿದ್ದ ಆಕೆಯ ತಂದೆ, "ಅಲ್ಲಿ ಧರ್ಮ, ಮರ್ಯಾದೆ, ಖಾಸಗಿ ಯಾವುದೂ ಇರಲ್ಲ" ಎಂದೇ ಹಲವಾರು ಬಾರಿ ಹೇಳಿದ್ದನ್ನು ಆಕೆ ಕೇಳಿಸಿಕೊಂಡಿದ್ದಳು.

"ಬೇಗ, ಬೇಗ ಕಂದ. ನಾವು ತುಂಬಾ ದೂರ ಹೋಗಬೇಕಿದೆ" ಎಂದ ಗಫೂರ್.

ಅಮೀನಾ ಕುಡಿಯುವ ಲೋಟ ಮತ್ತು ಅಪ್ಪನ ಹಿತ್ತಾಳೆ ತಟ್ಟೆಯತ್ತ ಕೈಚಾಚಿದಾಗ "ಅದನ್ನ ಅಲ್ಲೇ ಬಿಡು ಮರಿ. ಮಹೇಶನಿಗಾಗಿದ್ದಕ್ಕೆ ಅದೇ ಪ್ರಾಯಶ್ಚಿತ್ತ" ಎಂದ.

ಮಧ್ಯರಾತ್ರಿ ತನ್ನ ಮಗಳ ಕೈಹಿಡಿದು ಗಫೂರ್ ಹೊರಟ. ಅವನಿಗೆ ತನ್ನವರು ಎಂಬ ಯಾರೂ ಆ ಹಳ್ಳಿಯಲ್ಲಿ ಇರಲಿಲ್ಲ. ಯಾರಿಗೂ ಆತ ಏನನ್ನೂ ಹೇಳುವ ಅಗತ್ಯವಿರಲಿಲ್ಲ, ಅಂಗಳವನ್ನು ದಾಟಿ ಈಚಲಮರ ಇದ್ದಲ್ಲಿಗೆ ಬಂದಾಗ ಆತ ಇದ್ದಕ್ಕಿದ್ದಂತೆ ನಿಂತು ಜೋರಾಗಿ ಅಳಲಾರಂಭಿಸಿದ. "ಅಲ್ಲಾಹೂ" ಎಂದು ಉದ್ಗಾರವೆತ್ತಿ ನಕ್ಷತ್ರಗಳು ತುಂಬಿದ್ದ ಆಕಾಶದತ್ತ ಮುಖ ಮಾಡಿದ. "ನನಗೆ ಎಷ್ಟು ಬೇಕಾದರೂ ಶಿಕ್ಷೆ ನೀಡು. ಮಹೇಶ ಬಾಯಾರಿಕೆಯಿಂದ ಸತ್ತ. ಅವನು ಮೇಯಲೆಂದು ಒಂದಿಷ್ಟು ಜಾಗವನ್ನು ಯಾರೂ ಅವನಿಗೆ ಬಿಡಲಿಲ್ಲ. ಜಮೀನ್ದಾರ ಮಾಡಿದ ಪಾಪಕ್ಕೆ ಅವನನ್ನೆಂದೂ ಕ್ಷಮಿಸಬೇಡ. ನೀನು ಕೊಟ್ಟ ಹುಲ್ಲು ಮತ್ತು ನೀರನ್ನೂ ಮಹೇಶನಿಗೆ ಕೊಡದಿದ್ದ ಪಾಪಿ ಆತ."

ಅವರಿಬ್ಬರೂ ನಗರದತ್ತ ಹೆಜ್ಜೆ ಇಟ್ಟರು.

'ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ'

ಲಂಕೇಶರ ಬರಹಗಳಿಗೆ ಓದುಗನೊಬ್ಬನ ಪ್ರತಿ ಸ್ಪಂದನೆ


• ಕೆ. ಫಣಿರಾಜ್



"ಇನ್ನೂ ಲಂಕೇಶರು ಭಾರತದ ಜನ 'ಮೌಢ್ಯಗಳಿಗೆ ತಮ್ಮನ್ನು ತಾವು ಕೊಟ್ಟುಕೊಂಡು, ಲಂಚಗುಳಿಗಳು, ಸೋಮಾರಿಗಳು, ಸಹಜೀವಿಗಳನ್ನು ವಂಚಿಸುವ ದುಷ್ಟರೂ' ಆಗಿರುವುದರಿಂದ ದೇಶದ ಸ್ಥಿತಿ ಕೆಟ್ಟದಾಗಿದೆ ಎಂದೂ, 'ಶುದ್ಧ ಹಸ್ತರು, ಶ್ರಮಜೀವಿಗಳು, ತಮ್ಮ ನಾಡಿನ ಸಂಪತ್ತನ್ನು ವಿವೇಚನೆಯಿಂದ ಬಳಸುವ ಜಾಣ್ಮೆ ಇರುವ ಜನರಿಂದ' 'ಸುಂದರ, ಸುಖಿ ಸಮಾಜ'ವನ್ನು ಕಟ್ಟಬಲ್ಲವರೆಂದೂ ನಂಬಿದ್ದರು ('ಅಲ್ಲೊಂದು ಸುಖದ, ಸುಂದರ ನಾಡು', 'ಟೀಕೆ-ಟಿಪ್ಪಣಿ-2?'). ಅವರ ಈ ಸಾಮಾಜಿಕ ಆದರ್ಶವಂತೂ ನನಗೆ, ವಿದೇಶ ಪ್ರವಾಸ ಮುಗಿಸಿ ಬಂದ ರೋಟರಿ-ಲಯನ್ಸ್ ಕ್ಲಬ್ಬುಗಳ ವರಿಷ್ಠರು ಅಪ್ಪಟ ಕನ್ನಡ ನುಡಿಗಟ್ಟಿನಲ್ಲಿ ಮಾಡಿದ ಭಾಷಣದ ಹಾಗೆ ಕಂಡು, ಎಲ್ಲಿ ನನ್ನ 'ದೈವ' ಕಳೆದುಹೋದಿತೋ ಎಂಬ ಹೆದರಿಕೆಯಲ್ಲಿ 'ತಲೆಮಾರು' ಕವನ ಸಂಕಲನವನ್ನು ಮತ್ತೊಮ್ಮೆ ಇಡಿಯಾಗಿ ಓದಿದ್ದೂ ಇದೆ. ಇಷ್ಟಿದ್ದೂ, ಲಂಕೇಶರ ಬರಹಗಳನ್ನು ಈಗಲೂ ಯಾಕೆ ಓದಿಕೊಳ್ಳುತ್ತಿದ್ದೇನೆ? ಹೊಳೆಯುವಷ್ಟು ಕಾರಣಗಳನ್ನು ಮಾತ್ರ ಈಗ ಹೇಳಬಲ್ಲೆ.

1970ರಲ್ಲಿ ಲಂಕೇಶ್, ಅಕ್ಷರ ಪ್ರಕಾಶನದ ವತಿಯಿಂದ ಪ್ರಕಟವಾದ 'ಅಕ್ಷರ ಹೊಸ ಕಾವ್ಯ' ಎಂಬ ಆಧುನಿಕ ಕನ್ನಡ ಕವಿತೆಗಳ 'ಐತಿಹಾಸಿಕ' ಸಂಕಲನವನ್ನು ಸಂಪಾದನೆ ಮಾಡಿದರು. ಸಂಕಲನಕ್ಕೆ ಲಂಕೇಶ್ ಬರೆದ ಪ್ರಸ್ತಾವನೆ ಪದ್ಯಪ್ರಿಯರಲ್ಲಿ ಇಂದಿಗೂ ರೋಚಕತೆಯನ್ನು ಹುಟ್ಟಿಸುವ ಬರಹವಾಗಿದೆ. ಈ ಸಂಕಲನದಲ್ಲಿ ಲಂಕೇಶ್ ಕೆ.ಎಸ್.ನರಸಿಂಹಸ್ವಾಮಿಯವರ ನಾಲ್ಕು ಪದ್ಯಗಳನ್ನು ಆಯ್ದುಕೊಂಡಿದ್ದಾರೆ ಮತ್ತು ಪ್ರಸ್ತಾವನೆಯಲ್ಲಿ ನರಸಿಂಹಸ್ವಾಮಿಯವರ ಕಾವ್ಯದ ಬಗ್ಗೆ ಸಂದರ್ಭದ ಔಚಿತ್ಯವನ್ನು ಮೀರದೆ, ಆಡಬೇಕಾದ ತನ್ನ ಮಾತುಗಳನ್ನು ಅಳುಕಿಲ್ಲದೆ ಆಡಿದ್ದಾರೆ. ಇದರಲ್ಲೇನು ವಿಶೇಷ? ನರಸಿಂಹಸ್ವಾಮಿಯವರು ಕನ್ನಡಿಗರಿಗೆ ಚಿರಪರಿಚಿತರಾಗಿರುವುದು ಅವರ 'ಮೈಸೂರು ಮಲ್ಲಿಗೆ' ಕವನ ಸಂಕಲನದಿಂದ. ಈ ಸಂಕಲನದಲ್ಲಿರುವ ಪದ್ಯಗಳು ಲಿಂಗ, ಜಾತಿ, ಸಭ್ಯ ಕುಟುಂಬಗಳ ಕುರಿತಾಗಿ ಕಟ್ಟಿಕೊಡುವ ಚಿತ್ರ ಕರ್ನಾಟಕದಲ್ಲಿ ರೂಢಿಯಲ್ಲಿದ್ದ ಸಾಮಾಜಿಕ ಯಜಮಾನಿಕೆಗೆ ತನ್ನ ರಮ್ಯತೆಯ ಸೊಗಸಿನ ಸೋಗಿನಲ್ಲಿ ಪ್ರಬಲವಾದ ಸಮರ್ಥನೆಯನ್ನು ಅನಾಯಾಸವಾಗಿ ಒದಗಿಸಿ ಕೊಡುತ್ತವೆ. ಹಾಗೆಂದೆ, ಈ ಜಾಗತೀಕರಣದ ಯುಗದಲ್ಲಿಯೂ ಕರ್ನಾಟಕದ ಸಭ್ಯ ಸಂಸಾರಸ್ಥರಿಗೆ 'ಮೈಸೂರು ಮಲ್ಲಿಗೆ' ಒಂದು ಆದರ್ಶ! ಸಾಮಾನ್ಯವಾಗಿ ಎಡಪಂಥೀಯರಿಗೆ ಉಕ್ಕಿ ಬಂದರೆ ನರಸಿಂಹಸ್ವಾಮಿ ಜಾತಿವಾದಿ ಎಂದು ಜಡೆದು ತೃಪ್ತರಾಗಬಹುದು ಮತ್ತೂ ಅವರ ಒಟ್ಟು ಕಾವ್ಯ ಪ್ರತಿಗಾಮಿ ಎಂದೇ ಚಿತ್ರಿಸಿಬಿಡಬಹುದು. ಇದು ಬಂಡುಕೋರತನವನ್ನು ತೋರುವ ಒಂದು ವಿಧಾನ ಸರಿ; ಆದರೆ, ಈ ರೀತಿ ಕನ್ನಡದ ಓದುಗರಿಗೆ ಆ ಕಾವ್ಯದ ಯಜಮಾನಿಕೆಯ ಸೂಕ್ಷ್ಮವನ್ನು ಅರ್ಥಮಾಡಿಸಲಾಗುವುದಿಲ್ಲ. ಲಂಕೇಶರ ಸೂಕ್ಷ್ಮ ತನ್ನ ಎಲ್ಲ ಕಸುವಿನಲ್ಲಿ ಪ್ರಕಟವಾಗುವುದು ಇಂಥ ಗಳಿಗೆಗಳಲ್ಲಿ. 'ಐತಿಹಾಸಿಕ' ಸಂಕಲನದಲ್ಲಿ 'ಕ್ಯಾತ' 'ಮೈಸೂರು ಮಲ್ಲಿಗೆ' ಪದ್ಯಗಳಿಗೆ ಸ್ಥಾನ ನಿರಾಕರಿಸುವುದು ಒಂದು ಬಗೆಯ ದಿಟ್ಟತೆ. ಆದರೆ, ಲಂಕೇಶ್ ಅಂತಹ ಯಜಮಾನಿಕೆಗಳಿಗೆ ಇಷ್ಟೇ ಪ್ರತಿಕ್ರಿಯೆ ತೋರಿ ಸುಮ್ಮನಾಗುವ ಜಾಯಮಾನದವರಲ್ಲ; ಆ ಕಾವ್ಯದ ಸೋಗಲಾಡಿತನವನ್ನು ಅದರ ಸಂದರ್ಭದಲ್ಲಿಯೇ ಎದುರಿಸಿ, ಕಾವ್ಯದ ಸೂಕ್ಷ್ಮಕ್ಕೆ ಧಕ್ಕೆ ತರದಂತೆ ಒಂದು ಇಕ್ಕಬೇಕಾಗುತ್ತದೆ. ಲಂಕೇಶ್ ಕೊಡುವ ಕಾವ್ಯದ ಗುದ್ದು ಹೀಗಿದೆ: "ಸಿರಿಗೆರೆಯ ನೀರು,/ಮುತ್ತೂರು ತೇರು;/ಪ್ರಿಯತಮನ ಕರೆಗೆ/ಇವಳು ಸದಾ ಹೊರಗೆ;/ನನ್ನ ಹಸಿದ ಹಲ್ಲಿಗೆ/ನಿಮ್ಮ ಮೈಸೂರು ಮಲ್ಲಿಗೆ" ('ಕೆ.ಎಸ್.ನ.','ತಲೆಮಾರು', ಪು.24, ಅಕ್ಷರ ಪ್ರಕಾಶನ, 1973).

ಈ ಬಗೆಯ ಯಜಮಾನಿಕೆಗೆ ಅದರ ವ್ಯಾಕರಣದಲ್ಲಿಯೇ ಗುದ್ದಿದ್ದ ಮತ್ತೊಬ್ಬ ಕನ್ನಡದ ಕವಿ ಎಂದರೆ ಎ.ಕೆ.ರಾಮಾನುಜನ್ ಮಾತ್ರ. ಲಂಕೇಶ್ ತಾವು ತಮ್ಮ ಬಾಲ್ಯದಲ್ಲಿಯೇ ಕುಡುಮಿಯಾದದ್ದಕ್ಕೆ ಕಾರಣಗಳನ್ನೂ, ಆ ಕುಡುಮಿತನವನ್ನೇ ಸಮಾಜವನ್ನು ಎದುರಿಸುವ ಆಯುಧ ಮಾಡಿಕೊಳ್ಳಬೇಕಾಗಿ ಬಂದ ಸಂದರ್ಭಗಳನ್ನೂ, ತಮ್ಮ ಆತ್ಮಚರಿತ್ರೆಯಲ್ಲೂ, ಇನ್ನು ಕೆಲವು ಪ್ರಬಂಧಗಳಲ್ಲಿಯೂ ಬರೆದಿದ್ದಾರೆ. ಆಗಿನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಲಂಕೇಶ್, ಪುಟ್ಟಪ್ಪನವರ ಶೈಲಿಯಲ್ಲಿ ಪದ್ಯ ಬರೆಯುವ ಮೂಲಕ ತನಗೂ ಪ್ರತಿಭೆ ಇದೆ ಎಂದು ದಾಖಲಿಸಿ, ನಂತರ ಅಡಿಗರ ನಾಯಕತ್ವದ 'ನವ್ಯ ಕಾವ್ಯ' ಚಳವಳಿಯ ಪ್ರಮುಖ ಕವಿಯಾದವರು. ಆದರೆ ಲಂಕೇಶರಿಗೆ 'ನವೋದಯ'ದ ಹಾಗೆ 'ನವ್ಯ' ಬರಿ ದಾಖಲೆಯ ಮಾರ್ಗವಾಗಿರದೆ, ಒಂದು ಲೋಕಗ್ರಹಿಕೆಯ ಪ್ರಜ್ಞೆಯೂ ಆಗಿ ಮಾರ್ಪಟ್ಟಿತ್ತು ಹಾಗು ಅಡಿಗರನ್ನು 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂದೂ ಅವರು ಬಣ್ಣಿಸಿದ್ದರು. ಆದರೆ ಲಂಕೇಶ್, ತನ್ನ ಬಾಲ್ಯದಿಂದಲೂ ಕಂಡುಂಡ ಗ್ರಾಮ-ಲಿಂಗ-ಜಾತಿ-ಅಂತಸ್ತುಗಳ ಶ್ರೇಣೀಕರಣದ ಫಲವಾದ ಅಪಮಾನಗಳನ್ನು, ಅಡಿಗರ ಸಾಮಾಜಿಕ ಹಿನ್ನೆಲೆಯಲ್ಲಿ ರೂಪಪಡೆದ ಪ್ರಜ್ಞೆಯು 'ಅಜ್ಜ ನೆಟ್ಟಾಲಕ್ಕೆ' ಜೋತು ಬೀಳಿಸುವಂತೆಯೂ ಇರಲಿಲ್ಲ, ಅಡಿಗರು ನಿಜಕ್ಕೂ ತಮ್ಮ ಕಾವ್ಯದ ಮೂಲಕ ಸಾಂಸ್ಥಿಕ ಯಜಮಾನಿಕೆಗಳ ಕೊರಳುಪಟ್ಟಿ ಹಿಡಿಯುವ 'ರ್‍ಯಾಡಿಕಲ್ ಅನಾರ್ಕಿಸ್ಟ್' ನಾಯಕನ ಪ್ರತಿಮೆಯನ್ನು ಕಡೆದಿದ್ದರು, ಆ ಗರಡಿಯಲ್ಲಿ ಲಂಕೇಶರೂ ಪಳಗಿದ್ದರು. ಆದರೆ ಲಂಕೇಶರ ಸಾಮಾಜಿಕ ಹಿನ್ನೆಲೆಗೆ ಆ ಪ್ರತಿಮೆಯ ಸ್ವರೂಪವನ್ನೇ ಬದಲಾಯಿಸುವ ಅಗತ್ಯವಿತ್ತು, ಲಂಕೇಶರು ಅದನ್ನು ಸಾಧಿಸಿದ ರೀತಿಯೇ ಅವರ ಕಾವ್ಯಕ್ಕೆ ಮತ್ತೆ ಮತ್ತೆ ನಮ್ಮನ್ನು ಸೆಳೆಯುತ್ತದೆ: 'ಆಹಾ! ಆರ್ಯಪುತ್ರ! ಎಂಥ ಸಂಸ್ಕೃತಿ, ಎಂಥ ಸ್ಥಿತಿ, ಅಂತ ಅಡಿಗ-/ ಗಡಿಗೆ ಸ್ಟಂಟ್ ಹಾಕಿ ನಿಲ್ಲಬೇಕೆನ್ನಿಸುತ್ತೆ-ಆದರೆ' ('ದೇಶಭಕ್ತ ಸೂಳೆಮಗನ ಗದ್ಯಗೀತೆ', 'ತಲೆಮಾರು', ಅದೇ). ನಾನೂ ಭಾಗವಾಗಿದ್ದ ಬಂಡಾಯ ಕಾವ್ಯ ಮಾರ್ಗ ತನ್ನ ಚಳವಳಿಯ ಧಾಷ್ಟಿತನದಲ್ಲಿ ಲಂಕೇಶರ ಪ್ರತಿಭಟನೆಯ ಈ ಮೌಲ್ಯಗಳನ್ನು ಅಸಡ್ಡೆ ಮಾಡಿತು- ಲಂಕೇಶರ 'ಡಂಬಾಯ' ಟೀಕೆಯ ಮೊನಚು ನನ್ನನ್ನೂ ಹೀಗೂ ಚುಚ್ಚುತ್ತದೆ.



ಇಪ್ಪತ್ತನೆಯ ಶತಮಾನದ ಫಲವಾದ 'ಅಸ್ತಿತ್ವವಾದಿ ತತ್ವಶಾಸ್ತ್ರ'ದ ಪರಿಕಲ್ಪನೆಯನ್ನು ಕನ್ನಡದ ನುಡಿಗಟ್ಟಿಗೆ ಪರಿಚಯಿಸಿದವರು 'ನವ್ಯ'ರು- ಅದರಲ್ಲೂ ಅಡಿಗರು ಪ್ರಮುಖರು. ಸಾಮಾಜಿಕವಾಗಿ ಮನುಷ್ಯರ ಮೇಲೆ ಹೇರಿಕೊಂಡ 'ಪರಂಪರೆಯ' ಭಾರವನ್ನು ಕಿತ್ತೆಸೆದಾಕ್ಷಣದ ಸ್ವತಂತ್ರ ಸ್ಥಿತಿಯಲ್ಲಿ ಹುಟ್ಟುವ ಸಾಮಾಜಿಕ ಶೂನ್ಯತೆಯ ನೋವು, ಅ ನೋವಿನಲ್ಲಿ ನಾವೇ ರೂಪಿಸಿಕೊಳ್ಳಬೇಕಾದ ಹೊಸ ಅಸ್ತಿತ್ವ ಸ್ವರೂಪದ ಹುಡುಕಾಟಕ್ಕೆ ಅಡಿಗರ ಕಾವ್ಯ ಹೆಗ್ಗುರುತು ಎಂಬುದು ಸರಿ. ಆದರೆ ದಕ್ಷಿಣ ಏಶಿಯದಲ್ಲಿ 'ಪರಂಪರೆ'ಯು ಕಲ್ಪನೆ ಬಹುಮುಖವಾದದ್ದು. 'ಪರಂಪರೆ'ಯನ್ನು ನಿರೂಪಿಸುವಲ್ಲಿ ಹಾಕಿಕೊಳ್ಳುವ ಕಾಲದ ಚೌಕಟ್ಟಿನಲ್ಲಿಯೂ, ಪ್ರದೇಶದ ಚೌಕಟ್ಟಿನಲ್ಲಿಯೂ ಏಕನಮೂನೆ ಎಂಬುದು ಇಲ್ಲವೇ ಇಲ್ಲ, ಈ ಅರ್ಥದಲ್ಲಿ ಅಡಿಗರು ಕಟ್ಟಿಕೊಡುವ 'ಪರಂಪರೆಯ' ಚಿತ್ರದಲ್ಲಿಯೇ ಒಂದು ರಾಜಕೀಯವಿದೆ, ಹಾಗಾಗಿ ಅವರ ಕಾವ್ಯ ನಿರೂಪಿಸುವ 'ಅಸ್ತಿತ್ವವಾದ'ವೇ ಸಮಸ್ಯೆಯಿಂದ ಕೂಡಿದೆ ಎಂದು ವಾದಿಸುವವ ನಾನು. ಈ ಹಿನ್ನೆಯಲ್ಲಿ, ಮತ್ತೆ ಲಂಕೇಶ್ ಹಾಗು ರಾಮಾನುಜನ್ ಇವರುಗಳೇ ಕನ್ನಡದ ನುಡಿಗಟ್ಟಿನಲ್ಲಿ 'ಅಸ್ತಿತ್ವವಾದ'ವನ್ನು ಕಟ್ಟಿದ ನಿಜ ನಾಯಕರು- ಚರ್ಚಾಸ್ಪದವಾದರೂ ಸೈ- ಎಂದು ನಾನು ಹೇಳಬಲ್ಲೆ.

ಲಂಕೇಶರಿಗೆ 'ಪರಂಪರೆ' ಶುರುವಾಗುವುದು ತನ್ನ ಅಜ್ಜ ಮತ್ತು ಆತನ ಸಮಕಾಲೀನನಾದ ಗಾಂಧೀಜಿ -ಇವರುಗಳ ಬದುಕಿನ ಪಾಡಿನ ನಿರೂಪಣೆಯಿಂದ; ಗಾಂಧಿ-ಅಜ್ಜ, ಸ್ವತಂತ್ರ ಭಾರತದ ಅಧಿಕಾರಸ್ಥ ಮಂದಿ-ತನ್ನ ಅಪ್ಪ-ಅವ್ವ, ಈ ಎರಡು ತಲೆಮಾರುಗಳ ರಾಜಕೀಯ-ಸಾಮಾಜಿಕ ಜೀವನದ ಅನುಭವಗಳೇ ಭಾರವಾಗಿರುವಾಗ, ತ್ರೇತಾಯುಗದಿಂದ ಶುರುಮಾಡಿಕೊಂಡು ಯುಗ-ಯುಗಗಳನ್ನು ಹಾರುತ್ತ ಬರುವ 'ಪರಂಪರೆ'ಯ ಚಿತ್ರವೇ ಲಂಕೇಶರಿಗೆ ನಮ್ಮ ಅಸ್ತಿತ್ವದ ನಿಜವನ್ನು ಮರೆಸುವ ಕಣ್ಕಟ್ಟಾಗಿ ಕಾಣುತ್ತದೆ. ಈ ಅರಿವು ಲಂಕೇಶರ ಬರಹದ ಬದುಕಿನ ಪೂರ್ತಿ ಜೀವಂತವಾಗಿತ್ತು, ನಮ್ಮ ಅಸ್ತಿತ್ವದ ಸ್ವಾತಂತ್ರ್ಯವನ್ನು ಬಂಧಿಸುವ ಕಾಣದ ಸರಪಳಿಗಳನ್ನು ನಿತ್ಯಜೀವನದ ರೂಪಕಗಳ ಮೂಲಕ ಕಾಣಿಸಬೇಕಲ್ಲದೆ, ಉರುಹೊಡೆದುಕೊಂಡ ರಾಜಕೀಯ ಪರಿಕಲ್ಪನೆಗಳಿಂದ ತೋರಿಸುವೆನೆಂಬುದು ಬರಿ ಬೊಗಳೆ ಎನ್ನುವುದನ್ನು ಲಂಕೇಶ್ ತಮ್ಮ ಬರಹದ ಬದುಕಿನ ಆರಂಭಿಕ ಘಟ್ಟದಲ್ಲಿಯೇ ಕಟುವಾಗಿ ಹೇಳಿದ್ದರು. 'ತಲೆಮಾರು', 'ಅವ್ವ' ಮುಂತಾದ ಪದ್ಯಗಳು, 'ಸಂಕ್ರಾಂತಿ', 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕಗಳು, 'ಮುಸ್ಸಂಜೆ ಕಥಾಪ್ರಸಂಗ' ಕಾದಂಬರಿ ಮತ್ತು ಐದು ಕಥಾಸಂಗ್ರಹಗಳ ಬಹುಪಾಲು ಕತೆಗಳು ಲಂಕೇಶರ ನಿಲುವಿನ ವಾಸ್ತವಿಕತೆಯನ್ನು ಸಾಬೀತುಮಾಡುತ್ತವೆ. 'ಅಸ್ತಿತ್ವವಾದಿ ತಾತ್ವಿಕತೆ'ಯನ್ನೇ ಪ್ರತಿಗಾಮಿ ಎಂದು ಹೀಗಳೆಯುವುದು ಎಡಪಂಥೀಯರ ಲಾಗಾಯ್ತಿನ ವರಸೆಯಾಗಿರುವುದರಿಂದ, ಸಾಮಾಜಿಕ ಸಂಕೋಲೆಗಳ ಬಹುರೂಪವನ್ನು ನಾವು ಲಂಕೇಶರಂಥ ಬರಹಗಾರರಿಂದಲೇ ಪಡೆಯಬೇಕಾಗಿದೆ.


ಮೂರು ವಾರಗಳ ಹಿಂದೆ 'ಪತ್ರಿಕೆ'ಯಲ್ಲಿ ಪ್ರಕಟವಾಗಿರುವ ಲಂಕೇಶರನ್ನು ಕುರಿತ ಬರಹದಲ್ಲಿ ಜಿ.ರಾಜಶೇಖರ್, ಅಡಿಗ ಮತ್ತು ಕಾರಂತರಿಗೆ ಸ್ವಾತಂತ್ರ್ಯಾನಂತರದಲ್ಲಿ ಶೂದ್ರರು, ದಲಿತರು ದೇಶದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಮುಂದೊತ್ತಿಕೊಂಡು ಬರುತ್ತಿರುವ ವಿದ್ಯಮಾನದ ಬಗ್ಗೆ ಆಳದಲ್ಲಿ ಭಯಾತಂಕಗಳಿದ್ದವು; ಈ ವಿವೇಚನೆ ಇಲ್ಲದ 'ಜನಜಂಗುಳಿಯಿಂದ' ದೇಶ ನಾಶವಾಗುತ್ತದೆ ಎಂದು ಅವರು ನಂಬಿದ್ದರು; ಆದರೆ ಲಂಕೇಶರಿಗೆ ಈ ಬಗೆಯ ಆತಂಕಗಳಿರಲಿಲ್ಲ, ಅವರು 'ಜನಸಮೂಹದ' ಆಶಯಗಳನ್ನು ಅರಿತು- ಗೌರವಿಸಬಲ್ಲವರಾಗಿದ್ದರು ಎಂದು ಬರೆದಿದ್ದಾರೆ. ಈ ಮಾತು ನಿಜ.

ಆದರೆ ಲಂಕೇಶರ 'ಜನಸಮೂಹ'ದ ಕಲ್ಪನೆ ರೂಢಿಗತ ಎಡಪಂಥೀಯರ ಕಲ್ಪನೆಗಿಂತ ಭಿನ್ನವಾದದ್ದು. ಜಾತಿ-ಮತಗಳ ಹೆಸರಿನಲ್ಲಿ ಒಟ್ಟಾಗುವ ಸಮೂಹ ಎಷ್ಟು ಅಪಾಯಕಾರಿಯೋ, ಸ್ವಾತಂತ್ರ್ಯ-ಸಮಾನತೆಯ ಹೆಸರಿನಲ್ಲಿ ಒಟ್ಟಾಗಿ ಗುಂಪು ಕಟ್ಟಿಕೊಳ್ಳುವುದೂ ಅಪಾಯಕಾರಿಯಾಗಬಲ್ಲದು ಎಂಬ ಸಂದೇಹಿ ಅವರು. ವ್ಯಕ್ತಿಗತವಾಗಿ ಸ್ವಾತಂತ್ರ್ಯ-ಸಮಾನತೆಗಳನ್ನು ನೆಚ್ಚಿ ಅಧಿಕಾರದ ವಿರುದ್ಧ ಹಲ್ಲುಕಚ್ಚಿ ನಿಲ್ಲಬಲ್ಲ ಜನರ ದಿಟ್ಟತೆ, ಗುಂಪಾದಾಗ ಧೀಮಂತಿಕೆ ಕಳೆದುಕೊಂಡು ಮತ್ತೊಂದು ಬಗೆಯ ಅಧಿಕಾರವನ್ನು ಒತ್ತಾಯಿಸುವ, ಅದರ ಸಾಧನೆಗಾಗಿ ಎಂಥ ಹಿಂಸೆಗೂ ಸಮ್ಮತಿ ನೀಡುವ ವಿವೇಕಹೀನ ಜನರ ಸಮೂಹವಾಗಿಬಿಡುತ್ತದೆ ಎನ್ನುವುದು ಲಂಕೇಶರ ಖಂಡಿತವಾದ ವೈಚಾರಿಕ ನಿಲುವು. ಹೀಗಾಗಿ, ತಾನು ಸಾಮಾಜಿಕ ಅನಿವಾರ್ಯತೆಯಲ್ಲಿ ಬೆಂಬಲಿಸಬೇಕಾದ ಚಳವಳಿಗಳನ್ನೂ ಕಡು ಅನುಮಾನದಿಂದ ನೋಡುವ, ಸಂದರ್ಭಾನುಸಾರ ಕಟುವಾಗಿ ಟೀಕಿಸುವ ಅವರ ನಿಲುವು ಎಲ್ಲ ಎಡ ಪಂಥೀಯ ಚಳವಳಿಗಳಿಗೂ ಅಪಥ್ಯವಾಗಿತ್ತು, ಮನೆ ಕೆಲಸ ಮಾಡಿಕೊಂಡಿರುವ ಹೆಂಡತಿಯೊಬ್ಬಳು ಸಾಂಸಾರಿಕ ಅಧಿಕಾರವನ್ನು ಎದುರಿಸಿ ನಿಲ್ಲುವ ಧೀಮಂತಿಕೆಯು, ಉನ್ನತ ಅಧಿಕಾರದಲ್ಲಿರುವವನೊಬ್ಬ ದಕ್ಷನೂ, ಪ್ರಾಮಾಣಿಕನೂ ಆಗಿದ್ದು ವ್ಯವಸ್ಥೆಯ ಭ್ರಷ್ಟತೆಯನ್ನು ಎದುರಿಸುವ ಧೀಮಂತಿಕೆಯೂ ಸಮಾನ ಮನುಷ್ಯ ಸಂಕಲ್ಪದ್ದು; ನಿತ್ಯ ಜೀವನದ ಸಹಜ ಗತಿಯಲ್ಲಿ ಜನ ಬಿಡಿಯಾಗಿ ತಮ್ಮ ವ್ಯವಸ್ಥೆಯ ಅಧಿಕಾರವನ್ನು ವಿರೋಧಿಸುವ ಮೂಲಕ ಮೌಲ್ಯವಂತ 'ಜನಸಮೂಹ' ಸೃಷ್ಟಿಯಾಗುತ್ತದೆ ಎನ್ನುವುದು ಲಂಕೇಶರ ನಂಬಿಕೆ. ನಾಲ್ಕು ಜನ, ನಾಲ್ಕು ದಿನ ಸತತವಾಗಿ ತಮ್ಮನ್ನು ಕಚೇರಿಯಲ್ಲಿ ಭೇಟಿ ಮಾಡಲು ಬಂದರೆ, ಬಸವರಾಜು ಅವರನ್ನು ಕರೆದು 'ಏನಲೇ! ಇದು ಏನೋ ಹುನ್ನಾರ ಮಾಡಿರುವ ಭಟ್ಟಂಗಿ ಪಡೆ ಇದ್ದಂಗದೆ! ನಾಳಿಂದ ಒಳಕ್ ಬಿಡ್ಬ್ಯಾಡ' ಎನ್ನುವಷ್ಟರಮಟ್ಟಿಗೆ ಅವರು 'ಗುಂಪು' ಕಟ್ಟುವ ಚಳವಳಿಗಾರರ ಪ್ರಾಮಾಣಿಕತೆಯನ್ನು ಸಂದೇಹದಲ್ಲಿ ಕಾಣುತ್ತಿದ್ದರು. ಲಂಕೇಶರ ಇಂತಹ ನಿಲುವುಗಳ ಅವಗುಣಗಳೇನಾದರೂ ಇರಲಿ, ಈ ಧೋರಣೆಯಿಂದ ನಿತ್ಯದ ಬದುಕಿನಲ್ಲಿ ಹೊತ್ತುಹೊತ್ತಿಗೆ ವ್ಯಕ್ತವಾಗಿ ಬೃಹತ್ ಅಧಿಕಾರ ವ್ಯವಸ್ಥೆಯನ್ನು ಒಳಗಿನಿಂದ ಗಟ್ಟಿಯಾಗಿಡುವ ನಿತ್ಯದ ಯಜಮಾನಿಕೆಯ ರೂಪಕಗಳನ್ನು ಏಕಾಗ್ರತೆಯಲ್ಲಿ ಅವರು ಕಟ್ಟಿಕೊಟ್ಟದ್ದರ ಮಹತ್ವವನ್ನು ಅರಿಯದಿದ್ದರೆ, ನಷ್ಟದ ಬಾಬ್ತು ಸೇರುವುದು ಚಳವಳಿಗಳ ಖಾತೆಗೆ ಸರಿ.

ಲಂಕೇಶರ ಈ ಬಗೆಯ ಸಂವೇದನೆಯಿಂದ, ಬದುಕಿನ ಖಾಸಗಿ ಮತ್ತು ಸಾರ್ವಜನಿಕ ಆವರಣಗಳು ಒಂದರೊಳಗೊಂದು ಕಲಸಿಹೋದ ನಿತ್ಯ ಜೀವನದ ವಲಯಗಳನ್ನು ಖಚಿತವಾಗಿ ಗ್ರಹಿಸುವ ಸೂಕ್ಷ್ಮ ಅವರ ಬರಹಗಳಿಗೆ ದಕ್ಕಿಬಿಟ್ಟಿದೆ. ಸಭ್ಯತೆಯ ಸೋಗಲಾಡಿತನದಲ್ಲಿ ಮುಚ್ಚಿಟ್ಟುಕೊಂಡಿರುವ ಖಾಸಗಿ ಯಜಮಾನಿಕೆಯ ಜನ, ಸಮಾಜ ಸಾಂಗವಾಗಿ ನಡೆಯಲು ಅನಿವಾರ್ಯವೆಂದು ನಂಬಿಸಲ್ಪಟ್ಟ ಸಾರ್ವಜನಿಕ ಅಧಿಕಾರದ ವರಸೆಗಳನ್ನು ಚಲಾಯಿಸುವ ಮಂದಿ, ಲಂಕೇಶರ ಕಥನದ ಕಲಸಿಹೋದ ಆವರಣಗಳಲ್ಲಿ ಭೇಟಿಯಾಗಿ, ಒಬ್ಬರನ್ನೊಬ್ಬರು ರಮಿಸಿ, ಅಪ್ಪಿ ಚುಚ್ಚಿ ಗುದ್ದಿ ಒಡನಾಡುತ್ತಾರೆ; ಈ ಮುಖಾಮುಖಿ ಒಂದು ವ್ಯಾಯಾಮದ ಹಾಗೆ ತಮ್ಮ ಅಧಿಕಾರ-ಯಜಮಾನಿಕೆಗಳನ್ನು ಗಟ್ಟಿಗೊಳಿಸಿದೆಯೇ? ಎಂದು ಮುಟ್ಟಿ ಖಚಿತಪಡಿಸಿಕೊಳ್ಳುತ್ತಾರೆ. ಇವರ ಮುಖಕ್ಕೆ ಉಗಿದು, ಪೆಟ್ಟು ತಿಂದು ಅಸಹಾಯಕರಾದವರು, ಇದೊಂದು ಪಾಠವೆಂಬ ರೊಚ್ಚಿನಲ್ಲಿ ನಿರ್ಗಮಿಸಿ, ಲಂಕೇಶರ ಮತ್ತೊಂದು ಕತೆಯಲ್ಲಿ ಹಸಿ ಗಾಯದೊಂದಿಗೆ ಮರಳುತ್ತಾರೆ. ಹಾಗೆ ಬಂದವರು, ಗೆಲ್ಲಲು ಯಜಮಾನರ ವರಸೆಗಳನ್ನೇ ಬಳಸಿ, ಗೆದ್ದು ತಾವು ಯಜಮಾನಿಕೆಯ ಗುಣಪಡೆದುಬಿಟ್ಟಿರುವುದನ್ನು ಕಂಡು ಬೆಚ್ಚಿ ಗೆದ್ದದ್ದೇ ಅವಮಾನವಾಗಿ ತಲೆತಗ್ಗಿ ಮುಂದಿನ ಕತೆಗೆ ಕಾಯುತ್ತಾರೆ. 'ಹರಿವ ನದಿಗೆ ಮೈಯೆಲ್ಲಾ ಕಾಲು/ ಉರಿವ ಕಿಚ್ಚಿಗೆ ಮೈಯೆಲ್ಲಾ ಬಾಯಿ/ ಬೀಸುವ ಗಾಳಿಗೆ ಮೈಯೆಲ್ಲಾ ಕೈ' ಎಂಬ ಅಲ್ಲಮನ ಕಾಣ್ಕೆ ಲಂಕೇಶರ ಬರಹಗಳಲ್ಲಿ ಅಧಿಕಾರ-ಪ್ರತಿರೋಧಗಳೆರಡಕ್ಕೂ ರೂಪಕವಾಗಿಬಿಡುತ್ತದೆ. 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ'ಯ ಶೇಖರಪ್ಪ 'ಡಿಸೋಜನ 'ಊವಿನ' ವೃತ್ತಿ'ಯ ಆರ್.ಎಸ್.ಎಸ್. ಸಂಚಾಲಕ ಶೇಷಗಿರಿಯಾಗಿ ಬೆಳೆಯುತ್ತಾನೆ; ಉಮಾಪತಿ 'ಕ್ರಾಂತಿ ಬಂತು ಕ್ರಾಂತಿಯ' ಭಗವಾನನಾಗಿ, 'ನನ್ನ ತಂಗಿಗೊಂದು ಗಂಡು ಕೊಡಿ'ಯ ಜಗನ್ನಾಥನಾಗಿ, ಡಿಸೋಜನಾಗಿ, ಸೆಣಸಿ-ಸೋತು, ಬಸವಲಿಂಗ-ತಿಮ್ಮಪ್ಪ ('ಮುಟ್ಟಿಸಿಕೊಂಡವನು') ಮತ್ತು ಭಗವಾನ್-ಬಸವೇಗೌಡ('ಸಹಪಾಠಿ')ರ ದ್ವಿಪಾತ್ರಗಳಲ್ಲಿ ಒಡೆದುಕೊಂಡು ಪ್ರತಿರೋಧದ ಮಾರ್ಗಗಳನ್ನು ಪರೀಕ್ಷಿಸಿಕೊಳ್ಳುತ್ತ ಅವ್ವ ಈರವ್ವಳಲ್ಲಿ ಲೀನನಾಗಿ 'ದೇವಿ'ಯಾಗಿ ನಿಲ್ಲುತ್ತಾನೆ. ಲಂಕೇಶರ ನಾಯಕಿ ದೇವಿ 'ನಿಮ್ಮ ಅಧಿಕಾರ-ಪ್ರತಿರೋಧಗಳ ವರಸೆ ಬಲ್ಲೆ, ಹಾಕುವ ದಾಳಗಳಿಗೆ ನಾನು ಗಟ್ಟಿ ತಯಾರಾಗಿದ್ದೇನೆ' ಎನ್ನುವ ಸಮತೋಲದ ನೆಲೆಗೆ ಬಂದು ನಿಂತ ಹೊತ್ತಿಗೆ, ಲೇಖಕ ಲಂಕೇಶ್ ತಮ್ಮ 'ರೊಟ್ಟಿ'ಯ ಗುಂಪು, ಲಕ್ಷಾಂತರ ಜನವಾಗಿ ಹಿಗ್ಗಿ ಅಧ್ವಾನಿಯ ಭಾಷಣ ಕೇಳಲು ಬೆಂಗಳೂರಿನ ನ್ಯಾಷನಲ್ ಕಾಲೇಜು ಗ್ರೌಂಡಿಗೆ ಕೇಕೆ ಹಾಕಿ ಬರುವುದನ್ನು ಕಂಡು ಬೆಚ್ಚಿ ತಳಮಳಿಸುತ್ತಾರೆ. 'ಉರಿವ ಕಿಚ್ಚಿಗೆ ಮೈಯೆಲ್ಲಾ ಬಾಯಿ'.

ನಮ್ಮ ಕಾಲದ ಕರ್ನಾಟಕದ ಯಾವ ಚಳವಳಿಗಳು, ಇತಿಹಾಸಕಾರರು, ಸಮಾಜ ಶಾಸ್ತ್ರಜ್ಞರು ಕಾಣಿಸದ ಯಜಮಾನಿಕೆ-ಅಧಿಕಾರ-ಪ್ರತಿರೋಧಗಳ ಉರಿವ ಕಿಚ್ಚುಗಳ ಝಳವನ್ನು ತನ್ನ ಬದುಕು-ಬರಹಗಳ ಮೂಲಕ ತಟ್ಟಿಸಿದ ಬರಹಗಾರನನ್ನು ಮತ್ತೆ ಮತ್ತೆ ಓದದೆ, ಮತ್ತೇನೂ ಮಾಡುವುದು!

ಲಂಕೇಶರ ಕಡೆಯ ಸಭೆ ಮತ್ತು ಫೋಟೋ



ಲಂಕೇಶರೊಂದಿಗೆ ಫೋಟೋ ತೆಗೆಸಿಕೊಳ್ಳಲು ... ಬಂದಿದ್ದ ವ್ಯಕ್ತಿಯ ಎಡಗೈಯನ್ನು ಚಿತ್ರದ ಎಡಭಾಗದಲ್ಲಿ ಕಾಣಬಹುದು...

ಲಂಕೇಶರಿಗೆ ಕಡೆಗಳಿಗೆಯಲ್ಲಿ ಪುನಃ ಜನಗಳ ಬಳಿಗೆ ಹೋಗಬೇಕೆನ್ನಿಸಿತ್ತು. ... ಫಲವಾಗಿ ಮೈಸೂರು ಮತ್ತು ತಿಪಟೂರಿನಲ್ಲಿ ಸಭೆಗಳು ನಡೆದಿದ್ದವು. ...ೂರಿನ ಸಭೆಯಲ್ಲಿ ಅವರ ಸಾಹಿತ್ಯ ಕುರಿತ ಗೋಷ್ಠಿ ಇತ್ತಲ್ಲದೆ ಅದರಲ್ಲಿ ...ಶ್ ಕೂಡ ಭಾಗವಹಿಸಿದ್ದರು. ಆ ಸಭೆಯಲ್ಲಿ ರಾಮಚಂದ್ರ ಶರ್ಮರು ...ರಂಜಕವಾಗಿ ಮಾತನಾಡಿ ಎಲ್ಲರನ್ನು ನಗಿಸಿದ್ದರು. ಸಭೆ ಮುಗಿದು ...ಶರು ಬೆಂಗಳೂರು ಕಡೆ ಹೊರಟಾಗ "ಶಿವಮೊಗ್ಗದಲ್ಲಿ ನಾನೊಂದು ...ಏರ್ಪಡಿಸುತ್ತೇನೆ ಸಾರ್" ಎಂದೆ. "ಗುಡ್, ಆದಷ್ಟು ಬೇಗ ಮಾಡು" ...ು. ಭಾಷಣಕಾರರನ್ನು ಕರೆಯಲು ನಮಗೆ ಸಂಪೂರ್ಣ ಸ್ವಾತಂತ್ರವಿದ್ದರೂ ..."ಯಾರ್‍ಯಾರ್‍ನ ಕರೀಲಿ ಸಾರ್?" ಎಂದೆ. "ಯಾರ್‍ನಾರ ಕರಿಯಯ್ಯ, ಆ ...ವರಪ್ಪನ್ನ ಕರಿ, ಕಾಗೋಡು ತಿಮ್ಮಪ್ಪನ್ನ ಕರಿ. ನಿನಿಗ್ಯಾರ್‍ಯಾರು ಬೇಕೊ ... ಕರಿ" ಎಂದರು. ನನಗೆ ಇಷ್ಟು ಸಾಕಿತ್ತು.

...ಂಗಳೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ತುಮಕೂರಿನ ಅವರ ... ಮನೆಯಲ್ಲಿ ಹೋಳಿಗೆ ಊಟ ಮಾಡಿ ಮುಂದೆ ಹೋಗುವ ...ಕ್ರಮವಿದ್ದುದರಿಂದ, ಎಲ್ಲರೂ ಅವರ ಬೀಗರ ಮನೆಗೆ ಹೋದೆವು. ...ಲಂಕೇಶರನ್ನ ಬಹಳ ಸೂಕ್ಷ್ಮವಾಗಿ, ಎಚ್ಚರಿಕೆಯಿಂದ ನಿಭಾಯಿಸಿ ಕಳಿಸುವ ... ಅವರ ಬೀಗರ ಮುಖದಲ್ಲಿದ್ದಂತಿತ್ತು. ಲಂಕೇಶ್ ಊಟಕ್ಕೂ ಮೊದಲು ... ತೆಗೆದುಕೋಡು, ನಂತರ ಇನ್‌ಸುಲಿನ್ ಚುಚ್ಚಕೊಂಡರು. ಇದೆಲ್ಲಾ ...ೆ ಕಿರಿಕಿರಿಯಾಗಿ ಕಾಣುತ್ತಿತ್ತು. ಆದರೂ ತೋರಗೊಡದೆ ಎಲ್ಲರನ್ನು ...ತ್ತಾ ಎಲೆಯಡಿಕೆಗೆ ಕೈಹಾಕಿದರು. "ನಾನು ಬೀಡ ಮಾಡಿಕೊಡ್ಲ ಸಾರ್" ... "ಭಟ್ಟಂಗಿ ಕೆಲಸ ಬೇಡ" ಎಂದು ನಗುತ್ತಾ ಬಾಯಿ ತುಂಬ ಎಲೆಯಡಿಕೆ ...ಂಡರು. ನಂತರ ಅವರು ಬೆಂಗಳೂರು ಹಾದಿ ಹಿಡಿದರು. ಬಿ.ಎಲ್. ಶಶಿಕಲಾ ಮತ್ತು ನಾನು ಶಿವಮೊಗ್ಗಕ್ಕೆ ವಾಪಸು ಬಂದು ಸಭೆ ...ಡಿಗೆ ತೊಡಗಿದೆವು.

...ಂ.ಬಿ. ನಟರಾಜ್ ಮುಂದಾಳತ್ವದಲ್ಲಿ ಲಂಕೇಶ್‌ರ ಸಭೆ ಏರ್ಪಡಿಸುವುದೆಂದರೆ ... ಸುಲಭದ ಕೆಲಸವಾಗಿತ್ತು. ಒಂದು ಹ್ಯಾಂಡ್‌ಬಿಲ್ಲು ಹೊರಡಿಸಿ, ...ದ್ದರೆ ಬನ್ನಿ ಎಂಬ ಉಡಾಫೆ ವಾಕ್ಯವನ್ನು ಸೇರಿಸಿ, ಒಂದು ಪ್ರೆಸ್‌ಮೀಟ್ ...ದರಾಯ್ತು, ಜನ ಸೇರುತ್ತಿದ್ದರು. ಬಂದ ಜನರೇ ಸಭೆ ಮುಂದುವರಿಸಿ ...ಸುತ್ತಿದ್ದರು. ಇಂತಹ ಕಾರ್ಯ ಜರುಗುವುದಕ್ಕೆ ಮುನ್ನ ಲಂಕೇಶ್ ... ಅತಿಥಿಗಳನ್ನು ಕರೆಯಲೋಸ್ಕರ ಸರ್ಕಿಟ್ ಹೌಸಿನಲ್ಲಿದ್ದ ಬಂಗಾರಪ್ಪನವರನ್ನ ..."ಸಾರ್, ಲಂಕೇಶ್ ಪತ್ರಿಕೆಗೆ ಇಪ್ಪತ್ತು ವರ್ಷಾಯ್ತು. ಅದರ ಕಾರ್ಯಕ್ರಮ ...ಗ್ಗದಲ್ಲಿ ಇಟ್ಟುಕೊಂಡಿದ್ದಿವಿ. ನೀವೇ ಗೆಸ್ಟು" ಎಂದೆ. ಅದಕ್ಕೆ 'ಬಂ' ...ಇಪ್ಪತ್ತೊರ್ಷಾಯ್ತ? ಕಾಲ ಹೋದದ್ದೆ ಗೊತ್ತಾಗಲಿಲ್ಲ. ಆದರೆ ಸಾರಿ, ...ಸಭೆ ಆರಂಭ ಆಗುತ್ತೆ ನಾನು ಡೆಲ್ಲಿಲಿರಬೇಕು" ಎಂದವರೆ ಶಟಲ್ ಹೊರಟುಹೋದರು.

...ನ್ನು ಅದೇ ಜಾಗಕ್ಕೆ ಬಂದ ಕಾಗೋಡು ತಿಮ್ಮಪ್ಪನವರನ್ನು ಭೇಟಿಯಾಗಿ ...ಪ್ರಶ್ನೆ ಕೇಳಿದೆ. ತಿಮ್ಮಪ್ಪನವರು ದಿನಾಂಕ ಕೇಳಿ ತಮ್ಮ ಪಿಎಸ್‌ಗೆ ಆ ...ವನ್ನು ಗುರುತು ಮಾಡಿಕೊಳ್ಳಲು ಹೇಳಿದರು. ಇನ್ನಲ್ಲಿ ಯಾವ ಮಾತಿಗೂ ಅವಕಾಶವಿರಲಿಲ್ಲವಾದ್ದರಿಂದ ನಾನು ಎದ್ದು ಬಂದೆ. ಈ ಪ್ರಸಂಗವನ್ನು ಲಂಕೇಶರಿಗೆ ಹೇಳಿದಾಗ "ನಿನಿಗ್ಗೊತ್ತಿಲ್ಲ, ಕಾಗೋಡು ತಿಮ್ಮಪ್ಪ ಅಂಗಿದ್ರೂ ಒಳ್ಳೆ ಕೆಲಸಗಾರ. ನಾವೆ ಕ್ರಾಕ್‌ಗಳ ಥರ ಏನೇನೊ ಬರಿತಿರ್ತಿವಿ ಕಣಯ್ಯ" ಎಂದು ಹೇಳಿ ನನಗೆ ಆಶ್ಚರ್ಯ ಹುಟ್ಟಿಸಿದ್ದರು. ಆನಂತರ "ಅಲ್ಲಯ್ಯ ಕಾರ್ಯಕ್ರಮನ ಡಿಸೆಂಬರ್ ಆರಕ್ಕೆ ಯಾಕೆ ಮಾಡ್ತಿ? ಆ ರ್‍ಯಾಸ್ಕಲ್‌ಗಳು ಮಸೀದಿ ಕೆಡವಿದ್ದೇ ನಿಮಗೊಂದು ನೆವ ಆಗಿದೆ. ಬೇರೆ ದಿನ ಮಾಡಯ್ಯ" ಎಂದರು.

ಇದನ್ನು ಕೇಳಿ ನನ್ನೆ ಜೀವ ಧಸಕ್ಕೆಂದಿತು. ಅಷ್ಟೊತ್ತಿಗಾಗಲೇ ಆಹ್ವಾನ ಪತ್ರಿಕೆ ಪ್ರಿಂಟಾಗಿದ್ದವು. ಸಾರಾ ಅಬೂಬಕ್ಕರ್ ಅವರನ್ನು ಕರೆದಿದ್ದೆವು. ಇನ್ನುಳಿದ ಅತಿಥಿಗಳಿಗೆಲ್ಲಾ ಹೇಳಿಯಾಗಿತ್ತು, ಪ್ರೆಸ್‌ಮೀಟ್ ಮಾತ್ರ ಮಾಡಿರಲಿಲ್ಲ ಅಷ್ಟೇ. ಆದರೂ ಡಿಸೆಂಬರ್ 6 ರ ಬದಲು ಅದೇ ತಿಂಗಳು 15 ನೇ ತಾರೀಖು ಎಂದು ನಿಗದಿ ಮಾಡುವುದರಲ್ಲಿ ಡಿಸೆಂಬರ್ ಆರು ಬಂದುಹೋಗಿತ್ತು. ಈ ಗಡಿಬಿಡಿಯಲ್ಲಿ ಸಾರಾ ಅಬೂಬಕ್ಕರ್ ಅವರಿಗೆ ಕಾರ್ಯಕ್ರಮದ ಬದಲಾದ ದಿನಾಂಕ ತಿಳಿಸುವುದನ್ನು ಮರೆತಿದ್ದೆ. ಪಾಪ, ಸಾರಾ ಅವರು ಅಂದು ಶಿವಮೊಗ್ಗೆಗೆ ಬಂದು ಖಾಲಿ ಇದ್ದ ಕುವೆಂಪು ರಂಗಮಂದಿರವನ್ನು ನೋಡಿಕೊಂಡು ಹೋಗಿದ್ದರು. ನಾವು ಪೇಚಾಡಬಹುದೆಂದು "ನಾನು ಬಂದೇ ಇರಲಿಲ್ಲ" ಎಂದು ಹೇಳಿದರು. ಆದರೂ ಅವರಿಗಾದ ತೊಂದರೆಯಿಂದ ಮುಖ ತೋರಲಾಗದೆ ನಾನು ಡಿಸೆಂಬರ್ 15 ರ ಕಾರ್ಯಕ್ರಮಕ್ಕೆ ವೈದೇಹಿಯವರನ್ನು ಕರೆದು ಇನ್ನುಳಿದ ಭಾಷಣಕಾರರಾಗಿ ರಾಜೇಂದ್ರ ಚೆನ್ನಿ, ದಾದಾಪೀರ್, ನೊ.ಸಂ. ತಿಮ್ಮೇಗೌಡರನ್ನು ಕರೆದೆ.

• ಬಿ. ಚಂದ್ರೇಗೌಡ



ಆ ದಿನ ನಿಗದಿತ ಸಮಯಕ್ಕಿಂತ ಮೊದಲೇ ಕಾಗೋಡು ತಿಮ್ಮಪ್ಪ ಬಂದುಬಿಟ್ಟರು. ಲಂಕೇಶ್ ಮತ್ತು ಪತ್ರಿಕೆ ಕುರಿತು ಒಂದಿಷ್ಟು ದೀರ್ಘವಾಗಿ ಮಾತನಾಡಿದರು. ಅವರ ಭಾಷಣ ಮುಗಿಯುವಷ್ಟರಲ್ಲಿ ಲಂಕೇಶ್ ಬಂದರು. ಕುವೆಂಪು ರಂಗಮಂದಿರದ ಹೊರಗಿಟ್ಟಿದ್ದ ಪುಸ್ತಕಗಳನ್ನು ಲಂಕೇಶರು ನೋಡುತ್ತಿದ್ದಾಗ ನಾನು ಅವರ ಹತ್ತಿರ ಹೋದೆ. ಕೈ ನೀಡಿದರು. ನಾನು ಅನುಮಾನದಲ್ಲೇ ಕೈ ನೀಡಿದೆ. ಏಕೆಂದರೆ ಹಿಂದೊಮ್ಮೆ ಪತ್ರಿಕೆ ಆಫೀಸಿನಲ್ಲಿ ಅವರು ಛೇಂಬರಿನಿಂದ ಹೊರಬಂದು ಏನೋ ಹೇಳಲು ಕೈ ನೀಡಿದರು. ಆದರೆ ನಾನು ಥ್ಯಾಂಕ್ಸ್ ಕೊಡುತ್ತಿದ್ದಾರೆಂದು ಹಠಾತ್ತನೆ ಅವರ ಕೈ ಹಿಡಿದು ಕುಲುಕಿದ್ದೆ. "ಏ ಥು ಥು" ಎಂದು ಅವರು ಕೈ ಹಿಂದೆ ತೆಗೆದುಕೊಂಡು ಹೊರಟುಹೋಗಿದ್ದರು. ಇದನ್ನು ಕಂಡು ಆಫೀಸಲ್ಲಿದ್ದವರು ಸುಖತ್ತಾಗಿ ನಗಾಡಿದ್ದರು. ಆದ್ದರಿಂದ ಅವತ್ತು ಅವರ ಕೈಕುಲುಕಲು ಹಿಂಜರಿದಿದ್ದೆ. ಆದರೆ ಅಂದು ಲಂಕೇಶ್ ಖುಷಿಯಲ್ಲಿದ್ದು ನನ್ನ ಕೈಕುಲುಕಿದರು.


ನಂತರ ಕುವೆಂಪು ರಂಗಮಂದಿರವನ್ನು ಆಮೂಲಾಗ್ರ ನೋಡುತ್ತ ಒಳಬಂದು ಕುಳಿತರು. ಆ ಕ್ಷಣ ಎಲ್ಲಿದ್ದರೋ ಏನೋ ಅವರಣ್ಣ ಶಿವರುದ್ರಪ್ಪ, ಅವರು ಬಂದು ಲಂಕೇಶರ ಪಕ್ಕದಲ್ಲೇ ಕುಳಿತು ಏನೋ ಕೇಳುವವರಂತೆ ಮುಖ ಮಾಡಿದರು. ಲಂಕೇಶರಿಗೆ ಇದು ಬೇಕಿರಲಿಲ್ಲ, ನನ್ನ ಕಡೆ ತಿರುಗಿ "ಇವುರನ್ಯಲ್ಲ ಯಾಕಯ್ಯ ಕರದೆ" ಎಂದರು. "ನಾನ್ಯಾಕೆ ಕರಿಯಕ್ಕೋಗಲಿ ಸಾರ್, ಅವುರೇ ಬಂದವ್ರುರೆ" ಎಂದು ನಾನು ಹೇಳುವಷ್ಟರಲ್ಲಿ ಮಂತ್ರಿ ಕಾಗೋಡು ತಿಮ್ಮಪ್ಪ ತಮ್ಮ ಭಾಷಣ ಮುಗಿಸಿಕೊಂಡು ಲಂಕೇಶರ ಕೈ ಕುಲುಕಿ ಪರಸ್ಪರ ಯೋಗಕ್ಷೇಮ ವಿಚಾರಿಸಿಕೊಂಡರು. ಅದು ಅವರಿಬ್ಬರ ನಡುವಿನ ಐದು ದಶಕಗಳ ನಂತರದ ಭೇಟಿ ಮತ್ತು ಕಡೆಯ ಭೇಟಿ!

ಲಂಕೇಶ್ ವೇದಿಕೆಯ ಕಡೆ ಹೊರಟರು. ಆಗ ಅವರೇ ನನ್ನ ಭುಜ ಹಿಡಿದುಕೊಂಡರು. ಈ ಹಿಂದೆ ಅವರು ಆಫೀಸಿನ ಮೆಟ್ಟಲಿಳಿಯುತ್ತಿದ್ದಾಗ ಅವರ ಸಹಾಯಕ್ಕೆಂದು ಹೋಗಿದ್ದ ನಾನು ಮತ್ತು ಮೊಗಳ್ಳಿ ಗಣೇಶ್ ಅವರಿಂದ ಬೈಸಿಕೊಂಡಿದ್ದೆವು. ಆದರೆ ಅವತ್ತು ಅವರೇ ನನ್ನ ಭುಜ ಹಿಡಿದುಕೊಂಡರು. ಅವರ ಅಧಿಕೃತ ಪಕ್ಕವಾದ್ಯದಂತಿದ್ದ ರಾಮದಾಸ್ ಮಾತನಾಡಿದ ನಂತರ, ವೈದೇಹಿಯವರು ಅದ್ಭುತವಾಗಿ ಭಾಷಣ ಮಾಡಿದರು. ಲಂಕೇಶ್ ಭಾಷಣ ಮಾಡುವಾಗಿನ ಆ ಸಮಯ ಕರ್ನಾಟಕ ಈಗಿನಷ್ಟು ಕೆಟ್ಟಿರಲಿಲ್ಲ, ಕನಸುಗಳೇ ಇಲ್ಲದ ಮುಖ್ಯಮಂತ್ರಿಯೊಬ್ಬ ನಾಲ್ಕು ಡಜನ್ ಮಂತ್ರಿಗಳನ್ನ ಮಾಡಿಕೊಂಡು ಬಹುಸೂಕ್ಷ್ಮವಾಗಿ ತಲೆಗೂದಲು ಹಾರಾಡದಂತೆ ನಿಗಾವಹಿಸಿಕೊಂಡು ಆಡಳಿತ ನಡೆಸುತ್ತಿದ್ದ ಕಾಲವದು. ಆದರೂ ಸರ್ಕಾರದ ಬಗ್ಗೆ ಲಂಕೇಶ್ ದೀರ್ಘವಾಗಿ ಮಾತನಾಡಿದರು. ಆ ನಂತರ ಶಿವಮೊಗ್ಗದ ಪತ್ರಕರ್ತರನ್ನು ಕುರಿತು ಬುದ್ಧಿವಾದ ಹೇಳಿದರು. ಆ ಸಮಯದಲ್ಲಿ ಶಿವಮೊಗ್ಗದ ಪತ್ರಕರ್ತರು ಈಗಿನಷ್ಟು ಕೆಟ್ಟಿರಲಿಲ್ಲ. ಅವರ ಅವತ್ತಿನ ಭಾಷಣ ಇವತ್ತಿಗೆ ಸರಿಹೋಗುತ್ತಿತ್ತೇನೊ!

ಶಿವಮೊಗ್ಗದಲ್ಲಿನ ಲಂಕೇಶ್ ಸಭೆಗಳೆಂದರೆ ನಾವು ಈವರೆಗೂ ನೋಡದೇಯಿದ್ದ ಕೆಲವರು ಹಾಜರಾಗುತ್ತಿದ್ದರು. ಅವರಲ್ಲಿ ಕೆಲವರು ಬಾಲ್ಯದ ಗೆಳೆಯರು, ಕಾಲೇಜಿನ ಸಹಪಾಠಿಗಳು ಮತ್ತು 'ಲಂಕೇಶ್ ನಮ್ಮವರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ನೊಣಬ ಜನಾಂಗದ ಲೀಡರುಗಳು. ಕಾರ್ಯಕ್ರಮ ಮುಗಿದ ನಂತರ ಇಂತಹ ಜನಗಳೆಲ್ಲಾ ಲಂಕೇಶರೊಂದಿಗೆ ನಿಂತು ಸರದಿಯಂತೆ ಫೋಟೋ ತೆಗೆಸಿಕೊಂಡರು. ಇನ್ನೇನು ಕುವೆಂಪು ರಂಗಮಂದಿರದ ಮೆಟ್ಟಲಿಳಿದು ಹೊರಡ ಬೇಕು ಎಂದಾಗ ಅಭಿಮಾನಿಯೊಬ್ಬ ಲಂಕೇಶ್ ಜೊತೆ ಫೋಟೋ ತೆಗೆಸಿಕೊಳ್ಳಲೆಂದು ಫೋಟೋಗ್ರಾಫರ್‌ನನ್ನು ಕರೆದುಕೊಂಡು ಬಂದ. ಲಂಕೇಶ್ ಜೊತೆ ಇಬ್ಬರು ಹೆಣ್ಣುಮಕ್ಕಳು, ರಾಮದಾಸ್ ಎಲ್ಲ ನಿಂತರು. ಫೋಟೋ ಕ್ಲಿಕ್ಕಾಯ್ತು. ನಾನು ಲಂಕೇಶ್ ಜೊತೆ ಫೋಟೋವನ್ನೆ ತೆಗೆಸಿಕೊಂಡಿರಲಿಲ್ಲವಾದ್ದರಿಂದ "ನಂದೊಂದು ತೆಗಿಯಪ್ಪ" ಎಂದೆ. "ಇಲ್ಲ ಸಾರ್, ರೋಲ್ ಕ್ಲೋಸಾಯ್ತು" ಎಂದ ಫೋಟೋಗ್ರಾಫರ್. ನಾನು ನಿರಾಶೆಯಿಂದ ಸುಮ್ಮನಾಗಬೇಕಾಯ್ತು. ಮರುದಿನ ಫೋಟೋ ನೋಡಿದರೇ, ಕಷ್ಟಪಟ್ಟು ಕ್ಯಾಮರಾದವನನ್ನು ಎಳೆದುತಂದಿದ್ದ ಅಭಿಮಾನಿಯ ಎಡಗೈ ಮಾತ್ರ ಫೋಟೋದಲ್ಲಿತ್ತು, ಇನ್ನುಳಿದ ಅವನ ದೇಹ ಕ್ಯಾಮರಾದಿಂದ ಹೊರಗುಳಿದದ್ದೊಂದು ವಿಪರ್ಯಾಸ!

ಈ ಅಪರೂಪದ ಫೋಟೋವನ್ನು ನಾನು ಲ್ಯಾಮಿನೇಷನ್ ಮಾಡಿಸಿ ಇಟ್ಟುಕೊಂಡಿದ್ದೇನೆ. ಇದು ಲಂಕೇಶರ ಕಡೆಯ ಫೋಟೋದಂತೆ, ಶಿವಮೊಗ್ಗದ ಸಭೆಯೂ ಕಡೆಯ ಸಭೆಯಾಯ್ತು. 1999 ರ ಡಿಸೆಂಬರ್ 15 ರಂದು ಸಭೆ ನಡೆದರೆ, ಮುಂದಿನ ಜನವರಿ 25 ರಂದು ಮೇಷ್ಟ್ರ ವಿದಾಯ ಹೇಳಿದರು. ಅವರು ತೀರಿಕೊಳ್ಳುವ ವಾರದ ಮುಂಚೆ ನಾನು ಅವರನ್ನು ಭೇಟಿಯಾದಾಗ ಶಿವಮೊಗ್ಗದ ಸಭೆಯ ಫೋಟೋ ಕೇಳಿದ್ದರು. ಅದನ್ನು ತೋರಿಸಲಾಗಲಿಲ್ಲವಲ್ಲ ಎಂಬ ಕೊರಗು ಈಗಲೂ ಇದೆ. ●

ಕರುಣೆಯ ತುಣುಕು ಬಟ್ಟೆ



ಮಲಗಿತ್ತು ಬೆಕ್ಕು ಮಹಮದರ
ತುಂಡು ವಸ್ತ್ರದ ಮೇಲೆ
ಹೊತ್ತು ನಡೆದರು ಕರುಣಾಳು ಬೆಕ್ಕಿನಾಕೃತಿಯನ್ನು
ಕೊರೆದ ನಿಲುವಂಗಿಯಲೆ

ಎದ್ದು ಚೆಲ್ಲಾಟವಾಡಿತೇ ಆ ಬೇಟೆಗಾರ ಪ್ರಾಣಿ
ಬಟ್ಟೆ ತುಣುಕಿನೊಂದಿಗೆ
ಏಳುವ ಇಚ್ಛೆಯೇ ಬರದೆ ಇಳಿಯುತ್ತಾ ಹೋಯಿತೆ
ದಿವ್ಯ ಸ್ಪರ್ಶದೊಳಗೇ

ಕೂತಿದ್ದ ನಬಿ ಒಮ್ಮೆ
ಎದ್ದು ಹೊರಡುವ ವೇಳೆ ನೋಡಿದರೆ
ನಿಲುವಂಗಿ ಮೇಲೊಂದು ಬೆಕ್ಕು ನಿದ್ರಿಸಿದೆ!
ಬಡ ಪ್ರಾಣಿ
ಎಂಥ ಮಡಿಲನ್ನು ಅರಸಿ ಬಂದಿದೆ
ಅಯ್ಯೋ ಎನ್ನುತ ಕರುಳು
ಬಟ್ಟೆಯನು ಹಾಗೇ ಕತ್ತರಿಸಿ ಎದ್ದರು!
ಆ ನಿಲುವಂಗಿ ಇನ್ನೂ ಕಾಣಸಿಕ್ಕುವುದು!

ನಂಬುವರ್‍ಯಾರು?
ಬಡ ಹಳ್ಳಿಗ ಹೆಂಗಸರು
ವೈಚಾರಿಕರೋ ನಕ್ಕು ಬಿಡುವರು
ಮಾಯಾವಿಯೊಬ್ಬನ ಕೈಚಳಕ, ಕಟ್ಟುಕತೆ

ಎಂಥ ಕತೆ
ಪವಿತ್ರ ಕುರಾನಿನ ಕಣ್ಣ ಹನಿಯಂಥ ಕತೆ!
ಅದರ ಹೃದಯದಂಥ ಕತೆ!

• ಎಸ್.ಮಂಜುನಾಥ್



ಕೇವಲ ಮನುಷ್ಯರು

ಕತೆ

ನೆನಗಿನ್ನೂ ಅಸ್ಪಷ್ಟವಾಗಿ ನೆನಪಿದೆ. ಆ ನಂತರದ ದಿನಗಳ ನೆನಪುಗಳೂ ಕೂಡಿ ಈ ಅಸ್ಪಷ್ಟ ನೆನಪುಗಳನ್ನು ಒಂದು ರೂಪಕ್ಕೆ ತಂದಿರಬೇಕು. ನಾನಾಗ ಒಂದೋ ಅಥವಾ ಎರಡನೇ ತರಗತಿಯಲ್ಲೋ ಇದ್ದೆ. ನಾವಿದ್ದದ್ದು ಗೌಡರು ತಮ್ಮ ಕೂಲಿಯಾಳುಗಳಿಗೆ ಕಟ್ಟಿಸಿಕೊಟ್ಟಿದ್ದ ಸಾಲುಮನೆಗಳ ಸಾಲಿನ ಮೊದಲ ಮನೆಯಲ್ಲಿ. ನಾನು ಹತ್ತನೇ ತರಗತಿಯವರೆಗೆ ಬರುವವರೆಗೂ ಆ ಮನೆಯಲ್ಲಿಯೇ ನಾವು ವಾಸವಿದ್ದ ಕಾರಣ ಆ ಮನೆಯ ಚಿತ್ರಣ ಚೆನ್ನಾಗಿ ನೆನಪಿದೆ. ಎರಡು ಕೊಠಡಿಯ ಮನೆಯದು. ಒಂದು ಅಡುಗೆ ಮನೆಯಾದರೆ ಇನ್ನೊಂದನ್ನು ಮಲಗುವ ಕೋಣೆ ಎಂದೆನ್ನಬಹುದು. ಸ್ನಾನಕ್ಕೆ ಅಪ್ಪಯ್ಯನೇ ಅಡಿಕೆ ಹಾಳೆಯ ತಟ್ಟಿಯಿಂದ ಮರೆಮಾಡಿದ ಕೊಟ್ಟಿಗೆ. ಬಹಿರ್ದೆಸೆಗೆ ಗುಡ್ಡ. ಮಳೆ ಬಂದರೆ ಸೋರುವ ಮನೆ. ಮನೆ ತುಂಬ ಇಲಿಗಳು. ಇಲಿಗಳನ್ನು ತಿನ್ನಲು ಬರುವ ಕೇರೆಹಾವುಗಳು. ಚಿಮಣಿ ಬುಡ್ಡಿಯಲ್ಲಿ ನಮ್ಮ ಓದು. ಅಪ್ಪಯ್ಯನ ಅರ್ಚಕ ವೃತ್ತಿಯೂ ಅವರ ಕೂಲಿ ಕೆಲಸದ ಒಂದು ಭಾಗ.

ಮಾವನೊಂದಿಗೆ ಬಂದ ಅವರ ಮಕ್ಕಳು ಸೀತಾ ಮತ್ತು ಗೀತಾ ಪುಟ್ಟ ಪುಟ್ಟ ಪ್ಯಾಂಟುಗಳನ್ನು ಹಾಕಿಕೊಂಡು ನಮಗೆ ಅರ್ಥವಾಗದ ಇಂಗ್ಲಿಷಿನಲ್ಲಿ ಮಾತನಾಡುತ್ತಾ 'ಮಾವನ ಮಕ್ಕಳು ಬುದ್ಧಿವಂತರು' ಎಂದು ನಮ್ಮ ಎಳೆಯ ಮನಸ್ಸಿಗೆ ಬರುವಂತೆ ಮಾಡಿದ್ದರು. ಹುಡುಗಿಯರು ಪ್ಯಾಂಟು ಹಾಕಿಕೊಂಡಿದ್ದು ನಾವು ನೋಡಿದ್ದು ಅದೇ ಮೊದಲಾದ್ದರಿಂದ ಅದೂ ನಮ್ಮ ಅಚ್ಚರಿಗೆ ಕಾರಣವಾಗಿತ್ತು. ಆ ದಿನವನ್ನು ನೆನೆಸಿಕೊಂಡಂತೆ ತನ್ನ ತಮ್ಮ ಹಾಗೂ ಆತನ ಕುಟುಂಬ ಬಂದಿದೆಯೆಂದು ಅಮ್ಮ ತುಂಬ ಖುಷಿಯಲ್ಲಿದ್ದಳು ಎಂದು ಊಹಿಸುತ್ತೇನೆ. ತನ್ನ ತಮ್ಮನ ಬಗ್ಗೆ ಆಗಾಗ ಹೆಮ್ಮೆಯಿಂದ ಮಾತನಾಡುತ್ತಿದ್ದುದು, ಗೌರಿಹಬ್ಬದ ಅರಿಶಿನ ಕುಂಕುಮಕ್ಕೆಂದು ತಮ್ಮ ಕಳಿಸುತ್ತಿದ್ದ ಐದು ರೂಪಾಯಿ ಮನಿಯಾರ್ಡರಿಗೆ ಆಕೆ ಸಂಭ್ರಮದಿಂದ ನಿರೀಕ್ಷಿಸುತ್ತಿದ್ದ ರೀತಿಯಿಂದ ನಾನದನ್ನು ಊಹಿಸಬಲ್ಲೆ. ಆ ದಿನ ಸಂಜೆ ಅಪ್ಪಯ್ಯ ವೆಂಕಟೇಶಣ್ಣನ ಅಂಗಡಿಗೆ ಹೋಗಿ ಆಲೂಗಡ್ಡೆ - ಕಡ್ಲೆ ಹಿಟ್ಟು ಸಾಲ ತಂದು ಬೋಂಡ ಮಾಡಿದ್ದರು. ಒಲೆ ಮುಂದೆ ನಾನೂ, ಸಣ್ಣಕ್ಕ, ತಂಗಿ, ಗೀತಾ, ಸೀತಾ ಕುಳಿತುಕೊಂಡು ಬೋಂಡವನ್ನು ನಿರೀಕ್ಷಿಸುತ್ತಿದ್ದೆವು. ಎಣ್ಣೆ ಸಿಡಿಯುತ್ತದೆಂದು ನಮ್ಮನ್ನೆಲ್ಲ ಅತ್ತೆ ಅಂಗಳಕ್ಕೆ ಕರೆತಂದಿದ್ದರು.

ಆಗ ಮಾವ ದೂರದ ಜಮ್ಮುವಿನಲ್ಲಿ ಸೇನಾಧಿಕಾರಿಯಾಗಿದ್ದರು. ಅತ್ತೆ ಮತ್ತು ಗೀತಾ-ಸೀತಾ ಮೈಸೂರಿನ ಸಣ್ಣ ಮಾವನ ಮನೆಯಲ್ಲಿದ್ದರು. ಸಣ್ಣ ಮಾವ ಸರ್ಕಾರಿ ಕಚೇರಿಯಲ್ಲಿ ಗುಮಾಸ್ತರಾಗಿದ್ದರು.

ಮಾವ ತನಗೆ ದೀರ್ಘ ರಜೆ ಸಿಕ್ಕಾಗ ಮೈಸೂರಿಗೆ ಬಂದು ಹೆಂಡತಿ ಮಕ್ಕಳೊಂದಿಗೆ ಇದ್ದು ಹೋಗುತ್ತಿದ್ದರು. ಈ ರಜೆಯಲ್ಲಿ ಒಮ್ಮೊಮ್ಮೆ ತನ್ನ ಅಕ್ಕ-ತಂಗಿಯರ ಮನೆಗೂ ಹೋಗಿಬರುತ್ತಿದ್ದರು ಎನಿಸುತ್ತದೆ. ತಮ್ಮನೊಬ್ಬ ತನ್ನ ಅಕ್ಕನ ಮನೆಗೆ ಬರುವುದು ಅಂತಹ ವಿಶೇಷವೇನಲ್ಲ, ಆದರೆ ಜಮ್ಮುವಿನಲ್ಲಿದ್ದ ಈ ಮಾವ ಹೆಂಡತಿ ಮಕ್ಕಳೊಂದಿಗೆ ಇರಲು ರಜೆ ಪಡೆದು ಮೈಸೂರಿಗೆ ಬಂದವರು ದಿನಕ್ಕೆ ಒಂದೇ ಒಂದು ಬಸ್ಸಿದ್ದ ಮಲೆನಾಡಿನ ದಟ್ಟ ಕಾಡಿನ ನಮ್ಮ ಹಳ್ಳಿಗೆ ಬಂದಿದ್ದು ನನಗೆ ವಿಶೇಷವೆನ್ನಿಸುತ್ತದೆ. ಅವರು ಬಂದದ್ದು ಒಂದೋ ಎರಡೋ ಬಾರಿ ಮಾತ್ರವಾದರೂ ನನಗೆ ನನ್ನ ಮಾವನ ಬಗ್ಗೆ ಹೆಮ್ಮೆ ಎನ್ನಿಸುವುದು.

ಅಮ್ಮ ಹೇಳುತ್ತಿದ್ದಳು, ಈ ಮಾವ ಓದಿದ್ದು ವಾರಾನ್ನ ಮಾಡಿಯಂತೆ. ವಾರಾನ್ನ ಎಂದರೆ ಬಡಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಕೆಲವು ದಾನಿಗಳು ವಾರದಲ್ಲಿ ಒಂದು ದಿನ ಅವರಿಗೆ ಊಟ ತಿಂಡಿಯನ್ನು ನೀಡುತ್ತಿದ್ದ ವ್ಯವಸ್ಥೆ. ಇಂತಹ ಏಳು ಮನೆಗಳನ್ನು ಹೊಂದಿಸಿಕೊಂಡು ಬಡ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಇದೂ ಕೂಡ ಮಾವನ ಬಗೆಗಿನ ನನ್ನ ಹೆಮ್ಮೆಗೆ ಕಾರಣವಾಗಿತ್ತು. ಮಲೆನಾಡಿನ ಹರಿಹರಪುರದಲ್ಲಿ ಕಿಟ್ಟಿ ಮಾವ 'ನನ್ನ ತಮ್ಮನಿಗೆ ನಾಲ್ಕಂಕಿ ಸಂಬಳ' ಎಂದು ಬಂದವರ ಬಳಿಯಲ್ಲೆಲ್ಲಾ ಕೊಚ್ಚಿಕೊಳ್ಳುತ್ತಿದ್ದರು!

ಮತ್ತೆ ಮಾವ ಬಂದಿದ್ದು ಅಮ್ಮ ಸತ್ತಾಗಲೇ ಇರಬೇಕು. ದೊಡ್ಡಣ್ಣ ಹೊಳೆಗೆ ಬಿದ್ದ ಸ್ನೇಹಿತನನ್ನು ರಕ್ಷಿಸಲು ಹೋಗಿ ತಾನೂ ಸಾವು ಕಂಡ. ಹಿರಿಮಗನನ್ನು ಕಳೆದುಕೊಂಡ ಅಮ್ಮ ಹೆಚ್ಚೂಕಡಿಮೆ ಹುಚ್ಚಿಯೇ ಆದಳು. ಆನಂತರ ನಮ್ಮನ್ನೆಲ್ಲಾ ದುಡಿದು ಸಾಕಿದ್ದು ದೊಡ್ಡಕ್ಕನೇ. ಅಮ್ಮ ದೊಡ್ಡಣ್ಣನನ್ನು ಕಳೆದುಕೊಂಡ ಕೊರಗಿನಲ್ಲಿ ಪ್ರಾಣವನ್ನೇ ಬಿಟ್ಟಳು. ಈ ಬಾರಿ ಮಾವ ಒಬ್ಬರೇ ಬಂದಿದ್ದರು. ಮಾವ ಬಂದಾಗ ಆಗಲೇ ಅಮ್ಮ ಬೂದಿಯಾಗಿದ್ದಳು. ಅಮ್ಮ ಬೂದಿಯಾದ ಸ್ಥಳ ನೋಡಲು ನನ್ನನ್ನು ಕರೆದುಕೊಂಡು ಹೋದ ಮಾವ ಅಲ್ಲಿ ಕಣ್ಣು ಒದ್ದೆಮಾಡಿಕೊಂಡರು.

ಅಮ್ಮನ ವೈಕುಂಠ ಮುಗಿಯುವವರೆಗೂ ಮಾವ ನಮ್ಮ ಮನೆಯಲ್ಲಿದ್ದರು. 'ಭಾವ, ನಾಗರತ್ನಳಿಗೆ ಒಂದು ಒಳ್ಳೇ ಗಂಡು ನೋಡಿ, ನಾನೂ ಮದುವೆಯ ಅರ್ಧ ಖರ್ಚು ಹಾಕುತ್ತೇನೆ' ಎಂದು ಒಂದು ಸಂಜೆ ಮಾತನಾಡುವಾಗ ಮಾವ ಅಪ್ಪಯ್ಯನಿಗೆ ಹೇಳಿದರು. ಆಗ ಮಾವ ಮದ್ರಾಸಿನಲ್ಲಿದ್ದರು. ನನ್ನನ್ನು ತಮ್ಮೊಂದಿಗೆ ಮದ್ರಾಸಿಗೆ ಬರಲು ಕರೆದರು. ನಾನಾಗಲೇ ಒಂಬತ್ತನೆಯ ತರಗತಿಯಲ್ಲಿದ್ದೆ. ಅದು ಬೇಸಿಗೆ ರಜೆಯ ಸಮಯ. ದೊಡ್ಡಕ್ಕ, ಅಪ್ಪಯ್ಯ ನನ್ನನ್ನು ಮಾವನೊಂದಿಗೆ ಕಳಿಸಲು ಒಪ್ಪಿದರು. ನನ್ನ ಬಟ್ಟೆ ಬರೆ ಹಾಕಿ ಕಳಿಸಲು ಅಕ್ಕ ಇದ್ದುದರಲ್ಲಿಯೇ ಚೆನ್ನಾಗಿದ್ದ ತಗಡಿನ ಪೆಟ್ಟಿಗೆಯೊಂದನ್ನು ಸ್ವಚ್ಛಗೊಳಿಸತೊಡಗಿದಳು. 'ಏ ನಾಗರತ್ನ ಪೆಟ್ಟಿಗೆ ಯಾಕೆ, ಯಾವ್ದಾದ್ರು ಚೀಲ ಸಾಕು, ವಾಪಸ್ಸು ಬರ್‍ತಾ ಸೂಟ್‌ಕೇಸ್ ಕಳಿಸ್ತೀನಿ' ಎಂದರು. ಅಕ್ಕ ಯಾವುದೋ ಕೆಂಪು ಚೀಲಕ್ಕೆ ನನ್ನ ಬಟ್ಟೆಬರೆ ತುಂಬಿಸಿಕೊಟ್ಟಳು.


ಮಾವ ನಮ್ಮಲ್ಲಿಂದ ಮೈಸೂರಿಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಸಣ್ಣ ಮಾವನ ಮಗ ರಮೇಶನನ್ನು ಜತೆಗೂಡಿಸಿಕೊಂಡು ರೈಲಿನಲ್ಲಿ ಮದರಾಸಿಗೆ ಬಂದೆವು.

ಮಾವ ಮದರಾಸಿನಲ್ಲಿ ಯುದ್ಧ ಟ್ಯಾಂಕರ್‌ಗಳನ್ನು ನಿರ್ಮಿಸುವ ಕಾರ್ಖಾನೆಯ ಮೇಲಧಿಕಾರಿಯಾಗಿದ್ದರು. ಅವರಿಗೆ ಓಡಾಡಲು ಸೇನೆಯ ಜೀಪು ಕೊಟ್ಟಿದ್ದರು. ಮಾವ ತನ್ನ ಕೆಲಸದ ಸ್ಥಳಕ್ಕೂ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಹತ್ತಾರು ಜನ ಮಾವನಿಗೆ ಸೆಲ್ಯೂಟ್ ಹೊಡೆಯುತ್ತಿದ್ದಾಗ, ಮಾವ ಗತ್ತಿನಲ್ಲಿ ಕಿರುಗಣ್ಣಿನಲ್ಲಿ ನಮ್ಮ ಪ್ರತಿಕ್ರಿಯೆಯನ್ನು ಗಮನಿಸುತ್ತಿದ್ದರು.

ಮಾವ ತನ್ನ ಸಹಾಯಕ ರಹೀಮನನ್ನು ಜೊತೆ ಮಾಡಿ ಮಕ್ಕಳನ್ನೆಲ್ಲ ಮದ್ರಾಸಿನ ಗೋಲ್ಡನ್ ಬೀಚ್, ವಸ್ತುಸಂಗ್ರಹಾಲಯ, ದೇವಸ್ಥಾನಗಳಿಗೆಲ್ಲ ಕಳಿಸಿಕೊಡುತ್ತಿದ್ದರು. ಗೀತಾ, ಸೀತಾ ಜೊತೆ ವೇಳೆ ಕಳೆದದ್ದೇ ತಿಳಿಯುತ್ತಿರಲಿಲ್ಲ.

ರಮೇಶ ಇಲ್ಲದಿರುವಾಗ ಗೀತಾ ನನ್ನ ಬಳಿ ರಮೇಶನ ತಾಯಿ ಅವರು ಮೈಸೂರಿನಲ್ಲಿದ್ದಾಗ ಸರಿಯಾಗಿ ಊಟ ಹಾಕದೇ ಇದ್ದುದನ್ನು, ಹಾಲು, ಮೊಸರು ನೀಡುವಾಗ ಜಿಪುಣತನ ತೋರುತ್ತಿದ್ದುದನ್ನು ನನ್ನ ಬಳಿ ಹೇಳಿದ್ದಳು.

ಮಾವನ ಹೆಂಡತಿ ಅತ್ತೆಯಂತೂ ಮುಕ್ತವಾಗಿ ನನ್ನ ಬಳಿ ಮಾತಾಡುತ್ತಿದ್ದರು. ಬೇರೆ ನೆಂಟರಿಷ್ಟರೆಲ್ಲ ಬಡತನದ ಕಾರಣಕ್ಕೆ ಕೀಳಾಗಿ ನೋಡುವ ಅನುಭವವಿದ್ದರಿಂದ ಅತ್ತೆಯ ಆದರ ನನಗೆ ತುಂಬ ಖುಷಿ ಕೊಡುತ್ತಿತ್ತು. ಮಾವ ಜಮ್ಮುವಿನಿಂದ ಸಾಕಷ್ಟು ದುಡ್ಡು ಕಳಿಸುತ್ತಿದ್ದರೂ ರಮೇಶನ ತಾಯಿ ತಮ್ಮ ಬಗ್ಗೆ ಆಗ ತೋರುತ್ತಿದ್ದ ಅನಾದರದ ಬಗ್ಗೆ ಅತ್ತೆಯೂ ಬೇಸರದಿಂದ ಹೇಳಿದ್ದರು. ಹರಿಹರಪುರದ ಅತ್ತೆ ತನ್ನ ಮಕ್ಕಳಿಗೆ ಸ್ಟೀಲ್ ತಟ್ಟೆಯಲ್ಲಿ ಊಟ ಬಡಿಸಿದರೆ ನನಗೆ ನನ್ನ ಅಕ್ಕತಂಗಿಯರಿಗೆ ಅಲ್ಯೂಮಿನಿಯಂ ತಟ್ಟೆಯಲ್ಲಿ ಊಟಕ್ಕೆ ಹಾಕುತ್ತಿದ್ದರು. ಆದರೆ ಈ ಅತ್ತೆ ಎಲ್ಲ ಮಕ್ಕಳಿಗೂ ಒಟ್ಟಿಗೆ ಡೈನಿಂಗ್ ಟೇಬಲ್ ಮೇಲೆಯೇ ಎಲ್ಲರಿಗೂ ಒಂದೇ ಬಗೆಯ ತಟ್ಟೆಗಳಲ್ಲಿ ಊಟಕ್ಕೆ ಬಡಿಸುತ್ತಿದ್ದರು.



ಮದರಾಸಿನಿಂದ ಹೊರಡುವ ಮುನ್ನ ಅತ್ತೆ-ಮಾವ ನಮ್ಮನ್ನು ಟೈಲರ್ ಬಳಿ ಕರೆದುಕೊಂಡು ಹೋಗಿ ನನಗೆ ಸಫಾರಿಯನ್ನೂ, ರಮೇಶನಿಗೆ ಅಂಗಿ-ಪ್ಯಾಂಟನ್ನೂ ಹೊಲಿಸಿದರು. ಮಾವನ ಮಲಗುವ ಕೋಣೆಯಲ್ಲಿ ಅನೇಕ ತರಹದ, ಅನೇಕ ಅಳತೆಯ ಸೂಟ್‌ಕೇಸ್‌ಗಳಿದ್ದವು. ಮಾವ ಇದರಲ್ಲಿ ಯಾವುದನ್ನು ನನಗೆ ಕೊಡಬಹುದು ಎಂದು ಎಣಿಕೆ ಹಾಕುತ್ತಿದ್ದೆ. ಆದರೆ ಮಾವ ಹೊರಡುವಾಗ ಒಂದು ರಟ್ಟಿನ ಬಾಕ್ಸ್‌ನಲ್ಲಿ ನನ್ನ ಬಟ್ಟೆಗಳನ್ನೆಲ್ಲ ಹಾಕಿ ಗೋಣಿದಾರದಲ್ಲಿ ಬಿಗಿಯಾಗಿ ಕಟ್ಟಿಕೊಟ್ಟರು. ಆ ರಟ್ಟಿನ ಬಾಕ್ಸ್ ಹಿಡಿದು. ಹೊಸ ಸಫಾರಿ ಧರಿಸಿ ನಾನು ಹವಾಯಿ ಚಪ್ಪಲಿಯಲ್ಲಿ ಹೊರಟೆ!

ಮದರಾಸಿನಲ್ಲಿ ಟಿಕೆಟ್ ಮಾಡಿಸಿ ರೈಲಿನಲ್ಲಿ ಕೂಡಿಸಿದ ಮಾವ ನಮ್ಮಿಬ್ಬರ ಜೇಬಿನೊಳಗೆ ಒಂದಷ್ಟು ದುಡ್ಡನ್ನಿಟ್ಟು ಅದು ಹೊರಬಾರದಂತೆ ಪಿನ್ ಹಾಕಿ ಭದ್ರಪಡಿಸಿದರು. ಮೈಸೂರಿಗೆ ಹೋದನಂತರ "ನಿನ್ನ ಜೇಬಿನಲ್ಲಿರುವುದನ್ನು ರಾಮುವಿಗೆ ಕೊಡು" ಎಂದು ಮಾವ ರಮೇಶನಿಗೆ ಹೇಳಿದರು. ಆದರೆ ಮೈಸೂರಿಗೆ ಬರುತ್ತಿದ್ದಂತೆ ರಮೇಶ ಆ ದುಡ್ಡನ್ನು ತೆಗೆದು ಅಮ್ಮನ ಬಳಿ ಕೊಟ್ಟುಬಿಟ್ಟ.

'ಅಮ್ಮ ತೀರಿಹೋದ ಆರು ತಿಂಗಳೊಳಗೆ ದೊಡ್ಡಕ್ಕನಿಗೆ ಮದುವೆ ಮಾಡದಿದ್ದರೆ ಆ ನಂತರ ಒಂದು ವರ್ಷ ಮಾಡುವ ಹಾಗೇ ಇಲ್ಲ' ಎಂದು ದೊಡ್ಡಮ್ಮ ಹೇಳಿದ್ದರು. ಮಾವಂದಿರು ಎಲ್ಲೆಲ್ಲಿಯೋ ವರನಿದ್ದಾನೆ ಎಂದರು. ಅಲ್ಲಿಗೆಲ್ಲ ದೊಡ್ಡಮ್ಮನೊಂದಿಗೆ ಹೋಗಿ ಬಂದ ದೊಡ್ಡಕ್ಕ, 'ವಯಸ್ಸಾದವರು, ಕುಂಟ, ಕುರುಡರನ್ನೆಲ್ಲ ತೋರಿಸುತ್ತಾರೆ, ಇವರ ಮಕ್ಕಳಿಗೂ ಇಂತಹ ವರಗಳನ್ನೇ ಗಂಟು ಹಾಕುತ್ತಾರ' ಎಂದು ಗೊಣಗುತ್ತಿದ್ದಳು.

ಕೊನೆಗೆ ದೊಡ್ಡಮ್ಮನೇ ನೋಡಿದ ಶಿವಮೊಗ್ಗದವರ ಅಕ್ಕನಿಗೆ ಒಪ್ಪಿಗೆಯಾಗಿ ಮದುವೆ ನಿಶ್ಚಯವಾಯಿತು. ಮಾವ ಮದುವೆಯ ಅರ್ಧ ಖರ್ಚು ಕೊಡುತ್ತೇನೆ ಎಂದದ್ದು ಕೇಳಿ ಸಾಲ ಕೊಡಬೇಕಾಗಿದ್ದ ಗೌಡರು ಚೌಕಾಸಿ ಮಾಡಿದರು. ಮಾವ ಕೊನೆಗೆ ನಾಲ್ಕು ಸಾವಿರ ಕೊಟ್ಟು ನನ್ನ ಬಳಿ ಇರುವುದೇ ಇಷ್ಟು ಎಂದು ಮದರಾಸಿಗೆ ಹೊರಟರು. ಅಪ್ಪಯ್ಯ ಅಣ್ಣಾ ದೊಡ್ಡ ಸಾಲದಲ್ಲಿ ಬಿದ್ದರು.

ದೊಡ್ಡಕ್ಕನ ಮದುವೆಯಾದ ಎರಡೇ ವರ್ಷದಲ್ಲಿ ಸಣ್ಣಕ್ಕನ ಮದುವೆಯೂ ನಿಶ್ಚಯವಾಯಿತು. ಮಾವ ಈಗ ಮದರಾಸಿನಿಂದ ಬೆಂಗಳೂರಿಗೆ ಬಂದಿದ್ದರು, ಮದುವೆಗೆ ಬಂದಿದ್ದ ಮಾವನ ಬಳಿ "ರಾಮನದು ಪಿಯುಸಿ ಈ ಬಾರಿ ಮುಗೀತದೆ, ಡಿಗ್ರಿ ಓದ್ಸೋದು ಕಷ್ಟ. ಆತನಿಗೆ ಬೆಂಗಳೂರಿನಲ್ಲಿ ಒಂದು ಕೆಲ್ಸ ಕೊಡ್ಸಿ. ಸಾಧ್ಯ ಆದ್ರೆ ಸಂಜೆ ಕಾಲೇಜಿನಲ್ಲಿ ಡಿಗ್ರಿ ಮುಗಿಸ್ತಾನೆ" ಎಂದು ದೊಡ್ಡಕ್ಕ ಹೇಳಿದಳು, ನೆಂಟರಿಷ್ಟರೆಲ್ಲ ನಮ್ಮ ಸುತ್ತಮುತ್ತಲಿದ್ದರು. "ಏ ರಾಮೂ, ಪಿಯುಸಿ ಮುಗೀತಿದ್ದಂತೆ ಟಿಸಿ ತಗೊಂಡು ಬೆಂಗಳೂರಿಗೆ ಬಾರೋ, ತಗೋ ಇದು ನನ್ನ ಅಡ್ರೆಸ್" ಎಂದು ವಿಸಿಟಿಂಗ್ ಕಾರ್ಡೊಂದನ್ನು ನನಗೆ ನೀಡಿದರು.

ಪಿಯುಸಿಯಲ್ಲಿ ನಾನು ಪ್ರಥಮ ದರ್ಜೆಯಲ್ಲಿಯೇ ಪಾಸಾಗಿದ್ದೆ. ಪದವಿ ತರಗತಿಗೆ ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ನನ್ನ ಹೆಸರು ಮುಂಚೂಣಿಯಲ್ಲಿತ್ತು. ಮಾವ ಹೇಳಿದಂತೆ ವರ್ಗಾವಣೆ ಪತ್ರ ಪಡೆದು ಬೆಂಗಳೂರಿನ ಮಾವನ ಮನೆಗೆ ತೆರಳಿದೆ, ಬೆಂಗಳೂರಿಗೆ ಹೋದ ಒಂದು ವಾರ ಅಲ್ಲೊಂದು ಕೆಲಸವಿದೆ, ಇಲ್ಲೊಂದು ಕೆಲಸವಿದೆ ಅನ್ನುತ್ತಿದ್ದ ಮಾವ ಆಮೇಲೆ ಕೆಲಸದ ಬಗ್ಗೆ ಮಾತನಾಡುವುದನ್ನೇ ಬಿಟ್ಟರು. ಒಂದು ತಿಂಗಳಾದರೂ ನಾನೂ ನಿರುದ್ಯೋಗಿಯಾಗಿಯೇ ಇದ್ದೆ ಇನ್ನೂ ಇರಲಾಗದೇ, ವಾಪಸ್ಸು ಊರಿಗೆ ಮರಳಿದೆ.

ವಿಚಾರ ತಿಳಿದ ದೊಡ್ಡಕ್ಕ ಕೆರಳಿ ಕೆಂಡವಾದಳು, ಮಾವನಿಗೆ ದೂರವಾಣಿ ಮಾಡಿ 'ನನ್ನ ತಮ್ಮನಿಗೆ ಡಿಗ್ರಿ ಓದಿಸಿ ಕೆಲಸ ಕೊಡಿಸುವ ತಾಕತ್ ನನಗಿದೆ, ಮಾವ ಅಂತ ನಿಮ್ಮ ಬಳಿ ಹೇಳಿದರೆ ಹೀಗೆ ಕುತ್ತಿಗೆ ಕೊಯ್ಯಬಾರದು' ಎಂದು ಆರ್ಭಟಿಸಿದಳು.

ದೊಡ್ಡಕ್ಕ ಹೇಳಿದಂತೆ ನನ್ನ ಭವಿಷ್ಯದ ಕುತ್ತಿಗೆ ಕೊಯ್ದಂತೇ ಆಗಿತ್ತು. ಕಾಲೇಜಿನಲ್ಲಿ ಸೀಟುಗಳೆಲ್ಲ ಭರ್ತಿಯಾಗಿದ್ದವು. ಮತ್ತೆ ಕಾಲೇಜಿನಲ್ಲಿ ಸೀಟು ಪಡೆಯುವುದು ಹರಸಾಹಸವಾಗಿಬಿಟ್ಟಿತು.

ಎಷ್ಟೋ ವರ್ಷಗಳ ನಂತರ ಎಲ್ಲಾ ಕಹಿಗಳು ಮರೆಯಾದ ಹೊತ್ತಿನಲ್ಲಿ ಇನ್ನೊಂದು ಘಟನೆ ನಡೆಯಿತು. ಮಾವನ ಮಗಳ ಮದುವೆಗೆ ಹೋಗಿದ್ದ ದೊಡ್ಡಕ್ಕ ದುರ್ದಾನ ತೆಗೆದುಕೊಂಡಂತೆ ವಾಪಾಸು ಬಂದಳು. ಮದುವೆ ಹಿಂದಿನ ರಾತ್ರಿ ಅಕ್ಕ, ದೊಡ್ಡಮ್ಮಂದಿರು ಮಲಗಿದ್ದ ಕಲ್ಯಾಣಮಂದಿರದ ರೂಮೊಂದಕ್ಕೆ ಧಾವಿಸಿದ ಮಾವ 'ಈ ರೂಮಲ್ಲಿ ವಧುವಿನ ಚಿನ್ನಬೆಳ್ಳಿ ಇಟ್ಟಿದ್ದೇವೆ: ನೀವು ಹೊರಗೆ ಮಲಗಿ' ಎಂದು ಎಬ್ಬಿಸಿದರಂತೆ.

'ಚಿನ್ನ-ಬೆಳ್ಳಿ ಇವರೇನಾ ಕಂಡವರು, ಏನು ನಮ್ಮನ್ನು ಕಳ್ಳರೆಂದು ಭಾವಿಸಿದರಾ' ಎಂದು ಅಕ್ಕ ಮಾವನಿಗೆ ಕೋಪ ಅದುಮಿಡಲಾರದೆ ಬೈಯುತ್ತಿದ್ದಳು.

ದೊಡ್ಡಕ್ಕನ ಮನಸ್ಸನ್ನು ಯಾರಾದರು ನೋಯಿಸಿದರೆ ಅದನ್ನು ಸಹಿಸಿಕೊಳ್ಳಲು ನನಗೆ ಸಾಧ್ಯವಿಲ್ಲ.

ದೊಡ್ಡಕ್ಕ ನಮಗೆಲ್ಲಾ ಅಮ್ಮನಂತಿದ್ದಳು. ನಾನು ಡಿಗ್ರಿ ...ಪಿ ಬೆಂಗಳೂರಲ್ಲಿ ಕೆಲಸಕ್ಕೆ ಸೇರುವ ನಂತರವೂ ನನಗೆ, ...ಗೆ, ಸಣ್ಣಕ್ಕ-ತಂಗಿಯರಿಗೆ ಕರವಸ್ತ್ರದಿಂದ ಹಿಡಿದು ಎಲ್ಲಾ ತೆಗೆಸಿಕೊಡುತ್ತಿದ್ದುದು ದೊಡ್ಡಕ್ಕ. ಅಕ್ಕ ಕೊಡಿಸಿದ ಲುಂಗಿ, ಹೆಚ್‌ಎಂಟಿ ವಾಚು ಕಟ್ಟಿಕೊಂಡು ಗತ್ತಿನಿಂದ ...ಡಿದ್ದು ನನ್ನ ನೆನಪಿನಿಂದ ಇನ್ನೂ ಮಾಸಿಲ್ಲ.

ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ...ದ ಮೊದಲ ತಿಂಗಳ ಭರ್ಜರಿ ಸಂಬಳ ಬಂದಾಗ ...ಲ್ಲಿ ದೊಡ್ಡಕ್ಕನಿಗೆ ವಜ್ರದ ಕಿವಿಯೋಲೆ ಕೊಡಿಸಿದ್ದೆ.

ದೊಡ್ಡಕ್ಕನಿಗೆ ಮಾವ ಅವಮಾನಪಡಿಸಿದ ಮೇಲೆ ...ನ ಬಗ್ಗೆ ಒಂದು ತರದ ತಿರಸ್ಕಾರವೇ ಉಂಟಾಯಿತು.

ಮಾವ, ತನ್ನ ಅಕ್ಕ ಅಂದರೆ ನನ್ನ ಅಮ್ಮ ಹಾಗೂ ...ಗೂ ಹೀಗೇ ಅವಮಾನ ಮಾಡಿದ್ದರಾ ಎಂದು ...ಸ್ಸು ಯೋಚಿಸುತ್ತಿತ್ತು. ನೆನಪನ್ನು ಎಷ್ಟು ಕೆದಕಿದರೂ ಅಮ್ಮ, ಮಾವನ ಬಗ್ಗೆ ಒಂದೇ ಒಂದು ಕಹಿಮಾತನ್ನು ...ದ್ದ ನೆನಪಿಗೆ ಬಾರದು. ಅದವರ ಮುಗ್ಧತೆಯೇ? ...ಅವರು ಕಾಪಾಡಿಕೊಂಡ ಮನುಷ್ಯನ ಸಹಜ ...ಯೇ?

...ವೆಲ್ಲಾ ನಡೆದು ಎಷ್ಟೋ ಸಮಯವಾಯಿತು. ...ನನ್ನು ಮರೆಯಬೇಕೆಂದರೂ ಮತ್ತೆ ಅವರೇ ...ತ್ತಿದ್ದರು. ಗೀತಾ-ಸೀತಾ ಈಗ ಹೇಗಿದ್ದಾರೆ? ಅವರಿಗೆ ...ಾಸಿನಲ್ಲಿ ಕಳೆದ ದಿನಗಳು ನೆನಪಿದೆಯೇ ಎಂಬ ...ಹಲ ಮೂಡುತ್ತಿತ್ತು.

...ನಕಳೆದಂತೆ ನಾನು ದ್ವೇಷ ಹೊತ್ತ ಸಣ್ಣ ಹುಳುವಿನಂತೆ ...ಾಗತೊಡಗಿತು. ಇಲ್ಲ ಒಂದು ಬಾರಿ ಬೆಂಗಳೂರಿಗೆ ... ಅತ್ತೆ, ಮಾವ, ಗೀತಾ-ಸೀತಾರನ್ನೆಲ್ಲಾ ಮಾತನಾಡಿಸಿ ... ಬರಬೇಕು ಎಂದುಕೊಂಡೆ. ಇದೇ ಸಮಯದಲ್ಲಿ ...ಿಂದಲೇ ಫೋನ್ ಬಂತು.

...ಮ್ಮ ಕುಟುಂಬದ ಮನೆದೇವರು ಹರಿಹರಪುರದ ... ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮ ...ಕೊಂಡಿದ್ದೀನಿ, ಹೆಂಡತಿ ಮಗುವಿನ ಜೊತೆಗೆ ಬಾ' ... ಕರೆದರು.

...ತ್ತೆ ಹೊಯ್ದಾಟ ಆರಂಭವಾಯಿತು. ಮಾವ ನನ್ನ ...ಾಸಕ್ಕೆ ಮಾಡಿದ ತೊಂದರೆ, ದೊಡ್ಡಕ್ಕನಿಗೆ ಮಾಡಿದ ...ಾನ ಎಲ್ಲವೂ ನುಗ್ಗಿಬಂದವು. ಅದರೊಂದಿಗೆ ಮಾವ ...ಸಿಗೆ ಕರೆದುಕೊಂಡು ಹೋದದ್ದು ಸಫಾರಿ ಕೊಡಿಸಿದ್ದು ... ಬೂದಿಯ ಮುಂದೆ ಕಣ್ಣೀರು ಹಾಕಿದ್ದು, ಅತ್ತೆಯ ... ಗೀತಾ-ಸೀತಾ ಒಡನಾಟ' ಎಲ್ಲವೂ ಪ್ರವಾಹದಂತೆ ...ಾದವು.

...ಲ್ಲ ನಾನು ಎಲ್ಲವನ್ನೂ ಅತಿಗೆ ಕೊಂಡೊಯ್ಯುತ್ತಿದ್ದೇನೆ ... ಮನಸ್ಸಿನಿಂದ ಎಲ್ಲವನ್ನೂ ಹೊರಹಾಕಿ, ಹೆಂಡತಿ ...ಂದಿಗೆ ಹರಿಹರಪುರಕ್ಕೆ ಹೊರಟೆ, ದೊಡ್ಡಕ್ಕನಿಗೆ ...ವುದೋ ಬೇಡವೋ, ಒಂದು ವೇಳೆ ಆಕೆ ...ವುದು ಬೇಡವೆಂದರೆ? ಈ ತಾಕಲಾಟದಲ್ಲಿ ಆಕೆಗೂ ...ಗೂ ತಿಳಿಸಲಿಲ್ಲ.

...ನು ದೇವಸ್ಥಾನಕ್ಕೆ ಹೋಗುತ್ತಿದ್ದಂತೆ ನನ್ನನ್ನು ಗುರುತು ... ಗೀತಾ ಸೀತಾ ಬಾಗಿಲಲ್ಲೇ ನಮ್ಮನ್ನು ಸ್ವಾಗತಿಸಿದರು. ... ದೊಡ್ಡ ದೊಡ್ಡ ಹೆಂಗಸರಾಗಿದ್ದರು. ಮದರಾಸಿನ ... ಅವರ ಚಿತ್ರಗಳೇ ನನ್ನ ಮನಸ್ಸಿನಲ್ಲಿದುದರಿಂದ ... ಒರಿಜಿನಲ್ ಗೀತಾ-ಸೀತಾ ಅನ್ನಿಸಲೇ ಇಲ್ಲ. ದೇವ...ಮುಂಭಾಗದಲ್ಲಿ ಹಾಕಲಾದ ಶಾಮಿಯಾನದ ಕೆಳಗೆ ... ಜನ ಸೇರಿದ್ದರು. ಆಗಲೇ ಸ್ವಾಮೀಜಿ ವೇದಿಕೆಯ ... ಎತ್ತರದ ಆಸನದಲ್ಲಿ ಕುಳಿತಿದ್ದರು. ಅತ್ತೆ-ಮಾವ ... ಇನ್ನಷ್ಟು ಅತಿಥಿಗಳು ವೇದಿಕೆಯ ಮೇಲಿದ್ದರು. ...ನಮ್ಮನ್ನು ವೇದಿಕೆ ಮುಂಭಾಗದ ಮೊದಲ ಸಾಲಿಗೆ ...ಂಡು ಹೋಗಿ ಕುಳ್ಳಿರಿಸಿದಳು. ಅಲ್ಲಿ ದೊಡ್ಡಕ್ಕ-ಭಾವ, ...ತ್ತಿಗೆಯರನ್ನು ಕಂಡು ಅಚ್ಚರಿಯೊಂದಿಗೆ ಖುಷಿಯೂ ... ದೊಡ್ಡಕ್ಕ ನನ್ನ ಮಗನನ್ನು ಎತ್ತಿಕೊಂಡಳು. ಕವಿತಾ...ೊಂದಿಗೆ ಮಾತಿಗೆ ತೊಡಗಿದಳು. 'ಈಗ ...ಾವರಿಗೆ ಅವರು ದೇವಸ್ಥಾನದ ವಿದ್ಯುತ್ತಿನ ಬೆಳಕಿನ ...ಾಗಿ ನೀಡಿದ ಎರಡು ಲಕ್ಷ ರೂಪಾಯಿಗಳ ...ಾಗಿ ಸ್ವಾಮೀಜಿ ಸನ್ಮಾನ ಮಾಡುತ್ತಾರೆಂದು' ದೊಡ್ಡಕ್ಕ ...ಯಲ್ಲಿ ಹೇಳಿದಳು.

...ವ ಏನೋ ಸಾಧಿಸಿದ ಸಂತೃಪ್ತ ಮುಖಭಾವದಲ್ಲಿ ...ರು.

...ಗವಂತ ಜನರ ಕತ್ತಲೆಯನ್ನು ದೂರಮಾಡುತ್ತಾನೆ. ... ಭಗವಂತನ ಗುಡಿಗೆ ಬೆಳಕು ತರುತ್ತಿರುವ ...ಯರು ಎಲ್ಲರಿಗೂ ಆದರ್ಶಪ್ರಾಯರು" ಇತ್ಯಾದಿ ... ಅಸಂಬದ್ಧವಾಗಿ ಮಾವನನ್ನು ಹೊಗಳಿದರು. ...ಸ್ವಾಮೀಜಿಯ ಹೊಗಳಿಕೆಯಿಂದ ಉಬ್ಬಿಹೋಗಿ ... ಸ್ಫೋಟಿಸಿಯೇ ಬಿಡುತ್ತಾರೆ ಎಂದು ನಗುಬಂತು.

...ತೂ ಮಾವ ದೇವರಿಗೆ ಅಡ್ವಾನ್ಸ್ ಆಗಿ ಎರಡು ...ಟ್ಟು ಸ್ವರ್ಗದಲ್ಲೊಂದು ಸೀಟು ಬುಕ್ ಮಾಡ್ಕೊಂಬಿಟ್ಟ" ...ಜೋರಾಗಿ ನಕ್ಕೆ.

...ಕು ಸುಮ್ಮಿರೋ" ಎಂದು ದೊಡ್ಡಕ್ಕ ಗದರಿದಳು.

ನನ್ನ ಕನ್ನೆ

ಪಿ.ಲಂಕೇಶರು 21 ವರ್ಷದ ಯುವಕರಾಗಿದ್ದಾಗ 'ಮಲೆನಾಡು' ಎಂಬ ಪತ್ರಿಕೆಯ 1956ರ ವಾರ್ಷಿಕ ಸಂಚಿಕೆಗೆ ಬರೆದ ಕಿರುಕತೆ 'ನನ್ನ ಕನ್ನೆ'. ಈ ಕತೆ ಮತ್ತೆ ಎಲ್ಲೂ ಪ್ರಕಟಗೊಂಡಿರಲಿಲ್ಲ. ಕುತೂಹಲಕ್ಕಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಎರಡು ಜಡೆ. ತುಂಬು ನಡೆ. ನಾನವಳನ್ನು ಕದ್ದು ನೋಡಿದ್ದೆ. ನೇರವಾಗಿ ನೋಡಿ ಎಲ್ಲರಂತೆ ಕೀಳಾಗಲು ಇಷ್ಟವಿಲ್ಲ. ಕದ್ದು ನೋಡಿದ್ದೆ.

ಎಲ್ಲರನ್ನೂ ವಂಚಿಸಿದಷ್ಟು ಸುಲಭವಾಗಿ ಮನಸ್ಸನ್ನು ವಂಚಿಸಲಾಗಿರಲಿಲ್ಲ. ಹೃದಯದಲ್ಲಿ ಪ್ರತಿಬಿಂಬವಾದ ಯಾವೊಂದು ಚಿತ್ರವನ್ನೂ ಪ್ರತಿಧ್ವನಿತವಾದ ಯಾವೊಂದು ಭಾವನೆಯನ್ನೂ ಹತ್ತಿಕ್ಕುವುದು ಸುಲಭವಲ್ಲ. ನನ್ನ ಹದ್ದು ಮೀರಿ ಮನಸ್ಸು ಆಗಾಗ ಬಣ್ಣದ ಹಂದರವಾಗುತ್ತಿತ್ತು; ಕಲ್ಪನೆಯ ತೋರಣ ಕಟ್ಟುತ್ತಿತ್ತು. ಆ ಹಂದರದಲ್ಲಿ ಅವಳ ನಗುನಗುವ ಮೂರ್ತಿ.....

ದಿನದಿನಕ್ಕೆ ಭಾರವಾಯಿತು ಎದೆ.

ಜಡೆಗಳೇ ಬಂದು ಮನಸ್ಸಿನ ರಂಗದಲ್ಲಿ ನರ್ತಿಸುತ್ತಿದ್ದವು. ತೊಡೆಗಳೇ ಬಳುಕುತ್ತಿದ್ದವು. ಕೆಂಪು ಕುಪ್ಪಸದ ಆ ಭುಜ, ಬಿಗಿದ ಬಟ್ಟೆಯ ತೆಳುಕಟಿ, ನವಿಲಗರಿಯ ಹುಬ್ಬು ಆಳವಾದ ಕಪ್ಪಾದ ಭಾವಗರ್ಭಿತ ಕಣ್ಣುಗಳು....

ಒಂದು ದಿನ ನನ್ನಲ್ಲೇ ಹಾಡಿಕೊಂಡೆ:

"ಕಂಗಳು ಅರಳಿದ ಬೆಳ್ಳನೆ ಮೊಲ್ಲೆ;
ನನ್ನೆದೆ ಕದ್ದೆಯೆ ನಲ್ಲೆ!
ಜೇನನು ಸುರಿಸುವ ತುಟಿಗಳ ಜೋಡಿ
ಹಾಕಿವೆ ಮನಸಿಗೆ ಮೋಡಿ!"

ಪರವಾಗಿಲ್ಲ! ಆರಂಭ ಚೆನ್ನಾಗಿಯೇ ಇತ್ತು! ಬರೆದರೆ ಚೆನ್ನೆನಿಸಿತು. ಬರೆಯುತ್ತ ಕುಳಿತೆ. ಆನಂದದ ಕಡಲು ಉಕ್ಕಿ ಬಂತು. ಹರ್ಷಾಬ್ಧಿಯ ತರಂಗತರೆಯ ಮೇಲೆ ತುಯ್ದಾಡಿ ತೂಗಾಡಿ ಚಂದಿರನಂತೆ ಮೆರೆಯಿತು ಅವಳ ವ್ಯಕ್ತಿತ್ವ. ಸಂಪಗೆ ಮೂಗು, ಅದರ ಕೆಲದ ಕಪ್ಪು ಮಚ್ಚೆ ತುಟಿಯ ಕೆಳಗಿನ ಹಚ್ಚೆಯ ಗುರುತು—ಎಲ್ಲದರ ತುಂಬು ವರ್ಣನೆ. ಅವಳ ನಡಗೆಯ ಪ್ರತಿ ಹೆಜ್ಜೆಯ ಸೂಕ್ಷ್ಮ ವಿವರಣೆ.....


ಬರೆದದ್ದನ್ನು ಮತ್ತೊಮ್ಮೆ ಓದಿಕೊಂಡು ಕುಣಿದುಬಿಟ್ಟೆ! ಗೆಳೆಯರನ್ನು ಸೇರಿಸಿ ಓದಿದೆ. ಎಲ್ಲರೂ ಮುದಗೊಂಡರು. ಒಬ್ಬ "ಇದನ್ನು ಪತ್ರಿಕೆಗೆ ಕೊಡು" ಎಂದ.

"ಹೀರೋಯಿನ್ ಯಾರೂನ್ನೋದು ಅವಳಿಗೆ ಗೊತ್ತಾಗಿ ಬಿಡುತ್ತೆ!" ಎಂದ ಇನ್ನೊಬ್ಬ.

ಹೌದು! ಅವಳಿಗೆ ಗೊತ್ತಾಗಕೂಡದು! ಗೊತ್ತಾದರೂ ನಾನು ಒಪ್ಪಕೂಡದು! ಹಾಗೆ ಒಪ್ಪಿದರೆ ಅದೆಂತಹ ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್!....

ಒಂದು ಯೋಚನೆ ಹೊಳೆಯಿತು:

'ಅವಳಿಗೆ ಗೊತ್ತಾದರೂ ಅವಳ ವರ್ಣನೆ ಅಲ್ಲ ಅಂತ ದಬಾಯಿಸಬೇಕು!'



ಸರಿ, ಪೇಪರಿಗೆ ಕೊಡುವುದೆಂದು ತೀರ್ಮಾನವಾಯಿತು. ನನ್ನ ಗೆಳೆಯನೊಬ್ಬ ಅದನ್ನು ಪ್ರಕಟಿಸುವ ಜವಾಬ್ದಾರಿ ಹೊತ್ತ, ಅದು ಬೆಳಕಿಗೆ ಬಂದರೆ ಆಕೆಯ ಮನಸ್ಸಿನಲ್ಲಿ ಏಳಬಹುದಾದ ಭಾವನೆಗಳನ್ನು ಕಲ್ಪಿಸಿ ಕಲ್ಪಿಸಿ ಸೋತೆ.....! ಆದರೂ, ಏನೇ ಆದರೂ, ನಾನು ಸಬ್‌ಮಿಸಿವ್ ಆಗ ಕೂಡದು! ಕೂಡದು..

ಪದ್ಯ ಸಾಕಷ್ಟು ಗಮನ ಸೆಳೆಯಿತು. ನನಗೆ ಕೆಲವರು ಹೊಸ ಗೆಳೆಯರು ದೊರೆತರು. ಅದು ಯಾರ ವರ್ಣನೆಯೇ ಆಗಿದ್ದರೂ-ಕವನದ ದೃಷ್ಟಿಯಿಂದ ಮುದ್ದಾಗಿತ್ತು. ಹೂವುಗಳನ್ನು ಬೇರಿಬೇರಿ ಕಂಪೆಸೆವಂತೆ, ಅಕ್ಷರಗಳನ್ನು ಬೇರಿ ಬೇರಿ ಕಂಪು ಸೂಸಿದ್ದೆ. ಪ್ರಾಸಕ್ಕೆ ಪ್ರಾಸ ಗಂಗೆ ಯಮುನೆಯರಂತೆ ಹೊಂದಿಕೊಂಡು ಸಂಗೀತ ಪ್ರತಿ ಪಂಕ್ತಿಯಲ್ಲೂ ಎದೆ ಬಿರಿಸಿತ್ತು!

ಎಂದಿನಂತೆ ಕ್ಲಾಸಿಗೆ ಹೋದೆ. ಯಾರೋ ಪಿಸುಗುಟ್ಟುತ್ತಿರುವಂತೆ ಭಾವನೆ. ಹಲವಾರು ಕಣ್ಣುಗಳು ಚುಚ್ಚುತ್ತಿರುವಂತೆ ಅನುಭವ. ಏನೋ ಕಾಯ್ದಿರುವಂತೆ ಕಲ್ಪನೆ..... ಎದುರಿಸಬೇಕು, ಗಂಡಿನಂತೆ, ಖಂಡಿತವಾದಿ ಕವಿಯಂತೆ!....

ಅಧ್ಯಾಪಕರ ಉಪನ್ಯಾಸದ ಒಂದು ನುಡಿಯೂ ಕಿವಿ ಸೇರಲಿಲ್ಲ....

ಅವರು ಎದ್ದುಹೋದರು. ನನ್ನ ಗೆಳೆಯರು ಅವರ ಹಿಂದೆಯೇ ಮರೆಯಾದರು. ನಾನು ಪುಸ್ತಕ ಸರಿಮಾಡಿಕೊಳ್ಳುವ ನೆಪದಲ್ಲಿ ಹಿಂದೆ ಉಳಿದೆ....

ಕತ್ತೆತ್ತಿದಾಗ ಸುತ್ತಾ ಹುಡುಗಿಯರು!

'ಆಕೆ' ಪತ್ರಿಕೆಯ ಪ್ರತಿಯನ್ನು ನನ್ನ ಮುಖದೆದುರು ಹಿಡಿದು, ಕೋಪದಿಂದ ಕಂಪಿಸುತ್ತ ಕೇಳಿದಳು:

"ಯಾರಿದನ್ನ ಬರೆದದ್ದು?"

"ನಾನು". ಧೈರ್ಯವಾಗಿ ಉತ್ತರಿಸಿದೆ.


"ಇದರಲ್ಲಿರೋದು ಯಾರ ಹೆಸರು? ಯಾರ ವರ್ಣನೆ?"

ನಾನು ನಕ್ಕೆ.

ನಗೆ ವ್ಯಂಗ್ಯವಾಗಿತ್ತು.

"ನಿಮ್ಮ ಹೆಸರು ಹೇಳ್ತೀರಾ ದಯವಿಟ್ಟು?" ಎಂದೆ.

ಅವಳಿಗೆ ಆಶ್ಚರ್ಯವಾಗಿರಬೇಕು! ತಬ್ಬಿಬ್ಬಾಗಿರಬೇಕು ಆಕೆ. ಬೆವರು ಹನಿಹನಿಯಾಗಿ ಅವಳ ಮೂಗಿನ ತುದಿಯ ಮೇಲೆ ನಿಂತಿತು. ಮಾಡಬಾರದ ಕೆಲಸ ಮಾಡಿದವಳಂತೆ ಬೆಪ್ಪಾದಳು. ಗೆಳತಿಯರು ಒಬ್ಬರ ಮುಖ ಒಬ್ಬರು ನೋಡಿದರು.



ಸ್ವಲ್ಪ ಕಾಲ ಮೌನ.

"ನೀವು ಯಾರನ್ನು ಕುರಿತು ಬರೆದಿದ್ದೀರಿ ಅನ್ನೋದು ಗೊತ್ತು" ಎಂದಾಳಾಕೆ ಸಣ್ಣ ಧ್ವನಿಯಲ್ಲಿ ಮುಂದು ವರಿಸಿದಳು:

"ಇದು ಯಾರಿಗೂ ಮರ್ಯಾದೆ ತರೋ ಕೆಲಸವಲ್ಲ."

ಗಟ್ಟಿಯಾಗಿ ನಕ್ಕು ನಾನೆಂದೆ: "ಅಲ್ಲ! ಖಂಡಿತವಾಗಿ ಸಭ್ಯರ ಕೆಲಸವಲ್ಲ! ಹೀಗೆ ಎಲ್ಲಾ ವರ್ಣನೇನೂ 'ನನ್ನದೇ' ಅಂತ ಮೈಮೇಲೆ ತಂದುಕೊಳ್ಳೋದು ನಾಚಿಕೆಗೇಡಿನ ಕೆಲಸ.... ಖಂಡಿತವಾಗಿ...."

ಸಿಟ್ಟು ನೆತ್ತಿಗೇರಿರಬೇಕು! ಅದನ್ನು ತುಳಿದು ನಿರಾಶೆ ಮೇರೆ ಮರಿದಿರಬೇಕು. ದುಃಖ ಉಕ್ಕಿ ಬಂದಿರಬೇಕು. ಭಾವನೆಯ ನೆಳಲುಬೆಳಕು ಆ ವಿಶಾಲ ಕಣ್ಣುಗಳಲ್ಲಿ ತೆರೆ ಹೊಯ್ದಿತು....

ತಗ್ಗಿಸಿದ ಕತ್ತು ಎತ್ತಲಿಲ್ಲ. ಎಲ್ಲರೂ ತೆರಳಿದರು; ಅವಳು ಕೂಡಾ....

ಆ ದಿನವೆಲ್ಲಾ ನನಗೆ ಸಮಾಧಾನವಿಲ್ಲ. ಸೋಲಿಸಿದೆ! ಗೆದ್ದದ್ದೇನೋ ಆಯಿತು! ಆದರೆ.... ಎಂಥ ಗೆಲುವು! ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ..... ನನ್ನ ಗುಬ್ಬಿಯ ಮೇಲೆ.....

ಹೊಳೆಹೊಳೆವ ಬೆಳ್ಳಿಯ ಕೊಡದಂತಹ ಆ ಕಣ್ಣುಗಳು ಎಷ್ಟು ಜಲ ಸುರಿಸಿದವೋ.....

ರಾತ್ರಿ... ತೊಡೆಯ ಮೇಲೆ ಮಲಗಿದ ಪುಸ್ತಕ ಅಂತೆಯೇ ಇತ್ತು. ಭಾವಣಿಯಿಂದಿಳಿದಿದ್ದ ಪ್ಲಗ್‌ನ ತುದಿಯಲ್ಲಿ ಬಲ್ಬು ಬೆಳಕು ಸುರಿಸುತ್ತಿತ್ತು. ಕೊಠಡಿ ನಿಶ್ಶಬ್ದವಾಗಿತ್ತು.

ಎಂಥ ಕ್ರೂರಿ ನಾನು! ಕಟುಕ! ಭಂಡರ ಭಂಡ!....

ಮರುದಿನ ಕಾಲೇಜಿನಲ್ಲಿ ನಡೆಯಲೂ ನಾಚಿಕೆಯಾಗುತ್ತಿತ್ತು. ಹಿಂದಿನ ದಿನ ಕವೀಶ್ವರನಾಗಿ ತಲೆಯೆತ್ತಿ ಮೆರೆದಿದ್ದವನಿಗೆ ಈಗ ಈ ಗತಿ... ಕಕ್ಕುಲತೆ, ತಳಮಳ ಮನದ ಪಾತ್ರೆಯಲ್ಲಿ ಕುದಿಗೊಂಡು ಕುಣಿಯುತ್ತಿದ್ದವು....

ಸಂಜೆ ಕ್ಲಾಸು ಮುಗಿದ ತರುವಾಯ ರಸ್ತೆಯಲ್ಲಿ ಸಾಗುತ್ತಿದ್ದೆ. ಅಲ್ಲಿಯೇ ಬಸ್‌ಸ್ಟಾಪಿನ ಬಳಿಯಲ್ಲಿ ಆಕೆ!..... ನಾನೂ ಅಲ್ಲಿಯೇ ಹಾಯ್ದುಹೋಗಬೇಕು; ಎದೆ ಢಗುಟ್ಟಿತು; ಭಾವನೆಗಳು ಗರಿಗೊಂಡವು...

ನನ್ನ ಕಡೆಗೆ ತಿರುಗಿದಳು.

ನಾನು ನಿಂತೆ. ಕಾಲು ಮುಂದುವರಿಯಲು ನಿರಾಕರಿಸಿದವು. ತಲೆತಗ್ಗಿಸಿ, ಮೆಲ್ಲಗೆ ನುಡಿದೆ:

"ಅದು.... ನಿಮ್ಮ ವರ್ಣನೆ!...."

ಆಕೆ ಸುಮ್ಮನಿದ್ದಳು.

ಬಲಾತ್ಕಾರದಿಂದ ತಲೆಯೆತ್ತಿ ನೋಡಿದೆ. ಅವಳ ಆ ಮುದ್ದು ತುಟಿಗಳಲ್ಲಿ ನಗೆಯ ಸುಳಿಯೊಂದು ಸುತ್ತುತ್ತಿತ್ತು. ಮುಖವೆಲ್ಲಾ ಬೆವೆತುಹೋಗಿತ್ತು!......

ಅವಳೆಂದಳು:

"ಅಲ್ಲ, 'ನಿನ್ನದು' ಅನ್ನಿ!"

ಆಗ-ಆ ಮುಖ! ಆ! ಕೋಟಿಚಂದ್ರರು ಉದಯಿಸಿದರು ಅಲ್ಲಿ! ಕಮಲಗಳು ದಳಬಿರಿಸಿದವು ಕಂಗಳಲ್ಲಿ! ಪ್ರಾತಃಕಾಲದ ಗಿರಿಶೃಂಗಗಳಂತೆ ರಂಜಿಸಿದವು ಕೆನ್ನೆ. ಅವಳೊಬ್ಬ ದಿವಿಯ ಕನ್ನೆ!

ನಗೆಯ ವಿನಿಮಯಮಾಡಿ ಮುಂದುವರಿದೆ.

ಹಗುರಾಗಿತ್ತು ಚೇತನ.

ಬಾಯಿ ಉಸುರಿತು:

"All is right with the World!..."



ಗದುಗಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಬಂಡಾಯ'ವಿತ್ತು, ಧಿಕ್ಕಾರವಿತ್ತೇ?

> ಒಂದೆಡೆ ಬಂಡಾಯ ಕುಸಿಯುತ್ತಾ ಹೋದರೆ ಸರ್ಕಾರದ ಪರಿಭಾಷೆಯಲ್ಲಿ ಅರ್ಥವನ್ನು ಕಳೆದುಕೊಂಡ ಬಂಡಾಯದ ಶಬ್ದಗಳು ಹೆಚ್ಚಾಗಿ ಕಾಣತೊಡಗಿದವು. ಸರ್ಕಾರದ ವೇದಿಕೆಯಲ್ಲಿ ಈ ಶಬ್ದದ ಕಳೇಬರದ ಪ್ರದರ್ಶನವನ್ನೇ ಕೆಲವರು ಸಂಭ್ರಮಿಸತೊಡಗಿದರು. ಸಾಧನೆಯೆನ್ನತೊಡಗಿದರು! ಚಾಲಾಕಿ ಪ್ರಭುತ್ವ ನಿರುಪದ್ರವಿ ಶಬ್ದವನ್ನು ತನ್ನ ಗುರಾಣಿಯನ್ನಾಗಿಸಿಕೊಳ್ಳುತ್ತದೆ. ಆದ್ದರಿಂದಲೇ ಅರ್ಥ ಕಳೆದುಕೊಂಡ ಬಂಡಾಯದ ಶಬ್ದಗಳು ಧಿಕ್ಕಾರದ ಧ್ವನಿಯನ್ನೂ ಹೊರಡಿಸುವುದಿಲ್ಲ. ಸರ್ಕಾರಕ್ಕೆ ಮುಜುಗರವನ್ನೂ ಉಂಟುಮಾಡುವುದಿಲ್ಲ.

ಗಣಿಧಣಿಗಳ "ಉದಾರತೆಯಿಂದಾಗಿ" ಗದಗ ಸಾಹಿತ್ಯ ಸಮ್ಮೇಳನ ಹಣಕಾಸು ಬಿಕ್ಕಟ್ಟನ್ನು ಎದುರಿಸದೆ ಸಾಕಷ್ಟು ಅಚ್ಚುಕಟ್ಟಿನಿಂದಲೇ ನಡೆಯಿತು. ಹಿಂದೆಂದೂ ಕೇಳಿಸದಷ್ಟು "ಬಂಡಾಯ"ದ ಧ್ವನಿ ಈ ಸಮ್ಮೇಳನದಲ್ಲೇ ಕೇಳಿಬಂತು. ಸಮ್ಮೇಳನದ ಅಧ್ಯಕ್ಷೆಯಾದ ಗೀತಾ ನಾಗಭೂಷಣರಂತೂ ತಮ್ಮ ಉದ್ಘಾಟನಾ ಭಾಷಣದಲ್ಲೂ ಮತ್ತು ಸಮಾರೋಪದಲ್ಲೂ ಸರ್ಕಾರವನ್ನು ಯಾವುದೇ ಮುಲಾಜಿಲ್ಲದೆ ಟೀಕಿಸಿದರು. ಬೆಂಗಳೂರಿನ ಎಸಿ ರೂಮಿನಲ್ಲಿ ಕುಳಿತು ನೆರೆಸಂತ್ರಸ್ತರ ಬಗ್ಗೆ ಮಾತನಾಡುವುದರ ಬದಲು ನಾಲ್ಕುದಿನ ನೆರೆ ಸಂತ್ರಸ್ತರ ಟೆಂಟಿನಲ್ಲಿ ಕಳೆಯಬೇಕೆಂದು ಕರೆ ನೀಡಿದ್ದನ್ನು ಮರುಮಾತಿಲ್ಲದೆ ಒಪ್ಪಿಕೊಂಡ ಮುಖ್ಯಮಂತ್ರಿಗಳು ಸಮ್ಮೇಳನಾಧ್ಯಕ್ಷರಿಗೆ 11,11,111 ರೂ.ಗಳನ್ನೂ ಬಾಗಿನವಾಗಿ ಕೊಟ್ಟರು. ಪರಿಸರ ಗೋಷ್ಠಿಯಂತೂ ಸರ್ಕಾರದ ನೀತಿಗಳ ಕಟುವಿಮರ್ಶೆಗೆ ಗುರಿಯಾಯಿತೆಂದು ವರದಿಗಳೆಲ್ಲಾ ಹೇಳುತ್ತಿವೆ.


ಹೀಗೆ ಹೆಚ್ಚೂಕಡಿಮೆ ಬಂಡಾಯದ ಧ್ವನಿ ಕನ್ನಡ ಸಾಹಿತ್ಯ ಸಮ್ಮೇಳನದುದ್ದಕ್ಕೂ ಕಾಣುತ್ತಿತ್ತು. ಚಿತ್ರದುರ್ಗ ಮತ್ತು ಶಿವಮೊಗ್ಗದಲ್ಲೂ ಹೆಚ್ಚೂಕಡಿಮೆ ಬಂಡಾಯದ ಆಶಯದ ಹಲವು ಭಾಷಣಗಳು ಕರ್ನಾಟಕದ ಜನರಿಗೆ ಹೊಸ ಅನುಭವವನ್ನೇ ನೀಡಿತ್ತು. ಈ ಬಗೆಯ ಭಾಷಣಗಳು ಸರ್ಕಾರಕ್ಕೆ ಮುಜುಗರ ಉಂಟುಮಾಡಿದವು ಎಂದು ಪತ್ರಿಕೆಗಳು ವರದಿ ಮಾಡಿದವು. ಆದರೆ ಸರ್ಕಾರ ಕಿಂಚಿತ್ತಾದರೂ ತಲೆಕೆಡಿಸಿಕೊಂಡಿದ್ದು ಈ ಬಗ್ಗೆ ಪತ್ರಿಕೆಯಲ್ಲಿ ಬಂದ ವರದಿಗಳಿಗೇ ವಿನಃ ಸ್ವತಃ ಆ ಭಾಷಣಗಳ ಬಗ್ಗೆ ಅಲ್ಲ.

ಸಮ್ಮೇಳನದ ನಂತರದಲ್ಲಿ ಸಮ್ಮೇಳನದ ಯಶಸ್ಸಿನ ಬಗ್ಗೆ ಸಾಕಷ್ಟು ವಿಮರ್ಶೆ ಮತ್ತು ವಿಶ್ಲೇಷಣೆಗಳು ನಡೆಯುತ್ತಿವೆ. ಗೀತಾ ನಾಗಭೂಷಣರು ಕನ್ನಡದಲ್ಲಿ ಜ್ಞಾನಪೀಠಕ್ಕಿಂತ ದೊಡ್ಡಮೊತ್ತದ ಪ್ರಶಸ್ತಿಯನ್ನು ನೀಡಬೇಕೆಂದು ಗಣಿಧಣಿಗಳನ್ನು ಕೋರಿದ್ದು ಸರಿಯೇ? ಸಮ್ಮೇಳನದ ಕೊನೆಯಲ್ಲಿ ಅವರು ಸರ್ಕಾರ ಕೊಟ್ಟ ಹಣ ಸ್ವೀಕರಿಸಿದ್ದು ಸರಿಯೇ? ಅದನ್ನವರು ನೆರೆಸಂತ್ರಸ್ತರಿಗೇ ಅರ್ಪಣೆ ಮಾಡಿದ್ದಲ್ಲಿ ಇನ್ನೂ ದೊಡ್ಡವರಾಗುತ್ತಿರಲಿಲ್ಲವೆ ಎಂಬೆಲ್ಲಾ ವಿಮರ್ಶೆಗಳು ಬರುತ್ತಿವೆ. ಅದೇರೀತಿ ಪಾಟೀಲ ಪುಟ್ಟಪ್ಪನಂಥವರು ಗದುಗಿನ ಸಮ್ಮೇಳನ ಹೇಗೆ ಯಶಸ್ವಿಯಾಯಿತು ಎಂಬ ಪ್ರಶ್ನೆ ಎತ್ತಿದ್ದರೆ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯಕ್ಕಿಂತ ಬದುಕಿನ ಬಗ್ಗೆ ಹೆಚ್ಚು ಚರ್ಚೆಯಾದದ್ದರ ಬಗ್ಗೆಯೇ ತಗಾದೆ ಎತ್ತಿರುವವರು "ಸಮಾಜವಾದಿ"ಗಳಾದ ಡಿ.ಎಸ್. ನಾಗಭೂಷಣರು.

ಆದರೆ ಇವೆಲ್ಲದರ ಮಧ್ಯೆ ಕಳೆದ ಕೆಲವು ಸಮ್ಮೇಳನಗಳಲ್ಲಿ ನಡೆಯುತ್ತಿರುವ ಒಂದು ಗಂಭೀರ ವಿದ್ಯಮಾನ ಪಡೆಯಬೇಕಾದಷ್ಟು ಗಮನವನ್ನು ಪಡೆದುಕೊಳ್ಳುತ್ತಿಲ್ಲ. ಕಳೆದ ಕೆಲವು ಸಾಹಿತ್ಯ ಸಮ್ಮೇಳನಗಳಲ್ಲಿ ಬಂಡಾಯದ ಧ್ವನಿಗಳು ದೊಡ್ಡದಾಗಿಯೇ ಕಾಣಿಸಿಕೊಳ್ಳುತ್ತಿವೆ. ಚಿತ್ರದುರ್ಗ, ಶಿವಮೊಗ್ಗ ಸಮ್ಮೇಳನದಲ್ಲೂ ಸರ್ಕಾರ ವಿರೋಧಿ ಧ್ವನಿಗಳು ಸರ್ಕಾರದ ಮುಖ್ಯಸ್ಥರ ಸಮ್ಮುಖದಲ್ಲೇ ಕಾಣಿಸಿಕೊಂಡಿದ್ದವು. ಮಿಕ್ಕ ಸಂದರ್ಭದಲ್ಲಿ, ಇತ್ತೀಚಿನ ಹಂಪಿ ವಿವಿ ಪ್ರಕರಣದಲ್ಲೂ ಸ್ಪಷ್ಟವಾಗಿ ಕಂಡುಬರುವಂತೆ, ತಮ್ಮ ನೀತಿಗೆ ವಿರುದ್ಧವಾಗಿ ಕಿಂಚಿತ್ತೂ ಧ್ವನಿ ಕೇಳಿಬಂದರೂ ಕಾದಸೀಸೆ ಸುರಿಯಲು ಸಿದ್ಧವಾಗಿರುವ ಸರ್ಕಾರ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮಾತ್ರ ಬಂಡಾಯದ ಧ್ವನಿಯನ್ನು ಕೇಳಿಸಿಕೊಳ್ಳುತ್ತವೆ. ಏನಿದರ ಮರ್ಮ?

ಜಾಗತೀಕರಣದ ಈ ಕಾಲಘಟ್ಟದಲ್ಲಿ ಸರ್ಕಾರಗಳೆಲ್ಲಾ ಉಳ್ಳ ವರ್ಗಗಳ ಏಜೆಂಟರಾಗಿದ್ದಾವೆಂದು ಗಾಂಧೀವಾದಿಗಳೇ ಹಳಹಳಿಸುತ್ತಿರುವ ಈ ಹೊತ್ತಿನಲ್ಲಿ, ಮೊದಲಿಗಿಂತ ಹೆಚ್ಚೆಚ್ಚು ಜನವಿರೋಧಿಯಾಗುತ್ತಿರುವ ಸರ್ಕಾರ ಇಂಥಾ ವೇದಿಕೆಗಳಲ್ಲಿ ಮಾತ್ರ ಬಂಡಾಯದ ಬಾವುಟವನ್ನು "ಸಹಿಸಿಕೊಳ್ಳುವುದನ್ನೂ" ಮತ್ತು ಅಂಥಾ ವೇದಿಕೆಗಳಿಗೆ "ಪೋಷಕರೂ" ಆಗುವುದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಸರ್ಕಾರದ ಪ್ರತ್ಯಕ್ಷ ಮತ್ತು ಪರೋಕ್ಷ ಪೋಷಣೆಯೊಂದಿಗೆ ನಡೆಯುವ ಇಂಥಾ ಸಮ್ಮೇಳನಗಳಲ್ಲಿ ಕಾಣಿಸಿಕೊಳ್ಳುವ "ಬಂಡಾಯ"ದ ಧ್ವನಿ ಪ್ರಾಮಾಣಿಕ ಜನಪರತೆಯ ಅಭಿವ್ಯಕ್ತಿಯೆಂಬುದು ನಿಜ. ಆದರೆ ಇದು ಪರಿಣಾಮದಲ್ಲಿ ಜನವಿರೋಧಿ ಸರ್ಕಾರಗಳ ವಿರುದ್ಧ ಧಿಕ್ಕಾರದ ಸ್ಥೈರ್ಯವನ್ನೂ ಮತ್ತು ಪರ್ಯಾಯದ ಬಗೆಗಿನ ಬದ್ಧತೆಯನ್ನೂ ಹುಟ್ಟಿಹಾಕುವುದೇ? ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಿತ ಮೌಲ್ಯಗಳ ಪರವಾದ ಸಾಂಸ್ಕೃತಿಕ ರಾಜಕಾರಣವನ್ನು ತಿರಸ್ಕರಿಸುತ್ತಾ "ಜನರೆದೆಯ ಪ್ರಾಣಮಿತ್ರ"ನಾಗಿ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಸಂಘಟನೆಯೆಂಬ ಪರ್ಯಾಯದ ಸೊಲ್ಲೇ ಕೇಳದ ಈ ಸಂದರ್ಭದಲ್ಲಿ ಈ ಪ್ರಶ್ನೆ ಇನ್ನಷ್ಟು ಮುಖ್ಯವಾಗುತ್ತದೆ. ಬಂಡಾಯದ ಹುಟ್ಟಿಗೆ ಕಾರಣವಾಗಿದ್ದ ಕರ್ನಾಟಕದ ಅಂದಿನ ರೈತ, ದಲಿತ, ಕಾರ್ಮಿಕ ಮತ್ತು ಭಾಷಾ ಚಳವಳಿಗಳು ಸಹ ಇಂದು ಕಾವು ಕಳೆದುಕೊಂಡು ವಿಧಾನಸೌಧದೆಡೆಗೆ ಮುಖಮಾಡಿರುವಾಗ ಸರ್ಕಾರಿ ವೇದಿಕೆಗಳಲ್ಲಿ ಕಾಣಿಸುವ ಈ ಬಂಡಾಯಗಳ ಬಗ್ಗೆ ಸಮಾಧಾನ ಪಟ್ಟುಕೊಳ್ಳಬೇಕೆ ಎಂಬ ಪ್ರಶ್ನೆ ಅತ್ಯಂತ ಜರೂರಿನದ್ದಾಗುತ್ತದೆ.

ಶಿವಸುಂದರ್



ಇದು ಬಂಡಾಯದ ಧ್ವನಿಯನ್ನು ಎತ್ತಿದ ಸಾಹಿತಿಗಳ ಪ್ರಾಮಾಣಿಕತೆಯನ್ನು ಅನುಮಾನಿಸುವ ಪ್ರಶ್ನೆಯಲ್ಲ. ಹಾಗೆ ನೋಡಿದರೆ ಜನಪ್ರತಿನಿಧಿಗಳೇ ಜನರನ್ನು ಕೈಬಿಟ್ಟಿರುವಾಗ ನಮ್ಮ ಸಾಹಿತಿಗಳು ಇಷ್ಟಾದರೂ ಮಾಡಿದರಲ್ಲ ಎಂಬ ಸಂತೋಷ ಉಂಟಾಗುವುದು ಸಹಜವಾದದ್ದೇ. ಆದರೆ ಪ್ರಶ್ನೆ ಈ ಬಂಡಾಯದ ಧ್ವನಿಗಳು ಸಮ್ಮೇಳನದ ವೇದಿಕೆಯಲ್ಲಿ ಜನಪರ ಆಶಯಗಳ ಘೋಷಣೆಯಂತೆ ಏಕೆ ಕೇಳಿಸುವುದಿಲ್ಲ ಎನ್ನುವುದು. ಸರ್ಕಾರದ ಹಂಗಿಲ್ಲದ ವೇದಿಕೆಗಳಲ್ಲಿ ಈ ಬಗೆಯ ಬಂಡಾಯ ಭಾಷಣಗಳು ಸರ್ಕಾರಕ್ಕೆ ಧಿಕ್ಕಾರ ಹೇಳುವ ಘೋಷಣೆಯಾಗಿ ಮತ್ತು ಜನಪರ ಸಮಾಜದ ಮ್ಯಾನಿಫೆಸ್ಟೋ ಆಗಿ ಕೇಳಿಸುತ್ತವೆ. ಏಕೆಂದರೆ ಅಲ್ಲಿ ಬಂಡಾಯವೆಂದರೆ ವ್ಯವಸ್ಥೆಗೆ ಧಿಕ್ಕಾರ. ಈ ವ್ಯವಸ್ಥೆಗೆ ಹೊರತಾಗಿ ಪರ್ಯಾಯವೊಂದರ ಹುಡುಕಾಟ. ಹೀಗಾಗಿಯೇ ಆ ಬಂಡಾಯ ಪರ್ಯಾಯ ಮೌಲ್ಯ ವ್ಯವಸ್ಥೆಯ ಹುಡುಕಾಟವೂ ಆಗಿರುತ್ತಿತ್ತು.

ಆದರೆ ಸಾಹಿತ್ಯ ಸಮ್ಮೇಳನದಲ್ಲಿನ ಬಂಡಾಯಕ್ಕೆ ಈ ಅಜೆಂಡಾಗಳಿರಲಿಲ್ಲ. ಅಲ್ಲಿನ ಬಂಡಾಯದ ಧ್ವನಿಗಳು ಹಾಲಿ ವ್ಯವಸ್ಥೆಯ ಮತ್ತು ಪ್ರಭುತ್ವದ ಲೋಪದೋಷಗಳನ್ನು ಪಟ್ಟಿಮಾಡಿದವು. ಕೆಲವೊಮ್ಮೆ ಯಾವುದೇ ಮುಲಾಜಿಲ್ಲದೆ ಆಳವಾದ ವಿಮರ್ಶೆಗಳನ್ನು ಮಾಡಿದವು. ಆದರೆ ಅವೆಲ್ಲವೂ ಇದ್ದದ್ದನ್ನು ಸರಿಮಾಡುವ, ಸರಿ ಮಾಡಲಾಗದೆಂಬ ಖಚಿತ ಅನುಭವವಿದ್ದರೂ ಅದಕ್ಕಿಂತ ಹೆಚ್ಚಿನ ಅಜೆಂಡಾವನ್ನೇ ಇಟ್ಟುಕೊಳ್ಳದ ಬಂಡಾಯವಾಗಿತ್ತು. ಹೀಗಾಗಿಯೇ ಪ್ರಭುತ್ವದ ನೀಡಿದ ನೆರಳಿನಲ್ಲಿ ನಡೆದ ಗದುಗಿನ ಸಮ್ಮೇಳನದ ಭಾಷಣಗಳಲ್ಲಿ ಬಂಡಾಯವಿತ್ತು, ಧಿಕ್ಕಾರವಿರಲಿಲ್ಲ.

ಇದರ ಹಿಂದೆ ಜನಪರ ಶಕ್ತಿಗಳ ಹತಾಶೆ ಇದೆ. ಜಾಗತೀಕರಣದ ಕಾಲಘಟ್ಟದಲ್ಲಿ ಆಳುವ ವರ್ಗ ಹುಟ್ಟಿಹಾಕಿರುವ There Is No Altenative (TINA) ಎಂಬ ಆತ್ಮಘಾತುಕ ಅಸಹಾಯಕತೆ ಇದೆ. ಹೀಗಾಗಿ ಈ ಬಂಡಾಯದಲ್ಲಿ ಶಬ್ದವಿದೆ, ಅರ್ಥವಿಲ್ಲ, ಬಂಡಾಯವಿದೆ, ಧಿಕ್ಕಾರವಿಲ್ಲ. ಏಕೆಂದರೆ ಅದರ ಆಳದಲ್ಲಿ ಪರ್ಯಾಯದ ಸಾಧ್ಯತೆಯ ಬಗ್ಗೆ ಅನುಮಾನವಿದೆ.

ಜಾಗತೀಕರಣದ ಅತಿದೊಡ್ಡ ಅಪಾಯವೂ ಮತ್ತು ಮಾರುಕಟ್ಟೆ ಶಕ್ತಿಗಳ ಅತಿದೊಡ್ಡ ಗೆಲುವು ಇದೇ ಆಗಿದೆ. ಒಂದು ಬದಲಾವಣೆಯ ಸಾಧ್ಯತೆಯ ಬಗ್ಗೆ ಮತ್ತು ಪರ್ಯಾಯದ ಸಾಧ್ಯತೆಯ ಬಗ್ಗೆಯೇ ಸಂದೇಹ ಹುಟ್ಟಿಸುವುದು. ಮನುಕುಲ ತನ್ನ ಇಡೀ ಇತಿಹಾಸದಲ್ಲಿ ಎಂತೆಂಥ ದೊಡ್ಡ ಸವಾಲುಗಳನ್ನು ಎದುರಿಸಿದೆ. ವರ್ತಮಾನವನ್ನು ಬದಲಾಯಿಸಿದೆ. ಆದರೆ ಎಂದೂ ಈ ಬಗೆಯ ಹತಾಶೆ ಕವಿದಿರಲಿಲ್ಲ, ಆತ್ಮವಿಶ್ವಾಸದ ಕೊರತೆ ಉಂಟಾಗಿರಲಿಲ್ಲ. ಸಮಾಜದ ಈ ನೈತಿಕ ಶಕ್ತಿಯನ್ನು ನಿರ್ವೀರ್ಯಗೊಳಿಸಿದ ನಂತರ ಬಂಡಾಯ ಹೇಗೆ ಹುಟ್ಟುತ್ತದೆ. ಎರಡನೆಯದಾಗಿ ಪ್ರಭುತ್ವದ ಬಗ್ಗೆ ಜಾಗತೀಕರಣ ಹುಟ್ಟಿಸುವ ಮರುಭ್ರಾಂತಿ.

ಸಮಾಜದಲ್ಲಿ ಪ್ರಭುತ್ವದ ಪಾತ್ರ ಜನಸ್ನೇಹಿಯಾದದ್ದೋ ಅಥವಾ ಜನವಿರೋಧಿಯಾದದ್ದೋ ಎಂಬ ಚರ್ಚೆ ಬಂಡಾಯ ಸಾಹಿತ್ಯ ಸಂಘಟನೆಯ ಹುಟ್ಟಿನ ಸಂದರ್ಭದಲ್ಲಿ ಸಾಕಷ್ಟುನಡೆದುಹೋಗಿದೆ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ವಿವಿಧ ತಾತ್ವಿಕ ಧಾರೆಗಳು ಒಟ್ಟಾಗಿದ್ದರೂ ಪ್ರಭುತ್ವವೆಂಬುದೂ ಶೋಷಿತ ಜನವಿರೋಧಿ ಹಾಗೂ ಸಮಾಜದ ಶೋಷಕ ವರ್ಗಗಳ ಪರವಾದದ್ದೆಂದು ಅರ್ಥಮಾಡಿಕೊಳ್ಳಲು ತಾತ್ವಿಕ ಅಡ್ಡಿಯೇ ಇರಲಿಲ್ಲ. ಒದರ್ಥದಲ್ಲಿ ಅದು ಬಂಡಾಯ ಸಾಹಿತ್ಯ ಸಂಘಟನೆಯ ಸಾಮಾನ್ಯ ಕನಿಷ್ಠ ತಿಳಿವಳಿಕೆಯಲ್ಲಿ ಒಂದಾಗಿತ್ತು. ಆ ತಿಳಿವಳಿಕೆಯ ಮೂಲ ಸೆಲೆಯಿದ್ದದ್ದು ಬಂಡಾಯ ಸಂಘಟನೆಯನ್ನು ತಮ್ಮ ಸಾಂಸ್ಕೃತಿಕ ಮುಖವಾಣಿಯಾಗಿ ಬೆಳೆಸಿದ ದಲಿತ, ರೈತ, ಹಾಗು ಸಮಾಜವಾದಿ- ಎಡಪಂಥಿಯ ಚಳವಳಿಗಳಲ್ಲಿ. ಆ ಚಳವಳಿಗಳ ಅನುಭವಗಳ ಗುಣಪಾಠವೇ ಪ್ರಭುತ್ವದ ಗುಣ ಸ್ವಭಾವದ ಬಗೆಗಿನ ಸೈದ್ಧಾಂತಿಕ ಚರ್ಚೆಯನ್ನು ಅನಗತ್ಯಗೊಳಿಸಿದ್ದವು. ನಂತರದ ದಿನಗಳ ಬೆಳವಣಿಗೆಗಳು ಸಾಬೀತುಪಡಿಸಿದಂತೆ ಈ ಅನುಭವವು ಒಂದು ಗಟ್ಟಿ ಸಿದ್ಧಾಂತವಾಗದೇ ಹೋದದ್ದೇ ಬಂಡಾಯದ ಅತಿದೊಡ್ಡ ಮಿತಿಗೆ ಮತ್ತು ಅವನತಿಗೆ ಕಾರಣವಾಯಿತು. ಅದರ ಪರಿಣಾಮದಿಂದ ಈಗಲೂ ಬಂಡಾಯ ಹೊರಬಂದಿಲ್ಲ.

ಅದರಲ್ಲೂ ಜಾಗತೀಕರಣದ ಈ ಕಾಲಘಟ್ಟವನ್ನು ಪ್ರಭುತ್ವಗಳು ಜನಪರ ಚಳವಳಿಗಳನ್ನು ಸಾಮ-ಭೇದ-ದಂಡ ನೀತಿಗಳಿಂದ ನುಂಗಿ ಹಾಕಿದ ಕಾಲವೆಂದೇ ಹೇಳಬಹುದು. ಶೋಷಿತ ಜನವರ್ಗಗಳಿಗೆ ಯಾವುದೇ ಬಗೆಯ ಪರಿಹಾರಗಳನ್ನು ಒದಗಿಸದೆ ಚಳವಳಿಗೆ ಹುಸಿ ಭರವಸೆಗಳನ್ನು ಮಾತ್ರ ನೀಡುತ್ತಾ ಚಳವಳಿಗಳ ನಾಯಕತ್ವವನ್ನು ತಾತ್ವಿಕವಾಗಿ ಹಾಗೂ ಭೌತಿಕವಾಗಿ ಭ್ರಷ್ಟಗೊಳಿಸಿದ ಕಾಲವದು. ಇದೇ ಕಾಲಘಟ್ಟದಲ್ಲೇ ಜನಪರ ಚಳವಳಿಗಳು ಕ್ರಮೇಣವಾಗಿ ಕಷ್ಟಕರವಾದ ಹೋರಾಟ ಮಾರ್ಗವನ್ನು ಬಿಟ್ಟು ಅತಿ ಸುಲಭವಾದ ಲಾಬಿ ಮಾರ್ಗವನ್ನೂ ಅನುಸರಿಸಲು ಪ್ರಾರಂಭಿಸಿದವು. ಅದರ ಪ್ರತಿಫಲನವಾಗಿ ಪ್ರಭುತ್ವ ಹಾಗೂ ವ್ಯವಸ್ಥೆಗೆ ಪರ್ಯಾಯವಾದ ಸಂಸ್ಥೆಗಳನ್ನು, ಸಂಸ್ಕೃತಿಯನ್ನು ಹುಟ್ಟಿ ಹಾಕುವ ಆದರ್ಶದಿಂದ ಹುಟ್ಟಿಹಾಕಲಾಗಿದ್ದ ಬಂಡಾಯದಲ್ಲೂ ಪ್ರಭುತ್ವ ಹಾಗೂ ವ್ಯವಸ್ಥೆಯ ಸಂಸ್ಥೆಗಳ ಒಳಹೊಕ್ಕು ಜನರ ಧ್ವನಿಯನ್ನು ದಾಖಲಿಸುವ ಪ್ರತಿಫಲಿಸುವ ವಾದಗಳು ಮುಂದೆ ಬಂದವು.

ಬಂಡಾಯದ ಕೆಲವು ಹಿರಿಯ ಸಿದ್ಧಾಂತವಾದಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಬಂಡಾಯ ಇರುವುದು ವ್ಯವಸ್ಥೆಯ ವಿರುದ್ಧವೇ ವಿನಃ ಪ್ರಭುತ್ವದ ವಿರುದ್ಧವಲ್ಲವೆಂದೂ, ಬದಲಿಗೆ ಪ್ರಭುತ್ವವನ್ನು ಬಳಸಿಕೊಂಡು ವ್ಯವಸ್ಥೆಯ ಅನಿಷ್ಟಗಳ ವಿರುದ್ಧ ಹೋರಾಡಬಹುದೆಂದು ಹೊಸ ಪಥವನ್ನೇ ಸೃಷ್ಟಿಸಿಬಿಟ್ಟರು. ಆ ಮೂಲಕ ಅವರಲ್ಲಿ ಕೆಲವರು ಅಕಾಡೆಮಿಗಳ ಅಧ್ಯಕ್ಷರಾಗಿಯೂ, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾಗಿಯೂ, ಸರ್ಕಾರದ ಪ್ರಾಧಿಕಾರದ ಅಧ್ಯಕ್ಷರಾಗಿಯೂ ನೇಮಕಗೊಂಡು ಪ್ರಭುತ್ವವನ್ನು ಜನಪರವಾಗಿ ದುಡಿಸಿಕೊಳ್ಳುವ ವಿಫಲ ಪ್ರಯೋಗಗಳನ್ನು ಪ್ರಾರಂಭಿಸಿಬಿಟ್ಟರು. ಅದರ ಉನ್ನತ ಮತ್ತು ವ್ಯಾಪಕ ಸ್ವರೂಪವೇ ಇಂದು ಸಾಹಿತ್ಯ ಸಮ್ಮೇಳನಗಳಲ್ಲಿ ನಾವು ಕಾಣುತ್ತಿರುವ "ಬಂಡಾಯ" ಧ್ವನಿಗಳು.

ಈ ಪ್ರಕ್ರಿಯೆಯಲ್ಲಿ ಪ್ರಭುತ್ವವನ್ನು ಎಷ್ಟರಮಟ್ಟಿಗೆ ಜನಪರವಾಗಿ ಹಾಗೂ ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳ ವಿರುದ್ಧವಾಗಿ ಬಳಸಿಕೊಳ್ಳಲಾಯಿತೆಂಬುದನ್ನು ವಿಶೇಷವಾಗಿ ವಿವರಿಸುವ ಅಗತ್ಯವೇನೂ ಇಲ್ಲ. ಬದಲಿಗೆ ಆದದ್ದೇನೆಂದರೆ ಜನ ವಿರೋಧಿ ಪ್ರಭುತ್ವವನ್ನು ಮಿತ್ರನನ್ನಾಗಿ ಪರಿಭಾವಿಸುವ ಪರಿಪಾಠವೇ ಮುಂದುವರೆಯಿತು. ಪ್ರಭುತ್ವದಿಂದ ಉಪಕೃತರಾದವರ ಸಂಖ್ಯೆ ಬಂಡಾಯದೊಳಗೆ ಹೆಚ್ಚುತ್ತಾ ಸಾಗಿತು. ಹೊರಗಡೆ ಹಲವಾರು ಜನಚಳವಳಿಗಳೂ ಇದೇದಾರಿ ಹಿಡಿದಿದ್ದರಿಂದ ಸಾರಾಂಶದಲ್ಲಿ ವ್ಯವಸ್ಥೆಯ ವಿರುದ್ಧವಾಗಲೀ, ಪ್ರಭುತ್ವದ ವಿರುದ್ಧವಾಗಲೀ ಪರಿಣಾಮಕಾರಿ ಬಂಡಾಯ ಇಲ್ಲದೇ ಒಂದು ದಶಕಕ್ಕೂ ಹೆಚ್ಚಿನ ಕಾಲ ಸಂದಿದೆ.

ಒಂದೆಡೆ ಬಂಡಾಯ ಕುಸಿಯುತ್ತಾ ಹೋದರೆ ಸರ್ಕಾರದ ಪರಿಭಾಷೆಯಲ್ಲಿ ಅರ್ಥವನ್ನು ಕಳೆದುಕೊಂಡ ಬಂಡಾಯದ ಶಬ್ದಗಳು ಹೆಚ್ಚಾಗಿ ಕಾಣತೊಡಗಿದವು. ಸರ್ಕಾರದ ವೇದಿಕೆಯಲ್ಲಿ ಈ ಶಬ್ದದ ಕಳೇಬರದ ಪ್ರದರ್ಶನವನ್ನೇ ಕೆಲವರು ಸಂಭ್ರಮಿಸತೊಡಗಿದರು. ಸಾಧನೆಯೆನ್ನತೊಡಗಿದರು! ಏಕೆಂದರೆ ಪ್ರಭುತ್ವದ ನೆರಳಿನಲ್ಲಿ ಅರ್ಥ ಸಾಯುತ್ತದೆ. ಚಾಲಾಕಿ ಪ್ರಭುತ್ವ ನಿರುಪದ್ರವಿ ಶಬ್ದವನ್ನು ತನ್ನ ಗುರಾಣಿಯನ್ನಾಗಿಸಿಕೊಳ್ಳುತ್ತದೆ. ಆದ್ದರಿಂದಲೇ ಅರ್ಥ ಕಳೆದುಕೊಂಡ ಬಂಡಾಯದ ಶಬ್ದಗಳು ಧಿಕ್ಕಾರದ ಧ್ವನಿಯನ್ನೂ ಹೊರಡಿಸುವುದಿಲ್ಲ. ಸರ್ಕಾರಕ್ಕೆ ಮುಜುಗರವನ್ನೂ ಉಂಟುಮಾಡುವುದಿಲ್ಲ.

ಇದು ಕೇವಲ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಾತ್ರ ಸೀಮಿತವಾದುದೂ ಅಲ್ಲ. ಜಗತ್ತಿನೆಲ್ಲೆಡೆ ನಿಜವಾದ ಬಂಡಾಯದ ಕಾವನ್ನು ಹುಟ್ಟಿನಲ್ಲೇ ನಂದಿಸಲು ಆಳುವ ವರ್ಗಗಳು ಕಾಣಿಸಿಕೊಂಡಿರುವ ಚಾಣಕ್ಯ ತಂತ್ರವಿದು. ಬಂಡಾಯ ಈ ಕಾಲಘಟ್ಟದ ಈ ಇತಿಮಿತಿಗಳನ್ನು ದಾಟಿ ಬರದೆ ನಿಜವಾದ ಬಂಡಾಯವಾಗಲಾರದು.

ಹೀಗಾಗಿ ಗದುಗಿನ ಸಾಹಿತ್ಯ ಸಮ್ಮೇಳನದಲ್ಲಿ ಕೇಳಿಸಿದ ಬಂಡಾಯದ ಧ್ವನಿಗಳ ಬಗ್ಗೆ ಸಂಭ್ರಮ ಪಟ್ಟುಕೊಳ್ಳುವ ಮೊದಲು ಇವೆಲ್ಲಾ ಅಂಶಗಳನ್ನು ಮತ್ತೆ ನೆನಪಿಗೆ ತಂದುಕೊಳ್ಳಬೇಕಿದೆ. ಗದುಗಿನ ಸಾಹಿತ್ಯ ಸಮ್ಮೇಳನದಲ್ಲಿ ಕೇಳಲ್ಪಟ್ಟ ಬಂಡಾಯ ಧ್ವನಿಗಳ ಬಗ್ಗೆ ಮೆಚ್ಚುಗೆ ಇಟ್ಟುಕೊಂಡೂ ಸಹ ಈ ಅಂಶವನ್ನು ದಾಖಲಿಸಲೇ ಬೇಕಾಗಿದೆ.

ಮೇಷ್ಟ್ರ ಜೊತೆ ಮುಖಾಮುಖಿ

ಲಂಕೇಶ್‌ಗೆ 75 ವರ್ಷ. ಅವರೀಗ ಇದ್ದಿದ್ದರೆ ...ತು. ಇದು ನನ್ನೊಬ್ಬನ ಅನ್ನಿಸಿಕೆಯಲ್ಲ, ಕನ್ನಡದ ...ಬ ಮನಸ್ಸುಗಳೆಲ್ಲಾ ಲಂಕೇಶ್ ಈಗಿರಬೇಕಿತ್ತು ...ವೆ. ಸ್ವತಃ ಲಂಕೇಶರೆ ಸಾಯುವ ಮೂರುವಾರದ ... "ಇನ್ನ ಎರಡು ವರ್ಷ ಇರ್ತಿನಿ" ಎಂದಿದ್ದರು. ...ಎಪ್ಪತ್ತೈದನೇ ವರ್ಷಾಚರಣೆಯ ಈ ಸಮಯದಲ್ಲಿ ...ನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿತು. ಮಹಾಕ್ಷತ್ರಿಯ ...ುತ್ರ ಭೂಲೋಕದಿಂದ ನೇರವಾಗಿ ದೇವಲೋಕಕ್ಕೆ ...ಾಡುತ್ತಾನೆ. ಅಂತಹ ವಿಶ್ವಾಮಿತ್ರನನ್ನು ನೆನೆಯುತ್ತಾ ...ಶರನ್ನ ಕೂಗಿದೆ. ಆಶ್ಚರ್ಯ! ಮೇಷ್ಟ್ರು ಬಸವನಗುಡಿ ...ು ಮಹಡಿ ಮೇಲೆ ಕಂಡಂತೆ ಕಾಣಿಸಿಕೊಂಡೇ ...!! ನಾನವರಿಗೆ ನಮಸ್ಕಾರ ಮಾಡುತ್ತಿರಲಿಲ್ಲ, ...ೂ ಮಾಡದೆ ನಿಬ್ಬೆರಗಾಗಿ ನೋಡಿ "ಚೆನ್ನಾಗಿದ್ದೀರ ...?" ಎಂದೆ.

...ಏನು ಚಂದನಯ್ಯ? ಸ್ವರ್ಗದಲ್ಲಿ ಯಾವನಾದ್ರೂ ...ರತನೆ, ಸುಖವಾಗಿರತನೆ ಅನ್ನೋದೆಲ್ಲಾ ಸುಳ್ಳು. ... ಅಂದ್ರೆ ಇಲ್ಲಿ ಗಾಡವಾಗಿ ನಿದ್ರೆ ಮಾಡಬಹುದು. ...ವಾಗ ಎಚ್ಚರವಾಗಿ ತಿರುಗಾಡಬಹುದು."

...ಿಮಗ್ಯಾಕ್ ಬೇಜಾರು ಸಾರ್? ಸುಮಾರು ಜನ ...ಲ್ಲ."

...ಾದ್ರು ಎಲ್ಲೆಲ್ಲೋ ಹೋಗಿರತರೆ ಕಣಯ್ಯ. ಆ ...ಿ ಕೃಷ್ಣ ಬಂದ ಕೂಡ್ಲೆ ಮಾತಾಡಿಸಿ ಯಾವ ...ದಿದ್ದೊ ಏನೋ, ಇನ್ನೂ ಪತ್ತೆಯಿಲ್ಲ, ಇನ್ನು ರಾಮ ...ವರ್ಮ, ಡಿ.ಆರ್. ನಾಗರಾಜು, ಶ್ರೀನಿವಾಸರಾಜು ... ಹೋಗ್ತರೆ. ಪಟೇಲ್ರು ಬಂದಿದ್ರು. ಒಳ್ಳೆ ವಿಸ್ಕಿ ... ಅಂತ ಹೋದೋರು ಇನ್ನೂ ಬರಲಿಲ್ಲ"

...ಇಚೆಗೆ ವಿಷ್ಣುವರ್ಧನ್, ಅಶ್ವತ್ಥ ಮತ್ತೆ ಅಶ್ವತ್ಥ್ ...ಲ್ಲ ಸಾರ್, ಸಿಕ್ಕಿದ್ರೆ?"

...ೂ ಕಣಯ್ಯ. ಪಾಪ ವಿಷ್ಣು ಇನ್ನೂ ಅಲ್ಲಿ ...ಹಾಗಿತ್ತು. ಇಲ್ಲಿ ಬಂದು ತುಂಬ ಮಾತಾಡಿದ. ...ಯಾವುದೊ ಮಂತ್ರ ಹೇಳತಿದ್ದ. ಅದೇನಯ್ಯ ...ತ್ರ ಅಂದೆ. ಬನ್ನಂಜೆ ಗೋವಿಂದಾಚಾರಿ ...ಕೊಟ್ಟಿರೊ ಶ್ಲೋಕಗಳು ಅಂದ. ಆ ಬನ್ನಂಜೆ ...ುದ್ರೆ ಭೂಲೋಕದಲ್ಲಿ ನೀನಿನ್ನೂ ಚೆನ್ನಾಗಿರತಿದ್ದೆ ...ಪಾಪ ಬೇಜಾರು ಮಾಡಿಕಂಡೋದ. ನನಿಗೂ ...ಾಯ್ತು."

...ಹೋಗ್ಲಿ ಬಿಡಿ ಸಾರ್. ಅವರತ್ರ ನಾವು ...ಡದೇ ಕಷ್ಟ ಆಗ್ತಿತ್ತು. ಇನ್ನು ನೀವು ...ಪಕ್ಕಾಯ್ತಿತ್ತೆ. ಕೆ.ಎಸ್. ಅಶ್ವತ್ಥ ಬಂದಿದ್ರ ಅಲ್ಲಿ?"

...ಬಂದಿದ್ರು. ಭಾಳ ಒಳ್ಳೆ ಮನ್ಸ. ತುಂಬ ... ನಡೆಸಿ ಬಂದಿದ್ರು. ಹೆಚ್ಚಿಗೆ ...ಮಾತಾಡಲಿಲ್ಲ. ...ಕರ ...ಡುಸ್‌ಬೇಕು ಅಂತ ...."

...ಾಡುಗಾರ ಅಶ್ವತ್ಥ ಬಂದಿದ್ರ

...ಬಂದಿದ್ದ ಕಣಯ್ಯ, ಬೈದು ಕಳಿಸಿದ್ದಿನಿ."

...ಯಾಕೆ ಸಾರ್ ಬೈದ್ರಿ ಪಾಪ?"

...ಾಪ ಅಂತಿಯಲ್ಲಯ್ಯ, ಅವನು ಒಳ್ಳೆ ಸಂಗೀತ ... ಆದ್ರೆ ಕೆಟ್ಟ ಹಾಡುಗಾರ ಕಣಯ್ಯ. ಇಲ್ಲಿ ಬಂದು ... 'ಥೇರನ್ನೆಳೆಯುಥಾರೆ ಥಂಗಿ ಥೇರನೆಳೆಯುತ್ತಾರೆ' ...ಾಡೇಳಕ್ಕೆ ಶುರುಮಾಡಿದ. 'ಏ ಥುವ್ ನಿಲ್ಸಯ್ಯ' ...ಆಮೇಲೆ 'ಥರವಲ್ಲ ಥಗಿನಿನ್ನಾ ಥಂಬೂರೀಸ್ವರ' ...ೇಳಕಂಡೋದ. ಏನ್ ರ್‍ಯಾಸ್ಕಲ್‌ಗಳಯ್ಯ ಇಲ್ಲಿಗೂ ...ಕಾದ್ತರಲ್ಲ"

...ಮ್ಮ ಬೇಜಾರು ಕಳಿಯಕ್ಕೆ ನಾನೇ ಬರನಾ ಅಂತ ...ಸಾರ್."

...ದ, ನಿನ್ನನ್ನ ಭಾಳಹೊತ್ತು ಸಹಿಸಕ್ಯಾಗಲ್ಲ, ಶೂದ್ರ ...ನ್ನಾಗಿತ್ತು ಕಣಯ್ಯ"

...ಾದ್ರ, ಇನ್ನೂ ಚೆನ್ನಾಗಿರೋದ್ರಿಂದ ಸದ್ಯಕೆ ಬರಲ್ಲ

...ರೂ ಬರದುಬುಡ್ತ ಬುಡು. ಯಲ್ರೂದ ಹಾರಾಗಿ ...ಮತ್ತೆ ಯಲ್ರುಸೂ ಅಂಟಿಸಿಗಳದು ಸರಿಬರಲ್ಲ" ...ು, ಈ ಹತ್ತುವರ್ಷ ನಾವು ನಿಮಗಂಟಗಂಡೇ ...ಸಾರ್. ಅಮೆಜಾನ್ ನದಿ ಸಾಗರ ಸೇರಿದ ನಂತರವೂ ಹತ್ತಾರು ಕಿಲೋಮೀಟ್ರು ನುಗ್ಗತದಂತೆ. ಅಂಗೆ ಈ ಹತ್ತು ವರ್ಷ ನೀವು ನಮ್ಮನ್ನ ನೂಕಿದ್ದೀರಿ."

"ಅಮೆಜಾನ್, ಗಿಮೆಜಾನ್ ಯಲ್ಲಾನು ಯಾವಾಗ ತಿಳಕಂಡಯ್ಯಾ?"

"ತೇಜಸ್ವಿಯಿಂದ ತಿಳಕಂಡೆ ಸಾರ್. ತೇಜಸ್ವಿ ಸಿಕ್ಕಿದ್ರು ಸಾರ್?"

"ದೂರದಲ್ಲೇ ನೋಡಿ ಹೊರಟೋದ್ರು ಕಣಯ್ಯ. ನಾನು ಯಲ್ಲಾನು ಮರತು ಮಾತಾಡ್ಸನಾ ಅಂತ ಇದ್ದೆ. ಆದ್ರೆ ಅವುರ ಸಿಟ್ಟು ಇನ್ನು ಇಳದಿಲ್ಲ, ಹೋಗ್ಲಿ ಬಿಡು. ಅಲ್ಲೇನು ನಡದಿದೆ ಹೇಳು."

"ಇಲ್ಲಿ ಬಾಳ ಚೆನ್ನಾಗಿದೆ ಸಾರ್. ದೇವೇಗೌಡ್ರು, ಕುಮಾರಸ್ವಾಮಿ ಅನ್ನೊ ಸದಾರಮೆ ನಾಟಕದ ಅಪ್ಪ


ಥೂತ್ತೇರಿ

▸ಯಾಹೂ

ಮಕ್ಕಳ ಇಪ್ಪತ್ತು ತಿಂಗಳ ಡ್ರಾಮಾ ಮುಗದ ಮೇಲೆ ಎಡೂರಪ್ಪನ ಜಾತ್ರೆ ಶುರುವಾಯ್ತು ಸಾರ್. ನಾನು ಏನೊ ಅನ್ನಕಂಡಿದ್ದೆ. ಅವರ ಆಡಳಿತ ಕೇಳಿದ್ರೆ ನೀವೇ ದಂಗುಬಡಿತಿರಿ."

"ಆ ತರ ಆಡಳಿತದ ಇದೆಯಾ?"

"ಹೌದು ಸಾರ್, ಈ ಎಡೂರಪ್ಪ ನೀವು ತಿಳಕಂಡಂಗಿಲ್ಲ, ಮುಖ್ಯಮಂತ್ರಿ ಆದ ಕೂಡ್ಲೆ ಶೋಭಾ ಕರಂದ್ಲಾಜೆನ ಮಂತ್ರಿ ಮಾಡಿ, ಮನುಬಳಿಗಾರನ್ನ ಮುಖ್ಯ ಕಾರ್ಯದರ್ಶಿ ಮಾಡಿ ಕಂಡಿದ್ರು. ಮಂತ್ರಿಗಳಿಂದ ಒಂದೇ ಒಂದು ಆಕ್ಷೇಪಣೆ ಬಂದ ಕೂಡ್ಲೆ ಆಕೆನ ಮಂತ್ರಿಗಿರಿಯಿಂದ ಇಳಿಸಿ ಬಳಿಗಾರನ್ನ ಯಾವುದೋ ಇಲಾಖೆ ಗುಮಾಸ್ತನ್ನ ಮಾಡಿದ್ರು. ನಿಜಕ್ಕೂ



ಶ್ರೀರಾಮ ಸೀತೆ ಮತ್ತು ಲಕ್ಷ್ಮಣನ ವಿಷಯದಲ್ಲಿ ನಡಕೊಂಡ ನಲ್ಲ ಅದೇ ತರ ಎಡೂರಪ್ಪ ನಡಕೊಂಡ್ರು ಸಾರ್."

"ಗುಡ್, ಅಂಗಿರಬೇಕು ಕಣಯ್ಯ."

"ಆಮೇಲೆ ರೇಣುಕಾಚಾರಿ ಅಂತ ಇದ್ನಲ್ಲ ಸಾರ್?"

"ಹೂಂಕಣಯ್ಯ ಹೊನ್ನಾಳಿ ರ್‍ಯಾಸ್ಕಲ್."

"ಅವುನು ಎಡೂರಪ್ಪನತ್ರಕ್ಕೆ ಬಂದು ನನ್ನ ಮಂತ್ರಿ ಮಾಡ್ತಿಯೋ ಅಥವಾ ನೀವು ನಿಮ್ಮೆಂಡತಿಗೆ ಹೊಡದಿರೋ ಫೋಟೋ ಈ ಮೊಬೈಲಲ್ಲಿದೆ. ಅದನ್ನ ಪತ್ರಿಕೆಗೆ ಬಿಡುಗಡೆ ಮಾಡಲೋ ಅಂದನಂತೆ. ಅದ್ಕೆ ಎಡೂರಪ್ಪ ರುದ್ರಾವತಾರ ತಾಳಿ ನೀನು ಬೇಕಾದ್ದು ಮಾಡಿಕೋ ಹೋಗಲೈ ಅಂತ ಕೆನ್ನೆಗೆ ಬಿಗಿದು ಕಳಿಸಿದರಂತೆ ಸಾರ್."

"ಹಾಕಬೇಕವುನಿಗೆ. ಒಳ್ಳೆ ಕೆಲಸ ಮಾಡಿದಾನೆ."

"ರೇಣುಕಾಚಾರಿನೂ ಒಳ್ಳೆ ಮನುಸ ಸಾರ್. ಅವುನಿಂದ ಬೇಕಾದಷ್ಟು ಉಪಯೋಗ ಪಡೆದಿರೊ ನರ್ಸ್ ಜಯಲಕ್ಷ್ಮಿ, ಮುತ್ತು ಕೊಡಕ್ಕೆ ಬಂದಿದ್ದಂತೆ. ಈತ 'ನಾನು ಏಕಪತ್ನಿ ವ್ರತಸ್ಥ' ಅಂತ ಜಯಲಕ್ಷ್ಮಿ ಕೆನ್ನೆಗೊಡದು ಕಳಿಸಿದನಂತೆ."

"ಅದೆಲ್ಲಾ ಸುಳ್ಳು ಕಣಯ್ಯ, ಮಾಡೇ ಕಳಿಸಿರತನವುನು."

"ಏನೊ, ಅಂತೂ ಅವುನು ಒಳ್ಳೆ ಮನಸ ಅಂತ ಶಿವಮೊಗ್ಗದ ಕಡೆ ಜನ ಕುವೆಂಪು ರಂಗಮಂದಿರಕೆ ಯಳಕಂಡು ಹೋಗಿ ಹೇಮಾಂಗಣದಲ್ಲಿ ನಿಲ್ಲಿಸಿ ಸನ್ಮಾನ ಮಾಡಿದರಂತೆ."

"ಹಾಳಾಗೋಗ್ಲಿ, ಈ ಬಳ್ಳಾರಿ ಕಡೆ ರೆಡ್ಡಿ ರ್‍ಯಾಸ್ಕಲ್‌ಗಳು ಏನು ಮಾಡ್ತಾಯಿದಾರಯ್ಯ?"

"ಅವುರ ಕತೆ ಮುಗಿತು ಸಾರ್. ಎಡೂರಪ್ಪ ಥೇಟ್ ಜಮದಗ್ನಿ ತರ ಆಗಿ ಅವುರ ಕ್ಷೇತ್ರಗಳಿಗೆ ಸರಿಯಾಗಿ ಬಲಿ ಹಾಕೋ ಅಂತ ಎಸ್ಪಿ ಡಿಸಿಗಳನ್ನು ವರ್ಗ ಮಾಡಿದ್ದೂ ಅಲ್ದೆ ರೆಡ್ಡಿಗಳ ಗಣಿಗಾರಿಕೆನೆ ನಿಲ್ಲಿಸಿಬುಟ್ಟವುನೆ ಎಡೂರಪ್ಪ. ಹೆಚ್ಚಿಗೆ ಮಾತಾಡಿದ್ರೆ ಸಂಪುಟದಿಂದ್ಲೆ ವಜಾ ಮಾಡ್ತಿನಿ ಅಂತ ಹೆದರಿಸಿ ಬುಟ್ಟವುನೆ ಸಾರ್. ಈಗ ರೆಡ್ಡಿಗಳು ಇಲಿ ಪಾಷಾಣ ತಿನ್ನದೊಂದು ಬಾಕಿ. ಈಗಾಗ್ಲೆ ರಾಮುಲು ಮುಖ ಇಲಿ ಅವುಸ್ಕಿ ತಿಂದೋನ ಮಕದಂಗೇ ಆದೆ."

"ಇಂಥ ಧೈರ್ಯ ಎಡೂರಪ್ಪನಿಗೆ ಯಂಗೆ ಬಂತಯ್ಯಾ?"

"ಅದೇ ನನಿಗೂ ಆಶ್ಚರ್ಯ ಸಾರ್. ಅವುನು ಗಾಣಿಗ ಲಿಂಗಾಯತರೋನಂತೆ. ಅವುನ ವಿರುದ್ಧ ತಿರುಗಿ ಬಿದ್ದೋರನ್ನೆಲ್ಲ ಗಾಣಕಾಯ್ಕಂಡು ಯಣ್ಣೆ ವಂಡುಸ್ತ ಕುಂತವುನೆ."

"ಅವುನ ಬಗ್ಗೆ ಬರಿರಯ್ಯ."

"ಬರಿಯೋದು ಬೇಕಾದಷ್ಟಿದೆ ಸಾರ್. ಅವುನು ಮುಖ್ಯಮಂತ್ರಿಯಾದ ಕೂಡ್ಲೆ ಚೆಡ್ಡಿಗಳು ಚರ್ಚಿಗೆ ಕಲ್ಲು ಹ್ವಡದ್ರು. ಕೂಡ್ಲೆ ಎಡೂರಪ್ಪ ಗೃಹಮಂತ್ರಿ ಆಚಾರಿಗೇಳಿ ಚೆಡ್ಡಿಗಳು ಲಾಟಿ ಬೀಸಕ್ಯಾಗದಂಗೆ ಕೈಗೇ ಹ್ವಡದವುರೆ. ಕೆಲವರ ನಾಲಗೆನೇ ಜಜ್ಜಿಬುಟ್ಟವುರೆ. ಅದ್ಕೆ ಚೆಡ್ಡಿಗಳು ಮಾತ್ನೆ ಆಡ್ತಯಿಲ್ಲಾ."

"ಗುಡ್. ಇದು ಬಾಳ ಹಿಂದೆನೆ ಆಗಬೇಕಿತ್ತು."

"ಆಮೇಲೆ ರಾಮಚಂದ್ರಾಪುರ ಮಠದಲ್ಲೊಬ್ಬ ಸ್ವಾಮಿ ಇದ್ನಲ್ಲ ಸಾರ್."

"ಗೊತ್ತು, ಒಂಥರ ಹಕ್ಕಿ ಶಾಸ್ತ್ರ ಹೇಳೋನಂಗೆ ಕಾಣ್ತನೆ."

"ಅವುನು ಎಡೂರಪ್ಪನಿಗೆ ಗಂಟುಬಿದ್ದು ಗೋಕರ್ಣ ಮಠ ಮತ್ತು ಅಮೃತ್‌ಮಹಲ್ ಕಾವಲು, ಹೊಸನಗರದತ್ರ ಭೂಮಿ ಕೇಳಿದ್ದ ಸಾರ್. ಎಡೂರಪ್ಪ ಯಾವುದ್ನು ಕೊಡಲ್ಲ, ಅದೆಲ್ಲಾ ಸರ್ಕಾರದ ಸೊತ್ತು, ನಡಿ ಅಂದುಬುಟ್ಟ ಸಾರ್."

"ನಾನಿರಬೇಕಿತ್ತು ಕಣಯ್ಯ ಅಲ್ಲಿ, ಎಡೂರಪ್ಪನಿಗೆ ಇನ್ನು ಸಪೋರ್ಟು ಮಾಡತಿದ್ದೆ."

"ಅದ್ಯಂಗೆ ಸಪೋರ್ಟು ಮಾಡತಿದ್ರಿ ಸಾರ್? ಎಡೂರಪ್ಪ ಬಿಜೆಪಿ ಮುಖ್ಯಮಂತ್ರಿ ಅಲವೆ."

"ಅಲ್ಲಯ್ಯಾ ಬಿಜೆಪಿಯಾದೋನು ಈಗ ನೀನೇಳಿದ ಕೆಲಸನೆಲ್ಲಾ ಮಾಡಕ್ಕಾಯ್ತದಾ? ಮಾಡಿದಾನೆ ಅಂದ್ರೆ ಅವುನೊಬ್ಬ ಒಳ್ಳೆ ಮುಖ್ಯಮಂತ್ರಿ ಅಷ್ಟೆ. ಬಿಜೆಪಿನೂ ಇಲ್ಲ ಯಂತದೂ ಇಲ್ಲ, ಯಲ್ಲ ಫೂಲ್ಸ್".

"ಎಡೂರಪ್ಪ ಇನ್ನೊಂದು ಕೆಲಸ ಮಾಡಿದ ಸಾರ್."

"ಏನಯ್ಯಾ?"

"ಶಿವಮೊಗ್ಗ ಲೋಕಸಭಾ ಚುನಾವಣೆಗೆ ಎಲ್ರೂ ಅವನ ಮಗನ್ನೇ ನಿಲ್ಲಸಕ್ಕೆ ನೋಡಿದ್ರು. ಎಡೂರಪ್ಪ ಅದನ್ನ ವಿರೋಧಿಸಿ 'ನನ್ನ ವಂಶದೋರು ಯಾರು ನಿಲ್ಲೋದು ಬೇಡ' ಅಂತ ಯಾರೊ ಮೈತ್ರಾದೇವಿ ಮಗ ರಾಘವೇಂದ್ರ ಅನ್ನೊ ಹುಡುಗನ್ನ ನಿಲ್ಲಿಸಿ ಗೆಲ್ಲಿಸಿಕೊಂಡ್ರು ಸಾರ್. ಈಗ ಆ ಹುಡುಗ ಸ್ವಂತ ಮಗನ ತರ ಅವುನೆ."

"ಸಮಾಜವಾದಿಗಳು ಪ್ರತಿಪಾದಿಸೋದು ಅದ್ನೆ ಅಲವೇನಯ್ಯಾ. ಎಷ್ಟೇ ಆಗ್ಲಿ ಎಡೂರಪ್ಪ ಶಿವಮೊಗ್ಗ ಜಿಲ್ಲೆಯವನು. ಅಲ್ಲಿ ಗೋಪಾಲ ಗೌಡ್ರು, ಸದಾಶಿವರಾಯರು, ಶಂಕರನಾರಾಯಣ ಭಟ್ರು ಇವರನ್ನೆಲ್ಲಾ ನೋಡಿರತನೆ. ಅದ್ಕೆ ಅಂಗೆ ಮಾಡಿರತನೆ. ಅದಿರ್ಲಿ ನಾನು ನೋಡಿದಾಗೆಲ್ಲಾ ಕರ್ನಾಟಕ ಯಾಕಯ್ಯ ಕತ್ತಲೆಲಿರತದೆ?"

"ಅದೂ ಈಶ್ವರಪ್ಪ ಅನ್ನೊ ಯಡವಟ್ಟರಾಯನಿಗೆ ವಿದ್ಯುತ್ ಖಾತೆ ಕೊಟ್ಟಿದ್ದ ಸಾರ್. ಅವನಿಗೆ ಏನೇನೂ ಗೊತ್ತಿರಲಿಲ್ಲ, ಅದ್ಕೆ ಎಡೂರಪ್ಪ ಆ ಖಾತೆ ಕಿತ್ತುಕೊಂಡು ಎಂಟು ಸಾವಿರ ಮೆಗಾವ್ಯಾಟ್ ವಿದ್ಯುತ್ ಖರೀದಿ ಮಾಡಿ ಇಪ್ಪತ್ತನಾಲ್ಕು ಗಂಟೆನೂ ವಿದ್ಯುತ್ ಕೊಡ್ತಾ ಅವುನೆ ಸಾರ್."

"ಎಲ್ಲಯ್ಯಾ? ಈಗ್ಲೂ ಕತ್ಲೆ."

"ಹೌದಾ ಸಾರ್?"


"ನಿನಿಗೆಷ್ಟು ಸತಿ ಹೇಳಿದ್ದೀನಯ್ಯಾ. ಏನಿದೆ ಅದೇಳು, ಸುಳ್ಳು ಸುಳ್ಳೆ ಹೇಳಬ್ಯಾಡ ಅಂತ."

"ಸಾರಿ ಸಾರ್ ನಿಮಗೆ ಖುಷಿಯಾಗ್ಲಿ ಅಂತ ಹೇಳಿದೆ ಸಾರ್."

"ಅಂಗಾದ್ರೆ ನೀನು ಇಲ್ಲಿವರಿಗೂ ಹೇಳಿದ್ದೆಲ್ಲಾ ಸುಳ್ಳೆ?"

"ಸಾರಿ ಸಾರ್."

"ಏನ್ ಸಾರಿನಯ್ಯ, ಯಲ್ಲಾ ಹಾಳಾಗೋಗಿದ್ದಿರಿ ನೀವು. ನನನ್ನೇ ಫೂಲ್ ಮಾಡ್ತಿಯೇನಯ್ಯ. ಶುದ್ಧ ಈಡಿಯಟ್ ನೀನು. ಥೂತ್ತೇರಿ!!!"



ಅವತಾರ

ಭಾಗ-1


ಉದ್ಗರಿಸುತ್ತಿದ್ದಾನೆ ನಿರೂಪಕ
ಬನ್ನಿ ಕರೆದೊಯ್ಯುವೆ ತೀರ್ಥಕ್ಷೇತ್ರಕ್ಕೆ
ಹಿನ್ನಲೆಯಲ್ಲಿ ಬಿಚ್ಚಿಕೊಳುವ ಮುನಿಯೊಬ್ಬನ ಕಥೆ
ಮತ್ತೆ ಉದ್ಗರಿಸುತ್ತಿದ್ದಾನೆ
ಈ ಝರಿ ಪಾಪನಾಶಿನಿ, ರೋಗವಿನಾಶಿನಿ
ಇಲ್ಲಿ ನೀರೆಲ್ಲವು ತೀರ್ಥ -ಸತ್ಯ ಕುವೆಂಪು ಕವಿವಾಣಿ
ಕೇಳಿಸುವನು ಹಕ್ಕಿ ಕೂಜನ, ಹಸಿರೆಲೆಗಳ ನಡುವೆ
ಕಾಣಿಸುವನು ಜಲಲ ಜಲಧಾರೆ
ಮೇಲೆ ದೇವರ ಋಜು ಬೆಳ್ಳಕ್ಕಿ ಸಾಲು
ಪಕ್ಕದ ಗುಡಿಯ ಒಂಟಿ ಪೂಜಾರಿಗೋ
ಕ್ಯಾಮರಾ ಮುಂದೆ ಬರಲೇ ನಾಚುಗೆ
ಆದರೂ ಒತ್ತಾಯಕ್ಕೆ ಬಗ್ಗಿ ಬಂದವರ
ಬಾಯಲ್ಲಿ ಕವಳ - ಮಾತು ತೊದಲು
ಅಲ್ಲೆಲ್ಲ ಹುಡುಕಿದರೆ ಕಾಣುವ
ನಾಲ್ಕಾರು ತಲೆಗಳು
ಒಬ್ಬ ಹಾಡುತ್ತಿರುವ
ಮತ್ತೊಬ್ಬ ನೋಡುತ್ತಿರುವ
ಗುಡಿ ಪ್ರದಕ್ಷಿಣೆ ಮಾಡುವ ಹೆಣ್ಣುಮಗಳು
ಝರಿ ಕೆಳಗೇ ಪಾತ್ರೆ ತೊಳೆಯುತ್ತಿರುವ
ಮತ್ತೊಬ್ಬಳು, ಬಟ್ಟೆ ಒಗೆಯಲು ಬಂದವಳು
ಮಗದೊಬ್ಬಳು ಜೊತೆಗಿಷ್ಟು ದನಕರು ಕತ್ತೆ ಸಾಲು

ಭಾಗ-2

ವಾರದ ನಂತರ ಮತ್ತದೇ ನಿರೂಪಕ
ಅದೇ ಕ್ಷೇತ್ರ ಮತ್ತದೇ ಉದ್ಗಾರ
ಕ್ಯಾಮರಾ ಕಣ್ಣು ಎಲ್ಲೆಲ್ಲಿ ಓಡಿದರೂ
ಝರಿ ಕಾಣುವುದಿಲ್ಲ ಜನ ಕಾಣುವರು
ತೆರೆದ ಬಾಯಿಗಳು ಒಣಗುತ್ತಿವೆ
ಐಸ್ ಕ್ರೀಂ, ಕಲ್ಲಂಗಡಿ ಮಾರಾಟ ಜೋರಾಗಿದೆ
ಫ್ಲೆಕ್ಸ್‌ಗಳ ನೆಳಲು, ಮೈಕುಗಳ ಒರಲು
'ಹೈವೇ ಕಾರ್ಯ ನಡೆಯುತ್ತಿದೆ
ನಿಧಾನಕ್ಕೆ ಚಲಿಸಿ'
'ಸ್ವಾಗತ ತೀರ್ಥ ಕ್ಷೇತ್ರಕ್ಕೆ'
ಕಣ್ಣಿಗೆ ರಾಚುವ ಫಲಕ
ಕಡಿದ ಮರಗಳ ಸಾಗಾಟ ನಡೆದಿದೆ
ಜೆಸಿಬಿಗಳು ಜಾಗ ಬಿಡದೇ ನಿಂತಿವೆ
ಮಧ್ಯೆ ನುಸಿಯುತ್ತಿದೆ ಜನರಿರುವೆ ಸಾಲು
ಕ್ಯಾಮರಾ ಮುಂದೆ
ಬರಲು ಕಾಯುತ್ತಿರುವ ಅರ್ಚಕ ವೃಂದದಲ್ಲಿ
ಕವಳ ಜಗಿಯುತ್ತಾ ತೊದಲಿದ ಆಸಾಮಿ ಮಾಯ
ಮೆಟ್ಟಿಲಾಗುತ್ತಿದೆ ಕಟ್ಟಡ ಏಳುತ್ತಿದೆ
ಸಾವಿರ ಭಕ್ತರಿಗೆ ಒಮ್ಮೆಲೆ ದರುಶನಕೆ ಏರ್ಪಾಡು
ತೀರ್ಥಕ್ಷೇತ್ರ ಸಂಪೂರ್ಣ ಮಾರ್ಪಾಡು
ಫ್ಲೆಕ್ಸಿಗಳಲ್ಲೂ ಕೂಗಿಕೊಳುವ ಮಂತ್ರಿಗಳು
ಕ್ಯಾಮರಾ ಕಣ್ಣು ಎಲ್ಲೆಲ್ಲಿ ಓಡಿದರೂ
ಝರಿ ಕಾಣುವುದಿಲ್ಲ ಜನ ಕಾಣುವರು

ಉಪ ಸಂಹಾರದಲ್ಲಿ ಉದ್ಗರಿಸುವನು
ನಿರೂಪಕ ಇದು ನಮ್ಮ ವಾಹಿನಿ ಎಫೆಕ್ಟ್
ಹಿನ್ನಲೆಯಲ್ಲಿ ಚಪ್ಪಾಳೆಗಳ ಸುರಿಮಳೆ
ಕ್ಯಾಮರಾ ಕಣ್ಣು ಎಲ್ಲೆಲ್ಲಿ ಓಡಿದರೂ
ಝರಿ ಕಾಣುವುದಿಲ್ಲ ಜನ ಕಾಣುವರು

● ಕೆ. ಅಕ್ಷತಾ



ಲಂಕೇಶ್ ಮತ್ತು ಪತ್ರಿಕೆಯಿಂದ ನಾನು ಪಡೆದಿದ್ದು

ಲಂಕೇಶರಿಗೆ 75 ವರ್ಷ. ನನ್ನ ಮತ್ತು ಅವರ ಪತ್ರಿಕೆಯ ಸ್ನೇಹಕ್ಕೆ 15 ವರ್ಷ. 95ರಲ್ಲಿ ಹಾಸನದಲ್ಲಿ ಕೊನೆಯ ವರ್ಷದ ಇಂಜಿನಿಯರಿಂಗ್‌ನಲ್ಲಿದ್ದಾಗ ಅವರ ಬರಹಕ್ಕೆ ಸೋತು ನಾನವರನ್ನು 'ಗೆಳತಿ'ಯನ್ನಾಗಿಸಿಕೊಂಡೆ. ಲೇಖಕಿ ವೈದೇಹಿಯವರಿಗೆ ಅವರು 'ಗೆಳತಿ'ಯಾದ ಹಾಗೇ!

ಹಿಂದೊಮ್ಮೆ ತಮ್ಮ 'ಮರೆಯುವ ಮುನ್ನ'ದಲ್ಲಿ ಲಂಕೇಶರು – "ಸೂಕ್ಷ್ಮಜ್ಞನಲ್ಲದವನು ಸುಶಿಕ್ಷಿತನಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ" ಎಂದು ಬರೆದಿದ್ದರು. ಲಂಕೇಶ್ ಮತ್ತು ಅವರ ಪತ್ರಿಕೆಯಿಂದ ನಾನು ಬಹುಮುಖ್ಯವಾಗಿ ಪಡೆದಿದ್ದು–ಸೂಕ್ಷ್ಮತೆ. ಅವರ ಕತೆ, ಕವನ, ಕಾದಂಬರಿ, ನಾಟಕ, ಪತ್ರಿಕೆ, ಚಲನಚಿತ್ರ ಎಲ್ಲವೂ ನನ್ನಲ್ಲಿ ಸೂಕ್ಷ್ಮತೆಯನ್ನು ಬೆಳೆಸಿದವಲ್ಲದೆ ನಮಗರಿವಿಲ್ಲದಂತೆ ಬರುವ ಬದುಕಿನ ಸೂಕ್ಷ್ಮ ನೋವುಗಳನ್ನು ಧೈರ್ಯವಾಗಿ ಎದುರಿಸುವುದನ್ನು ಕಲಿಸಿದವು. "ನಾವು ಕೊಟ್ಟಿದ್ದಕ್ಕಿಂತ ಹೆಚ್ಚಿನದನ್ನು ಕೊಡುವವರು ದಲಿತರು ಮತ್ತು ಮುಸ್ಲಿಮರು" ಇಂಥ ಅವರ ನೂರಾರು ಸಾಲುಗಳು ನಮಗೆ ಕೊಟ್ಟಷ್ಟು ತಿಳಿವಳಿಕೆಯನ್ನು ಯಾವ ಸಾಂಪ್ರದಾಯಿಕ ವಿದ್ಯಾಭ್ಯಾಸವೂ ಕೊಟ್ಟಿಲ್ಲ.

ಒಟ್ಟಾರೆಯಾಗಿ ಲಂಕೇಶರು ನನ್ನಂಥ ಅಸಂಖ್ಯಾತರಲ್ಲಿ ಏನನ್ನು ಬಿತ್ತಿ ಬೆಳೆಯಲು ಹೊರಟಿದ್ದರು? ನನಗೆ ನೆನಪಾಗುವುದು ಅವರ 'ಕಲ್ಲು ಕರಗುವ ಸಮಯ' ಕಥೆಯ ತಿಪ್ಪಣ್ಣ ಮತ್ತು ಶ್ಯಾಮಲ. ನಮ್ಮಲ್ಲಿ ಇವರಿಬ್ಬರೂ ಬೆಳೆಯದೇ ಇದ್ದರೆ ಬುದ್ಧ, ಬಸವ, ಅಲ್ಲಮ ಯಾರೂ ಅರ್ಥವಾಗುವುದಿಲ್ಲ. 'ನಾನು ತಿಪ್ಪಣ್ಣ, ಶ್ಯಾಮಲ ಆಗಬೇಕು' ಎಂದುಕೊಂಡು ಹೊರಟರೆ ಅವರ ವ್ಯಕ್ತಿತ್ವದಿಂದಲೇ ದೂರಾಗುತ್ತೇನೆ. ಅಷ್ಟು ಸೂಕ್ಷ್ಮವಾಗಿ ಲಂಕೇಶ್ ಅವರಿಬ್ಬರ ವ್ಯಕ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಹಲವು ಸಾರಿ ಲಂಕೇಶರನ್ನು ಪ್ರೀತಿಸಿದಷ್ಟು ಜಗತ್ತಿನಲ್ಲಿ ನಾನು ಯಾರನ್ನೂ ಪ್ರೀತಿಸಲಾರೆ ಎಂದುಕೊಂಡಿದ್ದೇನೆ.

ಲಂಕೇಶರು ಇಲ್ಲವಾದ ಮೇಲೆ ನಮ್ಮನ್ನು ಕೈಹಿಡಿದು ನಡೆಸಿದರು ಗೌರಿ. ಹಿಂದೊಮ್ಮೆ ತಮ್ಮ ಅಂಕಣದಲ್ಲಿ 'ಬಸಮ್ಮನ ಕುಲಾವಿಯಲ್ಲಿ ಇಶಾ' ಶೀರ್ಷಿಕೆಯಡಿ ತಮ್ಮ ಅಜ್ಜಿ ಬಸಮ್ಮನ ಕುಲಾವಿಯಲ್ಲಿ ಲಂಕೇಶರ ಮೊಮ್ಮಗಳು ಇಶಾ ಇರುವ ಚಿತ್ರವನ್ನು ಪ್ರಕಟಿಸಿದ್ದರು. ನನಗೆ ಇವತ್ತಿಗೂ ಅನ್ನಿಸುವುದೇನೆಂದರೆ ಬಸಮ್ಮನಂತೆ ಲಂಕೇಶರು ಚೆಂದದೊಂದು ಕುಲಾವಿಯನ್ನು (ಪತ್ರಿಕೆ) ಗೌರಿಯವರಿಗೆ ತೊಡಿಸಿಹೋಗಿದ್ದಾರೆ. ಹಲವು ಸಾರಿ ಗೌರಿಯವರ ಪರಿಶ್ರಮವನ್ನು ಕಂಡು ಕಣ್ತುಂಬಿ ಕೂರುತ್ತೇನೆ. ಲಂಕೇಶರ 75ನೆಯ ಹುಟ್ಟುಹಬ್ಬದ ಸಾಂಸತಿಕ ಸಮಾರಂಭಕ್ಕೆ ಓಡೋಡಿ ಬರುತ್ತೇವೆ. ನಮ್ಮಲ್ಲಿ ತಿಪ್ಪಣ್ಣ, ಶ್ಯಾಮಲಳನ್ನು ಉಳಿಸಿಹೋದ ಆ ಮಹಾನ್ ಚೇತನವನ್ನು ನೆನೆಯಲು, ಗೌರಿಯವರ ಕೈಹಿಡಿದು ನಡೆಯಲು....


-ಯೋಗೀಶ್ ಸೂರಪ್ಪ, ತುಮಕೂರು

ನನ್ನಂತೆ ಲಕ್ಷಾಂತರ ಜನರ ಮೆದುಳಿನ ಜಡ ಬುದ್ಧಿಗೆ, ಯೋಚಿಸುವ ಮನಸ್ಸಿಗೆ ತಿಳಿವಳಿಕೆ ನಾಟಿಸಿಕೊಟ್ಟವರು ಲಂಕೇಶ್ ಮೇಷ್ಟ್ರು. ಮುಖ್ಯವಾಗಿ ನನ್ನಂತ ಗ್ರಾಮೀಣ ಮಹಿಳೆಯರಿಗೆ 'ಪತ್ರಿಕೆ'ಯಲ್ಲಿ ತಮ್ಮ ಅನುಭವವನು ತಮ್ಮ ತಮ್ಮದೇ ಸರಳ ಮುಗ್ಧ ಮಾತುಕತೆಯಲಿ ಹೇಳುವ ಅವಕಾಶ ಕೊಟ್ಟರು. ಕರ್ನಾಟಕದ ಪ್ರತಿಮೂಲೆ ಹಳ್ಳಿಗಳಿಂದ ತಮ್ಮ ಊರು, ಬದುಕು, ಆಗತ್ಯಗಳು, ಕತೆ, ಸಾಂಸ್ಕೃತಿಕತೆಯ ಜೊತೆಜೊತೆಗೆ ಹಳ್ಳಿಗಳ ಒಳ ಹಿತ್ತಲಿನ ರಾಜಕೀಯ [illegible] ಜೀವನದ ಕಷ್ಟಸುಖ [illegible], [illegible], ಗುಡಿ ಬಪ್ಪಾರಗಳ [illegible] [illegible]

ಸೀರಸಾಬು ನಜೀರರ ಬಗ್ಗೆ ಮೇಷ್ಟ್ರು [illegible] ಲೋಕಲ್ ಸಂವೇದನೆ, ಗುಪ್ತಗಾಮಿ [illegible] [illegible] ಸಾಹಿತ್ಯಕವಾಗಿ ರಾಜಕೀಯವಾಗಿ ಬೆಳೆಸಿದ್ದು, ಪರದೆಯ ಒಳಗನ್ನು ಸಾರಾ [illegible] [illegible] [illegible] ಹೆಣ್ಣು ಮಕ್ಕಳು ಉದ್ಘಾಟಿಸಿ ಬರೆದ ಅನುಭವಗಳು. ನಿಜಕ್ಕೂ ನಮ್ಮಂತಹವರ ಪಾಲಿಗೆ [illegible] ಚರಿತ್ರೆ, ವಚನ ಸಂದರ್ಭವನ್ನು ನೆನಪಿಸುವ ಬಸವಣ್ಣನವರ ಎಲ್ಲಾ ವರ್ಗದ ಮಹಿಳೆಯರ ಶ್ರಮ ಧ್ವನಿ ಎಂದು ಖಂಡಿತಾ ಭಾಸವಾಗುತ್ತದೆ.

-ಉತ್ತನೂರು ರಾಜಮ್ಮ, ಚಿಂತಾಮಣಿ, ಕೋಲಾರ

ಲಂಕೇಶ್: ಬರಹವೆಂಬ ಪ್ರಜ್ಞೆ



ಆಂಧ್ರದ ಗಡಿಭಾಗಕ್ಕೆ ಅಂಟಿಕೊಂಡಿರುವ ಸಿರುಗುಪ್ಪ ತಾಲ್ಲೂಕಿನ ಕರೂರು ಎಂಬ ಪುಟ್ಟ ಗ್ರಾಮದ ಸಾಮಾನ್ಯ ರೈತ ದೇವರೆಡ್ಡಿಯೊಂದಿಗೆ ಲಂಕೇಶರು ಪತ್ರ ವ್ಯವಹರಿಸಿ ಸಂಭಾಷಿಸಿದ ಪರಿಯನ್ನು ನೋಡಿ ನಾನು ದಂಗು ಬಡಿದು ಹೋದೆ. ಹದಿನೈದೇ ಪೈಸೆಯ ಪುಟ್ಟ ಕಾರ್ಡಿನಲ್ಲಿ ಭತ್ತದ ತಳಿ, ಊರಿನ ರಾಜಕಾರಣ, ಪ್ರಗತಿರಂಗದ ಹುಡುಗರ ಸೈಕಲ್ ಸವಾರಿ ಕುರಿತು ಓರ್ವ ಸಾಮಾನ್ಯನೊಂದಿಗೆ ಲಂಕೇಶರು ಆಪ್ತವಾಗಿ ಸಂವಾದಿಸಿದ ರೀತಿ ಅಚ್ಚರಿ ಮೂಡಿಸುವಂತಹದ್ದು. ಖ್ಯಾತ ಸಾಹಿತಿಯಾದವ ಈ ಹೊತ್ತು ಚಾನೆಲ್ಲುಗಳ ಮೂಲಕ ರಾಷ್ಟ್ರಮಟ್ಟದಲ್ಲಿ ಪ್ರಚಾರ ಗಿಟ್ಟಿಸಬಹುದು. ಆದರೆ ದೇವರೆಡ್ಡಿಯಂತಹ ಶ್ರೀಸಾಮಾನ್ಯ ರೈತನನ್ನು ಮುಟ್ಟುವುದಿದೆಯಲ್ಲ ಅದು ಲಂಕೇಶರಿಂದಷ್ಟೇ ಸಾಧ್ಯವೆನಿಸುವುದು.

ಸರ್ಕಾರಿ ಲೈಬ್ರರಿ ಕಟ್ಟೆಯ ಮೇಲೆ ಪ್ರತೀವಾರ 'ಲಂಕೇಶ್' ಬರುವುದನ್ನೇ ಕಾಯುತ್ತ, ಬಂದಕೂಡಲೇ ಒಂದೇ ಏಟಿಗೆ 'ತುಂಟಾಟ'ದಿಂದ ಹಿಡಿದು ಸಿನಿಮಾದವರೆಗೆ ಇಡೀ ಪತ್ರಿಕೆಯನ್ನು ಓದಿ ಮುಗಿಸುತ್ತಿದ್ದ ಅಂದಿನ ನಮ್ಮ ಉತ್ಸಾಹಕ್ಕೆ ಯಾರು ಹೇಗೆ ತಾನೆ ಸಾಟಿಯಾಗಲು ಸಾಧ್ಯ?

ಆ ದಿನಗಳಲ್ಲಿ ದಾವಣಗೆರೆ ಮತ್ತು ಹುಬ್ಬಳ್ಳಿಗೆ ಲೋಡುಗಟ್ಟಲೆ ಪತ್ರಿಕೆ ಬರುತ್ತಿತ್ತೆಂದರೆ ಪತ್ರಿಕೆಯನ್ನು ಓದುವವರ ಹಸಿವು ಎಷ್ಟಿತ್ತೆಂದು ತಿಳಿಯುತ್ತದೆ. ನಮ್ಮ ಮೆದುಳಿಗೊಂದಿಷ್ಟು ನೀರು ಮತ್ತು ಆಹಾರ ಒದಗಿಸಿದ ಪತ್ರಿಕೆ ಕರ್ನಾಟಕದ ಸಂದರ್ಭದಲ್ಲಿ ಮಾಡಿದ ಸಾಧನೆಯೆಂದೇ ಹೇಳಬಹುದು. ಮತ್ತೋಡಿಯಂತಹ ಊರಿನ ಜನರ ಇಬ್ಬಂದಿತನ, ನಲ್ಲೂರಿನ ಜನಗಳ ಜಾತಿರಾಜಕಾರಣ, ಅವರ ಮುಗ್ಧತೆಗಳನ್ನು ಜಾಗತಿಕವೆಂಬಂತೆ ರೂಪಿಸಿ ಕಟ್ಟಿಕೊಡುತ್ತಿದ್ದ ರೀತಿಗಳೆಲ್ಲವೂ ಸಾಹಿತ್ಯವನ್ನು ಮೀರಿದ ಸಂಗತಿಗಳಾಗಿದ್ದವು.


ಲಂಕೇಶ್ ಒಬ್ಬ ಉತ್ತಮ ಸಾಹಿತಿಯಾಗಿದ್ದಕ್ಕಿಂತಲೂ ಹೆಚ್ಚಾಗಿ ಅತ್ಯುತ್ತಮ ಸಮಾಜ ವಿಜ್ಞಾನಿಯಾಗಿದ್ದರು. ತಮ್ಮ ಚಿಂತನೆಗಳನ್ನು ಅಂಕಣ ಬರಹಗಳ ಮೂಲಕ ಬಿತ್ತರಿಸಿ ನಮ್ಮಂತಹ 'ಏಕಲವ್ಯ'ರನ್ನು ರೂಪಿಸಿ, ಪ್ರೇರೇಪಿಸಿ, ಹೋರಾಟ ಮತ್ತು ಚಳವಳಿಗಳಿಗೆ ಅಣಿಮಾಡುತ್ತಿದ್ದ ರೀತಿ ನೆನೆಸಿಕೊಂಡರೆ ಇಂದಿಗೂ ಅಚ್ಚರಿಯೆನಿಸುತ್ತದೆ. ನಮ್ಮ ಕಲ್ಪನೆಯ ಮುಖವಾಡಗಳನ್ನು ಛಿದ್ರಗೊಳಿಸುತ್ತಲೇ ನಮ್ಮಲ್ಲಿ ಹುದುಗಿಹೋಗಿದ್ದ–ಸತ್ತೇ ಹೋಗಬಹುದಾದ ಚಿಂತನೆಗಳಿಗೆ ಮೂರ್ತರೂಪ ಕೊಟ್ಟು ಜೀವ ತುಂಬಿದರು ಲಂಕೇಶ್.

ಈ ಹೊತ್ತು ಒಂದೆಡೆ ಬಳ್ಳಾರಿಯ ಗಣಿಗಾರಿಕೆಯಿಂದ ಸಿರಿವಂತರಾದ ಐಲು–ಪೈಲು ಜನ, ಇನ್ನೊಂದೆಡೆ ಲಕ್ಷಾಂತರ ಜನಕ್ಕೆ ಬದುಕೇ ಇಲ್ಲವಾಗುತ್ತಿರುವ ಈ ಸನ್ನಿವೇಶದಲ್ಲಿ ಲಂಕೇಶ್ ಏನಾದರೂ ಇದ್ದಿದ್ದರೆ...

"ಥೂ... ನನ್ ಮಕ್ಳಾ... ಏನ್ರಯ್ಯಾ ಎಲ್ರೂ ಸೇರ್ಕಂಡ್ ಏನ್ ಕತ್ತೆ ಕಾಯ್ತಿದೀರ..." ಅಂತ ಬೈಯುತ್ತಿದ್ದರೇನೋ.

ಲಂಕೇಶರ ಒಂದೊಂದು ಟೀಕೆಯೂ–ಟಿಪ್ಪಣಿಯೂ ಸಾಹಿತ್ಯಕ ಕೃತಿಯಾಗಿ ರೂಪಾಂತರಗೊಳ್ಳುತ್ತಿದ್ದ ರೀತಿ, ನಮ್ಮ ಮನಸ್ಸಿನೊಳಗೆ ಜೀವ ತಳೆಯುತ್ತಿದ್ದುದನ್ನು ವಿಸ್ಮಯ ಬೆರಗಿನಿಂದಲೇ ಸ್ವೀಕರಿಸುತ್ತಾ ಬೆಳೆದ ನನಗೆ ಇಂದಿಗೂ 'ಲಂಕೇಶ್' ಎಂಬ ಪ್ರಜ್ಞೆ ನಮ್ಮೊಂದಿಗಿಲ್ಲ ಎಂದು ಅನ್ನಿಸುತ್ತಲೇ ಇಲ್ಲ.

-ಬಿ. ಶ್ರೀನಿವಾಸ, ಹಾವೇರಿ



ನನಗರಿವಿಲ್ಲದೆ ನನ್ನೊಂದಿಗೆ ಬೆರೆತ ಲಂಕೇಶ್ ಮೇಷ್ಟ್ರು

ನನಗಾಗ ತೀರಾ ಸಣ್ಣ ವಯಸ್ಸು. 'ಪ್ರಪಂಚ' ಪತ್ರಿಕೆಯಲ್ಲಿ ನನ್ನ ತಂದೆಯವರೂ ಬರೆಯುತ್ತಿದ್ದುದರಿಂದ ಡಾ.ಪಾಟೀಲ ಪುಟ್ಟಪ್ಪನವರ 'ಪ್ರಪಂಚ' ಪತ್ರಿಕೆಯನ್ನು ಗೌರವದಿಂದ ನೋಡುತ್ತಿದ್ದೆ. ನಾನು ಇನ್ನೂ ಚಿಕ್ಕವನಾಗಿದ್ದಾಗಲೇ 'ಲಂಕೇಶ್ ಪತ್ರಿಕೆ' ಆರಂಭಗೊಂಡಿತು. ಡಾ.ಪಾಪು ಅವರ ಬರವಣಿಗೆಗೂ 'ಲಂಕೇಶ್ ಪತ್ರಿಕೆ' ಬಳಸುತ್ತಿದ್ದ (ಭ್ರಷ್ಟರಿಗೆ ಮರ್ಮಾಘಾತಕವನ್ನುಂಟುಮಾಡುವ) ಶೈಲಿಗೂ ಅಜಗಜಾಂತರ ವ್ಯತ್ಯಾಸ ಇತ್ತು. ರಾಜಕೀಯ ಘಟಿಂಗರ ಬಗ್ಗೆ 'ಯಾರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮನ್ನೆಂತು ಮಾಡುವುದು!?' ಎಂದು ಶರಣರು ಹೇಳಿದಂತೆ ಕ್ಷಾತ್ರತೇಜದಿಂದ ಮುನ್ನುಗ್ಗಿ ಹೋಗುವ ಲಂಕೇಶರ ಬರವಣಿಗೆ ಒಂದೆರಡು ಸಂಚಿಕೆಗಳಿಂದಲೇ ನನ್ನ ಮನಸ್ಸನ್ನು ಸೂರೆಗೊಂಡಿತು. ಪತ್ರಿಕೆ ಆರಂಭಗೊಂಡ ನಾಲ್ಕಾರು ತಿಂಗಳುಗಳಲ್ಲಿಯೆ ನನ್ನ ತಂದೆಯವರೂ ಪತ್ರಿಕೆಯ ಬಳಗಕ್ಕೆ ಸೇರಿದ ಮೇಲೆ ನನಗೆ ಇನ್ನಿಲ್ಲದ ಖುಷಿ, ಅಭಿಮಾನ ಎರಡೂ ಪತ್ರಿಕೆ ಮೇಲೆ ಬೆಳೆಯುತ್ತಾ ಹೋಯಿತು.

ಹದಿಹರೆಯದ ಅಂದಿನ ನನ್ನ ಕಾಲೇಜು ದಿನಗಳಲ್ಲಿ ಲಂಕೇಶ್ ಪತ್ರಿಕೆಯನ್ನು ಕೈಯಲ್ಲಿ ಹಿಡಕೊಂಡು ಹೋಗುವುದರಲ್ಲಿ ಒಂಥರ ಥ್ರಿಲ್ ಇತ್ತು. ಜೊತೆಗೆ ಪತ್ರಿಕೆಯಲ್ಲಿ ಆಗ ಬರುತ್ತಿದ್ದ 'ಚಂದ್ರಗಿರಿಯ ತೀರದಲ್ಲಿ','ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಧಾರಾವಾಹಿಗಳ ಓದು ನನ್ನನ್ನು ವಿವೇಚನೆ ಮಾಡಲು ಹಚ್ಚಿತು. ಜೊತೆಗೆ ಅನ್ಯ ಧರ್ಮೀಯ ಜನಗಳ ಬಗೆಗೆ ಅಕ್ಕರೆಯ ಭಾವನೆಯೂ ನನಗೆ ಅರಿವಿಲ್ಲದೆ ನನ್ನೊಳಗೆ ಸೇರಿಕೊಂಡಿತು. ಕಥೆ–ಕಾದಂಬರಿಗಳ ಮೂಲಕವೂ ವಾಸ್ತವಿಕ ಸಂಗತಿಗಳನ್ನು ಹೇಳಬಹುದು ಎಂಬುದನ್ನು ಪತ್ರಿಕೆ ಮನದಟ್ಟು ಮಾಡಿಕೊಟ್ಟಿತು.

ವಾರದಿಂದ ವಾರಕ್ಕೆ ನಿಗಿನಿಗಿ ಕೆಂಡವಾಗಿಯೆ ಹೊರಬರುತ್ತಿದ್ದ ಪತ್ರಿಕೆ ಕರ್ನಾಟಕದ ತುಂಬೆಲ್ಲ ಸಂಚಲನವನ್ನುಂಟುಮಾಡುತ್ತಿತ್ತು. ನಮ್ಮ ಭಾಗದಲ್ಲಂತೂ ಖರ್ಗೆ, ಧರ್ಮಸಿಂಗ್, ಕಸಬೆ, ಭೀಮಣ್ಣ ಖಂಡ್ರೆ, ಸಾವಿರದ ಶಿವಣ್ಣ, ಬಸವರಾಜ ಪಾಟೀಲ ಹುಮ್ನಾಬಾದ ಮುಂತಾದವರ ಆಟಾಟೋಪಗಳು ಹಾಗೂ ಅವರೆಲ್ಲ ಬೇನಾಮಿಯಾಗಿ ಖರೀದಿಸಿ ಇಟ್ಟ ಆಸ್ತಿ–ಪಾಸ್ತಿಯ ವಿವರಗಳನ್ನು ಪತ್ರಿಕೆಯಲ್ಲಿ ಓದುತ್ತಲಿ ಭಪ್ಪರೆ ಸರದಾರ ಎಂಬ ಶ್ಲಾಘನೆ ನನಗರಿವಿಲ್ಲದೆ ಹೊರಬರುತ್ತಿತ್ತು.

ಸ್ಪಷ್ಟ ಮಾಹಿತಿ, ಖಡಕ್ ಶೈಲಿ, ನಿರ್ಭೀತಿಯ ಪತ್ರಿಕೆ ನಡೆಸಿಕೊಂಡು ಹೋಗುತ್ತಿರುವ ಲಂಕೇಶ್ ಮೇಷ್ಟ್ರ ಬಗ್ಗೆಯೂ ನನಗರಿವಿಲ್ಲದೆ ಗೌರವ ಭಾವನೆ ಮೂಡತೊಡಗಿತು. ಅವರ ಸಂಪಾದಕೀಯವಂತೂ ವಂಡರ್‌ಫುಲ್. ತಮ್ಮ ಅತ್ಯಂತ ಖಾಸಗಿ ಸಂಗತಿಯನ್ನು (ಒಂದು ಬಾಗಿಲ ಕಥೆ.) ಸಾರ್ವತ್ರಿಕರಣಗೊಳಿಸಿ ಅದನ್ನು ಮಾರ್ಮಿಕವಾಗಿ ಜನರ ಮನಸ್ಸಿಗೆ ಮುಟ್ಟುವಂತೆ ಬರೆಯುತ್ತಿದ್ದ ಶೈಲಿ ನನಗೆ ಇಂದಿಗೂ ಇಷ್ಟ. 'ಹದಿಹರೆಯದ ಚೇತನಗಳನ್ನು ಕುರಿತು' ಎಂಬ ಬರಹ ನನ್ನ ಅಂದಿನ ಹರೆಯಕ್ಕೆ ಬರೆದ ಮುನ್ನುಡಿಯಾಗಿತ್ತು. ಸಹೋದರ ಇಂದ್ರಜಿತ್ ಲಂಕೇಶ್, ಆಕ್ಸಿಡೆಂಟ್‌ಗೆ ತುತ್ತಾದ ಸಂದರ್ಭವನ್ನು ಹೇಳುತ್ತ ಹೇಳುತ್ತ ಆ ಹದಿಹರೆಯದ ಮನಸ್ಸನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದ ಮೇಷ್ಟ್ರು ನನ್ನೊಳಗೆ ಬೆಳೆಯುತ್ತಾ ಹೋದರು.


ಗೋಕಾಕ ಚಳವಳಿಯ ಸಂದರ್ಭದಲ್ಲಂತೂ ಪತ್ರಿಕೆ ಕನ್ನಡಿಗರ ಕಣ್ಮಣಿಯಾಗಿ ಹೊರಹೊಮ್ಮಿತು. ಡಾ.ರಾಜ್‌ರನ್ನು ಭೇಟಿಯಾಗಿ ಮಾತಾಡುವುದೆ ಸಾಧ್ಯವಿಲ್ಲದಂತಹ ಸಂದರ್ಭದಲ್ಲಿ ಲಂಕೇಶ್ ಮೇಷ್ಟ್ರು ಅವರನ್ನು ಭೇಟಿಯಾಗಿ ಸಂದರ್ಶಿಸಿದರು. ಡಾ.ರಾಜ್‌ರ ಸುತ್ತ ಹಬ್ಬಿನಿಂತ ಭಟ್ಟಂಗಿಗಳ ಕುರಿತೂ ನಿರ್ಭಿಡೆಯಾಗಿ ಬರೆದುಬಿಟ್ಟರು.

ನಮ್ಮ ನಾಡಿನವರೆ ಆದ ಯು.ಆರ್. ಅನಂತಮೂರ್ತಿ, ದೇ.ಜವರೇಗೌಡರು, ಗೋಪಾಲಕೃಷ್ಣ ಅಡಿಗರು ಹಾಗೂ ಸಾಹಿತ್ಯ ಪರಿಷತ್ತು ತಪ್ಪು ಹೆಜ್ಜೆಗಳನ್ನು ಇಟ್ಟಾಗಲೂ ತಮ್ಮವರೆಂದು ಯಾವ ಮುಲಾಜು ಇಲ್ಲದೆ ಜಾಡಿಸಿ ಬರೆದು ಬಿಡುತ್ತಿದ್ದರು. ರೈತ ಸಂಘಟನೆಯನ್ನು ಹುಟ್ಟು ಹಾಕಿ ಜನರಲ್ಲಿ ಜಾಗೃತಿ ಉಂಟುಮಾಡುತ್ತಿದ್ದ ನಂಜುಂಡಸ್ವಾಮಿಯವರನ್ನೂ ತಮ್ಮ ಲೇಖನಿಯ ಮೂಲಕ ಛೇಡಿಸುತ್ತಿದ್ದರು.

ಪತ್ರಿಕೆ ಹೀಗೆ ಗಟ್ಟಿಯಾಗಿ ಬರೆಯತೊಡಗಿದಂತೆಲ್ಲ, ಸಂಗತಿಗಳನ್ನು ಸ್ಪಷ್ಟವಾಗಿ ವಿವರಿಸಿದಂತೆಲ್ಲ ನನಗರಿವಿಲ್ಲದೆ ನನ್ನ ವಿವೇಚನಾ ಶಕ್ತಿಯೂ ಬೆಳೆಯುತ್ತಾ ಹೋಯಿತು. ನನ್ನ ಆಲೋಚನಾ ಧಾಟಿಯೂ ಬದಲಾಯಿತು. ಒಟ್ಟಿನಲ್ಲಿ ಸದ್ವಿನಯದ ಜೊತೆಗೆ "ನ್ಯಾಯ ನಿಷ್ಠುರಿ ಯಾರ ದಾಕ್ಷಿಣ್ಯ ಪರನಲ್ಲ" ಎಂಬ ನೋಟವನ್ನು ಪತ್ರಿಕೆಯ ಮೂಲಕ ನನಗೆ ತಂದುಕೊಟ್ಟಿದ್ದಾರೆ. ಈ ಮೇಷ್ಟ್ರು ನೇರವಾಗಿ ನನಗೆ ಪಾಠ ಮಾಡದೆ ಇದ್ದರೂ ನನ್ನ ವಿಚಾರಗಳ ಗುರುವಾಗಿ ದಾರಿತೋರಿದ್ದಾರೆ. ನಿರ್ಭಿಡೆಯಿಂದ ಬದುಕಲು ಕಲಿಸಿದ್ದಾರೆ. ಸರಳ ಬದುಕಿನ ಪರಿಪಾಠ ಹೇಳಿಕೊಟ್ಟಿದ್ದಾರೆ. ಒಟ್ಟಿನಲ್ಲಿ ನನ್ನ ಅಸ್ತಿತ್ವದೊಂದಿಗೆ ಲಂಕೇಶ್ ಮೇಷ್ಟ್ರು ಬೆರೆತಿದ್ದಾರೆ, ನನಗರಿವಿಲ್ಲದೆ.

- ವಿಶ್ವಾರಾಧ್ಯ ಸತ್ಯಂಪೇಟೆ, ಶಹಾಪುರ

ಪತ್ರಿಕೋದ್ಯಮಕ್ಕೆ ಹೊಸ ಪರಿಭಾಷೆ ಬರೆದ ಲಂಕೇಶ್



ಪತ್ರಿಕೋದ್ಯಮಕ್ಕೆ ಹೊಸ ಪರಿಭಾಷೆ ಬರೆದ ಲಂಕೇಶ್ ಅವರನ್ನು ತ್ರಿಕಾರಂಗ ಎಂದೂ ಕಡೆಗಣಿಸುವಂತೆಯೇ ಇಲ್ಲ. ಯಾಕೆಂದರೆ ಕತಾನತೆಯಿಂದ ಸೊರಗಿದ್ದ ಪತ್ರಿಕೋದ್ಯಮದ ಜಡತ್ವವನ್ನು ಬಿದೆಬ್ಬಿಸಿದವರು ಲಂಕೇಶ್. ನೇರವಾಗಿ, ಧೈರ್ಯವಾಗಿ ಬರೆಯುವುದನ್ನು ತೋರಿಸಿಕೊಟ್ಟ, ಅವರ ಲೇಖನಿಯಿಂದ ಹರಿದ ವಿಚಾರಧಾರೆಗಳು ಇಂದಿಗೂ ಮೌಲ್ಯಯುತವಾದವುಗಳು.

ಸುಮಾರು 1979ರ ಇಸವಿ ಇರಬಹುದು. ನಾನಾಗ ಬಿ.ಎಸ್ಸಿ. ವ್ಯಾಸಂಗ ಮಾಡುತ್ತಿದ್ದೆ. ಪತ್ರಿಕೆಗಳನ್ನು ಓದುವ ಹವ್ಯಾಸ ಇಟ್ಟುಕೊಂಡಿದ್ದ ನನಗೆ ಒಂದು ದಿವಸ ನ್ಯೂಸ್‌ಪೇಪರ್ ಸ್ಟಾಲ್ ಒಂದರಲ್ಲಿ ಒಂದು ಪತ್ರಿಕೆ ಕಂಡಿತು.

'ಚಿಕನ್ ಪಲಾವ್ ವ್/ಸ್ ಬೆಂಡೆಕಾಯಿ ಗೊಜ್ಜು' ಎಂಬ ಶಿರೋನಾಮೆ. ಪತ್ರಿಕೆಯ ಹೆಸರು 'ಲಂಕೇಶ್ ಪತ್ರಿಕೆ' ಎಂದು ಕಪ್ಪು ಬಿಳುಪಿನಲ್ಲಿ ಮುದ್ರಿಸಲಾಗಿತ್ತು, ಅವೆರಡನ್ನು ನೋಡಿ ಸೋಜಿಗವಾಯ್ತು. ತನ್ನ ಹೆಸರನ್ನೇ ಪತ್ರಿಕೆಗಿಟ್ಟ ಲಂಕೇಶರ ಬಗ್ಗೆ ಕುತೂಹಲ ಹೆಚ್ಚಿತು.


ಲಂಕೇಶ್ ಪತ್ರಿಕೆಯ ವಿಶಿಷ್ಟತೆ ನೇರವಾದ ಬರಹ. ಜಾಹೀರಾತು ಇಲ್ಲದೆ ಪತ್ರಿಕೆ ನಡೆಸಿದ ಕೀರ್ತಿ ಅವರದ್ದು. ಪತ್ರಿಕೆ ಎಂದರೆ ಏನು ಎಂಬುದನ್ನು ತಮ್ಮ ಬರಹಗಳಿಂದ ತೋರಿಸಿಕೊಟ್ಟವರು ಲಂಕೇಶ್. ಲಂಕೇಶ್ ಅವರ ಬರಹಗಳು ನನ್ನ ಮೇಲೆ ಪರಿಣಾಮ ಬೀರಿದ್ದರಿಂದ ನಾನೂ ಪತ್ರಕರ್ತನಾದೆ. ಇಂದಿಗೂ ಲಂಕೇಶ್ ಅವರ ಬರಹಗಳು ನನಗೆ ಆದರ್ಶ.

-ಸಿ.ಪಿ.ಮೂರ್ತಿ

ಲಂಕೇಶ್ ನೆನಪು: ಸುಡುಮಧ್ಯಾಹ್ನದ ಮಾವಿನ ತೋಪು

"If there are among our poets any who are greater and more highly gifted than Baudelaire, there are none more important" -M. Paul Valery.

ನಾನಾಗ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮೊದಲ ಬಿಎ ಓದುತ್ತಿದ್ದೆ. ಸಮೃದ್ಧ ಬೇಸಿಗೆಯ ರಾಯಚೂರಿನವನಾದ ನನಗೆ ಅಲ್ಲಿಯ ಬಿಟ್-ಬಿಟ್ಟು ಬರುವ ಮಳೆ, ಕಾಂಪೌಂಡಿನೊಳಗಿನ ದಾಸಾಳೆ, ತೆಂಗಿನ ಪೊದೆಯಲ್ಲಿ ತಲೆಯೆತ್ತುವ ಗುಲ್‌ಮೊಹರ್, ಹಳೆಯ ದೊಡ್ಡ ಕಟ್ಟಡದೊಳಗಿನ ಕಾವ್ಯದ ತರಗತಿ ಎಲ್ಲ ಹೊಸತು. ಹಾಗೆ ಅಲ್ಲಿಯ ಭಾಗದ ಹುಡುಗ-ಹುಡುಗಿಯರು ಮತ್ತು ಅವರ ಖಯಾಲಿ ಕೂಡ. ಪ್ರಕೃತಿಯ ಪಲ್ಲಟದಿಂದ ಮನುಷ್ಯರಲ್ಲಿ ಆಗುವ ಮಾನಸಿಕ, ಬೌದ್ಧಿಕ ಮತ್ತು ದೈಹಿಕ ಮಾರ್ಪಾಡುಗಳ ಅರಿವು ನನಗಾದದ್ದು ಅಲ್ಲಿಯೇ. ಕಂಡಿದ್ದೆಲ್ಲವೂ ಕಲರ್‌ಫುಲ್! ಒಳಗೊಳಗೆ ಎಂಥದ್ದೋ ಮಿಸುಕಾಟದ ಅನುಭವ. ಹಾಸ್ಟೆಲಿನ ಕಾರಿಡಾರ್‌ನಲ್ಲಿ ಹಾಡು ಗುನುಗುವ ಗಮ್ಮತ್ತು ಭಾವಣಿಯ ಹತ್ತಿ ಆಕಾಶಕ್ಕೆ ಮುಖ ಮಾಡಿ 'ಅವಳ'ನ್ನು ಕಲ್ಪಿಸಿಕೊಳ್ಳುವ, ಇದ್ದಕ್ಕಿದ್ದಂತೆ ಮತ್ತೆ ಖಿನ್ನನಾಗೋದು, "ಇದು ತಪ್ಪು ನಿಲ್ಲಿಸಬೇಕು" ಎಂದು ಪದೇ-ಪದೇ ಮನಸ್ಸಿಗೆ ಹೇಳಿಕೊಳ್ಳುವ ವಿಫಲ ಯತ್ನಗಳು ನಡೆದಿದ್ದ ಕಾಲವದು.



ಇಂತಹ ಹೊಯ್ದಾಟದ ದಿನಗಳಲ್ಲಿ ಪಠ್ಯದೆಡೆಗೆ ಹೆಚ್ಚಿನ ಆಸ್ಥೆ ವಹಿಸುತ್ತಿರಲಿಲ್ಲ ಅಥವಾ ಬರಿ ಪರೀಕ್ಷೆಗೋಸ್ಕರ ಓದಿ ಹೆಚ್ಚಿನ ಅಂಕ ಗಳಿಸುವ ಮೂಲಕ "ಮಾರ್ಕ್ಸ್"ವಾದಿ ಆಗಬಾರದೆಂಬ ನಂಬಿಕೆಯಿದ್ದಿರಬೇಕು. ಹೀಗಾಗಿ ಸಂಜೆ ಹಾಸ್ಟೆಲ್ ಕೋಣೆಗಳಿಂದ ಬಿಡುಗಡೆಯಾಗಿ ನಿರುದ್ದೇಶಿಯಾಗಿ ಸುಭಾಷ್ ರೋಡ್, ಕೆಸಿ ಪಾರ್ಕ್ ಸುತ್ತುತ್ತಿದ್ದೆ. ಒಮ್ಮೆ ಜುಬಿಲಿ ಸರ್ಕಲ್‌ನ ಹತ್ತಿರದ ಹಳೆ ಪುಸ್ತಕದಂಗಡಿಗಳ ಎದುರು ಹಾದುಹೋಗಬೇಕಾದರೆ ಲಂಕೇಶರ ಚಿತ್ರವಿದ್ದ "ಟೀಕೆ-ಟಿಪ್ಪಣಿ ಹತ್ತೊಂಬತ್ತು ವರ್ಷದ ಕೆಲವು ಬರಹಗಳು" ಪುಸ್ತಕ ಕಣ್ಣಿಗೆ ಬಿತ್ತು, ಅದರ ಹೊದಿಕೆಯ ಮೇಲೆ ಮತ್ತೊಂದು ಹೊದಿಕೆಯಾಗುವಷ್ಟು ಧೂಳಿತ್ತು, ಪುಸ್ತಕ ಮಾರುವವನೊಂದಿಗೆ ಚೌಕಾಶಿ ಮಾಡಿ ಅದನ್ನು ಜೇಬಿನಲ್ಲಿದ್ದ ಹದಿನೈದು ರೂಪಾಯಿ ಕೊಂಡುಕೊಂಡೆ.

ಟೀಕೆ-ಟಿಪ್ಪಣಿಯ ಕವರ್‌ಪೇಜ್ ತಿರುವುತ್ತಿದ್ದಂತೆ ಆದರ ಮೊದಲ ವಾರಸುದಾರ ಸ್ವಾಮಿ, ಪತ್ರಿಕೋದ್ಯಮ ವಿದ್ಯಾರ್ಥಿ, ಕೊಟ್ಟೂರು ಎಂದು ಕೆತ್ತಿಸಿದ್ದ. ಪರಿವಿಡಿಯ ಒಂದೊಂದೇ ವಿಷಯ ಓದುತ್ತಿದ್ದರೆ ಏನೋ ಚೆಂದ. 'ಫ್ರಾನ್ಸಿನ ನಳನಳಿಸುವ ಗುಲಾಬಿ-ಮಿತ್ತೆರಾಂದ್', 'ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ', 'ಕವಿಯೊಬ್ಬನ ನೆನಪು', 'ಕಣ್ಮರೆಯಾದ ಗ್ರಾಮಗಳು', 'ನಲ್ಲ ನಲ್ಲೆಯರ ನಡುವೆ', 'ಮತ್ತೆ ಚೆಮ್ಮೀನ್ ಓದಿದಾಗ', 'ತರುಣ ಸಾಹಿತಿಗಳ ಕುರಿತು', 'ಮತ್ಸ್ಯಕನ್ಯೆಯರು ನನಗಾಗಿ ಹಾಡುತ್ತಿಲ್ಲ' ಮತ್ತು 'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ'ದಂತಹ ಪ್ರತಿ ಲೇಖನಗಳು ನನ್ನನ್ನು ಪುಲಕಗೊಳಿಸಿದವು. ಓದುತ್ತಿದ್ದವನು ನಡು-ನಡುವೆ ಅಬ್ಬ! ಎಂಥ ಅದ್ಭುತ ಸಾಲು ಎಂದು ನಗು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಕ್ಕೆ, ಇತರರಿಗೆ ಕಿರಿ-ಕಿರಿಯೆನಿಸಿ ಅವರೆಲ್ಲಾ ನನ್ನನ್ನು ಟೀಕಿಸಿದರು.

ವಿಶೇಷವಾಗಿ ನನ್ನನ್ನು ಚಕಿತಗೊಳಿಸಿದ್ದು 'ಹದಿಹರೆಯದವರ ಕುರಿತು' ಮತ್ತು 'ಮನ್ಮಥನ ಆಗಮನ ಕುರಿತು' ಟಿಪ್ಪಣಿಗಳು. ನನ್ನೊಳಗಿನ ಏಕಾಂಗಿತನದ, ಗೊಂದಲಗಳ, ಲೈಂಗಿಕ ಸೆಳೆತಗಳ, ಚಿತ್ರ-ವಿಚಿತ್ರ ಭಾವನೆಗಳ ದಿಗ್ಭ್ರಮೆಯ ದಿನಗಳವು. ಆಗ ನನಗೆ ಗೆಳೆಯನಾಗಿ, ಮಾಸ್ತರನಾಗಿ ಮತ್ತು ಒಬ್ಬ ವೈದ್ಯನಾಗಿ ಸಿಕ್ಕಿದ್ದು ಲಂಕೇಶರ ಈ ಟಿಪ್ಪಣಿಗಳು. ನನ್ನೊಳಗೆ ಪ್ರತಿನಿತ್ಯ ಏಳುತ್ತಿದ್ದ "ನಾನೇನು ಆಗಬೇಕು?" ಎಂಬ ಪ್ರಶ್ನೆಗೆ ಮತ್ತೆ-ಮತ್ತೆ ಇವುಗಳನ್ನು ಓದಿಕೊಂಡೆ. ಏಕೆಂದರೆ ಇಂತಹ ತೀರ ವೈಯುಕ್ತಿಕವೆನಿಸುವ ಸಹಜ ಬೆಳವಣಿಗೆಗಳು ಯಾರಿಗಾದರೂ ತಿಳಿದೀತು ಎಂಬ ಭಯ ಮತ್ತು ಯಾರೊಂದಿಗೂ ಹೇಳಿಕೊಳ್ಳದಿರುವ ಸಮಯಕ್ಕೆ ಲಂಕೇಶರ "ನೀನು ಎಲ್ಲೆಲ್ಲೂ ಇದ್ದಿ, ಹದಿಹರೆಯದ ಸೆಡುವು ತುಂಬಿದ ಕೋಮಲ ಜೀವದ ಕುಡಿಯೆ..." ಸಾಲು ನಿಜಕ್ಕೂ ನನಗಾಗಿಯೇ ಬರೆದವು ಎಂದುಕೊಂಡೆ. ಹೀಗೆ ಅಂದುಕೊಳ್ಳುತ್ತಲೇ ಸಹಪಾಠಿಗಳೊಂದಿಗೆ ಹೋಲಿಸಿಕೊಳ್ಳುವ, ಓರೆಗೆ ಹಚ್ಚಿ ನೋಡುವ ಚಾಳಿ ಬೆಳೆಸಿಕೊಂಡೆ. ಇದರಿಂದ ನನ್ನೊಳಗೆ ಸೂಕ್ಷ್ಮಜ್ಞ, ಮಿಸುಕಾಡುತ್ತಿದ್ದುದ್ದನ್ನು ಬರೆದಿಡುವ, ಬಿಡಿಸಿಡುವ ಮತ್ತು ನಟಿಸುವ ಮೂಲಕ ಹೊರಬಿದ್ದ, ಆ ಪರೀಕ್ಷೆ ದಿನಗಳಲ್ಲೂ ಲಂಕೇಶರನ್ನು ಓದುತ್ತಾ ಕೂತೆ. ನನ್ನಷ್ಟಕ್ಕೆ ನಾನೇ ನಕ್ಕೆ. ಸ್ವಲ್ಪ ದಿನದಲ್ಲೆ ತಲೆಯ ಗೋದಾಮಿನ ತುಂಬ ಲಂಕೇಶರ ಬರಹದ ಘಮ ತುಂಬಿತು.

ಆದರೆ ನನ್ನೊಳಗೆ ಇಂದಿಗೂ ಅನುರಣಿಸುವ ಹದಿಹರೆಯದ... ಟಿಪ್ಪಣಿಯ "ನೀನು ಜಾಣನಾಗಿದ್ದರೆ ಈಗಾಗಲೇ ಅನ್ನಿಸಿರುತ್ತದೆ: ಮನುಷ್ಯ ಎಷ್ಟೊಂದು ವೇಳೆಯ ಬಂಧಿ ಅಲ್ಲವೆ? ನೀನರಿಯದಂತೆಯೇ ಶೈಶವಕ್ಕೆ ಕಾಲಿರಿಸಿದ ನೀನು-ಯೌವನಕ್ಕೆ ಧಾವಿಸುತ್ತೀ, ವೇಳೆ ನಿನ್ನನ್ನು ನಿರ್ಮಿಸಬಲ್ಲದು ಅಥವಾ ನಿರ್ನಾಮ ಮಾಡಬಲ್ಲದು. ಆದ್ದರಿಂದ ಕಾಲವನ್ನು ಗಂಭೀರವಾಗಿ ಪರಿಗಣಿಸುವುದನ್ನು ನೀನು ಕಲಿಯಬೇಕು. ನಾನು ಹೇಳುತ್ತಿರುವುದು ಓದುವ, ಆಡುವ, ಸುಮ್ಮನೆ ಇರುವ ಕಾಲ ಮಾತ್ರವಲ್ಲ; ನಾವು ನಮಗೆ ಕೊಟ್ಟುಕೊಂಡ ಕಾಲ, ಇತರರಿಗೆ ಕೊಟ್ಟ ಕಾಲ, ಇತರೆ ಎಲ್ಲ ಮೌಲ್ಯಗಳಿಗೆ ಅರ್ಪಿಸುವ ಕಾಲ..." ಸಾಲುಗಳೇ ಲಂಕೇಶರನ್ನು ಸದಾ ಮೇಷ್ಟ್ರುವಿನ ಸ್ಥಾನದಲ್ಲಿಟ್ಟು ನೋಡುವಂತಾಗಿಸಿದೆ.

ಮುಂದೆ ಇದು ಪತ್ರಿಕೋದ್ಯಮ ಆಯ್ದುಕೊಳ್ಳಲು ಪ್ರೇರೇಪಿಸಿತು. ಅಲ್ಲದೆ ಈಗ 'ಲಂಕೇಶ ಪತ್ರಿಕೆ' ಕುರಿತೇ ಸಂಶೋಧನೆ ಮಾಡುತ್ತಿದ್ದೇನೆ. ಲಂಕೇಶರನ್ನು ಸಾಕ್ಷಿ ಪ್ರಜ್ಞೆ, ರಾವಣ, ಜಗಳಗಂಟ, ವ್ಯಕ್ತಿವಾದಿ ಹೋರಾಟಗಾರ ಏನಾದರು ಅನ್ನಿ. ಆದರೆ ಕೆಲವರ ವ್ಯಕ್ತಿತ್ವವನ್ನು ಇಡಿಯಾಗಿ ಹಿಡಿದಿಡುವುದಕ್ಕೆ ಆಗುವುದೇ ಇಲ್ಲ. ಈ ಟಿಪ್ಪಣಿಯ ಆರಂಭದಲ್ಲಿ ಬೋದಿಲೇರನ ಕುರಿತು ಪಾಲ್ ವ್ಯಾಲೆರಿ ನುಡಿದ ಮಾತು ಎಷ್ಟು ಸತ್ಯವೋ ಲಂಕೇಶರ ವಿಷಯದಲ್ಲೂ ಅಷ್ಟೇ ಸಮಂಜಸ.

- ರಮೇಶ ಅರೋಲಿ, ಹೈದರಾಬಾದ್

...ಮುಪ್ಪಿಲ್ಲದ ಅಪರೂಪದ ಚಿಂತಕ, ಚಿರಯುವಕ...

ನಾವು ಆಗಷ್ಟೇ ಪಿಯುಸಿ ಮುಗಿಸಿ ಪದವಿ ...ತಿಗಳ ಕಡೆಗೆ ಮುಖಮಾಡಿದ್ದ ದಿನಗಳವು. ಆಗ ...ಪ್ಪ ಯಾವಾಗಲೂ ಲಂಕೇಶ್ ಪತ್ರಿಕೆ ತರಿಸುತ್ತಿದ್ದರು. ... ಆಗ ಕೇವಲ ಕುತೂಹಲದಿಂದ ಪತ್ರಿಕೆ ...ವುದಕ್ಕೆ ಪ್ರಾರಂಭಿಸಿದೆವು. ನಂತರ ಪತ್ರಿಕೆ ನಮ್ಮ ...ವನದ ಒಂದು ಭಾಗವೇ ಆಗಿ ಹೋಯಿತು. ...ನಿಂದ ಇಂದಿನವರೆಗೂ ಲಂಕೇಶರಿಂದ, ಲಂಕೇಶ್ ...ಕೆಯಿಂದ ನಾವು ಪಡೆದುಕೊಂಡದ್ದು ತುಂಬಾ ...ಮೌಲ್ಯವಾದದ್ದು ಬೆಲೆಕಟ್ಟಲಾಗದ್ದು.

...ಲಂಕೇಶ್ ಅವರೊಬ್ಬ ಅಸಾಧಾರಣ ಸಾಹಿತಿ, ...ರ್ಶಕ, ಚಲನಚಿತ್ರ ನಿರ್ದೇಶಕ ...ರೂ ಅವರು ನಮ್ಮ ಹೃದಯವನ್ನು ...ಟ್ಟಿದ್ದು ಮಾತ್ರ ಪತ್ರಕರ್ತರಾಗಿ. ...ಕೇಶ್ ಪತ್ರಿಕೆಯಲ್ಲಿ ಅವರು ...ಯುತ್ತಿದ್ದ ಟೀಕೆ-ಟಿಪ್ಪಣಿ, ಮರೆಯುವ ...ನ್ನ, ನೀಲು ಕವನ, ನಿಮ್ಮಿ ಕಾಲಂ- ... ಮೆಚ್ಚಿನ ಕಾಲಂಗಳು. ಲಂಕೇಶ್ ...ಕಾಲಂಗಳ ಮೂಲಕವೇ ಬಹುತೇಕ ...ಷಯಗಳನ್ನು ಸ್ಪರ್ಶಿಸಿರುವುದು, ...ರ್ತಿಸಿರುವುದು ಎಂಬುದು ಸುಳ್ಳಲ್ಲ. ...ರ ಬರವಣಿಗೆಯಲ್ಲಿ ಕಂಡುಬರುತ್ತಿದ್ದ ...ರ್ಯ, ದಿಟ್ಟತನ, ನಿಷ್ಠುರತೆ, ಪ್ರಾಮಾಣಿ... ಸೂಕ್ಷ್ಮತೆ, ಸಾಮಾಜಿಕ ಕಳಕಳಿ, ...ನೋಟ, ದೂರದೃಷ್ಟಿ... ನಮಗೆ ...ರ್ಶ ಎನಿಸುತ್ತಿತ್ತು, ಮಾತ್ರವಲ್ಲ, ನಮ್ಮ ...ವನ್ನು ರೂಪಿಸಿದೆ ಎಂದು ಹೇಳಲು ...ಹೆಮ್ಮೆ ಎನಿಸುತ್ತದೆ. ಸತ್ಯವಾಗಿಯೂ ಇಂದಿಗೂ ... ಅನ್ಯಾಯವನ್ನು ಪ್ರತಿಭಟಿಸುವ ಮನಸ್ಸಿದ್ದರೆ ... ಮುಖ್ಯ ಪ್ರೇರಣೆಯೇ ಲಂಕೇಶ್.



...ಹಾಗೆಯೇ ಬರವಣಿಗೆಯ ವಿಷಯಕ್ಕೆ ಬಂದಾಗ ...ಶರಿಗೆ ಅವರೇ ಸಾಟಿ. ಲಂಕೇಶರಿಗಿದ್ದ ಆಳವಾದ ...ತು ಜ್ಞಾನ, ಪ್ರತಿಭೆ, ಸೂಕ್ಷ್ಮತೆ, ಸಹಜತೆ, ಹಾಸ್ಯ ... ಸೌಂದರ್ಯಪ್ರಜ್ಞೆ, ಜೀವನೋತ್ಸಾಹ ...ಮಿತವಾದದ್ದು. ಅವರ ಈ ಒಂದೊಂದು ...ಗಳೂ ಸೂಕ್ಷ್ಮವಾದ ಮನಸುಗಳನ್ನು ನಿರಂತರವಾಗಿ ತಲುಪುತ್ತಿರುತ್ತವೆ, ಹೃದಯವನ್ನು ಶ್ರೀಮಂತಗೊಳಿಸುತ್ತವೆ. ಸಾಹಿತ್ಯವಿರಲಿ, ರಾಜಕೀಯವಿರಲಿ, ಕ್ರೀಡೆಯೇ ಆಗಿರಲಿ ಲಂಕೇಶರು ವಿಷಯಗಳನ್ನು ಒರೆಗೆ ಹಚ್ಚುವ ರೀತಿಯೇ ಅನನ್ಯ. ಅವರಷ್ಟು ಸೂಕ್ಷ್ಮವಾಗಿ, ಹರಿತವಾಗಿ, ತೀಕ್ಷ್ಣವಾಗಿ ಬರೆಯುವ ಪತ್ರಕರ್ತ ಬೇರೊಬ್ಬ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಅದನ್ನು ಸಾಕ್ಷೀಕರಿಸುವಂತೆ ಇಂದಿಗೂ ಪತ್ರಿಕೆಯಲ್ಲಿ 'ಮರೆಯುವ ಮುನ್ನ' ಕಾಲಂ ಅತ್ಯಂತ ಜನಪ್ರಿಯ ಎನಿಸಿದೆ. ಅದರಲ್ಲಿ ಲಂಕೇಶ್ ಯಾವಾಗಲೂ ಅವರು ಓದಿದ ಪುಸ್ತಕಗಳು, ಅಂತರರಾಷ್ಟ್ರೀಯ ಕವಿಗಳು, ರಾಜಕಾರಣಿಗಳು ಹಾಗೂ ವಿಷಯಗಳ ಬಗ್ಗೆ ಬರೆದು ನಮ್ಮನ್ನು ಚಿಂತನೆಗೆ ಹಚ್ಚುತ್ತಾರೆ. ಅಲ್ಲದೇ ನನ್ನನ್ನು ಬಹುವಾಗಿ ಕಾಡುವ ಅವರ ಗುಣಗಳೆಂದರೆ ಅವರ ಮೌನ, ಖಾಸಗಿತನ ಮತ್ತು ಸಂಕೋಚ. ಲಂಕೇಶ್ ಮೌನ ಮತ್ತು ಸಂಕೋಚಗಳನ್ನು ಧ್ಯಾನಿಸುವುದೇ ಸೊಗಸು...

ಹೀಗೆಯೇ ಲಂಕೇಶ್ ಬಗ್ಗೆ, ಅವರು ಕಲಿಸಿದ ಆದರ್ಶಗಳ ಬಗ್ಗೆ ಬರೆಯುವುದಕ್ಕೆ ಕುಳಿತರೆ, ನೀವು ಕೊಟ್ಟ 200 ಪದಗಳು ಏನೇನೂ ಸಾಲುವುದಿಲ್ಲ. ಅಂತಹ ದಿಟ್ಟ, ಧೀಮಂತ, ಛಲಗಾರ, ಮಹಾಮೌನಿ, ನಿಷ್ಠುರವಾದಿ, ಲಂಕೇಶ್ ತೀರಿಕೊಂಡ ದಿನ ನನ್ನ ಅಪ್ಪ ತೀರಿಕೊಂಡ ದಿನ ಹರಿದಷ್ಟೇ ಕಂಬನಿ ಮೌನವಾಗಿ ಹರಿಯಿತು. ಅವರು ಭೌತಿಕವಾಗಿ ದೂರವಾಗಿದ್ದರು. ಆದರೆ ಅವರ ಸಾಹಿತ್ಯದ ಮೂಲಕ, ಲೇಖನಗಳ ಮೂಲಕ, ವಿಚಾರ-ಚಿಂತನೆಗಳ ಮೂಲಕ ಸದಾ ನಮ್ಮ ಮಾರ್ಗದರ್ಶಕರಾಗಿ ನಮ್ಮ ಜೊತೆ ಇದ್ದಾರೆ, ಇರುತ್ತಾರೆ.

ಲಂಕೇಶ್ ಬರೀ ಸಾಹಿತ್ಯ, ಪತ್ರಕರ್ತ ಮಾತ್ರ ಅಲ್ಲ... ಅನೇಕ ಸೂಕ್ಷ್ಮ ಮನಸುಗಳಿಗೆ ಅವರೊಬ್ಬ ಗುರು, ಸ್ನೇಹಿತ, ತತ್ವಜ್ಞಾನಿ, ಮಾರ್ಗದರ್ಶಿ, ಪ್ರೇರಕ... ಎಲ್ಲಾ... ಎಲ್ಲ... ಹಾಗೆಯೇ ಅವರು ಎಂದೆಂದೂ ಸಾವಿಲ್ಲದ, ಮುಪ್ಪಿಲ್ಲದ ಅಪರೂಪದ ಚಿಂತಕ, ಚಿರಯುವಕ....

-ನಾಗರತ್ನ ಎಂ.ನೀಲಸೋಗೆ

ಪೈಲ್ವಾನ್‌ರ ಪೈಲ್ವಾನ ಲಂಕೇಶ್



1991 ರಲ್ಲಿ ಪ್ರಕಟಗೊಂಡ 'ಟೀಕೆ ಟಿಪ್ಪಣಿ' ನಾನು ಓದಿದ ಲಂಕೇಶರಿಂದ ಬರೆಯಲ್ಪಟ್ಟ ಬರಹಗಳ ಮೊದಲ ಪುಸ್ತಕ. ಪತ್ರಿಕೆಯ ಸಾಂಗತ್ಯವಂತೂ ನಿರಂತರವಾಗಿ ಇದ್ದೇ ಇತ್ತು. ಲಂಕೇಶ್‌ರ ದಿಟ್ಟ ನುಡಿ, ನಿಷ್ಪಕ್ಷಪಾತಿ ಬರಹಗಳು ನನ್ನ ಮೇಲೆ ಅಪಾರ ಪ್ರಭಾವ ಬೀರಿದ್ದವು. ಜೊತೆಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಅವರಿಂದ ಮತ್ತು ಪತ್ರಿಕೆಯಿಂದ ಪಡೆದದ್ದು ಬಹಳಷ್ಟಿದೆ. ಧೈರ್ಯ, ಆತ್ಮವಿಶ್ವಾಸ, ಮಾತನಾಡುವ ಕಲೆ, ಸಂವಹನದ ಸೂಕ್ಷ್ಮಗಳು, ಬರಹದ ಒಳಹೊರಗನ್ನು, ಕೋಮುವಾದಿಗಳ ಮನಃಸ್ಥಿತಿಯನ್ನು, ಅವರ ಹುನ್ನಾರಗಳನ್ನು, ಜಾತಿವಾದಿಗಳ ಡೊಂಬರಾಟಗಳನ್ನು, ಅವರ ಹುಸಿನಾಟಕಗಳನ್ನು, ರಾಜಕಾರಣಿಗಳ ಮೊಸಳೆ ಕಣ್ಣೀರನ್ನು, ಗೋಮುಖ ವ್ಯಾಘ್ರತೆಯನ್ನು... ಪಟ್ಟಿ ಇನ್ನೂ ದೊಡ್ಡದಿದೆ.

ಇದೆಲ್ಲದರ ಜೊತೆಗೆ ನಜೀರ್ ಸಾಬರಂತಹ ಸಜ್ಜನ ರಾಜಕಾರಣಿಗಳನ್ನು ಜನರಿಗೆ ಪರಿಚಯಿಸಿದ್ದು, ಸಾರಾ ಅಬೂಬಕ್ಕರಿಗೆ ಪ್ರೋತ್ಸಾಹ ನೀಡಿದ್ದು, ಬಿ. ಟಿ. ರಜಿಯಾ ಮತ್ತು ಬಾನುಮುಷ್ತಾಕರಿಗೆ ಬರೆಯಲು ಪ್ರೇರೇಪಿಸಿದ್ದು, ಸಾವಿರಾರು ಜನರಿಗೆ ಸ್ಫೂರ್ತಿಯನ್ನು ನೀಡಿದ್ದು, ಸ್ವತಃ ತಾವೇ 'ನೀಲು'ವಾಗಿ ಓದುಗರಿಗೆ ಕೀಟಲೆ ನೀಡಿದ್ದು ಒಂದೇ ಎರಡೆ ಲಂಕೇಶರು ಮಾಡಿದ್ದು, ಅವರು ನಿರಂತರವಾಗಿ ಬರೆಯುತ್ತ ಹೋದರು. ಅವುಗಳನ್ನು ನಾವು ಓದುತಾ ಬೆಳೆದೆವು. ಹೊಸ ಹೊಸ ವಿಷಯಗಳ ಪರಿಚಯಕ್ಕೆ ಹಂಬಲಿಸುವ ಮನಸ್ಸುಗಳಿಗೆ ಪತ್ರಿಕೆ ಜ್ಞಾನದ ಕಿಟಕಿಯಾಗಿತ್ತು.

ವೃತ್ತಿಯಿಂದ ವೈದ್ಯನಾದ ನನಗೆ ಸಾಹಿತ್ಯದಲ್ಲಿ ಅಮಿತಾಸಕ್ತಿ ಹುಟ್ಟುವಂತೆ ಮಾಡಿದ ಲಂಕೇಶರು ನಮ್ಮಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ತಳಹದಿಯನ್ನೇ ಹಾಕಿದರು. 'ನಾವು ಮತ್ತು ಮುಸ್ಲಿಮರು' ಎಂಬ ಅವರ ಲೇಖನ ನವೆಂಬರ 11, 1990ರ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಅದನ್ನು ಓದಿದಾಗ ಸಮಾಜದ ಸ್ವಾಸ್ಥ್ಯದ ಕುರಿತು ಅವರಿಗಿದ್ದ ಕಳಕಳಿ ಸ್ಪಷ್ಟವಾಗಿತ್ತು. ಬಾಬರಿ ಬಗ್ಗೆ ಬರೆಯುತ್ತ "ಮೊನ್ನೆ ನನ್ನ ಮಿತ್ರರೊಬ್ಬರ ಕುಟುಂಬದೊಂದಿಗೆ ನಿಕಟ ಸಂಪರ್ಕವುಳ್ಳ ಮುಸ್ಲಿಂ ದಂಪತಿಗಳು ತಲೆರೋಸಿ ಹೇಳಿದರು "ಬಾಬ್ರಿ ಮಸೀದಿ ಹೋದರೆ ಹೋಗಲಿ, ಇದರಿಂದ ಹೊಡೆದಾಟ, ರಕ್ತಪಾತ ತಪ್ಪುತ್ತೆ" ಎಂದರು. ಇದನ್ನು ಕೇಳಿದ ನಾನು ಹೇಳಿದೆ "ಇದು ದೇವಾಲಯ - ಮಸೀದೆಯ ಪ್ರಶ್ನೆಯಲ್ಲ, ಜನರ ಆತ್ಮಗೌರವದ, ಸಹಬಾಳ್ವೆಯ, ಸಹನೆ ಮತ್ತು ಪ್ರಚೋದನೆಯ ಪ್ರಶ್ನೆ, ಜಾತಿವಾದ ಮತ್ತು ವೈಚಾರಿಕತೆಯ ಪ್ರಶ್ನೆ. ನೀವು ಸರಳೀಕರಿಸುತ್ತ ಎಂಥ ಅನ್ಯಾಯವನ್ನೂ ಸಹಿಸುತ್ತಾ ಹೋದರೆ ಇಲ್ಲಿ ಮಾನವಂತ ಬದುಕು ಅಸಾಧ್ಯವಾಗುತ್ತದೆ" ಎಂದು ಹೇಳಿದ್ದ ಲಂಕೇಶರ ಮಾತು ಇಂದಿಗೂ ಪ್ರಸ್ತುತವಾಗಿರುವ ವಿಷಯವಲ್ಲವೇ?

ಅವರು ಅಪಾರ ಪ್ರತಿಭೆಯ ಗಣಿಯಾಗಿದ್ದರೂ ಹಳ್ಳಿಯನ್ನು ಮರೆಯದ, ಸಂಸ್ಕೃತಿಯ ಬೇರುಗಳನ್ನು ಅರಿತ, ಬಾಲ್ಯವನ್ನು ಪ್ರೀತಿಸಿದ, ಬದುಕನ್ನು ಧೈರ್ಯದಿಂದ ಎದುರಿಸಿದ, ಸಾವಿರ ಸಾವಿರ ಪೈಲವಾನರನ್ನು ಚಿತ್ತಗೊಳಿಸುವ ಛಾತಿಯನ್ನಿಟ್ಟುಕೊಂಡು ಸೆದ್ದು ಹೊಡೆದ ಪೈಲ್ವಾನ್‌ರ ಪೈಲ್ವಾನ ಲಂಕೇಶ್.

- ಡಾ. ಅಮೀರುದ್ದೀನ ಖಾಜಿ


ಜಾತಿ ಜಗದ್ಗುರುಗಳ ಸರ್ಕಾರ

ಆದಿಚುಂಚನಗಿರಿಯಲ್ಲಿ ಸರ್ವಧರ್ಮ ಸಮ್ಮೇಳನ.

ಜಾತಿಯಿಲ್ಲದ ಧರ್ಮ ಯಾವುದಯ್ಯಾ?

ಸಕಲೆಂಟು ಜಾತಿಯ ಜಗದ್ಗುರುಗಳೂ ಉಪಸ್ಥಿತರಿದ್ದರು.

ಪುಷ್ಕಳವಾದ ಊಟ. ಒಣಚರ್ಚೆ. Beating the bush ಅಂತಾರಲ್ಲ ಹಂಗೆ ಕುಟ್ಟಿದ್ದೇ ಕುಟ್ಟಿದ್ದು. ಹಿಂದೂ ಧರ್ಮ ಉಳೀಬೇಕಲ್ಲ ಅದಕ್ಕೆ.



ಎಚ್.ಎಲ್. ಕೇಶವಮೂರ್ತಿ

ಇಂತಹ ಜಾತಿಜಗದ್ಗುರುಗಳ ಸಾನಿಧ್ಯ ಅಂದ್ರೆ ಯಡ್ಯೂರಪ್ಪನವರಿಗೆ ಆಪ್ಯಾಯಮಾನ. ಅವರೂ ಬಂದಿದ್ದರು. ದಿವ್ಯ ಸಾನ್ನಿಧ್ಯದಲ್ಲಿ ಧರ್ಮಜಾಗೃತಿ ಆಯಿತು. ಸಂಪೂರ್ಣ ಗೋಹತ್ಯೆ ನಿಷೇಧ ಜಾರಿಗೆ ಬರಬೇಕು ಅಂದರು ಜಾತಿ ಜಗದ್ಗುರುಗಳು. ಅರೆ ಇದೇನು ನಮ್ಮ ಪಕ್ಷದ ಪ್ರಣಾಳಿಕೆ ಇದ್ದಂಗದಲ್ಲ ಅಂತ ಅವರಿಗೆ ಬಲೇ ಖುಷಿ ಆಯ್ತು. ಗೋಹತ್ಯಾ ನಿಷೇಧ ಜಗದ್ಗುರುಗಳ ಆಶಯ. ಯಾವುದೇ ಕಾರಣಕ್ಕೂ ಇದನ್ನ ಹಿಂಪಡೆಯುವುದಿಲ್ಲ ಎಂದು ಸಾರಿದರು.

ಇವರೇನು ಮಠಾಧೀಶರ ಪ್ರತಿನಿಧಿಗಳೊ, ಜನಪ್ರತಿನಿಧಿಗಳೊ ಎಂಬ ಅನುಮಾನ ಬೇಡ. ಅವರು ಮಠಾಧೀಶರ ಪ್ರತಿನಿಧಿಯೆ!

ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟಕ್ಕೆ ಕೋಳಿಮಟ್ಟೆ ಕೊಡಲು ಸಿದ್ಧವಾಗಿತ್ತು ಸರ್ಕಾರ. ಜಗದ್ಗುರುಗಳು ಇದು ಬೇಡ ಅಂದರು. ಅವರ ಮಾತಿಗೆ ಇಲ್ಲ ಅಂದವರುಂಟೆ. ಮೊಟ್ಟೆ ನೀಡುವುದಿಲ್ಲ ಎಂದಿತು ಸರ್ಕಾರ.

ಈಗ ಗೋಮಾಂಸ ನಿಷೇಧ. ಜಗದ್ಗುರುಗಳು ನಿಷೇಧ ಬೇಕು ಅಂದರು. ಶಿರಸಾವಹಿಸಿ ಪಾಲಿಸಲು ಸಿದ್ಧ ಅಂತು ಸರ್ಕಾರ.

ಹಲವಾರು ಸಂಘಟನೆಗಳು, ಸಾವಿರಾರು ಜನ ಇದನ್ನು ಪ್ರತಿಭಟಿಸುತ್ತಿದ್ದಾರಲ್ಲ, ಇಂತಹವುಗಳಿಗೆ ಜಗ್ಗುವುದಿಲ್ಲ ಸರ್ಕಾರ. ಇಂತಹ ಲಕ್ಷ ಲಕ್ಷ ಸಂಘಟನೆಗಳಿಗೆ ಒಬ್ಬ ಜಾತಿ ಜಗದ್ಗುರು ಸಮ!

ಹೌದು ಗೋಹತ್ಯಾ ನಿಷೇಧ ಯಾಕೆ ಮಾಡಬೇಕು?

ಯಾಕೆ ಅಂದರೆ ಗೋವು ಪವಿತ್ರ.

ಪವಿತ್ರ ಹೇಗಾಯಿತು?

ಮುವ್ವತ್ತು ಮೂರು ಕೋಟಿ ದೇವರುಗಳ ವಾಸಸ್ಥಾನ ಇದು.

ಯಜ್ಞಗಳಲ್ಲಿ ಗೋವುಗಳನ್ನು ಅರ್ಪಿಸುತ್ತಿದ್ದರಂತಲ್ಲ ಆಗ ಈ ಮುವ್ವತ್ತು ಮೂರು ಕೋಟಿ ದೇವತೆಗಳು ಎಲ್ಲಿ ಹೋಗುತ್ತಿದ್ದರು?

ತಲೆಹರಟೆ ಪ್ರಶ್ನೆ. ಆ ಮಾಯಾವಿಗಳ ಆಟ ಬಲ್ಲವರಾರು? ಎಲ್ಲಿಯೋ ವಾಸಿಸುತ್ತಿದ್ದರು. ಈಗ ಗೋವಿನ ದೇಹ ಸೇರಿದ್ದಾರೆ.

ಕಾನೂನು ತಂದರೆ ಗೋಹತ್ಯೆ ನಿಲ್ಲುವುದೆ?

ನಿಲ್ಲದಿರಬಹುದು. ಮುವ್ವತ್ತು ಮೂರು ಕೋಟಿ ದೇವತೆಗಳ ವಾಸಸ್ಥಾನ ಉಳಿಸುವ ಪ್ರಯತ್ನದ ತೃಪ್ತಿ ಇದೆ.

ಈ ತೃಪ್ತಿಗಾಗಿ ನಿಷೇಧವೆ?

ಆ ದಯಾಮಯನಿಗೆ ನಮ್ಮ ಸದುದ್ದೇಶ ತಲುಪುತ್ತದೆ.

ಭ್ರಷ್ಟಾಚಾರಕ್ಕೆ ಇದು ಪೂರಕ ಆಗುವುದಿಲ್ಲವೆ?

ಆಗಬಹುದು ಎಲ್ಲಿಲ್ಲ ಭ್ರಷ್ಟಾಚಾರ?

ಆಯಿತು. ಅನುಪಯುಕ್ತ ಗೋವುಗಳನ್ನೇನು ಮಾಡಬೇಕು?

ಸಾಕಬೇಕು!

ಹಣ ಬೇಕಲ್ಲ?

ಗೊಬ್ಬರ ಮಾರಿ. ಸತ್ತ ಆಕಳ ಕೊಂಬು, ಚರ್ಮ, ಮೂಳೆ ಮಾರಿ!

ಸಾಕುವ ಖರ್ಚನ್ನು ಇದು ಸರಿದೂಗಿಸಬಲ್ಲುದೆ?

ಖಂಡಿತವಾಗಿ! ಒಂದು ವೇಳೆ ಕಡಿಮೆ ಆದರೂ ಚಿಂತಿಲ್ಲ. ಪವಿತ್ರ ಗೋವನ್ನು ಉಳಿಸುವುದು ಮುಖ್ಯ, ಸ್ವಲ್ಪ ಮಟ್ಟಿನ ತ್ಯಾಗ ಇದಕ್ಕೆ ಅವಶ್ಯಕ.

ಆಹಾರ ಎಲ್ಲಿದೆ?

ಗೋಕಟ್ಟೆ, ಗೋಮಾಳಗಳ ಭೂಕಬಳಿಕೆಯ ಶಾರ್ಕ್‌ಗಳು ನುಂಗಿ ನೊಣೆದಿದ್ದಾರಲ್ಲ?

ಅದು ನಂತರದ ಮಾತು.

ಬಡವರ ಪೌಷ್ಟಿಕ ಆಹಾರ ಇದು.

ಇದಕ್ಕಿಂತಲೂ ಸಸ್ಯಾಹಾರ ಉತ್ತಮ. ಮಾಂಸ ತಿನ್ನುವುದು ಬಾಯಿ ಚಪಲ!

ಒಪ್ಪೋಣವಂತೆ. ಉಪ್ಪು, ಸಕ್ಕರೆ ಆರೋಗ್ಯಕ್ಕೆ ಹಾನಿಕಾರಿ. ಆದರೂ ಬಳಸುತ್ತೇವೆ ಏಕೆ? ಬಾಯಿ ಚಪಲದಿಂದ ತಾನೆ? ಅದನ್ನೂ ವರ್ಜಿಸಬೇಕಲ್ಲ?

ಅದನ್ನೂ ಬಿಡಿ.

ಆಯಿತು. ಬೇಯಿಸಿದ ಆಹಾರಕ್ಕಿಂತ ಹಸಿ ಆಹಾರ ಉತ್ತಮ. ಹಸಿ ಹಸಿದನ್ನೇ ತಿನ್ನಬೇಕಲ್ಲ? ಯಾಕೆಂದರೆ ಆರೋಗ್ಯ ಮುಖ್ಯ ನೋಡಿ!

ಅಂದರೆ ಶಿಲಾಯುಗಕ್ಕೆ ಪಯಣ ಬೆಳೆಸಬೇಕು!

****

ಒಬ್ಬರು ಒಂದು ಪ್ರಶ್ನೆ ಕೇಳಿದರು.

ಅನುಪಯುಕ್ತ ಜಾನುವಾರುಗಳನ್ನು ಸಾಕುವುದು ತೊಂದರೆ.

ಒಂದು ಮದುವೆ ಹಬ್ಬ ಅಂತ ಪರ ಊರಿಗೆ ಹೋದರೂ 'ದನಕರ ಬಡೋರಿಲ್ಲ ಹಟ್ಟೀಲೇ ಸಾಯ್ತವೆ' ಅಂತ ಓಡಿಬರಬೇಕು. ಮನೆಯಲ್ಲಿ ಒಬ್ಬರು ಯಾವಾಗಲೂ ಇದ್ದೇ ಇರಬೇಕು. ಎರಡು, ಅವುಗಳನ್ನು ಸಾಕುವುದು ದುಬಾರಿ.

ಅದಕ್ಕೇ ಸರ್ಕಾರ ಅನ್ನೋದು ವಯಸ್ಸಾದವರಿಗೆ ವೃದ್ಧಾಪ್ಯ ವೇತನ ಅಂತ ನೀಡುತ್ತಲ್ಲ ಹಾಗೇ ಜಾನುವಾರುಗಳಿಗೂ ವೃದ್ಧಾಪ್ಯವೇತನ ನೀಡುತ್ತಾರಾ ಅಂತ!

ಅದು ಹ್ಯಾಗ್ರಿ ಕೊಡೋಕಾಗುತ್ತೆ, ಬೇಕಿದ್ದರೆ 'ಪಿಂಜ್ರಾಪೋಲು' ಅನ್ನೊ ಹೆಸರಲ್ಲಿ ಹಣ ನುಂಗಕ್ಕೆ ದಾರಿ ತೋರಿಸಬಹುದು!

****

ಅವರವರ ಕಷ್ಟ ಅವರವರಿಗೆ.

ಸಂಪೂರ್ಣ ಗೋಹತ್ಯೆ ನಿಷೇಧ ಬೇಕು ಎನ್ನುತ್ತಿದೆ ಭಾಜಪ.



ವಿಪಕ್ಷಗಳೇನು ಮಾಡಬೇಕು?

ಸಂಪೂರ್ಣ ಗೋಹತ್ಯೆ ನಿಷೇಧ ಬೇಡ ಎನ್ನಬೇಕು.

ಆಡಳಿತ ಪಕ್ಷದವರು ಮಾಡ್ತೀವಿ ಅಂದದ್ದನ್ನು ವಿಪಕ್ಷಗಳು ಬೇಡ ಅನ್ನೋ ಪರಂಪರೇನೆ ಇದೆಯಲ್ಲಾ.

ಇದು ಜೆನ್ಯೂನ್ ಕೇಸು.

ಸಂವಿಧಾನ ಉಲ್ಲಂಘನೆ ಮಾಡಿ ಆಹಾರದ ಹಕ್ಕನ್ನೇ ಕಿತ್ತುಕೊಳ್ಳಲು ಹೊರಟಿದೆ ಸರ್ಕಾರ. ಆದರೂ ಪ್ರತಿಭಟನೆ ಸೋಲಲ್ಲ ಯಾಕೆ?

ಪ್ರತಿಭಟನೆ ಮಾಡಬಾರದು ಅಂತಲ್ಲ, ಆದರೇನು ಮಾಡ್ತೀರಿ ಎಲ್ಲಿ ಹೀಗೆ ಮಾಡಿದರೆ ಲಿಂಗಾಯತ, ಬ್ರಾಹ್ಮಣ ಮತದಾರ ಮುನಿಸಿಕೊಳ್ತಾನೊ, ಜಾತಿ ಜಗದ್ಗುರುಗಳು ಎಲ್ಲ ತಿರುಗಿಬೀಳ್ತಾರೋ ಅನ್ನೋ ಯೋಚನೆಯಂತೆ ಪಾಪ!

ಬ್ರೇಕಿಲ್ಲದ ಸೈಕಲ್ ಮಾರಿ

ಮೈಮೇಲೆ ದೆವ್ವ ಬರೋದಿಲ್ವ ಹಾಗೆ ನಮ್ಮ ನಾಯಕರುಗಳಿಗೆ ಇದ್ದಕ್ಕಿದ್ದಂತೆ ಏನೋ ಬದ್ಕಳುತ್ತೆ ಅಂತ ಕಾಣ್ಸುತ್ತೆ. ಏನೇನೋ ಭ್ರಮೆಗಳು ಮಿದುಳಿನಲ್ಲಿ ನಾಟ್ಯ ಆಡುಕ್ಕೆ ಪ್ರಾರಂಭಿಸುತ್ತವೆ.

ಅದು ಇಂದಿರಾ ಗಾಂಧಿ ಜಮಾನ. ಇದ್ದಕ್ಕಿದ್ದಂತೆ ಪೆಟ್ರೋಲ್ ದರ ಏರಿಸಿದರು. ಆಗ ಎಸ್.ಎಂ. ಕೃಷ್ಣ ರಾಜ್ಯದ ಕೈಗಾರಿಕಾ ಮಂತ್ರಿ ಆಗಿದ್ದರು. ಅವರೇನು ಯೋಚಿಸಿದರಪ್ಪ ಅಂದರೆ, ಆಹಾ ಸರ್ಕಾರ ಮಿತವ್ಯಯ ಸಾಧಿಸಬೇಕು, ಪರಿಸರ ಉಳಿಸಬೇಕು ಅಂತ ಚಿಂತಿಸಿದರು. ತಮ್ಮ ನಿವಾಸದಿಂದ ವಿಧಾನಸೌಧಕ್ಕೆ ಬೈಸಿಕಲ್ಲಿನಲ್ಲಿ ಬಂದರು. ಮಿತವ್ಯಯ ಮಾಡಬೇಕಲ್ಲ ಅದಕ್ಕೆ. ಇದು ಫಂದಾರಿ ಘಟನೆಯಲ್ವಾ. ಪತ್ರಿಕೆಗಳಲ್ಲಿ ಸೈಕಲ್ ಮೇಲಿನ ಕೃಷ್ಣ ಫೋಟೋ ಸಹಿತ ರಾರಾಜಿಸಿದರು. ಈ ಸೈಕಲ್ ಸವಾರೀಲಿ ಏನಾಗಿತ್ತಪ್ಪ ಅಂದರೆ.... ಅವ್ರು ಮಂತ್ರಿ ಅಲ್ವಾ ಅದ್ಕೇ ಬೆಂಗಾವಲು ಇರಬೇಕಲ್ವಾ.... ಅವರೆಲ್ಲ ಸೈಕಲ್ ಹಿಂದ್‌ಹಿಂದೇನೆ ಕಾರಿನಲ್ಲಿ ಬಂದಿದ್ದರು!

ಇದು ಯಾಕಪ್ಪ ಈಗ ಅಂದರೆ ಭಾಜಪದವರಿಗೂ ಪರಿಸರ ಪ್ರೇಮ ಅನ್ನೋದು ಉಕ್ಕಿ ಹರೀತಿದೆ. ಇತ್ತೀಚೆಗೆ ಇಂದೂರಿನಲ್ಲಿ ಅವರ ಸಮ್ಮೇಳನ ನಡೀತಲ್ಲ, ಎಲ್ಲರಿಗೂ ಸಭೆ ನಡೆಯುತ್ತಿದ್ದ ಆವರಣದಲ್ಲೇ ವಾಸಕ್ಕೂ ಟೆಂಟ್‌ಗಳಲ್ಲಿ ವ್ಯವಸ್ಥೆ ಮಾಡಿದ್ದರಂತೆ. ಅದ್ಯಾಕೋ ಅಲ್ಲಿರಲು ಯಡ್ಯೂರಪ್ಪನವರಿಗೆ ಮನಸ್ಸು ಒಪ್ಪಲಿಲ್ಲವಂತೆ. ಸಮೀಪದ ಐಷಾರಾಮಿ ಹೋಟಲಿನಲ್ಲಿ ತಂಗಿದ್ದರಂತೆ.

ತಂಗಲಿ ಪಾಪ. ಅದಲ್ಲ ವಿಷಯ. ಅವರು ಹೋಟೆಲಿನಿಂದ ಸಭಾಂಗಣಕ್ಕೆ ಬರಬೇಕಿತ್ತಲ್ಲಾ, ಪರಿಸರ ಪ್ರೇಮದ ಬವಳಿ ಬಂತಂತೆ. ಸೈಕಲ್ ಮೇಲೆ ಹೋದರಂತೆ. ಯಥಾಪ್ರಕಾರ ಮುಖ್ಯಮಂತ್ರಿಗಳಿಗೆ ಇರಬೇಕಾದ ಬೆಂಗಾವಲು ಸಿಬ್ಬಂದಿ ಕಾರಿನಲ್ಲೇ ಸೈಕಲ್ ಹಿಂದೆಹಿಂದೇನೆ ಬಂದಿರಬೇಕು. ಅದಲ್ಲ ವಿಷಯ. ಅಲ್ಲಿ ಏನಾಗಿತ್ತಪ್ಪ ಅಂದ್ರೆ, ಅವರ ಸೈಕಲ್‌ಗೆ ಬ್ರೇಕೇ ಇರಲಿಲ್ಲವಂತೆ!

ಈವಯ್ಯ ಬ್ರೇಕಿಲ್ಲದೆ ಬಂಡಿ ಬಿಡ್ತಾನೆ ನಿಜ. ಹಾಗಂತ ಸೈಕಲ್ಲಿಗೂ ಬ್ರೇಕ್ ಇಲ್ಲದಂತೆ ಮಾಡಿ ಅವಮಾನಗೊಳಿಸುವುದು ತರವಲ್ಲ ಬಿಡಿ.

ನನ್ನ ಕಾವ್ಯ ಕಳೆದುಹೋಗಿದ್ದಾಳೆ!


ನನ್ನ ಕಾವ್ಯ
ಕಳೆದುಹೋಗಿದ್ದಾಳೆ
ಹೊಸ ಚಿಗುರು-ಹೂ-ಹಣ್ಣಲ್ಲಿ
ಚುಕ್ಕಿ-ಚಂದ್ರಮರ ಬೆರಗು ಕಣ್ಣಲ್ಲಿ

ಪ್ರಕೃತಿ ಪ್ರೀತಿಗೆ
ಜೆಹಾದ್ ಹೆಸರಿಟ್ಟು
ಬದುಕಿಗೆ ಬೆಂಕಿ ಇಕ್ಕುವ
ರಕ್ಕಸರ ದುಃಸ್ವಪ್ನದಲ್ಲಿ
ನನ್ನ ಕಾವ್ಯ ಕಳೆದುಹೋಗಿದ್ದಾಳೆ.

ಜುಟ್ಟು-ಜನಿವಾರ ಎನ್ನುತ್ತ
ಅಪ್ಪ ಹೊತ್ತು ತಿರುಗುವ
ಜಾತಕದ ಜಾಲದಲ್ಲಿ
ಅಮ್ಮ ಮಾಡಿಸಿಟ್ಟ
ಧರ್ಮ-ಸಂಕಟದ ಮುತ್ತಿನೋಲೆಯಲ್ಲಿ
ನನ್ನ ಕಾವ್ಯ ಕಳೆದುಹೋಗಿದ್ದಾಳೆ.


ನನ್ನೂರ ಸರ್ಕಲ್ಲಿನಲ್ಲಿ
ಸರ್ಕಸ್ ಮಾಡುವ
ಪದ್ದೆ ರಾಮರ ಕಣ್ಣೋಟದಲ್ಲಿ
ಬಣ್ಣ ಕಳೆದುಕೊಂಡ
ಬೆಣ್ಣೆ ಬಟರ್‌ನಲ್ಲಿ
ನನ್ನ ಕಾವ್ಯ ಕಳೆದುಹೋಗಿದ್ದಾಳೆ

ನನ್ನ ಕಾವ್ಯ
ನಟ್ಟ ನಡುರಾತ್ರಿಯಲ್ಲಿ
ಚಿಟ್ಟನೆ ಚೀರುತ್ತ
ಚಿಮಣಿ ಹಚ್ಚುತ್ತಾಳೆ
ಯಾರೋ ತನ್ನ
ಹಚ್ಚ ಹಸಿರಿನ ಸೀರೆ-ಚುಕ್ಕಿ ಕುಪ್ಪಸ
ಕದಿಯಲು ಕಾತರಿಸುತ್ತಿದ್ದಾರೆಂಬ
ತಹತಹದಲ್ಲಿ
ನನ್ನ ಕಾವ್ಯ ಕಳೆದುಹೋಗಿದ್ದಾಳೆ!!



● ವಿವೇಕಾನಂದ ತಾಂಡೇಲ





ವಿಷ್ಣು entry-exit

"ಒಬ್ಬ ಕಲಾವಿದನ entry ಮತ್ತು exit ಇವೆರಡೂ ಅಮೋಘವಾಗಿರಬೇಕು. ನನಗೆ ಅಂತಹದ್ದೊಂದು ಆಸೆ ಬಿಟ್ಟರೆ ಬೇರೇನೂ ಇಲ್ಲ" ಎಂದು ಹೇಳುತ್ತಿದ್ದದ್ದು ಬೇರಾರೂ ಅಲ್ಲ; ಇತ್ತೀಚೆಗಷ್ಟೇ ದಿಢೀರನೇ ನಮ್ಮನ್ನಗಲಿದ ವಿಷ್ಣುವರ್ಧನ್. "ಈ ಚಿತ್ರದ ಯಶಸ್ಸಿನ ಬಗ್ಗೆ ನಿಮಗೇನಿಸುತ್ತದೆ" ಎಂದು ನಾವು ಅವರ ಚಿತ್ರವೊಂದು ಗೆದ್ದಾಗ ಪ್ರಶ್ನಿಸಿದಾಗಲೆಲ್ಲ ವಿಷ್ಣು ಮೇಲಿನಂತೆ ಫಿಲಾಸಫಿಕಲ್‌ಆಗಿ ಉತ್ತರಿಸುತ್ತಿದ್ದರು.


ವಿಷ್ಣು ಅವರ ಆ ಮಾತುಗಳು ಈಗ ನೆನಪಿಗೆ ಬರಲು ಕಾರಣ 'ಆಪ್ತರಕ್ಷಕ' ಬಾಕ್ಸಾಫೀಸ್‌ನಲ್ಲಿ ಜಯ ಭೇರಿ ಬಾರಿಸುತ್ತಿರುವುದು. ಒಂದು ...ಬದ ಪ್ರಕಾರ ಇದು 'ಮುಂಗಾರು ಮಳೆ' ಸೃಷ್ಟಿಸಿದ್ದ ದಾಖಲೆಯನ್ನೂ ...ದು ಮುನ್ನುಗ್ಗುವ ಸಾಧ್ಯತೆಗಳಿವೆ ಯಂತೆ. ಆದರೆ ಮುಂಬರುವ ...ಳಲ್ಲಿ ನಡೆಯಲಿರುವ ಎಸ್ಸೆಸ್ಸೆಲ್ಸಿ ಮತ್ತು ಪಿಯು ಪರೀಕ್ಷೆಗಳ ...ಮವನ್ನು ಅವಲಂಬಿಸಿದೆ. ಆ ಸಂದರ್ಭದಲ್ಲಿ ಗಳಿಕೆ ಕಡಿಮೆಯಾಗದಿದ್ದರೆ ...ಕ್ಷಕ' 20 ಕೋಟಿಯ ಗಡಿ ದಾಟುವುದು ಗ್ಯಾರಂಟಿ ಎಂಬುದು ...ರ ಲೆಕ್ಕಾಚಾರ.

...ಯಾವುದೇ ಸಿನಿಮಾ ಹಿಟ್ ಅಥವಾ ಫ್ಲಾಪ್ ಆದರೂ ವಿಷ್ಣು ... ಬಗ್ಗೆ ಮಾತನಾಡುವ ಗೋಜಿಗೆ ಹೋಗುತ್ತಿರಲಿಲ್ಲ. "ನೋಡಿ, ...ಮೊದಲ ಚಿತ್ರವೇ ನನಗೆ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ...ಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿತ್ತು. 'ನಾಗರಹಾವು' ಎಂಬ ಚಿತ್ರ ನನಗೆ ...ಣ್ಣಾಜಿ ನೀಡಿದ ವಿಸಿಟಿಂಗ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ...ತ್ತು, ನಾನು ಎಲ್ಲೇ ಹೋದರೂ ನನ್ನನ್ನು ನಾನು ಪರಿಚಯಿಸಿಕೊಳ್ಳುವ ...ವೇ ಇರಲಿಲ್ಲ. ಇಂತಹ ಒಂದು ಎಂಟ್ರಿ ಯಾವ ನಟನಿಗೆ ಸಿಗುತ್ತದೆ?" ... ವಿಷ್ಣು ನಮ್ಮನ್ನೇ ಪ್ರಶ್ನಿಸುತ್ತಿದ್ದರು. "ಆದರೆ ನನ್ನ ಜೀವನದ ...ಯ ಚಿತ್ರ ಕೂಡ ಅಂತಹ ಅಮೋಘ ಚಿತ್ರವಾಗಬೇಕೆಂಬುದೇ ನನ್ನ ... ಎಂದೂ ಹೇಳುತ್ತಿದ್ದರು ವಿಷ್ಣು. ಆದರೀಗ 'ಆಪ್ತರಕ್ಷಕ'ದ ಯಶಸ್ಸು ...ಿದಾಗ ವಿಷ್ಣು ತನ್ನ ವೃತ್ತಿಜೀವನದ ಕೊನೆಯ ಆಸೆಯನ್ನೂ ...ಕೊಂಡಿದ್ದಾರೆ ಎಂದೆನಿಸುತ್ತದೆ.

...ಮಗೆ ಗೊತ್ತಲ್ಲ, ವಿಷ್ಣು ಪಕ್ಕಾ ಕ್ರಿಕೆಟ್ ಅಭಿಮಾನಿ. ಹೀಗಾಗಿ ... ಬಾರಿ ಅವರು ಕ್ರಿಕೆಟ್ ಪರಿಭಾಷೆಯಲ್ಲೇ ಮಾತನಾಡುತ್ತಿದ್ದರು. ... ಆಟಗಾರ ಆತ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗಲೇ ನಿವೃತ್ತಿ ...ದಿದರೆ ಮಾತ್ರ ಜನಮಾನಸದಲ್ಲಿ ಸದಾ ಉಳಿಯುತ್ತಾನೆ; ಪ್ರೇಕ್ಷಕರೇ ...ಯಾಗು' ಎನ್ನುವ ಮೊದಲೇ ಆಟಗಾರ ಜಾಗ ಖಾಲಿ ಮಾಡಬೇಕು ... ಸಿದ್ಧಾಂತವನ್ನು ನಾನು ಬಲವಾಗಿ ನಂಬಿರುವವನು" ಎಂದೂ ... ಅನೇಕ ಭಾರಿ ಹೇಳಿದ್ದುಂಟು. ಆ ಸಂದರ್ಭದಲ್ಲಿ ಆ ಮಾತು ...ನೂ ಅರ್ಥವಿರಲಿಲ್ಲ. ಆದರೀಗ ಅವುಗಳನ್ನೆಲ್ಲಾ ನೆನಪಿಸಿಕೊಂಡಾಗ ...ಂದು ಮಾತುಗಳಿಗೂ ಅರ್ಥವಿದೆ.

... ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಮತ್ತೊಂದು ...ವೇನೆಂದರೆ ಸಾಧಾರಣವಾಗಿ ಕೆಲವು ನಟ-ನಟಿಯರು ಅಥವಾ ...ಶಕರುಗಳು ನಿಧನ ಹೊಂದಿದಾಗ ಅವರ ಕೆಲ ಚಿತ್ರಗಳು ಅರ್ಧಂಬರ್ಧಕ್ಕೆ ...ತ್ತವೆ. ಅಂತಹ ಸಂದರ್ಭದಲ್ಲಿ ಆ ಚಿತ್ರದ ನಿರ್ಮಾಪಕರು ಮನಸ್ಸಿನಲ್ಲೇ ... ಹಾಕುತ್ತಿದ್ದಂತೂ ನಿಜ. ಪುಟ್ಟಣ್ಣ ಕಣಗಾಲ್, ಶಂಕರ್‌ನಾಗ್ ...ಲಾದವರು ನಿಧನ ಹೊಂದಿದಾಗ ಅವರ ಚಿತ್ರಗಳನ್ನು ...ರ್ಣಗೊಳಿಸಲು ನಿರ್ಮಾಪಕರು ಹರಸಾಹಸ ಮಾಡಿದ್ದುಂಟು. ... ಮೊದಲೇ ಹೇಳಿದಂತೆ ವಿಷ್ಣುವರ್ಧನ್ ಅವರ exit ಕೂಡಾ ... ಅಮೋಘವಾಗಿತ್ತೆಂದರೆ ಅವರು ತಮ್ಮ ಎಲ್ಲ ಸಿನಿಮಾಗಳನ್ನು ...ಿ, ಎಲ್ಲರ ಲೆಕ್ಕ ಚುಕ್ತಾ ಮಾಡಿದ ನಂತರವೇ ನೇಪಥ್ಯಕ್ಕೆ ಸರಿದರು. ... ಸಂದರ್ಭದಲ್ಲಿ ಮತ್ತೊಮ್ಮೆ ವಿಷ್ಣು ಅವರ ಫೇವರಿಟ್ ವಾಕ್ಯವನ್ನು ...ಲು ಇಷ್ಟವಾಗುತ್ತದೆ. "ನಾನು ಯಾವಾಗಲೂ ಕ್ಯಾಪ್ಟನ್ ಆಗುವ ...ು ವಿನ್ನಿಂಗ್ ಟೀಮ್‌ನ ಸದಸ್ಯನಾಗಲು ಇಷ್ಟಪಡುತ್ತೇನೆ" ಎನ್ನುತ್ತಿದ್ದರು ... 'ಆಪ್ತರಕ್ಷಕ' ವಿಷಯದಲ್ಲಿ ಆಗಿದ್ದು ಅದೇ; 'ಆಪ್ತಮಿತ್ರ'ದ ಯಶಸ್ಸಿ...ೇ ಇಲ್ಲಿ ಮತ್ತೊಮ್ಮೆ ಕಾರ್ಯವೆಸಗಿದ್ದನ್ನು ಜ್ಞಾಪಿಸಿಕೊಳ್ಳಬಹುದು. ... ಚಿತ್ರಕ್ಕೆ ಪಿ.ವಾಸು ಕ್ಯಾಪ್ಟನ್ ಆಗಿದ್ದರು. ಎರಡೂ ಪಂದ್ಯದಲ್ಲಿ ...ರ್ಧನ್ ಕ್ಯಾಪ್ಟನ್ ನಿರೀಕ್ಷೆಯಂತೆ ಚೆನ್ನಾಗಿಯೇ ಆಡಿದರು. ತಂಡ ...ಗೆದ್ದಿದೆ. ಆದರೆ ತಂಡದ ಮುಖ್ಯ ಆಟಗಾರ 'ಔಟ್' ಆಗಿದ್ದಾರೆ. ... ಎಲ್ಲಾ ಕಾರಣಗಳಿಂದ ವಿಷ್ಣು ಹೇಳುತ್ತಿದ್ದ entry-exit ...ಗಳು ಈಗ ಅವರು out ಆದ ನಂತರ ನೆನಪಿಗೆ ಬರುತ್ತಿದೆ. '...ಕ' ತುಂಬಿದ ಪ್ರದರ್ಶನವನ್ನು ಕಾಣುತ್ತಿರುವುದರಿಂದ ವಿಷ್ಣುವರ್ಧನ್ ... 'Not out' ಆಟಗಾರ ಎಂದು ಅವರ ಅಭಿಮಾನಿಗಳು ...ತ್ತಿರುವುದು ಕೂಡಾ ಸಮಂಜಸವಾಗಿದೆಯಲ್ಲವೇ?

● ಶೆಣೈ



'ಪಲ್ಲವಿ' ಚಿತ್ರದಲ್ಲಿ ಲಂಕೇಶ್

ಸಿನಿಮಾದೊಂದಿಗೆ ಲಂಕೇಶರ ನಂಟು

ಉತ್ತಮ ಸಾಹಿತ್ಯದ ಅಭಿರುಚಿ ಇರುವವರು ಮಾತ್ರ ಸದಭಿರುಚಿಯ ಸಿನಿಮಾಗಳನ್ನು ನೀಡಲು ಸಾಧ್ಯ. ಪಾತ್ರ ಪೋಷಣೆ ಮಾಡುವ ನಟರಿಗೆ ಹಾಗೂ ಪಾತ್ರಗಳನ್ನು ಸೃಷ್ಟಿಸುವ ಕಥೆಗಾರರಿಗೆ, ನಿರ್ದೇಶಕರಿಗಂತೂ ಸಾಹಿತ್ಯದ ಓದು ಅನಿವಾರ್ಯ. ಆದರೆ ಪ್ರಸ್ತುತ ಕನ್ನಡ ಚಿತ್ರರಂಗದಲ್ಲಿ ಇತಿಹಾಸ, ಸಾಹಿತ್ಯಗಳನ್ನು ಓದಿಕೊಂಡವರು ತೀರಾ ವಿರಳ.

ಸಾಹಿತಿ, ಬರಹಗಾರರಾಗಿದ್ದುಕೊಂಡು ಸಾಂಸ್ಕೃತಿಕ ಲೋಕಕ್ಕೆ ಹೊಸ ವಿಜನ್ ತಂದುಕೊಟ್ಟ ಲಂಕೇಶರ 75ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸಿನೆಮಾ ರಂಗದೊಂದಿಗೆ ಲಂಕೇಶರ ನಂಟನ್ನು ಒಮ್ಮೆ ಅವಲೋಕಿಸುವುದು ಜರೂರು.

ಪಿ. ಲಂಕೇಶರಿಗೂ ಚಿತ್ರರಂಗಕ್ಕೂ ಇದ್ದ ನಂಟು ಅಂದಿನಿಂದ ಇಂದಿನವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಮುಂದುವರೆದೇ ಇದೆ. 'ಲಂಕೇಶ್ ಪತ್ರಿಕೆ'ಯನ್ನು ಆರಂಭಿಸುವ ಮುನ್ನ ಸ್ವತಃ ನಾಲ್ಕು ಚಿತ್ರಗಳನ್ನು ನಿರ್ದೇಶಿಸಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದ ಲಂಕೇಶರು ಆನಂತರ 'ಪತ್ರಿಕೆ'ಯ ಒತ್ತಡದಿಂದಾಗಿ ಚಿತ್ರ ನಿರ್ದೇಶಿಸುವ ಉಸಾಬರಿಗೆ ಹೋದವರಲ್ಲ. ಆದರೂ ಅವರ ಪುತ್ರಿ ಕವಿತಾ ಲಂಕೇಶ್ ಅವರು ಲಂಕೇಶರ ಕಿರುಕಾದಂಬರಿ 'ಅಕ್ಕ' ಅನ್ನು ಆಧರಿಸಿ 'ದೇವೀರಿ' ಎಂಬ ಸಿನಿಮಾ ಮಾಡಿದಾಗ ಆ ಚಿತ್ರಕ್ಕೆ ಹಾಡುಗಳನ್ನು ಮತ್ತು ಹಲವು ಡೈಲಾಗ್‌ಗಳನ್ನು ಬರೆದಿದ್ದರು ಲಂಕೇಶ್.

ಅದೇನೇ ಇರಲಿ, ಇವತ್ತಿಗೂ ಸಿನಿಮಾ ಮಾಧ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಹಲವರು ಒಂದಲ್ಲಾ ಒಂದು ರೀತಿಯಲ್ಲಿ ಲಂಕೇಶರ ಪ್ರಭಾವಕ್ಕೆ ಒಳಗಾದವರು ಎಂದರೆ ಅತಿಶಯೋಕ್ತಿಯಲ್ಲ.

ಪತ್ರಿಕೆಯ ಆರಂಭದ ದಿನಗಳಲ್ಲಿ ಲಂಕೇಶರ ಒಡನಾಟದಲ್ಲಿದ್ದ ಟಿ.ಎನ್. ಸೀತಾರಾಮ್, ಸತ್ಯಮೂರ್ತಿ ಆನಂದೂರು, ಮಹಾಬಲ ಮೂರ್ತಿ ಕೋಡ್ಲುಕೆರೆ ತರಹದವರು ಇವತ್ತು ಕಿರುತೆರೆ ಮತ್ತು ಹಿರಿತೆರೆಗಳಲ್ಲಿ ತಮ್ಮದೇ ಆದ ಛಾಪನ್ನು ಅಥವಾ ಭಿನ್ನ ರೀತಿಯಲ್ಲಿ ಗುರುತಿಸಿಕೊಂಡಿರುವವರು.

ನಂತರದಲ್ಲಿ ಪತ್ರಿಕೆಯ ಬರಹಗಾರರಾಗಿ ದುಡಿದ ಎನ್.ಎಸ್. ಶಂಕರ್, ರೇಖಾರಾಣಿ ಮುಂತಾದವರು ಲಂಕೇಶರ ಒಡನಾಟದಲ್ಲಿದ್ದುಕೊಂಡೇ ದೃಶ್ಯಮಾಧ್ಯಮಕ್ಕೆ ಧುಮುಕಿದವರು. ಇನ್ನು ಲಂಕೇಶರ ನೆಚ್ಚಿನ ಶಿಷ್ಯರಲ್ಲೊಬ್ಬರು ಮತ್ತು ಪತ್ರಿಕೆಯ ಹಿರಿಯ ವರದಿಗಾರರೂ ಆದ ಸದಾಶಿವ ಶೆಣೈ ಕೂಡಾ ಈಗ ಸಿನೆಮಾ ನಿರ್ದೇಶನವನ್ನು ಪ್ರಾರಂಭಿಸಿದ್ದಾರೆ.



ಇನ್ನು ಮೇಷ್ಟ್ರನ್ನು ಬಹಳ ಹತ್ತಿರದಿಂದ ಕಂಡು ಮತ್ತು ಅವರ ಸ್ನೇಹ ಸಂಪಾದಿಸಿ, ನಂತರದ ದಿನಗಳಲ್ಲಿ ಚಿತ್ರರಂಗಕ್ಕೆ ಕಾಲಿಟ್ಟು ದೊಡ್ಡ ನಿರ್ದೇಶಕರೆನಿಸಿಕೊಂಡವರಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಕೂಡಾ ಪ್ರಮುಖರು.


ಇವತ್ತಿಗೆ ಕನ್ನಡ ಚಿತ್ರರಂಗದ ಅಪರೂಪದ ಗೀತಸಾಹಿತಿ, ಸಂಗೀತ ನಿರ್ದೇಶಕ ಮತ್ತು ನಿರ್ದೇಶಕರೂ ಆಗಿರುವ ವಿ. ಮನೋಹರ್ ಕೂಡಾ ಲಂಕೇಶ್ ಪಾಳಯದಲ್ಲಿ ಚಿಗುರಿದ ಪ್ರತಿಭೆಯೇ. ಒಂದು ಕಾಲದಲ್ಲಿ 'ಲಂಕೇಶ್ ಪತ್ರಿಕೆ'ಯಲ್ಲಿ ಕಾರ್ಟೂನಿಸ್ಟ್ ಆಗಿ ಕಾರ್ಯನಿರ್ವಹಿಸಿದ ಮನೋಹರ್ ಪತ್ರಿಕೆಯ ಆಫೀಸಿಗೆ ಬರುವ ಸಿನಿಮಾ ಮಂದಿ ಯಾರಾದರೂ ಪರಿಚಯವಾಗಿ ಚಿತ್ರರಂಗದಲ್ಲಿ ತಮಗೊಂದು ಛಾನ್ಸು ಕೊಡಬಹುದು ಎಂಬ ಕಲ್ಪನೆಯಲ್ಲಿದ್ದರಂತೆ.

ಚಿತ್ರಸಾಹಿತಿ ಜಯಂತ ಕಾಯ್ಕಿಣಿ ಕೂಡಾ ಲಂಕೇಶ ನೆಚ್ಚಿನ ಸ್ನೇಹಿತರಲ್ಲೊಬ್ಬರು. ದಶಕಗಟ್ಟಲೆ ಬಾಂಬೆಯ ಕಂಪೆನಿಯೊಂದರಲ್ಲಿ ಉದ್ಯೋಗಕ್ಕಿದ್ದ ಕಾಯ್ಕಿಣಿ, ಆ ಸಂದರ್ಭದಲ್ಲಿ ಪತ್ರಿಕೆ ಮತ್ತು ಲಂಕೇಶರ ನಿಕಟ ಸಂಪರ್ಕದಲ್ಲಿದ್ದವರು.


ಇವರೆಲ್ಲ ಲಂಕೇಶರ ಆಪ್ತವಲಯದಲ್ಲಿದ್ದುಕೊಂಡೇ ದೃಶ್ಯಮಾಧ್ಯಮದ ಸೆಳೆತಕ್ಕೆ ಒಳಗಾದದವರು. ಆದರೆ ದೂರದಿಂದಲೇ ಲಂಕೇಶರ ಸಾಹಿತ್ಯ ಮತ್ತು ಬರವಣಿಗೆಯನ್ನು ಅಪಾರವಾಗಿ ಓದಿಕೊಂಡು, ಅವರ ಕೆಲವು ಚಿಂತನೆಗಳನ್ನು ತಮ್ಮ ಸಿನೆಮಾ, ನಟನೆಗಳಲ್ಲಿ ಅಳವಡಿಸಿಕೊಳ್ಳಲು ಉತ್ಸುಕರಾಗಿರುವ ಅನೇಕ ಯುವ ಪ್ರತಿಭೆಗಳು ಈಗ ನಮ್ಮ ಚಿತ್ರರಂಗದಲ್ಲಿ ಕಾಣಸಿಗುತ್ತಾರೆ.

ಇವತ್ತಿನ ಸ್ಟಾರ್ ನಿರ್ದೇಶಕ ಯೋಗರಾಜ್ ಭಟ್ ಲಂಕೇಶರ ಬರವಣಿಗೆಗಳನ್ನು ಓದುತ್ತಲೇ ಅದರ ಗುಂಗಿನಲ್ಲೇ ಬೆಳೆದವರು. ಇನ್ನೊಬ್ಬ ಯುವ ನಿರ್ದೇಶಕ 'ದುನಿಯಾ' ಸೂರಿಗೆ ಲಂಕೇಶರ ಬರವಣಿಗೆಗಳ ಬಗೆಗಿನ ವ್ಯಾಮೋಹ ಅದ್ಯಾವ ಪರಿ ಗೊತ್ತೆ? ಲಂಕೇಶರು ಭಾವಾನುವಾದಿಸಿರುವ ಚಾರ್ಲ್ಸ್ ಬೋದಿಲೇರನ 'ಪಾಪದ ಹೂಗಳು' ಕೃತಿಯನ್ನು ಈತ ಓದಿ ಓದಿ ಕಂಠಪಾಠ ಮಾಡಿಕೊಂಡಿರುವ ವ್ಯಕ್ತಿ.


ಇತ್ತೀಚೆಗಷ್ಟೇ 'ಕಬಡ್ಡಿ' ಎಂಬ ನೆಲದ ಘಮಲಿನ ಸಿನೆಮಾವನ್ನು ನಿರ್ದೇಶಿಸಿದ್ದ ನರೇಂದ್ರ ಬಾಬು ಕೂಡ ಲಂಕೇಶರ ಪರಮಭಕ್ತ. ನರೇಂದ್ರ ಬಾಬು ಹಿಂದೊಮ್ಮೆ ಪಿಯುಸಿ ಮುಗಿಸಿದ ಮೇಲೆ ಡಿಗ್ರಿಗೆ ಸೇರಲು ಕಾಲೇಜಿನ ರಜೆಯಲ್ಲಿ ನಂಜುಂಡೇಗೌಡರ 'ಚಿನ್ನದ ಚಂದ್ರಿಕೆ' ಎಂಬ ಕಿರುಚಿತ್ರಕ್ಕೆ ಕಾಸ್ಟ್ಯೂಮ್ ಡಿಸೈನರ್ ಆಗಿ ಕೆಲಸ ಮಾಡಿದ್ದರಂತೆ. ಕಡೆಗೆ ತಮ್ಮ ಕೆಲಸಕ್ಕೆ ಸಂಭಾವನೆ ಪಡೆದ ನರೇಂದ್ರ ಬಾಬು ಅದನ್ನು ಕಾಲೇಜಿಗೆ ಅಡ್ಮಿಷನ್ ಶುಲ್ಕ ಕಟ್ಟುವ ಬದಲು ಸೀದಾ ಹೋಗಿ ಲಂಕೇಶರ 'ಟೀಕೆ ಟಿಪ್ಪಣಿ', 'ಸಮಗ್ರ ಕಥೆಗಳು' ಮತ್ತಿತರ ಪುಸ್ತಕಗಳನ್ನು ಖರೀದಿಸಿದ್ದರಂತೆ.



ಲಂಕೇಶ್ ಬರಹಗಳ ಬಗ್ಗೆ ಉತ್ಕಟ ಅಭಿಮಾನವನ್ನು ಹೊಂದಿರುವ ನರೇಂದ್ರ ಬಾಬು ಲಂಕೇಶರ 'ಸಂಕ್ರಾಂತಿ', 'ಕ್ರಾಂತಿ ಬಂತು, ಕ್ರಾಂತಿ', 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ನಾಟಕಗಳನ್ನೂ ನಿರ್ದೇಶಿಸಿರುವವರು. ಯಾವತ್ತಾದರೂ ಸರಿ, ಲಂಕೇಶರ 'ಸ್ಟೆಲ್ಲಾ ಎಂಬ ಹುಡುಗಿ'ಯನ್ನು ಸಿನೆಮಾ ಮಾಡಬೇಕು ಎಂಬ ಬಯಕೆ ಹೊಂದಿರುವ ಬಾಬುಗೆ "'ಸಂಕ್ರಾಂತಿ'ಯನ್ನು ನಾನು ನಿರ್ದೇಶಿಸಿದರೆ ಮಾತ್ರ ಜೆಸ್ಟಿಫೈ ಮಾಡಲು ಸಾಧ್ಯ" ಎಂಬ ಸಾತ್ವಿಕ ಅಹಂ ಕೂಡಾ ಇದೆ!



ಇನ್ನು ಇದೇ ನರೇಂದ್ರ ಬಾಬು ನಿರ್ದೇಶನದ ಲಂಕೇಶರ ನಾಟಕಗಳಲ್ಲಿ ಅಭಿನಯಿಸುತ್ತಲೇ ಚಿತ್ರರಂಗದಲ್ಲೂ ಅವಕಾಶ ಪಡೆದವರು ನಟ ಕಿಶೋರ್. ಹಾಗೆಯೇ ದಕ್ಷಿಣ ಭಾರತದ ಅದ್ಭುತ ನಟ ಎಂದೆನಿಸಿಕೊಂಡು ಹಲವಾರು ರಾಷ್ಟ್ರ ಮತ್ತು ರಾಜ್ಯಗಳಲ್ಲಿ ಪ್ರಶಸ್ತಿಗಳಿಗೆ ಭಾಜನರಾಗಿರುವ ಪ್ರಕಾಶ್ ರೈ ಕೂಡಾ ಲಂಕೇಶರ ಅಭಿಮಾನಿಯೇ. "ನಾನು ಲಂಕೇಶರ ನೇರ ಶಿಷ್ಯನಲ್ಲದಿದ್ದರೂ ಅವರ ಬರವಣಿಗೆ, ನಾಟಕಗಳು ನನ್ನನ್ನು ಪರೋಕ್ಷವಾಗಿ ಮತ್ತು ಅಪಾರವಾಗಿ ಪ್ರಭಾವಿಸಿದ್ದವು" ಎಂದು ರೈ ತಮ್ಮ ಅನೇಕ ಸಂದರ್ಶನಗಳಲ್ಲಿ ಹೇಳಿಕೊಳ್ಳುತ್ತಲೇ ಇರುತ್ತಾರೆ.



ಹಾಗೆಯೇ ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಲೇ ಇಡೀ ಇಂಡಿಯಾ ಚಿತ್ರರಂಗವನ್ನು ಆಕರ್ಷಿಸಿದ ನಟ ಅನಂತ್ ನಾಗ್ ಕೂಡಾ ಲಂಕೇಶರ ಹತ್ತಿರದ ಸ್ನೇಹಿತರಾಗಿದ್ದವರು. ಅಷ್ಟೇ ಏಕೆ, ಲಂಕೇಶರ ಮಕ್ಕಳಾದ ಕವಿತಾ ಲಂಕೇಶ್ ಮತ್ತು ಇಂದ್ರಜಿತ್ ಕೂಡಾ ಈಗ ಸಿನೆಮಾ ಉದ್ಯಮದಲ್ಲೇ ನೆಲೆ ಕಂಡುಕೊಂಡಿದ್ದಾರೆ.

"ರಂಗಭೂಮಿಯಲ್ಲಿ ನಾನು ಕಿಟಕಿಯಿಂದ ಮಾತ್ರ ಪ್ರೀತಿ ಮಾಡುತ್ತಿದ್ದೆ, ಆದರೆ ಸಿನಿಮಾ ನನಗೆ ಮುಕ್ತವಾಗಿ ಪ್ರೀತಿಸುವುದನ್ನು ಕಲಿಸಿಕೊಟ್ಟಿತು" ಎಂದು ಸ್ವತಃ ಲಂಕೇಶರೇ ಹೇಳಿದ್ದಾಗಿ ಒಮ್ಮೆ ಟಿ.ಎನ್. ಸೀತಾರಾಮ್ 'ಸೂತ್ರಧಾರ' ಅನ್ನುವ ಪತ್ರಿಕೆಯೊಂದರಲ್ಲಿ ಬರೆದಿದ್ದರು.



ಹಾಗೆಯೇ ಲಂಕೇಶ್ ಮತ್ತವರ ಸಾಹಿತ್ಯವನ್ನು ಪ್ರೀತಿಸುವವರಿಗೆ 'ಸಿನಿಮಾ' ವನ್ನು ಸಂಕೀರ್ಣವಾಗಿ ನೋಡುವ ಶಕ್ತಿ ಮತ್ತು ಆಳವಾಗಿ ಅಭ್ಯಸಿಸುವ ಕ್ರಮವನ್ನು ಕಲಿಸಿಕೊಟ್ಟಿದೆ....

● ಅರುಣ್ ಕುಮಾರ್.ಜಿ

Regd.No.KA/RNP/BGS/2036/2008-10 Posted at : G.P.O. Bangalore-1. R B P LANKESH, Kannada Weekly Price Rs. 12/- 17-03-2010 RNI No.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate,